ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು - ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ

### ಎಂ.ಎ. (ಪ್ರಥಮ)

# ದಿವಾನಿ ಹಕ್ಕುಗಳು, ರೆಗ್ಯುಲೇಟಿಂಗ್ ಕಾಯಿದೆ, ವಾರೆನ್ ಹೇಸ್ಟಿಂಗ್ಸ್, ದ್ವಿಮುಖ ಸರ್ಕಾರ, ರಾಬರ್ಟ್ ಕ್ಲೈವ್, ಆಂಗ್ಲೋ - ಫ್ರೆಂಚ್ ಪೈಪೋಟಿ, ವಿಕ್ಟೋರಿಯ ಘೋಷಣೆ 1935ರ ಕಾಯಿದೆ

ಕೋರ್ಸ್ - 3

ಬ್ಲಾಕ್ - 4

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ -3

ಬ್ಲಾಕ್

# 4

ಘಟಕ - 81

ಭಾರತೀಯ ಸಂಸ್ಥಾನಗಳು : ಬ್ರಿಟಿಷ್ ಭಾರತದೊಂದಿಗೆ ರಾಜಕೀಯ, ಆಡಳಿತಾತ್ಮಕ ಮತ್ತು ನ್ಯಾಯಾಂಗ ಸಂಬಂಧಗಳು

ಘಟಕ - 82

ಮಿಂಟೊ - ಮಾರ್ಲೆ ಸುಧಾರಣೆಗಳು - ಮುಖ್ಯ ಲಕ್ಷಣಗಳು-ಭಾರತೀಯ ಪ್ರತಿಕ್ರಿಯೆ-ದೆಹಲಿ ದರ್ಬಾರ್

ಘಟಕ - 83

ಪ್ರಥಮ ಮಹಾಯುದ್ಧ - ಭಾರತದಲ್ಲಿ ಅಶಾಂತಿ - ಮಾಂಟೆಗೂ - ಚೆಲ್ಮ್ಸ್ ಫೋರ್ಡ್ ಯೋಜನೆ

ಘಟಕ - 84

ಭಾರತ ಸರ್ಕಾರದ ಕಾಯಿದೆ, 1919

ಘಟಕ - 85

ಆಚರಣೆಯಲ್ಲಿ 1919 ರ ಕಾಯಿದೆ

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡಾ. ಎಂ. ಸುಶೀಲ ಅರಸ್
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

*ವಿಷಯ ಸಂಯೋಜಕರು*

## ಪಠ್ಯಕ್ರಮ ನಿರೂಪಕರು

ಡಾ. ಶ್ರೀಮತಿ ಎನ್. ಸರಸ್ವತಿ
ಇತಿಹಾಸ ಪ್ರವಾಚಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಘಟಕಗಳು 81 ರಿಂದ 85

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2013

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ(
ಕುಲಸಚಿವರು (ಆಡಳಿತ)

# ಇತಿಹಾಸ

## ಕೋರ್ಸ್ ೯ - 3

## ಬ್ಲಾಕ್ - 4

### ಪೀಠಿಕೆ

ಭಾರತದ ಉಪಖಂಡದಲ್ಲಿ ವಸಾಹತುಶಾಹಿ ಕಾಲದಲ್ಲಿ ಎರಡು ಬಗೆಯ ಪ್ರಾಂತ್ಯಗಳನ್ನು ಕಾಣುತ್ತೇವೆ. ಒಂದು ಬ್ರಿಟಿಷ್‌ರ ನೇರ ಆಳ್ವಿಕೆಗೆ ಒಳಪಟ್ಟ ಪ್ರಾಂತ್ಯಗಳು ಮತ್ತು ಎರಡನೆಯದಾಗಿ ಭಾರತೀಯ ರಾಜರ ಆಳ್ವಿಕೆಗೆ ಒಳಪಟ್ಟ ದೇಶಿಯ ಸಂಸ್ಥಾನಗಳು. ಈ ಎರಡರ ಮಧ್ಯೆ ಇದ್ದ ತಕ್ಕಂತಹ ಸಂಬಂಧಗಳನ್ನು ಈ ಬ್ಲಾಕಿನ ಘಟಕ 81 ರಲ್ಲಿ ನೀವು ಅಧ್ಯಯನ ಮಾಡುವಿರಿ. ಘಟಕ 82 ರಲ್ಲಿ 1909 ರಲ್ಲಿ ಬ್ರಿಟಿಷ್ ಸರ್ಕಾರ ನೀಡಿದ ಸಂವಿಧಾನಾತ್ಮಕ ಸುಧಾರಣೆಗಳನ್ನು ಹಾಗೂ ಕಾಂಗ್ರೆಸ್ ಪಕ್ಷದ ಪ್ರತಿಕ್ರಿಯೆಯನ್ನು ನೀವು ಅರಿಯುವಿರಿ. ಘಟಕ 83 ರಿಂದ 85 ರವರೆಗೆ ಭಾರತದ ಸಂವಿಧಾನಾತ್ಮಕ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದ ಕಾಲಘಟ್ಟದ ಬಗೆಗೆ ಅಧ್ಯಯನ ನಡೆಸುವಿರಿ. ಪ್ರಥಮ ಮಹಾಯುದ್ಧದ ಪ್ರಭಾವದಿಂದ ಬ್ರಿಟಿಷ್ ಸರ್ಕಾರ ನೀಡಿದ 1919 ರ ಕಾಯಿದೆ, ಅದರ ಲಕ್ಷಣಗಳು, ಅದರ ಆಚರಣೆ, ಭಾರತೀಯ ರಾಜಕಾರಣದಲ್ಲಿ ಈ ಕಾಯಿದೆಯ ಮಹತ್ವ ಇತ್ಯಾದಿ ವಿಚಾರಗಳನ್ನು ಈ ಮೂರು ಘಟಕಗಳಲ್ಲಿ ಗಮನಿಸಬಹುದು.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

## ಘಟಕ - 81

# ದೇಶೀಯ ರಾಜ್ಯಗಳೊಂದಿಗೆ ಬ್ರಿಟಿಷರ ಸಂಬಂಧಗಳು

81.0 ಪ್ರಸ್ತಾವನೆ

81.1 ಭಾರತೀಯ ರಾಜ್ಯಗಳು ಮತ್ತು ಈಸ್ಟ್ ಇಂಡಿಯಾ ಕಂಪೆನಿ (1765-1813)

81.2 ಈಸ್ಟ್ ಇಂಡಿಯಾ ಕಂಪನಿ ಮತ್ತು ದೇಶೀಯ ರಾಜ್ಯಗಳು (1813-1858)

81.3 ಬ್ರಿಟಿಷ್ ಭಾರತ ಮತ್ತು ದೇಶೀಯ ರಾಜ್ಯಗಳ ಸಂಬಂಧಗಳು (1858-1919)

81.4 1919-1935 ರ ನಡುವಣ ಅವಧಿಯಲ್ಲಿನ ಸಂಬಂಧಗಳು

81.5 1935-1947 ರ ನಡುವಣ ಅವಧಿಯಲ್ಲಿನ ಸಂಬಂಧಗಳು

81.6 ಉಪಸಂಹಾರ

81.7 ಮಾದರಿ ಪ್ರಶ್ನೆಗಳು

81.8 ಪರಾಮರ್ಶನ ಕೃತಿಗಳು

## 81.0 ಪ್ರಸ್ತಾವನೆ

ಮೊಗಲ್ ಸಾಮ್ರಾಜ್ಯದ ಅವಶೇಷಗಳಿಂದ ಭಾರತದಲ್ಲಿ ಅನೇಕ ರಾಜ್ಯಗಳು ಹುಟ್ಟಿದುವು. ಅವುಗಳ ಪೈಕಿ ಹೆಚ್ಚಿನವು ಬಲಿಷ್ಠವಾಗಿದ್ದುವು. ವಿಸ್ತಾರವೂ, ಸ್ವತಂತ್ರವೂ ಆಗಿದ್ದವು. ಮಿಕ್ಕವು ಚಿಕ್ಕವು ಮತ್ತು ಅರೆ - ಸ್ವತಂತ್ರವಾಗಿದ್ದವು. ಕ್ರಮೇಣ ಅವೆಲ್ಲವೂ ಇಂಗ್ಲೀಷ್‌ರೊಂದಿಗೆ ಸಂಪರ್ಕಕ್ಕೆ ಬಂದುವು, ಹೆಚ್ಚಿನವು ಅವರಿಗೆ ವೈರಿಗಳಾದುವು. ಕೊನೆಗೆ ಎಲ್ಲವೂ ಬ್ರಿಟಿಷ್ ಸಾರ್ವಭೌಮತ್ವವನ್ನು ಅಂಗೀಕರಿಸಿದುವು. 1857 ರ ಕ್ರಾಂತಿಯ ಅನಂತರ ಬ್ರಿಟಿಷರು ಗೆಲ್ಲುವಿಕೆ ಹಾಗೂ ಹೊಸದಾಗಿ ಆಕ್ರಮಣ ಮಾಡಿಕೊಳ್ಳುವ ನೀತಿಯನ್ನು ಕೈಬಿಟ್ಟರು. ಆದ್ದರಿಂದ ಅವರಲ್ಲಿ ಅನೇಕರು 1947 ರಲ್ಲಿ ಭಾರತವು ಸ್ವಾತಂತ್ರ್ಯವನ್ನು ಪಡೆಯುವವರೆಗೂ ಅಸ್ತಿತ್ವದಲ್ಲಿದ್ದವು. ಆಮೇಲೆ ಅವೆಲ್ಲ ಕ್ರೋಢೀಕೃತವಾಗಿ ಭಾರತ ಒಕ್ಕೂಟದಲ್ಲಿ ವಿಲೀನವಾದುವು.

ಭಾರತದ ರಾಜ್ಯಗಳೊಂದಿಗೆ ಬ್ರಿಟಿಷರ ಸಂಬಂಧಗಳು ಬೇರೆ ಬೇರೆ ಕಾಲಗಳಲ್ಲಿ ಪರಿವರ್ತನೆ ಹೊಂದಿದುವು. ಏಕೆಂದರೆ ಆ ಸಂಬಂಧಗಳು ಸಂದರ್ಭಕ್ಕನುಗುಣವಾಗಿ ಆಧಾರಿತವಾಗಿದ್ದುವು. ಬ್ರಿಟಿಷರು ತಮ್ಮ ಸಾಮ್ರಾಜ್ಯ ಹಿತಾಸಕ್ತಿಗಳನ್ನು ಎಂದೂ ಮರೆಯಲಿಲ್ಲ. ಆಗಾಗ ಬದಲಾವಣೆ ಹೊಂದುತ್ತಲೇ ಹೋದ ಹಿತಾಸಕ್ತಿಗಳಿಗನುಸಾರವಾಗಿ ದೇಶೀಯ ರಾಜ್ಯಗಳೊಂದಿಗೆ ಅವರ ಸಂಬಂಧಗಳು ಬೆಳೆದವು.

ಕೆ.ಎಂ. ಫಣಿಕ್ಕರ್ ವರ್ಣಿಸಿದಂತೆ ಈ ಸಂಬಂಧಗಳ ಆಧಾರ ಅವು ಈ ಮೂರು ವರ್ಗಗಳಿಗೆ ಸಂಬಂಧಿಸಲ್ಪಟ್ಟವು ಎನ್ನುವುದು

(ಅ) ಬ್ರಿಟಿಷರೊಂದಿಗೆ ಮಾಡಿಕೊಂಡ ಕರಾರುಗಳ ಪ್ರಕಾರ ಸ್ವತಂತ್ರ ರಾಜ್ಯಗಳಾಗಿದ್ದು ನೇರವಾಗಿ ಬ್ರಿಟಿಷರೊಂದಿಗೆ ವ್ಯವಹಾರ ಮಾಡುತ್ತಿದ್ದವು.

(ಆ) ಯಾರದಾರೊಬ್ಬ ದೇಶೀಯ ರಾಜನ ಮೂಲಕವಾಗಿ ಬ್ರಿಟಿಷ್‌ರೊಂದಿಗೆ ಸಂಬಂಧವನ್ನು ಇರಿಸಿಕೊಂಡಂಥವು.

(ಇ) ಬ್ರಿಟಿಷರು ಪ್ರಕಟಣೆಗಳು ಮತ್ತು ಸನ್ನದುಗಳ ಮೂಲಕ ಸಂಬಂಧವನ್ನು ವಿವರಿಸಿದಂಥವು.

ಬ್ರಿಟಿಷ್‌ರೊಂದಿಗಿನ ಸಂಬಂಧಗಳು ಈ ರಾಜ್ಯಗಳ ಪ್ರತಿಯೊಂದು ವರ್ಗಕ್ಕೂ ಬೇರೆ ಬೇರೆಯಾಗಿದ್ದುವು.

ಎರಡನೆಯ ಆಧಾರ ದೇಶದ ರಾಜಕೀಯ ಪರಿಸ್ಥಿತಿಯನ್ನು ಅವಲಂಬಿಸಿದ್ದಿತು. ಬ್ರಿಟಿಷ್ ಅಧಿಕಾರಿಗಳು ಮತ್ತು ದೇಶೀಯ ಅರಸರ ಆಸ್ಥಾನಗಳಲ್ಲಿದ್ದ ರೆಸಿಡೆಂಟರ ಮನೋಭಾವ, ವಿವಿಧ ಗವರ್ನರ್ ಜನರಲ್ಲರ ವ್ಯಕ್ತಿತ್ವಗಳು ಹಾಗೂ ಲಾರ್ಡ್ ವೆಲ್ಲೆಸ್ಲಿಯ ಕಾಲದಿಂದಲೂ ಬ್ರಿಟಿಷರು ಸರ್ವೋನ್ನತ ಶಕ್ತಿಯೆಂದು ಮನ್ನಣೆ ಪಡೆದುದು ಇವು ಕೂಡ ಬ್ರಿಟಿಷರು ದೇಶೀಯ ರಾಜ್ಯಗಳೊಂದಿಗಿದ್ದ ಸಂಬಂಧಗಳನ್ನು ನಿರ್ಧರಿಸಿದವು.

ವಿಲಿಯಂ ಲೀ ವಾರ್ನರ್ ತನ್ನ ದಿ ನೇಟಿವ್ ಸ್ಟೇಟ್ಸ್ ಆಫ್ ಇಂಡಿಯಾ ಎಂಬ ಕೃತಿಯಲ್ಲಿ 1919 ರವರೆಗೆ ಬ್ರಿಟಿಷರು ದೇಶೀಯ ರಾಜ್ಯಗಳೊಂದಿಗೆ ಹೊಂದಿದ್ದ ನೀತಿಯನ್ನು ಈ ಮೂರು ಕಾಲಾವಧಿಗಳಾಗಿ ವರ್ಗೀಕರಿಸಿದರು.

1. ಸುತ್ತು ಬೇಲಿಯ (Ring Fence) ನೀತಿ 1765-1813
2. ಅಧೀನ ಪ್ರತ್ಯೇಕತೆಯ (Subordinates Isolation) ನೀತಿ 1813-1858
3. ಅಧೀನ ಐಕ್ಯತೆಯ (Suboridnate Union) ನೀತಿ 1858-1919.

## 81.1 ಭಾರತೀಯ ರಾಜ್ಯಗಳ ಮತ್ತು ಈಸ್ಟ್ ಇಂಡಿಯಾ ಕಂಪನಿ (1765-1813)

ಈ ಅವಧಿಯಲ್ಲಿ ಬ್ರಿಟಿಷರು ದೇಶೀಯ ಸಂಸ್ಥಾನಗಳನ್ನು ಸ್ವತಂತ್ರ ರಾಜ್ಯಗಳನ್ನಾಗಿ ಪರಿಗಣಿಸಿದರು. ತತ್ವತಃ ದೇಶೀಯ ರಾಜರ ಪಾರಸ್ಪರಿಕ ಸಂಬಂಧಗಳಲ್ಲಿ ತಾವು ಮಧ್ಯ ಪ್ರವೇಶ ಮಾಡುವುದಿಲ್ಲ ಎಂದು ಬ್ರಿಟಿಷರು ಘೋಷಿಸಿದ್ದರು. ಆದರೆ ಆಚರಣೆಯಲ್ಲ ಆ ತತ್ವಕ್ಕೆ ಅವರು ಬದ್ಧರಾಗಲಿಲ್ಲ. ಆಗ ಇನ್ನೂ ಭಾರತದಲ್ಲಿ ಬ್ರಿಟಿಷರು ಸರ್ವೋನ್ನತ ಶಕ್ತಿಯಾಗಿರಲಿಲ್ಲ. ಆ ಸ್ಥಾನವನ್ನು ಗಳಿಸಲು ಅವರು ಹೆಣಗುತ್ತಿದ್ದರು. ಆದ್ದರಿಂದ ಅವರು ಎಲ್ಲ ಕಡೆಯೂ ಮೂಗು ತೂರಿಸಲಾಗುತ್ತಿರಲಿಲ್ಲ, ಅಥವಾ ತಮ್ಮ ಮಿತ್ರರಾದ

ಅರಸರ ಮೇಲೆ ತಮ್ಮ ಪ್ರಭುತ್ವವನ್ನು ಹೇರುವಂತಿರಲಿಲ್ಲ. ಮೈಸೂರಿನ ಮೇಲೆ ಮಾಡಿದ ಯುದ್ಧಗಳು, ನಾಲ್ಕನೆಯ ಮೈಸೂರು ಯುದ್ಧವಾದ ನಂತರ ಹಿಂದೂ ರಾಜನೊಂದಿಗೆ ಮಾಡಿಕೊಂಡ ಒಪ್ಪಂದ, ಮೊದಲನೆ ಮತ್ತು ಎರಡನೆಯ ಮರಾಠಾ ಯುದ್ಧಗಳು, ಔಧ್ ಮತ್ತು ಹೈದರಾಬಾದ್‌ಗಳೊಂದಿಗಿನ ಒಪ್ಪಂದಗಳು ಮತ್ತು ರಣಜಿತ್ ಸಿಂಗನೊಂದಿಗೆ ಮಾಡಿಕೊಂಡ ಅಮೃತಸರ ಒಪ್ಪಂದ ಇವು ಈ ಕಾಲದಲ್ಲಿ ನಡೆದವು. ವೆಲ್ಲೆಸ್ಲಿಯು ಬೇರೆ ಬೇರೆ ಅರಸರೊಂದಿಗೆ ನಡೆಸಿದ ಯುದ್ಧಗಳು ಮತ್ತು ಮಾಡಿಕೊಂಡ ಸಹಾಯಕ ಸೈನ್ಯ ಕರಾರುಗಳು ಬ್ರಿಟಿಷರನ್ನು ಭಾರತದಲ್ಲಿ ಸರ್ವೋನ್ನತ ಶಕ್ತಿಯನ್ನಾಗಿ ಮಾಡಿದವು. ಅವರ ಮಿತ್ರರಾಗಿದ್ದವರು ಈಗ ಅಧೀನ ರಾಜರಾದರು. ಆದರೂ ದೇಶೀಯ ರಾಜರೊಂದಿಗೆ ಅವರ ಸಂಬಂಧಗಳನ್ನು ಪರಿಶೀಲಿಸಿ ನೋಡುವಾಗ ಈ ಎರಡು ಅಂಶಗಳು ಸ್ಪಷ್ಟವಾಗಿ ಗೋಚರವಾಗುತ್ತವೆ.

(ಅ) ಮೈಸೂರಿನ ಹಿಂದೂ ಅರಸರೊಂದಿಗೆ ಮಾಡಿಕೊಂಡಿದ್ದ ಕರಾರಿನ ಹೊರತು, ಉಳಿದ ದೇಶೀಯ ಅರಸರೊಂದಿಗೆ ಮಾಡಿಕೊಂಡದ್ದವೆಲ್ಲವೂ ಸಮಾನತೆಯ ಮತ್ತು ಪಾರಸ್ಪರಿಕತೆಯ, ಅಂದರೆ ಕೊಟ್ಟು ತೆಗೆದುಕೊಳ್ಳುವ ಆಧಾರದ ಮೇಲೆ ಆದುವು. ಅವರೊಂದಿಗೆ ಒಪ್ಪಂದಕ್ಕೆ ಬರುವಾಗ ಬ್ರಿಟಿಷರು ತಮ್ಮ ಪ್ರಭುತ್ವವನ್ನು ಉಲ್ಲೇಖಿಸಲಿಲ್ಲ.

(ಆ) ದೇಶೀಯ ಅರಸನು, ಬ್ರಿಟಿಷ್‌ರೊಂದಿಗೆ ಕರಾರು ಮಾಡಿಕೊಂಡ ಮೇಲೆ ತನ್ನ ರಾಜ್ಯದ ಆಂತರಿಕ ವ್ಯವಹಾರಗಳನ್ನು ನಿರ್ವಹಿಸಿಕೊಳ್ಳಲು ಸ್ವತಂತ್ರನಾಗಿರುತ್ತಾನೆ ಎಂದು ಪ್ರತಿಯೊಂದು ಒಪ್ಪಂದದಲ್ಲೂ ಸ್ಪಷ್ಟಪಡಿಸಿತು.

ಆದ್ದರಿಂದ ಭಾರತದಲ್ಲಿ ಬ್ರಿಟಿಷರನ್ನು ಸರ್ವೋನ್ನತ ಶಕ್ತಿಯನ್ನಾಗಿ ಮಾಡುವುದನ್ನೇ ಅಪೇಕ್ಷಿಸಿ, ಬಹುಮಟ್ಟಿಗೆ ಯಶಸ್ವಿಯಾಗದ ವೆಲ್ಲೆಸ್ಲಿಯೂ ಸಂಪೂರ್ಣ ಪ್ರಭುತ್ವವನ್ನು ಘೋಷಿಸಲಿಲ್ಲ ಮತ್ತು ಮಿತ್ರ ರಾಜರ ಆಂತರಿಕ ವ್ಯವಹಾರಗಳಲ್ಲಿ ಮಧ್ಯ ಪ್ರವೇಶ ಮಾಡಲು ತನಗೆ ಹಕ್ಕಿದೆ ಎಂದು ಹೇಳಲಿಲ್ಲ. ಬ್ರಿಟಿಷರು ತಮ್ಮ ಭೂಭಾಗವನ್ನು ವಿಸ್ತರಿಸಲು ಮತ್ತು ಅದನ್ನು ಸುರಕ್ಷಿತವಾಗಿರಿಸಿಕೊಳ್ಳಲು ಕಾತುರರಾಗಿದ್ದರು. ಆದ್ದರಿಂದ ಅವರು ಮೊದಲಲ್ಲಿ ತಮ್ಮ ಮಿತ್ರ ರಾಜ್ಯಗಳನ್ನು ತಮ್ಮ ಭೂ ಪ್ರದೇಶಕ್ಕೂ ವೈರಿ ರಾಜನ ಭೂ ಪ್ರದೇಶಕ್ಕೂ ನಡುವೆ ತಡೆಯಾಗಿ ಇರಿಸಿಕೊಂಡರು. ಮುಂದೆ ಆ ರಾಜರು ಇತರರೊಂದಿಗೆ ತಮ್ಮ ವಿರುದ್ಧ ಒಂದು ಗೂಡುವುದನ್ನು ತಡೆಯುವ ಸಲುವಾಗಿ ಅವರ ವಿದೇಶಾಂಗ ನೀತಿಯನ್ನು ತಮ್ಮ ಇಷ್ಟದ ಪ್ರಕಾರ ವ್ಯವಹರಿಸಲು ಪ್ರಯತ್ನ ಮಾಡಿದರು. ಅಂತಿಮವಾಗಿ ಭಾರತದಲ್ಲಿ ತಮ್ಮ ಸಾಮ್ರಾಜ್ಯವನ್ನು ಕ್ರೋಢೀಕರಿಸಿ ವಿಸ್ತರಿಸಿದರು. ಹೀಗೆ ಈ ಕಾಲಾವಧಿಯಲ್ಲಿ ಬ್ರಿಟಿಷರು ಬಹುವಾಗಿ ದೇಶೀಯ ರಾಜರನ್ನು ಸ್ವತಂತ್ರ ರಾಜರನ್ನಾಗಿ ಪರಿಗಣಿಸಿ ಅದಕ್ಕೆ ತಕ್ಕಂತೆ ವರ್ತಿಸಿದರು.

## 81.2 ಈಸ್ಟ್ ಇಂಡಿಯಾ ಕಂಪನಿ ಮತ್ತು ದೇಶೀಯ ರಾಜ್ಯಗಳು (1813-1858)

ಬ್ರಿಟಿಷರನ್ನು ಭಾರತದಲ್ಲಿ ಪರಮೋನ್ನತ ಶಕ್ತಿಯನ್ನಾಗಿ ಬೆಳೆಸುವುದರಲ್ಲಿ ವೆಲ್ಲೆಸ್ಲಿಯು ಬಹುಮಟ್ಟಿಗೆ ಯಶಸ್ವಿಯಾದನು. ಆಗ ಉಳಿದುಕೊಂಡಿದ್ದ ಕೊರತೆಯನ್ನು ಮಾರ್ಕ್ವೆಸ್ ಆಫ್ ಹೇಸ್ಟಿಂಗ್ಸ್ ಪೂರ್ಣಗೊಳಿಸಿದನು. ಮೂರನೆಯ ಮರಾಠಾ ಯುದ್ಧವಾದ ಮೇಲೆ ಬ್ರಿಟಿಷರ ಸಾರ್ವಭೌಮತ್ವವನ್ನು ಎದುರಿಸುವ ಧೈರ್ಯವುಳ್ಳ ಯಾವ ದೇಶೀಯ ರಾಜ್ಯ ಶಕ್ತಿಯೂ ಉಳಿಯಲಿಲ್ಲ. ಆದ್ದರಿಂದ, ಬ್ರಿಟಿಷರು ಮಿತ್ರ ರಾಜರ ಮೇಲೆ ಹೆಚ್ಚಿನ ಹಕ್ಕುಗಳನ್ನು ಸ್ವೀಕರಿಸಿದರು. ದೇಶೀಯ ರಾಜರು ತಮ್ಮ ವಿದೇಶಾಂಗ ನೀತಿಯನ್ನು ಸಂಪೂರ್ಣವಾಗಿ ಬ್ರಿಟಿಷರ ಕೈಗೊಪ್ಪಿಸಿದರು. ತತ್ಪರಿಣಾಮವಾಗಿ ಆಂತರಿಕ ವ್ಯವಹಾರಗಳಲ್ಲಿ ಅವರು ಸ್ವತಂತ್ರರಾಗಿದ್ದರೂ ಆಚರಣೆಯಲ್ಲಿ ಅವರನ್ನು ಅಧೀನರಂತೆ ನಡೆಸಿಕೊಳ್ಳಲಾಯಿತು. ಅವರ ಆಸ್ಥಾನಗಳಲ್ಲಿದ್ದ ರೆಸಿಡೆಂಟರ ಮೂಲಕ ಬ್ರಿಟಿಷರ ಮಧ್ಯ ಪ್ರವೇಶ ಅಧಿಕವಾಗುತ್ತಲೇ ಹೋಯಿತು. ಆದ್ದರಿಂದ ಮಧ್ಯ ಪ್ರವೇಶದ ಸ್ವರೂಪವು ರಾಜನ ವ್ಯಕ್ತಿತ್ವವನ್ನು ಅವನ ಆಸ್ಥಾನದ ಬ್ರಿಟಿಷ್ ರೆಸಿಡೆಂಟನನ್ನು ಅವಲಂಬಿಸಿತು. ಆದರೆ ದೇಶೀಯ ರಾಜರನ್ನು ಬ್ರಿಟಿಷರು ಸ್ವತಂತ್ರ ಅರಸರನ್ನಾಗಿ ನಡೆಸಿಕೊಳ್ಳಲಿಲ್ಲ ಎನ್ನುವುದಂತೂ ಸ್ಪಷ್ಟವಾಗಿತ್ತು. ಕ್ರಮೇಣ ಅವರನ್ನು ತಮ್ಮ ಅಧೀನರ ಮಟ್ಟಕ್ಕೆ ಇಳಿಸಲಾಯಿತು. ಔಧ್, ಮೈಸೂರು, ನಾಗಪುರ, ಉದಯಪುರ, ಜಯಪುರ ಮೊದಲಾದ ರಾಜ್ಯಗಳ ವ್ಯವಹಾರಗಳಲ್ಲಿ ಹೀಗೆ ಬ್ರಿಟಿಷರು ಮೂಗು ಹಾಯಿಸಿದರು. ಆದ್ದರಿಂದ 1813 ರಿಂದ 1858 ರವರೆಗಿನ ಅವಧಿಯಲ್ಲಿ ದೇಶೀಯ ರಾಜರೊಂದಿಗೆ ಬ್ರಿಟಿಷರು ಇಟ್ಟುಕೊಂಡ ಸಂಬಂಧಗಳನ್ನು ಪರಿಶೀಲಿಸುವಾಗ ಕೆಳಗಿನ ಎರಡು ಅಂಶಗಳು ವಿಶೇಷವಾಗಿ ಗಮನಕ್ಕೆ ಬರುತ್ತವೆ.

1. ಬ್ರಿಟಿಷ್ ರೆಸಿಡೆಂಟರು ದೇಶೀಯ ರಾಜರ ಆಂತರಿಕ ವ್ಯವಹಾರಗಳಲ್ಲಿ ಮಧ್ಯ ಪ್ರವೇಶ ಮಾಡುವುದು ಅಧಿಕವಾಗುತ್ತಾಹೋಯಿತು. ಅವರು ಅಧಿಕವಾಗಿ ದೇಶೀಯ ರಾಜರ ಮೇಲೆ ಬಿಗಿಯಾದ ನಿಯಂತ್ರಣವನ್ನಿಟ್ಟುಕೊಂಡರು.

2. ಗವರ್ನರ್ ಜನರಲ್ಲರು ಸ್ಪಷ್ಟವಾಗಿಯೇ ಸಾಮ್ರಾಜ್ಯಶಾಹಿಗಳಾದರು. ಭಾರತದಲ್ಲಿ ಮತ್ತು ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಹೊರಗೆ ಕೂಡ ಬ್ರಿಟಿಷ್ ಸಾಮ್ರಾಜ್ಯವನ್ನು ವಿಸ್ತರಿಸಿದರು.

ಬ್ರಿಟಿಷರಿಗೆ ಈ ಪ್ರೇರಣೆ ಬಂದದ್ದು ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿಗಳಿಂದ. ರಾಜ್ಯ ವಿಸ್ತಾರವೆನ್ನುವುದು ಅವರಿಗೆ ಆರ್ಥಿಕ ಮತ್ತು ರಾಜಕೀಯ ಲಾಭವಾಯಿತು. ಅವರಿಗೆ ಹೆಚ್ಚಿನ ಭೂಪ್ರದೇಶ, ಹೆಚ್ಚಿನ ವರಮಾನ, ತಮ್ಮ ಉತ್ಪಾದನೆಗಳಿಗೆ ವಿಶಾಲವಾದ ಮಾರುಕಟ್ಟೆ, ಹೆಚ್ಚಿನ ಯುವಶಕ್ತಿ ಇವುಗಳನ್ನು ಕೊಟ್ಟಿತು. ಜೊತೆಗೇ ಅದೇ ಸಮಯಕ್ಕೆ ಅವರ ವೈರಿಗಳು ದುರ್ಬಲರಾಗುತ್ತಾ ಹೋದರು. ದೇಶೀಯ ರಾಜರ ರಾಜ್ಯಗಳನ್ನು ಕಬಳಿಸಲು ಅವರು ಕೊಟ್ಟ ಒಂದು ನೆಪ, ಅದು ಜನರನ್ನು ರಾಜರ ದುರಾಡಳಿತದಿಂದ ಕಾಪಾಡುತ್ತದೆ ಎನ್ನುವುದು. ಬ್ರಿಟಿಷ್ ಆಳ್ವಿಕೆಯಿಂದ ಅವರಿಗೆ ಬೇಕಾದಷ್ಟು ಪ್ರಯೋಜನವಾಗುತ್ತದೆ ಎಂದು ಹೇಳಿದುದು. ಆದರೆ ಬ್ರಿಟಿಷರ ಈ ನಿಲುವು ಎಷ್ಟು ಮಾತ್ರಕ್ಕೂ ಸಮರ್ಥನೀಯವಾಗಿರಲಿಲ್ಲ. ಬ್ರಿಟಿಷ್ ಆಳ್ವಿಕೆಯು ಜನರಿಗೆ ಪ್ರಯೋಜನಕರವಾಗಿತ್ತೇ ಎನ್ನುವುದು ಚರ್ಚಾಸ್ಪದವಾದ ವಿಷಯ. ಅಲ್ಲದೇ ದೇಶೀಯ ರಾಜರ ದುರಾಡಳಿತಕ್ಕೂ ಬ್ರಿಟಿಷರೇ ಜವಾಬ್ದಾರರಾಗಿದ್ದರು. ಅವರ ದುರಾಡಳಿತಕ್ಕೆ ಒಂದು ಕಾರಣ ಬ್ರಿಟಿಷ್ ರೆಸಿಡೆಂಟರ ಮಧ್ಯ ಪ್ರವೇಶ. ಆಡಳಿತವು ಸುಧಾರಣೆಗೊಳ್ಳಲು ಅವರು ಬಿಡಲಿಲ್ಲ. ಅವರ ರಾಜ್ಯವನ್ನು ಒತ್ತುವರಿ ಮಾಡಿಕೊಳ್ಳಲು ಅವರು ನೆಪವನ್ನು ಹುಡುಕುತ್ತಿದ್ದರು. ಮಿ. ಹೆನ್ರಿ ಲಾರೆನ್ಸ್ ಇದನ್ನು ಒಪ್ಪಿಕೊಂಡನು. ಅವನು 1848 ರಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದಾನೆ. "ಕೆಟ್ಟ ಆಡಳಿತದ ಎದುರಾಗಿ ಭರವಸೆ ಕೊಡಲು ಯಾವುದಾದರೂ ಸಾಧನವಿದ್ದರೆ ಅದು ದೇಶೀಯ ರಾಜ ಮತ್ತು ಅವನ ಮಂತ್ರಿ. ಇಬ್ಬರೂ ವಿದೇಶೀಯ ಬಂದೂಕಿನ ತುದಿಯನ್ನು ಅವಲಂಬಿಸಿ, ಬ್ರಿಟಿಷ್ ರೆಸಿಡೆಂಟ್‌ನಿಂದ ಮಾರ್ಗದರ್ಶನ ಪಡೆದರು". ಡೈರೆಕ್ಟರುಗಳ ಮಂಡಳಿಯು 1841 ರಲ್ಲಿ ಈ ಸಾಮ್ರಾಜ್ಯಶಾಹಿ ನೀತಿಯನನಲು ಅಂಗೀಕರಿಸಿತು. "ನ್ಯಾಯಯುತವೂ ಗೌರವಾನ್ವಿತವೂ ಆದ ರೀತಿಯಲ್ಲಿ ಭೂಪ್ರದೇಶವನ್ನಾಗಲೀ, ವರಮಾನವನ್ನಾಗಲೀ ವಶಪಡಿಸಿಕೊಳ್ಳುವುದನ್ನು ಬಿಡಲಾಗದು" ಎಂದು ಅವರು ಪ್ರಕಟಿಸಿದರು. ಈ ನೀತಿಯು ಲಾರ್ಡ್ ಡಾಲ್‌ಹೌಸಿಯು ಗವರ್ನರ್ ಜನರಲ್ ಆದಾಗ ಶಿಖರ ಮುಟ್ಟಿತು.

ವಾಸ್ತವವಾಗಿ ಅಧೀನ ದೇಶೀಯ ರಾಜರ ರಾಜ್ಯಗಳನ್ನು ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳುವ ನೀತಿಯನ್ನು ಬ್ರಿಟಿಷರು 1831 ರಿಂದಲೇ ಅನುಸರಿಸುತ್ತಿದ್ದರು. ಬೇರೆ ಬೇರೆ ಗವರ್ನರ್ ಜನರಲ್ಲರು ಬೇರೆ ಬೇರೆ ನೆಪಗಳಿಂದ ದೇಶೀಯ ರಾಜರ ಭೂಭಾಗಗಳನ್ನು ಕಬಳಿಸುತ್ತಿದ್ದರು. ಸಿಂಧ್, ಪಂಜಾಬ್, ಬರ್ಮಾ ಮತ್ತು ಅಸ್ಸಾಂ ಇವು ಯುದ್ಧದ ಫಲವಾಗಿ ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನವಾದುವು. ಚಚಾರ್, ಮೈಸೂರು, ಕೊಡಗು, ಮಣಿಪುರ ಮತ್ತು ಜೈಂತಿಯಾಗಳನ್ನು ದುರಾಡಳಿತ ಎಂಬ ಹೆಸರಿನಲ್ಲಿ ವಶಪಡಿಸಿಕೊಳ್ಳಲಾಯಿತು. ಕರ್ನೂಲನ್ನು ಲಾರ್ಡ್ ಆರ್ಲ್ಲಂಡನು 1842 ರಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. 1843 ರಲ್ಲಿ ಲಾರ್ಡ್ ಎಲೆನ್ ಬರೋ ಗ್ವಾಲಿಯರ್ ಸಂಸ್ಥಾನದ ವ್ಯವಹಾರಗಳಲ್ಲಿ ತಲೆ ಹಾಕಿದನು. ಅದನ್ನು ಒಡನೆಯೇ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಲಿಲ್ಲವಾದರೂ ಅಲ್ಲಿಯ ಅರಸನೊಂದಿಗೆ ಹೊಸ ಒಪ್ಪಂದವೊಂದನ್ನು ಮಾಡಿಕೊಳ್ಳಲಾಯಿತು. ಅದರ ಪ್ರಕಾರ ರಾಜ್ಯದ ಸೇನಾ ಬಲವನ್ನು ಕುಗ್ಗಿಸಿ ಅದನ್ನು ಸಂರಕ್ಷಿತ ರಾಜ್ಯವೆಂದು ಘೋಷಿಸಲಾಯಿತು. 1839 ರಲ್ಲಿ ಮಾಂಡವಿ, 1840 ರಲ್ಲಿ ಕೊಲಾಬಾ ಮತ್ತು ಜಲೋನ್ 1842 ರಲ್ಲಿ ಸೂರತ್‌ಗಳನ್ನು ಅಲ್ಲಲ್ಲಿಯ ಅರಸರಿಗೆ ವಾರಸುದಾರರಿಲ್ಲವೆಂಬ ಕಾರಣದಿಂದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಲಾಯಿತು. ಈ "ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ಸಿದ್ಧಾಂತದ"ನೀತಿಯನ್ನು ಡಾಲ್‌ಹೌಸಿಯು ಹೆಚ್ಚು ಬಿರುಸಾಗಿ ಅನುಸರಿಸಿದನು. ಈ ನೀತಿಯ ಆಧಾರದಿಂದ ಅವನು ಸರ್ಕಾರವನ್ನು 1848 ರಲ್ಲೂ; ಜೈತ್‌ಪುರ ಸಂಭಲ್ಪುರ ಮತ್ತು ಬೈಘಾಟ್‌ಗಳನ್ನು 1850 ರಲ್ಲೂ; ಉದಯಪುರವನ್ನು 1852 ರಲ್ಲೂ; ಝಾನ್ಸಿಯನ್ನು 1853 ರಲ್ಲೂ ಮತ್ತು ನಾಗಪುರವನ್ನು 1854 ರಲ್ಲೂ ಸಾಮ್ರಾಜ್ಯಕ್ಕೆ ಸೇರಿಸಿದನು. ಯಾವ ರಾಜ್ಯಗಳು ಬ್ರಿಟಿಷರಿಂದಾಗಿಯೇ ಅಸ್ತಿತ್ವದಲ್ಲಿವೆಯೋ ಅಂತವುಗಳಲ್ಲಿ ಮಾತ್ರ ತಾನು ಈ ನೀತಿಯನ್ನು ಅನುಸರಿಸುತ್ತಿದ್ದುದಾಗಿ ಡಾಲ್ ಹೌಸಿ ಹೇಳಿಕೊಂಡನು.

"ನಮ್ಮ ಧನ ಸಹಾಯ ಅಥವಾ ಕೊಡುಗೆಯಿಂದಿಗಾ ಅಸ್ತಿತ್ವದಲ್ಲಿರುವ ರಾಜ್ಯಗಳಲ್ಲಿ ವಾರಸುದಾರರಿಲ್ಲದೆ ಹೋದಾಗ, ನಮ್ಮ ಸಹಾಯದ ಷರತ್ತಿನಂತೆ ಆ ರಾಜ್ಯವನ್ನು ನಾವು ಆಕ್ರಮಣಮಾಡಿಕೊಳ್ಳುತ್ತೇವೆ" ಎಂದು ಅವನು ಹೇಳಿದನು. ಈ ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ಸಿದ್ಧಾಂತದ ನೀತಿಯೇ ಅನ್ಯಾಯವಾಗಿತ್ತು. ಒಬ್ಬ ದೇಶೀಯ ಅರಸನಿಗೆ ಮಕ್ಕಳಿಲ್ಲದಾಗ ಒಂದು ಮಗುವನ್ನು ದತ್ತು ಸ್ವೀಕಾರ ಮಾಡುವುದು ಅವನ ಹಕ್ಕು ಎಂಬುದಕ್ಕೆ ಸಾಮಾಜಿಕ ಹಾಗೂ ಧಾರ್ಮಿಕ ಅಂಗೀಕಾರ, ಮನ್ನಣೆಗಳಿದ್ದವು. ಮೊಗಲ್

ಚಕ್ರವರ್ತಿಗಳೂ ದೇಶದ ಇತರ ಎಲ್ಲಾ ರಾಜಮಹಾರಾಜರುಗಳು ಇದನ್ನು ಒಪ್ಪಿದ್ದರು. ಇಂತಹ ಸರ್ವಸಮ್ಮತ ನೀತಿಯನ್ನು ತಿರಸ್ಕರಿಸಿ ರಾಜನು ದತ್ತು ಸ್ವೀಕಾರ ಮಾಡುವುದನ್ನು ಅನುಮತಿಸದಿರುವುದಕ್ಕೆ ಬ್ರಿಟಿಷರಿಗೆ ನ್ಯಾಯವಾದ ಅಧಿಕಾರವಾಗಲಿ, ಕಾರಣವಾಗಲಿ ಇರಲಿಲ್ಲ. ಡಾಲ್‌ಹೌಸಿಯ ಉದ್ದೇಶ ಸಂಪೂರ್ಣವಾಗಿ ಸಾಮ್ರಾಜ್ಯ ಶಾಹಿಯಾಗಿತ್ತು. ಮಿ. ಇನ್ಸ್ ತಿಳಿಸುವಂತೆ "ರಾಜ್ಯವೊಂದನ್ನು ವಶಪಡಿಸಿಕೊಳ್ಳುವುದನ್ನು ನಿವಾರಿಸಲು ಸಾಧ್ಯವಿದ್ದರೆ ನಿವಾರಿಸಬೇಕು ಎಂಬ ನೀತಿಯನ್ನು ಅವನ ಹಿಂದಿನವರು ಪಾಲಿಸುತ್ತಿದ್ದರು, ಆದರೆ ಡಾಲ್ ಹೌಸಿಯು, ನ್ಯಾಯ ಸಮ್ಮತವಾದ ರೀತಿಯಲ್ಲಿ ವಶಪಡಿಸಿಕೊಳ್ಳುವುದು ಸಾಧ್ಯವಿದ್ದರೆ ವಶಪಡಿಸಿಕೊಳ್ಳಬೇಕು ಎಂಬ ನೀತಿಯನ್ನು ಅನುಸರಿಸಿದನು". ಸತಾರಾ ಮತ್ತು ನಾಗಾಪುರಗಳನ್ನು ವಶಪಡಿಸಿಕೊಂಡದ್ದನ್ನು ಕುರಿತು ಲೀವಾರ್ನರ್ ಕೂಡ ಹೀಗೆ ಹೇಳುತ್ತಾನೆ. "ಸಾಮ್ರಾಜ್ಯದ ಹಿತಗಳು ಅವನಿಗೆ ಹೆಚ್ಚು ತೂಕವಾಗಿ ಕಾಣಿಸಿದವು, ಅವು ಇದ್ದದ್ದು ಮುಂಬಯಿ, ಮದರಾಸು ನಡುವಣ ಮುಖ್ಯ ಮಾರ್ಗದ ಹಾಗೂ ಮುಂಬಯಿ ಕಲ್ಕತ್ತಾ ನಡುವಣ ಮುಖ್ಯ ಮಾರ್ಗದ ನಡುವೆ. ಹಾಗಾಗಿ ಅವುಗಳನ್ನು ವಶಪಡಿಸಿಕೊಂಡುದುದರಿಂದ ಕ್ರೋಢೀಕರಣ ಸಾಧ್ಯವಾಗುತ್ತಿತ್ತು". ಡಾಲ್ ಹೌಸಿಯು ಈ ನೀತಿಗೆ ಕಂಪನಿಯ ಡೈರೆಕ್ಟರುಗಳು ಸಕ್ರಿಯ ಬೆಂಬಲ ದೊರಕಿತು. ಡಾಲ್ ಹೌಸಿ ಒಂದೊಂದು ರಾಜ್ಯವನ್ನು ವಶಪಡಿಸಿಕೊಂಡುದುದನ್ನು ಅವರು ಸಮ್ಮತಿಸಿದರು. ಮುಂದೆ ಅವನು 1850 ರಲ್ಲಿ ಸಿಕ್ಕಿಂ ರಾಜ್ಯಕ್ಕೆ ಸೇರಿದ ಒಂದು ಸಾವಿರದ ಆರುನೂರ ಎಪ್ಪತ್ತಾರು ಚದರ ಮೈಲಿಯಷ್ಟು ಪ್ರದೇಶವನ್ನೂ 1853 ರಲ್ಲಿ ಹೈದರಾಬಾದ್ ನಿಜಾಮನಿಂದ ಬೀರಾರ್ ಪ್ರಾಂತ್ಯವನ್ನು 1856 ರಲ್ಲಿ ಔಧ್ ರಾಜ್ಯವನ್ನು ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಇಡೀ ನೀತಿಯನ್ನೇ ಬ್ರಿಟಿಷರು 1813 ರಿಂದ 1858 ರ ಅವಧಿಯಲ್ಲಿ ಮುಂದುವರಿಸಿದರು. ದೇಶೀಯ ಅರಸರು ಅಧೀನ ಮಿತ್ರರೇ ಹೊರತು ಸ್ವತಂತ್ರ ಅರಸರು ಎಂಬ ಧೋರಣೆಯಿಂದ ಅವರು ಹಾಗೆ ಮಾಡಿದರು. ಆದರೆ ಅದು ನ್ಯಾಯವಾದ ನೀತಿಯಾಗಿರಲಿಲ್ಲ. ಈ ನೀತಿಯ ಮೂಲ ಆಧಾರ ಬಲತ್ಕಾರ, ಬ್ರಿಟಿಷರು ಭಾರತದಲ್ಲಿ ಅತ್ಯಂತ ಪ್ರಬಲ ಶಕ್ತಿಯಾಗಿದ್ದರು. ಅವರನ್ನು ಎದುರಿಸುವ ಶಕ್ತಿ ದೇಶೀಯ ರಾಜರಿಗಿರಲಿಲ್ಲ. ಆದ್ದರಿಂದ ಸಿಕ್ಕಿದ ನೆಪಗಳೆಲ್ಲವನ್ನು ಉಪಯೋಗಿಸಿಕೊಂಡು ಬ್ರಿಟಿಷರು ತಮ್ಮ ಸಾಮ್ರಾಜ್ಯ ಶಾಹಿ ಉದ್ದೇಶಗಳನ್ನು ಪೂರೈಸಿಕೊಂಡರು. ಬೇರೆ ಯಾವುದೇ ಸುಲಭವಾದ ನೆಪ ದೊರಕದಾದಾಗ ಯುದ್ಧ ಮಾಡಿ ಗೆದ್ದುಕೊಳ್ಳಲೂ ಅವರು ಹಿಂಜರಿಯಲಿಲ್ಲ. ಹಾಗಾಗೀ ದೇಶೀಯ ರಾಜರನ್ನು ಕುರಿತ ನೀತಿಯ ಈ ಪರಿವರ್ತನೆಯ ಮುಖ್ಯ ಕಾರಣ, ಭಾರತದಲ್ಲಿ ಕ್ರಮೇಣ ಅಧೀನವಾಗುತ್ತಿದ್ದ ಅವರ ರಾಜಕೀಯ ಶಕ್ತಿ.

## 81.3 ಬ್ರಿಟಿಷ್ ಭಾರತ ಮತ್ತು ದೇಶೀಯ ರಾಜ್ಯಗಳ ಸಂಬಂಧಗಳು (1858-1919)

ದೇಶೀಯ ಸಂಸ್ಥಾನಗಳನ್ನು ಕುರಿತ ಬ್ರಿಟಿಷರ ನೀತಿಯಲ್ಲಿ 1857 ರ ದಂಗೆಯ ನಂತರ ಮೂಲಭೂತ ಬದಲಾವಣೆಗಳಾದವು. ಬಹುತೇಕ ರಾಜ ಮಹಾರಾಜರು ಪ್ರತ್ಯಕ್ಷವಾಗೋ, ಪರೋಕ್ಷವಾಗೋ ಬ್ರಿಟಿಷರನ್ನು ಬೆಂಬಲಿಸಿದರು. ಅದಕ್ಕೆ ಪ್ರತಿಯಾಗಿ ಬ್ರಿಟಿಷರು ಅವರಿಗೆ ಗೌರವವನ್ನೂ ಅವರ ರಾಜ್ಯವನ್ನೂ ಕೊಟ್ಟರು. 1858 ರಲ್ಲಿ ಬ್ರಿಟಿಷ್ ಚಕ್ರವರ್ತಿಯು ಭಾರತದ ಆಡಳಿತವನ್ನು ಕಂಪನಿಯಿಂದ ತೆಗೆದುಕೊಂಡನು. ಭಾರತದ ದೇಶೀಯ ರಾಜರಿಗೆ ಹಲವು ರಿಯಾಯಿತಿಗಳನ್ನು ಪ್ರಕಟಿಸಿದನು. 'ಅದುವರೆಗೆ ಕಂಪನಿಯು ಮಾಡಿಕೊಂಡಿದ್ದ ಕರಾರುಗಳು, ಒಪ್ಪಂದಗಳು, ಸನ್ನದುಗಳು, ಹಕ್ಕುಗಳು ಎಲ್ಲವನ್ನು ಬ್ರಿಟಿಷ್ ಸರಕಾರವು ಅಂಗೀಕರಿಸಿತು. ಸಹಜವಾದ ವಾರಸುದಾರನಿಲ್ಲದಾಗ ದತ್ತಕ ಸ್ವೀಕಾರ ಮಾಡುವ ರಾಜರ ಹಕ್ಕನ್ನು ಆಡಳಿತವು ಒಪ್ಪಿಕೊಂಡಿತು. ಅದಕ್ಕಿಂತ ಮಿಗಿಲಾಗಿ ದೇಶೀಯ ರಾಜ್ಯಗಳಿರುವುದು, ಭಾರತದಲ್ಲಿನ ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಗೆ ಉಪಯುಕ್ತವೆಂದು ಕಂಡು ಬಂದುದರಿಂದ, ಅವರ ರಾಜ್ಯಗಳನ್ನು ವಶಪಡಿಸಿಕೊಳ್ಳುವ ವಿಚಾರವನ್ನು ಸಂಪೂರ್ಣವಾಗಿ ಕೈ ಬಿಡಲಾಯಿತು. ದುರಾಡಳಿತ ನಡೆಸುತ್ತಿರುವ ರಾಜನನ್ನು ಶಿಕ್ಷಿಸುವುದು ಮತ್ತು ಅಗತ್ಯವಾದರೆ ಅವನನ್ನು ಪದಚ್ಯುತಿಗೊಳಿಸುವುದು. ಆದರೆ ರಾಜ್ಯವನ್ನು ತಮ್ಮ ವಶಪಡಿಸಿಕೊಳ್ಳದಿರುವುದು ನೂತನ ನೀತಿಯಾಯಿತು. ಚಕ್ರವರ್ತಿನಿಯ ಘೋಷಣೆಯೂ "ದೇಶೀಯ ರಾಜರ ಹಕ್ಕುಗಳು, ಗೌರವ, ಪ್ರತಿಷ್ಠೆಗಳನ್ನು ಗೌರವಿಸುವುದಾಗಿ" ಬರವಸೆ ನೀಡಿತು. ಹಾಗಾಗಿ 1857 ರ ನಂತರ ದೇಶೀಯ ರಾಜರು ತಮಗೆ ಹೆಚ್ಚಿನ ಗೌರವವೂ, ಸುರಕ್ಷಣೆಯೂ ದೊರೆತಂತೆ ಭಾವಿಸಿದರು. ಕಂಪನಿಗೆ ಬದಲಾಗಿ ಬ್ರಿಟಿಷ್ ಸಾಮ್ರಾಜ್ಯವು ಇಲ್ಲಿ ಸರ್ವೋನ್ನತ ಶಕ್ತಿಯಾದದ್ದು ಹೊರತಾಗಿ, ದೇಶೀಯ ರಾಜರ ಸ್ಥಾನಮಾನದಲ್ಲಿ ಯಾವುದೇ ನ್ಯಾಯಿಕ ವ್ಯತ್ಯಾಸವಾಗಲಿಲ್ಲ.

ಆದರೆ ಆಚರಣೆಯಲ್ಲಿ ಭಾರತದ ಆಡಳಿತವನ್ನು ಚಕ್ರವರ್ತಿಯು ವಹಿಸಿಕೊಂಡದ್ದು, ದೇಶೀಯ ರಾಜ್ಯಗಳಿಗೂ ಬ್ರಿಟಿಷರಿಗೂ ಇದ್ದ ಇಡೀ ಸಂಬಂಧವನ್ನು ಕ್ರಮೇಣ ಬದಲಾಯಿಸಿತು. ಚಕ್ರವರ್ತಿಯೇ ಭಾರತದಲ್ಲಿ ಸರ್ವೋನ್ನತ ಶಕ್ತಿ, ದೇಶೀಯ ರಾಜರೆಲ್ಲರೂ

ಅದಕ್ಕೆ ಅಧೀನರು ಎಂಬುದನ್ನು ತತ್ವದಲ್ಲೂ ಆಚರಣೆಯಲ್ಲೂ ಸ್ಥಿರೀಕರಿಸಲಾಯಿತು. 1862 ರಲ್ಲಿ ಲಾರ್ಡ್ ಕ್ಯಾನಿಂಗ್ ಹೀಗೆ ಘೋಷಿಸಿದನು. "ಬ್ರಿಟಿಷ್ ಚಕ್ರವರ್ತಿಯು ಭಾರತದ ನಿರ್ವಿವಾದ ಸರ್ವೋನ್ನತ ಅಧಿಪತಿಯಾಗಿದ್ದಾರೆ". ಮುಂದೆ ಅನುಸರಿಸಲಾದ ನೀತಿಯು ಭಾರತದ ಬ್ರಿಟಿಷ್ ಸಾಮ್ರಾಜ್ಯದ ಗಡಿಗಳೊಳಗೆ ದೇಶೀಯ ರಾಜ್ಯಗಳಿಗೆ ಮನ್ನಣೆ ನೀಡುವುದು ಅಂದರೆ, ದೇಶೀಯ ರಾಜ್ಯಗಳು ವಿದೇಶಿಯವೊ ಅಲ್ಲದೆ, ಸ್ವತಂತ್ರವೂ ಅಲ್ಲದೆ, ಭಾರತದ ಬ್ರಿಟಿಷ್ ಸಾಮ್ರಾಜ್ಯದ ಭಾಗಗಳಾದವು. 1857 ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಭಾರತಕ್ಕೆ ಭೇಟಿ ನೀಡಿದನು. 1876 ರಲ್ಲಿ ದೆಹಲಿ ದರ್ಬಾರು ನಡೆಯಿತು. ಅಲ್ಲಿ ಭಾರತದ ಚಕ್ರವರ್ತಿನಿ ವಿಕ್ಟೋರಿಯಾ ಮಹಾರಾಣಿಯು ಆ ಹಕ್ಕನ್ನು ಸ್ಥಿರೀಕರಿಸಿದಳು.

ಭಾರತ ಸರ್ಕಾರವು 'ಏಕಾಧಿಕಾರ ತತ್ವ' ವನ್ನು ಸಮರ್ಥಿಸಿತು. ಅಂದರೆ, ಅಖಿಲ ಭಾರತ ಉದ್ದೇಶಗಳಿಗಾಗಿ ದೇಶೀಯ ರಾಜ್ಯಗಳನ್ನು ಭಾರತದಲ್ಲಿನ ಬ್ರಿಟಿಷ್ ಸಾಮ್ರಾಜ್ಯದ ಭಾಗಗಳನ್ನಾಗಿ ಪರಿಗಣಿಸಲಾಯಿತು. ರೈಲ್ವೆ, ಟೆಲಿಗ್ರಾಫ್ ಮತ್ತು ಅಂಚೆ ವ್ಯವಸ್ಥೆಗಳನ್ನು ಅಖಿಲ ಭಾರತ ಮಟ್ಟದಲ್ಲಿ ಕೈಗೊಳ್ಳಲಾಯಿತು. ಸಾರಿಗೆ ಮತ್ತು ಸಂಪರ್ಕ ಉದ್ದೇಶಗಳಿಗಾಗಿ ಭಾರತೀಯ ಗಡಿಗಳನ್ನು ಕೂಡಿಸಲಾಯಿತು. ಅದಕ್ಕೋಸ್ಕರವಾಗಿ ದೇಶೀಯ ರಾಜ್ಯಗಳ ಗಡಿಗಳನ್ನು ಧಾರಾಳವಾಗಿ ಅನಿರ್ಬಂಧಿತವಾಗಿ ಅತಿಕ್ರಮಿಸಲಾಯಿತು. ಭಾರತದ ಎಲ್ಲಾ ಭಾಗಗಳಲ್ಲೂ ದೇಶೀಯ ಸಂಸ್ಥಾನಗಳಲ್ಲೂ ಬ್ರಿಟಿಷ್ ಕರೆನ್ಸಿ ಶಾಸನ ಬದ್ಧವಾಗಿ ಚಲಾವಣೆಗೆ ಬಂದಿತು. ಬ್ರಿಟಿಷ್ ಪ್ರಾಂತ್ಯಗಳಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳು ಬಂದ ಪ್ರತಿಯೊಬ್ಬ ಭಾರತೀಯ ವಿದ್ಯಾರ್ಥಿಯನ್ನು ಅವನ/ಅವಳ ಮನೆ ಎಲ್ಲೇ ಇರಲಿ ಸೇರಿಸಿಕೊಂಡವು. ಬ್ರಿಟಿಷ್ ಉಚ್ಛ ನ್ಯಾಯಾಲಯಗಳು ದೇಶೀಯ ರಾಜರ ನ್ಯಾಯಸ್ಥಾನಗಳಿಗೆ ಮಾದರಿಯಾದವು. ಮಂತ್ರಿಗಳನ್ನು, ಉನ್ನತ ಅಧಿಕಾರಿಗಳನ್ನು, ದಿವಾನರನ್ನು ನೇಮಿಸಿಕೊಳ್ಳಬೇಕಾದರೆ ರಾಜರು ಅದಕ್ಕೆ ಭಾರತ ಸರ್ಕಾರದ ಅಂಗೀಕಾರವನ್ನು ಪಡೆಯಬೇಕಾಯಿತು. ರಾಜನು ಅಪ್ರಾಪ್ತ ವಯಸ್ಕನಾಗಿದ್ದರೆ, ರೀಜೆಂಟ್‌ನನ್ನೊಳಗೊಂಡ ರೀಜೆನ್ಸಿ ಮಂಡಳಿಯನ್ನು ನೇಮಿಸುವುದಕ್ಕೂ ಅಗತ್ಯವೆಂದು ಕಂಡು ಬಂದರೆ ಯಾವುದೇ ರಾಜ್ಯದ ಆಡಳಿತವನ್ನು ತಾನೇ ನಿರ್ವಹಿಸುವುದಕ್ಕೆ ಸರ್ಕಾರಕ್ಕೆ ಹಕ್ಕಿದ್ದಿತು. ದೇಶೀಯ ರಾಜರು ಯಾವುದೇ ಮುಖ್ಯ ಕಾನೂನು ರಚಿಸಬೇಕಾದರೆ ಅದಕ್ಕೆ ಭಾರತ ಸರ್ಕಾರದ ಪೂರ್ವಾನುಮತಿಯನ್ನು ಪಡೆಯಬೇಕೆಂದು ಹೇಳಲಾಯಿತು. ಹೀಗೆ ದೇಶೀಯ ಅರಸರು ಭಾರತ ಸರ್ಕಾರಕ್ಕೆ ಸಂಪೂರ್ಣವಾಗಿ ಅಧೀನರಾದರು. ದೇಶೀಯ ರಾಜ್ಯಗಳ ಮಹತ್ವದ ವಿಚಾರಗಳಲ್ಲಿ ಬ್ರಿಟಿಷರೇ ಅಂತಿಮ ಅಧಿಕಾರ ಎನ್ನುವುದು ಸ್ಪಷ್ಟವಾಯಿತು.

ಬ್ರಿಟಿಷರು ಭಾರತದ ಐಕ್ಯತೆಯನ್ನು ಒಪ್ಪಿದುದು ಅವರ ಜವಾಬ್ದಾರಿಯನ್ನು ಭಾರತೀಯ ರಾಜ್ಯಗಳ ಬಗೆಗೆ ಅವರ ಹಕ್ಕುಗಳನ್ನು ಹೆಚ್ಚಿಸಿತು. ಯಾವುದೇ ರಾಜ್ಯದಲ್ಲಿ ದುರಾಡಳಿತ ನಡೆಸುತ್ತಿರುವ ರಾಜನನ್ನು ಅಧಿಕಾರದಿಂದ ತೆಗೆದು ಹಾಕುವ ಹಕ್ಕು ಭಾರತ ಸರ್ಕಾರಕ್ಕಿದೆ. ಆದ್ದರಿಂದ ಎಲ್ಲಾ ರಾಜರೂ ತಮ್ಮ ಆಡಳಿತವನ್ನು ಉತ್ತಮವಾದ ರೀತಿಯಲ್ಲಿ ನಿರ್ವಹಿಸತಕ್ಕದ್ದು ಎಂದು 1860 ರಲ್ಲಿ ಲಾರ್ಡ್ ಕ್ಯಾನಿಂಗ್ ದೃಢವಾಗಿ ಹೇಳಿದನು. ರಜಪೂತ ಅರಸರಿಗೆ ಇದನ್ನು ವಿವರಿಸಿ ಅವನು ಹೀಗೆ ನುಡಿದನು. "ನಾವು ನಿಮ್ಮ ಹಕ್ಕು ಬಾಧ್ಯತೆಗಳನ್ನು ಪುರಸ್ಕರಿಸಬೇಕೆಂದಾದರೆ ನೀವು ನಿಮ್ಮ ಕಾಳಜಿಯಲ್ಲಿ ಯಾರನ್ನು ಇರಿಸಲಾಗಿದೆಯೋ ಈ ಜನತೆಯ ಹಕ್ಕು ಬಾಧ್ಯತೆಗಳನ್ನು ಪುರಸ್ಕರಿಸತಕ್ಕದ್ದು. ನೀವು ಅಧಿಕಾರದಲ್ಲಿರಲು ನಾವು ಬೆಂಬಲ ಕೊಡುವುದಾದರೆ ಅದಕ್ಕೆ ಪ್ರತಿಯಾಗಿ ಉತ್ತಮ ಆಡಳಿತವನ್ನು ನಾವು ನಿರೀಕ್ಷಿಸುತ್ತೇವೆ". ಇದು ದೇಶೀಯ ರಾಜರ ಆಂತರಿಕ ವ್ಯವಹಾರಗಳಲ್ಲಿ ಮಧ್ಯ ಪ್ರವೇಶ ಮಾಡುವ ಸಂಪೂರ್ಣ ಹಕ್ಕನ್ನು ಬ್ರಿಟಿಷರಿಗೆ ನೀಡಿತು.

ಬ್ರಿಟಿಷರಿಗೆ ದೇಶೀಯ ರಾಜ್ಯಗಳೊಂದಿಗೆ ಇದ್ದ ಸಂಬಂಧವನ್ನು ಕುರಿತು ಲಾರ್ಡ್ ಮೇಯೋ ಈ ಕೆಳಗಿನ ಅಂಶಗಳನ್ನು ಸ್ಪಷ್ಟ ಪಡಿಸಿದನು.

1. ದುರಾಡಳಿತದ ಸಂದರ್ಭದಲ್ಲಿ ದೇಶೀಯ ರಾಜ್ಯವೊಂದರ ಆಂತರಿಕ ವ್ಯವಹಾರಗಳಲ್ಲಿ ಮಧ್ಯೆ ಪ್ರವೇಶಿಸಲು ಬ್ರಿಟಿಷರಿಗೆ ಸಂಪೂರ್ಣವಾದ ಹಕ್ಕುಗಳಿದ್ದವು.
2. ದೇಶೀಯ ಅರಸನೊಬ್ಬನ ವಿರುದ್ಧ ದಂಗೆಯೆದ್ದಾಗ ಬ್ರಿಟಿಷರು ಅದನ್ನು ಅಡಗಿಸುವರು.
3. ಯಾವುದೇ ದೇಶೀಯ ರಾಜ್ಯದಲ್ಲೂ ಯಾವುದೇ ಸಂದರ್ಭದಲ್ಲೂ ದಂಗೆ ಸಂಭವಿಸಲು ಬ್ರಿಟಿಷರು ಅವಕಾಶ ಕೊಡುವುದಿಲ್ಲ.

ಹೀಗೆ ಬ್ರಿಟಿಷರು ತಮಗೆ ಇಚ್ಛೆ ಬಂದಾಗ ಯಾವುದೇ ದೇಶೀಯ ರಾಜ್ಯದ ವ್ಯವಹಾರಗಳಲ್ಲಿ ಪ್ರವೇಶಿಸುವ ಹಕ್ಕನ್ನು ಇರಿಸಿಕೊಂಡರು. ಅದನ್ನು ಆಚರಣೆಯಲ್ಲೂ ಜಾರಿಗೆ ತಂದರು. ಅಂತಹ ಅನೇಕ ಸಂದರ್ಭಗಳು ಘಟಿಸಿದವು. ಹಾಗೆ ಬ್ರಿಟಿಷರು ದೇಶೀಯ ರಾಜರ ಮೇಲೆ ಸಾರ್ವಭೌಮತ್ವದ ಹಕ್ಕನ್ನು ಸಕ್ರಿಯವಾಗಿ ಸ್ಥಿರೀಕರಿಸಿದ ಕೆಲವು ನಿದರ್ಶನಗಳು ಹೀಗಿವೆ.

ಬರೋಡಾದ ರಾಜಮಲ್ಹಾರ ರಾವ್ ಮೇಲೆ ಬ್ರಿಟಿಷರು ದುರಾಡಳಿತದ ಆರೋಪ ಹೊರಿಸಿದರು. ಆರೋಪಗಳನ್ನು ಪರಿಶೀಲಿಸಿ ಸುಧಾರಣೆಗೆ ತಕ್ಕ ಕ್ರಮಗಳನ್ನು ಸೂಚಿಸುವ ಸಲುವಾಗಿ ತ್ರಿ- ಸದಸ್ಯ ಆಯೋಗವೊಂದನ್ನು ನೇಮಿಸಿದರು. ಒಂದು ವರ್ಷದ ಅನಂತರ ಬ್ರಿಟಿಷ್ ರೆಸಿಡೆಂಟನಿಗೆ ವಿಷ ಹಾಕಿ ಕೊಲ್ಲಲು ಪ್ರಯತ್ನಿಸಿದನೆಂಬ ಆರೋಪದ ಮೇಲೆ ಅವನನ್ನು 1875 ಜನವರಿ 13 ರಂದು ಬಂಧಿಸಲಾಯಿತು. ಅವನ ಮೇಲಿನ ಮೊಕದ್ದಮೆಯನ್ನು ವಿಚಾರಣೆ ನಡೆಸಿ ತೀರ್ಪು ಕೊಡಲು ಒಂದು ವಿಶೇಷ ನ್ಯಾಯಾಂಗ ಮಂಡಳಿಯನ್ನು ನೇಮಿಸಲಾಯಿತು. ಅದರಲ್ಲಿ ಮೂರು ಜನ ಬ್ರಿಟಿಷ್ ನ್ಯಾಯಮೂರ್ತಿಗಳೂ, ಮೂರು ಜನ ಭಾರತೀಯ ನ್ಯಾಯಧೀಶರೂ ಇದ್ದರು. ಭಾರತೀಯ ನ್ಯಾಯಾಧೀಶರುಗಳೆಂದರೆ ಸಿಂಧಿಯ, ಜೈಪುರದ ರಾಜ್ ಮತ್ತು ಸರ್ ದಿನಕರರಾವ್ ಭಾರತೀಯ ನ್ಯಾಯಮೂರ್ತಿಗಳು ಮಲ್ಹಾರ್ ರಾವ್‌ನ ಮೇಲಿನ ಎಲ್ಲಾ ಆರೋಪಗಳೂ ನಿರಾಧಾರವೆಂದು ವಜಾ ಮಾಡಿದರು. ಆದರೂ ಬ್ರಿಟಿಷರು ಅವನನ್ನು ಗಡಿಯಿಂದ ಇಳಿಸಿದರು. ಅವನ ಉತ್ತರಾಧಿಕಾರಿಗಳಿಗೂ ಗದ್ದಿಯ ಮೇಲಿನ ಹಕ್ಕನ್ನು ಮುಟ್ಟುಗೋಲು ಹಾಕಿಕೊಂಡರು.

ಎರಡನೆಯ ಸಂದರ್ಭ ಮಣಿಪುರ ರಾಜ್ಯದ್ದು. 1891 ರಲ್ಲಿ ಅಲ್ಲಿ ಒಂದು ದಂಗೆ ಸಂಭವಿಸಿತು. ಆ ಕಾರಣದಿಂದ ರಾಜಾ ಶೂರ ಚಂದ್ರ ಸಿಂಗ್‌ನನ್ನು ಪದಚ್ಯುತಿಗೊಳಿಸಲಾಯಿತು, ಸೈನ್ಯದ ದಂಡನಾಯಕನಾಗಿದ್ದ ಅವನ ತಮ್ಮನನ್ನು ಮರಣ ದಂಡನೆಗೆ ಗುರಿ ಪಡಿಸಲಾಯಿತು. ಸಿಂಹಾಸನದ ಮೇಲೆ ರಾಜ ಮನೆತನಕ್ಕೆ ಸೇರಿದ ಒಂದು ಮಗುವನ್ನು ಕುಳ್ಳರಿಸಿ ಬ್ರಿಟಿಷ್ ರೆಸಿಡೆಂಟ್‌ನ ರೀಜೆನ್ಸಿಯನ್ನು ಹೇರಲಾಯಿತು. ಈ ಪಂಥವು ಬ್ರಿಟಿಷರು ದೇಶೀಯ ರಾಜರೊಂದಿಗೆ ಇಟ್ಟುಕೊಂಡ ಸಂಬಂಧಗಳು ಈ ಕೆಳಗಿನ ತತ್ವಗಳನ್ನು ನಿರ್ದಿಷ್ಟ ಪಡಿಸಿತು.

1. ದೇಶೀಯ ರಾಜ್ಯದ ವಾರಸುದಾರಿಕೆಯ ವಿಚಾರದಲ್ಲಿ ಕೈ ಹಾಕಲು ಬ್ರಿಟಿಷರಿಗೆ ಅಧಿಕಾರವಿದ್ದಿತು.
2. ಬ್ರಿಟಿಷರಿಗೆ ಯಾವನೇ ರಾಜನು ತೋರಿಸುವ ಅವಿಧೇಯತೆಯನ್ನು ದಂಗೆಯೆಂದು ಪರಿಗಣಿಸಲಾಗುವುದು.
3. ಯಾವ ಅರಸನಿಗೆ ಮತ್ತು ಅವನ ಬಂಧುಗಳಿಗೆ ಬೇದಾಕರೂ ತಮಗೆ ಇಚ್ಛೆ ಬಂದ ರೀತಿಯಲ್ಲಿ ಶಿಕ್ಷೆ ವಿಧಿಸುವ ಅಧಿಕಾರ ಬ್ರಿಟಿಷರಿಗೆ ಬಂದಿತು.
4. ಸ್ವತಂತ್ರ ರಾಷ್ಟ್ರಗಳ ಪಾರಸ್ಪರಿಕ ಸಂಬಂಧಗಳಲ್ಲಿ ಅಂತರ ರಾಷ್ಟ್ರೀಯ ಕಾನೂನು ಕಟ್ಟಳೆಗಳು ದೇಶೀಯ ರಾಜ್ಯಗಳಿಗೆ ಅನ್ವಯವಾಗುವುದಿಲ್ಲ.

1926 ರಲ್ಲಿ ಬ್ರಿಟಿಷರು ಹೈದರಾಬಾದ್ ರಾಜ್ಯದ ವ್ಯವಹಾರದಲ್ಲಿ ತಲೆ ಹಾಕಿದರು. ಬ್ರಿಟಿಷರ ರಕ್ಷಣೆಯಿದ್ದುದರಿಂದ ಮಾತ್ರವೇ ದೇಶೀಯ ರಾಜರು ಸುರಕ್ಷಿತರು ಎಂಬುದನ್ನು ದೃಢಪಡಿಸಲಾಯಿತು.

ದೇಶೀಯ ರಾಜರ ಮೇಲೆ ಬ್ರಿಟಿಷರ ಪ್ರಭುತ್ವದ ಹಕ್ಕನ್ನು ಲಾರ್ಡ್ ಕರ್ಜನ್ ಮತ್ತೆ ಒತ್ತಿ ಹೇಳಿದನು. ಆದರೆ ಬ್ರಿಟಿಷ್ ಪ್ರಾಂತಗಳಲ್ಲಿ ರಾಷ್ಟ್ರೀಯ ಆಂದೋಲನವು ಗರಿಗಟ್ಟಿಕೊಳ್ಳುತ್ತಿದ್ದುದರಿಂದ ರಾಜರನ್ನು ಬ್ರಿಟಿಷರ ಕಡೆಗೆ ಹೆಚ್ಚು ನಿಕಟವಾಗಿ ತರಲು ಕೂಡ ಪ್ರಯತ್ನಿಸಿದರು. ಅದಕ್ಕೆ ತಕ್ಕ ಕ್ರಮಗಳನ್ನು ಅವನು ಕೈಗೊಂಡನು. ದೇಶೀಯ ರಾಜರ ಸೈನ್ಯಗಳನ್ನು ಬ್ರಿಟಿಷ್ ಭಾರತೀಯ ಸೇನೆಯ ಭಾಗಗಳೆಂದು ಅಂಗೀಕರಿಸಿ ಅವರಿಗೆ ಬ್ರಿಟಿಷ್ ಸೇನಾಧಿಕಾರಿಗಳಿಂದ ಉತ್ತಮ ತರಬೇತಿ ಕೊಡಿಸಲು ಏರ್ಪಾಟು ಮಾಡಲಾಯಿತು. ದೇಶೀಯ ರಾಜರ ನಡುವೆ ಪರಸ್ಪರ ಸಂಬಂಧಗಳನ್ನು ಬೆಳೆಸಲು ಅವಕಾಶವನ್ನು ಒದಗಿಸಿದರು. ಲಾರ್ಡ್ ಲಿಟ್ಟನ್ ದೇಶೀಯ ರಾಜರಿಗಾಗಿ ಒಂದು ಸಾಮಾನ್ಯ ಸಲಹಾ ಸಮಿತಿಯನ್ನು ರಚಿಸಲು ಸೂಚಿಸಿದ್ದನು. ಲಾರ್ಡ್ ಕರ್ಜನ್ ಮತ್ತು ಲಾರ್ಡ್ ಮಿಂಟೋ ಕೂಡ ಅದನ್ನು ಅಪೇಕ್ಷಿಸಿದರು. ಆದರೆ ಬ್ರಿಟಿಷ್ ಸರಕಾರವು ಆ ಸಲಹೆಯನ್ನು ನಿರಾಕರಿಸಿತು. ಆದರೆ ಮೊದಲನೆಯ ಮಹಾಯುದ್ಧವಾದ ಮೇಲೆ ಭಾರತದ ರಕ್ಷಣಾ ಪ್ರಯತ್ನಗಳಲ್ಲಿ ದೇಶೀಯ ಅರಸರ ಸಹಾಕರವನ್ನು ಪಡೆಯುವ ಅಗತ್ಯ ಮನವರಿಕೆಯಾಯಿತು. ಆದ್ದರಿಂದ ಲಾರ್ಡ್ ಹಾರ್ಡಿಂಜ್ ಪರಸ್ಪರ ಸಲಹೆ ಸಮಾಲೋಚನೆಗಳಿಗಾಗಿ ದೇಶೀಯ ಅರಸರ ಸಮಾವೇಶವನ್ನು ಕರೆಯುವ ಪದ್ಧತಿಯನ್ನು ಪ್ರಾರಂಭಿಸಿದನು.

ಮಾಂಟಿಗ್ಯೂ-ಚೆಲ್ಮ್ಸ್-ಫರ್ಡ್ ವರದಿಯೂ ಪರಸ್ಪರ ಪ್ರಯೋಜನಗಳಿಗಾಗಿ ಭಾರತ ಸರಕಾರವೂ ಸಮಾಲೋಚಿಸಬಲ್ಲ ದೇಶೀಯ ರಾಜರ ಒಂದು ಖಾಯಂ ಸಂಸ್ಥೆಯಿರಬೇಕು ಎಂದು ಸೂಚಿಸಿತು. ಇದರ ಫಲವಾಗಿ 1921 ರಲ್ಲಿ 'ಚೇಂಬರ್ ಆಫ್ ಪ್ರಿನ್ಸಸ್' ರಚಿತವಾಯಿತು.

## 81.4 1919-1935 ರ ನಡುವಣ ಅವಧಿಯಲ್ಲಿನ ಸಂಬಂಧಗಳು

ಈ ಅವಧಿಯಲ್ಲಿ ಬ್ರಿಟಿಷರ ಅಧೀನ ಸಹಕಾರ ನೀತಿಯು ಮುಂದುವರಿಯಿತು. ಬ್ರಿಟಿಷರು ಒಂದು ಕಡೆ ದೇಶೀಯ ರಾಜರ ಮೇಲೆ ತಮ್ಮ ಪ್ರಭುತ್ವದ ಹಕ್ಕನ್ನು ಸ್ಥಿರೀಕರಿಸಿ ಮತ್ತಷ್ಟು ಸ್ಪಷ್ಟಮಾಡಿದರು; ಇನ್ನೊಂದು ಕಡೆ ಚೇಂಬರ್ ಆಫ್ ಪ್ರಿನ್ಸಸ್ ಮೂಲಕ ಅಖಿಲ ಭಾರತ ವ್ಯವಹಾರಗಳಲ್ಲಿ ಅವರ ಸಹಕಾರವನ್ನು ಕೋರಿದರು. ಚೇಂಬರ್ ಆಫ್ ಪ್ರಿನ್ಸಸ್ ಅಂಗದ ಸ್ಥಾಪನೆ ಎರಡು ಅಂಶಗಳನ್ನು ನಿರ್ಧರಿಸಿತು. ಮೊದಲನೆಯದಾಗಿ ದೇಶೀಯ ರಾಜರು ಪರಸ್ಪರ ಆಸಕ್ತಿಯ ವಿಚಾರಗಳಲ್ಲಿ ಒಬ್ಬರೊಡನೊಬ್ಬರು ಸಮಾಲೋಚಿಸಬಹುದಾಯಿತು. ಎರಡನೆಯದಾಗಿ ಅಖಿಲ ಭಾರತ ವ್ಯವಹಾರಗಳಲ್ಲಿ ಭಾರತ ಸರಕಾರವು ದೇಶೀಯ ರಾಜರೊಂದಿಗೆ ಸಮಾಲೋಚಿಸಲು ಅವಕಾಶವಾಯಿತು. ಹಾಗಾಗಿ ಅದರಿಂದ ರಾಜರ ಹಕ್ಕುಗಳು ಸ್ವಲ್ಪ ಹೆಚ್ಚಿದಂತಾಯಿತು. ಆದರೆ ಯಾವುದೇ ಕಾರಣದಿಂದಲೂ ಈ ಹಕ್ಕುಗಳು ಬ್ರಿಟಿಷ್‌ರ ಪರಮ ಪ್ರಭುತ್ವದ ಹಕ್ಕಿಗೆ ಕುಂದನ್ನುಂಟುಮಾಡಲಿಲ್ಲ. ಅವರು ಮುಂಚಿನಂತೆಯೇ ಬ್ರಿಟಿಷ್ ಸರಕಾರಕ್ಕೆ ಅಧೀನರಾಗಿ ಉಳಿದರು. ಇದು ವೈಸರಾಯಿ ಲಾರ್ಡ್ ರೀಡಿಂಗ್ 1926 ಮಾರ್ಚ್ 17 ನೆಯ ತಾರೀಖು ಹೈದರಾಬದಿನ ನಿಜಾಮನಿಗೆ ಬರೆದ ಉತ್ತರದಲ್ಲಿ ಇದು ಸ್ಪಷ್ಟವಾಯಿತು. ಪ್ರಭುತ್ವವನ್ನು ಕುರಿತು ನಿಜಾಮನು ಕೆಲವು ಸ್ಪಷ್ಟೀಕರಣಗಳನ್ನು ಕೇಳಿದ್ದನು. ಉತ್ತರದಲ್ಲಿ ಲಾರ್ಡ್ ರೀಡಿಂಗ್, ನಿಜಾಮನಿಗೆ ಅವನದೇ ಸ್ವತಂತ್ರವಾದ ಹಕ್ಕುಗಳು ಯಾವುವೂ ಇಲ್ಲವೆಂದೂ, ಅವನ ರಾಜ್ಯದ ಆಂತರಿಕ ವ್ಯವಹಾರಗಳಲ್ಲಿ ಇಷ್ಟ ಬಂದಾಗ ಬ್ರಿಟಿಷರು ಪ್ರವೇಶ ಮಾಡಲು ಸಂಪೂರ್ಣ ಅಧಿಕಾರ ಹೊಂದಿರುವರೆಂದೂ ತಿಳಿಸಿದನು. ತಮ್ಮ ರಾಜ್ಯಗಳನ್ನು ಕುರಿತ ತಮ್ಮ ಹಕ್ಕುಗಳ ಬಗೆಗೆ ಸ್ಪಷ್ಟೀಕರಣಬೇಕೆಂದು ಬಯಸುತ್ತಿದ್ದ ದೇಶೀಯ ರಾಜರಿಗೆ ಲಾರ್ಡ್ ರೀಡಿಂಗ್‌ನ ಪತ್ರವು ಕಳವಳವನ್ನುಂಟುಮಾಡಿತು. 1928 ರಲ್ಲಿ ಈ ವಿಚಾರವಾಗಿ ಪರಿಶೀಲನೆ ಮಾಡಲು ಬಟ್ಲರ್ ಸಮಿತಿಯನ್ನು ನೇಮಿಸಲಾಯಿತು. ಸಮಿತಿಯು ವರದಿಯಲ್ಲಿ ಬ್ರಿಟಿಷರು ಭಾರತದಲ್ಲಿ ಪರಮಾಧಿಕಾರ ಹೊಂದಿದ್ದಾರೆ ಎಂದು ಹೇಳಿದ್ದು ಮಾತ್ರವಲ್ಲದೆ ಭಾರತದ ಆರ್ಥಿಕ ಅಭಿವೃದ್ಧಿ ಹಾಗೂ ಜನತಾ ಚಳುವಳಿಗಳ ಕಾರಣವಾಗಿ ಅಗತ್ಯವೆಂದು ಕಂಡು ಬರುವ ಆಡಳಿತೀಯ ಬದಲಾವಣೆಗಳಲ್ಲಿ ಭಾರತ ಸರ್ಕಾರವು ಖಂಡಿತವಾಗಿಯೂ ಮಧ್ಯ ಪ್ರವೇಶ ಮಾಡಬಹುದು ಎಂದು ಹೇಳಿತು.

## 81.5 1935-1947 ರ ನಡುವಣ ಅವಧಿಯಲ್ಲಿನ ಸಂಬಂಧಗಳು

1935 ರ ಗವರ್ನ್‌ಮೆಂಟ್ ಆಫ್ ಇಂಡಿಯಾ ಶಾಸನವು ದೇಶೀಯ ರಾಜ್ಯಗಳನ್ನು ಒಳಗೊಂಡ ಭಾರತ ಒಕ್ಕೂಟ ಸ್ಥಾಪನೆಯ ಸಲಹೆ ಮಾಡಿತು. ನೆಹರೂ ಸಮಿತಿ ಹಾಗೂ ಭಾರತ ಸರಕಾರದ ಅಧಿಕೃತ ಸಮಿತಿಗಳು ಈ ಸಲಹೆಯನ್ನು ಸೂಚಿಸಿದ್ದವು, ದೇಶೀಯ ರಾಜರೂ ಅದನ್ನು ಸ್ವಾಗತಿಸಿದರು. ಆದರೆ ಅಷ್ಟರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾದುದರಿಂದ ಅದನ್ನು ಆಚರಣೆಗೆ ತರಲಾಗಲಿಲ್ಲ.

ಯುದ್ಧವು ನಡೆಯುತ್ತಿದ್ದಾಗ ಅಖಿಲ ಭಾರತ ಕಾಂಗ್ರೆಸ್ ಪಕ್ಷವು ಭಾರತ ಸರಕಾರದ ಯುದ್ಧ ಪ್ರಯತ್ನಗಳಲ್ಲಿ ಸಹಕರಿಸಲು ನಿರಾಕರಿಸಿತು. ಭಾರತೀಯ ನಾಯಕರನ್ನು ಒಲಿಸಲು ಭಾರತ ಸರಕಾರವು ಅನೇಕ ಯೋಜನೆಗಳನ್ನು ಮುಂದಿಟ್ಟಿತು. 1942 ರಲ್ಲಿ ಕ್ರಿಪ್ಸ್ ಯೋಜನೆ, 1945 ರಲ್ಲಿ ವೇವೆಲ್ ಯೋಜಿಸಿ ಮತ್ತು 1946 ರಲ್ಲಿ ಕ್ಯಾಬಿನೆಟ್ ಆಯೋಗದ ಯೋಜನೆಗಳು ಸೂಚಿತವಾದವು. ಈ ಎಲ್ಲಾ ಯೋಜನೆಗಳಲ್ಲೂ ಭಾರತವು ಸ್ವಾತಂತ್ರ್ಯ ಪಡೆದ ಒಡನೆಯೇ ದೇಶೀಯ ರಾಜ್ಯಗಳ ಮೇಲೆ ಬ್ರಿಟಿಷ್ ಪ್ರಭುತ್ವವು ಕೊನೆಗೊಳ್ಳುವುದು ಎಂದು ಹೇಳಲಾಗಿತ್ತು. ಬ್ರಿಟನ್ನಿನ ಪ್ರಧಾನ ಮಂತ್ರಿ ಅಟ್ಲಿ ಅವರು 1947 ರ ಫೆಬ್ರವರಿ 20 ರಂದು ಮತ್ತು ಗವರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ ಜೂನ್ 3 ರಂದು ನೀಡಿದ ಹೇಳಿಕೆಗಳು ಬಹುಸ್ಪಷ್ಟವಾಗಿ, ಭಾರತವು ಸ್ವಾತಂತ್ರ್ಯ ಗಳಿಸಿದೊಡನೆಯೇ ಬ್ರಿಟಿಷ್ ಪರಮಾಧಿಕಾರವು ಕೊನೆಗೊಳ್ಳುವುದು ಎಂದು ಹೇಳಿದವು. ರಾಜ್ಯಗಳು ಭಾರತದೊಂದಿಗೆ ಅಥವಾ ಪಾಕಿಸ್ತಾನದೊಂದಿಗೆ ಸೇರಿಕೊಳ್ಳಲು ಸ್ವತಂತ್ರವಾಗಿರುತ್ತೇವೆ ಎಂದು ಹೇಳಿದರು. ಕೆಲವು ರಾಜರು ಭಾರತದೊಂದಿಗಾಗಲಿ, ಪಾಕಿಸ್ತಾನದೊಂದಿಗಾಗಲಿ ಸೇರಿಕೊಳ್ಳದೆ ಸ್ವತಂತ್ರವಾಗಿ ಉಳಿಯುವ ಹಕ್ಕು ತಮಗಿರಬೇಕೆಂದು ಅಪೇಕ್ಷೆ ವ್ಯಕ್ತಪಡಿಸಿದರು. ಆದರೆ ಈ

ಸೂಚನೆಯನ್ನು ಬ್ರಿಟಿಷ್ ಸರಕಾರ ನಿರಾಕರಿಸಿತು. 1947 ರ ಇಂಡಿಯನ್ ಇಂಡಿಪೆಂಡೆನ್ಸ್ ಆಕ್ಟ್ ಪ್ರಕಾರ ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ದೇಶಗಳ ಸೃಷ್ಟಿಯಾಯಿತು. ಆ ಗಳಿಗೆಗೆ ಬ್ರಿಟಿಷ್ ಪರಮಾಧಿಕಾರವು ಕೊನೆಗೊಂಡಿತು. ರಾಜ್ಯಗಳು ಭಾರತ ಅಥವಾ ಪಾಕಿಸ್ತಾನದೊಂದಿಗೆ ಸೇರಿಕೊಳ್ಳಬೇಕೆಂದು ಅವಕಾಶ ಕೊಡಲಾಯಿತು.

## 81.6 ಉಪಸಂಹಾರ

1947 ಆಗಸ್ಟ್ 15 ರಂದು ಭಾರತದಲ್ಲಿ ಒಂದು ಮಧ್ಯಂತರ ಸರಕಾರವು ರಚನೆಯಾಯಿತು. ಅದರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಗೃಹ ಸಚಿವರಾದರು. ಮೊದಲು ಅವರು ದೇಶೀಯ ರಾಜ್ಯಗಳ ಕ್ರೋಢೀಕರಣಕ್ಕೆ ಪ್ರಯತ್ನಿಸಿದರು. ಸಣ್ಣ ಸಂಸ್ಥಾನಗಳು ಒಂದರೊಡನೊಂದು ಸೇರಿಕೊಂಡು ಸುಭದ್ರವಾದ ಆಡಳಿತೀಯ ಘಟಕಗಳಾಗುವಂತೆ ಅಥವಾ ನೆರೆಯ ಭಾರತೀಯ ಪ್ರಾಂತದೊಂದಿಗೆ ವಿಲೀನಗೊಳ್ಳುವಂತೆ ಮಾಡಲಾಯಿತು. ಉದಾಹರಣೆಗೆ, ಒರಿಸ್ಸಾದ ಬಳಿಯ ಕೆಲವು ರಾಜ್ಯಗಳನ್ನು ಒರಿಸ್ಸಾ ಪ್ರಾಂತದಲ್ಲಿ ವಿಲೀನಗೊಳಿಸಲಾಯಿತು. ಮಧ್ಯ ಪ್ರದೇಶದ ಬಳಿಯ ಕೆಲವು ರಾಜ್ಯಗಳನ್ನು ಮಧ್ಯ ಪ್ರದೇಶಕ್ಕೆ ಸೇರಿಸಲಾಯಿತು. ಬೇರೆ ಕೆಲವು ಸಣ್ಣ ರಾಜ್ಯಗಳನ್ನು ಭಾರತ ಸರಕಾರವು ವಶಪಡಿಸಿಕೊಂಡು ಕೇಂದ್ರಾಡಳಿತದ ಪ್ರದೇಶಗಳೆಂದು ಸಾರಲಾಯಿತು. ಉದಾಹರಣೆಗೆ ಪೆಪ್ಸು (PEPSU) ರಾಜಸ್ತಾನ ಯೂನಿಯನ್ ಇತ್ಯಾದಿ. ಹೀಗೆ ಬಹುತೇಕ ದೇಶೀಯ ರಾಜ್ಯಗಳು ಭಾರತ ಯೂನಿಯನ್‌ಗೆ ಸೇರಿದುವು. ಕೆಲವು ರಾಜ್ಯಗಳು ಪಾಕಿಸ್ತಾನದ ಜೊತೆಗೂಡಿದವು. ಕಾಶ್ಮೀರ ಮತ್ತು ಹೈದರಾಬಾದುಗಳು ಸ್ವತಂತ್ರವಾಗಿ ಉಳಿಯಲು ಪ್ರಯತ್ನಿಸಿದುವು. ಆದರೆ ಆ ಪ್ರಯತ್ನಗಳನ್ನು ವಿಫಲಗೊಳಿಸಲಾಯಿತು. ಕೊನೆಗೆ ಅವು ಇಂಡಿಯನ್ ಯೂನಿಯನ್ಸ್‌ಗೆ ಸೇರಿದವು. ಹಾಗಾಗಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಯಾವ ದೇಶೀಯ ರಾಜ್ಯವೆಂಬುದು ಉಳಿಯಲಿಲ್ಲ.

## 81.7 ಮಾದರಿಯ ಪ್ರಶ್ನೆಗಳು

1. ಬ್ರಿಟಿಷ್ ಭಾರತ ಮತ್ತು ದೇಶೀಯ ಸಂಸ್ಥಾನಗಳ ರಾಜಕೀಯ ಸಂಬಂಧಗಳನ್ನು ಕುರಿತು ಬರೆಯಿರಿ.
2. ದೇಶೀಯ ಸಂಸ್ಥಾನಗಳು ಬ್ರಿಟಿಷರೊಂದಿಗೆ ಹೊಂದಿದ್ದ ಆರ್ಥಿಕ ಸಂಬಂಧಗಳನ್ನು ಚರ್ಚಿಸಿ.

## 81.7 ಪರಾಮರ್ಶನ ಕೃತಿಗಳು


1. M.V. Pylee : "The Constitutional History of India"
2. Gorey .V.K. : "United States of India a Constructive Federal Solution"
3. Gour, Sir Hari Singh : :Future Constitution of India (1938)



ಡಾ. ಎನ್. ಸರಸ್ವತಿ
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,
ಮೈಸೂರು

## ಟಿಪ್ಪಣಿಗಳು

# ಘಟಕ - 82

## ಮಿಂಟೋ-ಮಾರ್ಲೀ ಸುಧಾರಣೆಗಳು

82.0 ಪ್ರಸ್ತಾವನೆ

82.1 ಮುಸ್ಲೀಂ ಸಮಸ್ಯೆ

82.2 ಸುಧಾರಣಾ ಪ್ರಸ್ತಾಪಗಳ ಕರಡು ಪ್ರತಿ

82.3 ಸುಧಾರಣೆಯ ಪ್ರಮುಖ ಕ್ರಮಗಳು

82.4 1909 ರ ಇಂಡಿಯನ್ ಕೌನ್ಸಿಲ್ಸ್ ಕಾಯಿದೆ

82.5 ಲೆಜಿಸ್ಲೇಟಿವ್ ಕೌನ್ಸಿಲ್‌ಗಳು

1. ರಚನೆ
2. ನಾಮಕರಣ ಮತ್ತು ಚುನಾವಣೆ
3. ಅಧಿಕಾರಗಳು ಮತ್ತು ವಿಶೇಷ ಹಕ್ಕುಗಳು

82.6 ಸುಧಾರಣೆಗಳ ಬಗ್ಗೆ ಭಾರತೀಯರ ಪ್ರತಿಕ್ರಿಯೆ

82.7 ಉಪಸಂಹಾರ

82.8 ಮಾದರಿ ಪ್ರಶ್ನೆಗಳು

82.9 ಪರಾಮರ್ಶನ ಗ್ರಂಥಗಳು

## 82.0 ಪ್ರಸ್ತಾವನೆ

ಮಾರ್ಲ್-ಮಿಂಟೋ ಆಡಳಿತಾವಧಿಯಲ್ಲಿ ಸುಧಾರಣೆಗಳಿಗೆ ಅನುವು ಮಾಡಿಕೊಟ್ಟ, ವಿಚಾರಣಾ ಬೆಳವಣಿಗೆಯ ಕಾಲಾನುಕ್ರಮಣಿಕೆಯನ್ನು ರೂಪಿಸಲು ನಾವು ಹೊರಟ ವರ್ಷದಲ್ಲಿ, ಆಗ, ವೇಲ್ಸ್‌ನ ರಾಜಕುಮಾರನ ಭಾರತ ಸಂದರ್ಶನದಿಂದಲೇ ನಾವು ಪ್ರಾರಂಭಮಾಡಬೇಕಾಗುತ್ತದೆ.

ತಾನು ಹಿಂದಿರುಗಿ ಬಂದ ಕೆಲ ಕಾಲದಲ್ಲಿಯೆ ಸಹಾನುಭೂತಿ ವಿಶಾಲ ಸಹಾನುಭೂತಿ ಮತ್ತು ಸ್ಥಿರವಾದ ನ್ಯಾಯ ಇವೇ ಭಾರತದಲ್ಲಿನ ಬ್ರಿಟಿಷ್ ಆಡಳಿತದ ಸೂತ್ರ ವಾಕ್ಯವಾಗಿರಬೇಕು ಎಂದು ರಾಜಕುಮಾರ ಮಾರ್ಲೆಗೆ ತಿಳಿಸಿದ. ಈ ಆದರ್ಶವನ್ನು ಪ್ರತ್ಪೂರ್ವಕವಾಗಿ ಅನುಮೋದಿಸಿದ ಮಾರ್ಲೆ 1906 ರ ಮೇ 11 ರಂದು ಬರೆದ ತನ್ನ ಪತ್ರದಲ್ಲಿ ಮಿಂಟೋಗೆ ಈ ವಿಷಯವನ್ನು ತಿಳಿಸಿದ. ಭಾರತಕ್ಕೆ ಬಂದು ಮೇಲಿನ ಮೊದಲ ಆರು ತಿಂಗಳ ಅವಧಿಯಲ್ಲಿಯೇ ಅಲ್ಲಿ ನಿರಂಕುಶಾಧಿಕಾರದ ಮನೋಭಾವ ಸಾಕಷ್ಟು ಮಟ್ಟಿಗೆ ಬೇರೂರಿಬಿಟ್ಟಿರುವುದನ್ನು ಮಿಂಟೋ ಗಮನಿಸಿದ್ದನೆಂಬುದನ್ನು ಮೇಲೆ ಹೇಳಲಾದ ಅವನ ಮೇ 28 ರ ಉತ್ತರ ತೋರಿಸುತ್ತದೆ.

ಸುಧಾರಣೆಗಳ ವಿಚಾರ ಮೊತ್ತಮೊದಲ ಚರ್ಚೆಗೆ ಬಂದದ್ದು ಗೋಖಲೆಯವರಿಂದ ಮಾರ್ಚ್ 1906 ರಲ್ಲಿ. ತಾವು ಮಾಡಿದ ಆಯವ್ಯಯ ಮುಂಗಡ ಪತ್ರದ ಭಾಷಣದಲ್ಲಿ ಅವರು ಸುಶಿಕ್ಷಿತ ವರ್ಗಗಳ ಜನರೊಂದಿಗೆ ಹೊಂದಿಕೊಳ್ಳುವಂತೆ ಮಿಂಟೋಗೆ ಮನವಿ ಮಾಡಿಕೊಂಡರಷ್ಟೆ ಅಲ್ಲದೆ "ಈ ಸಾಮರಸ್ಯ ಸ್ಥಾಪನೆಗೆ ಒಂದೇ ಒಂದು ಮಾರ್ಗವಿರುವುದೆಂದೂ ಈ ಜನರನ್ನು ತಮ್ಮ ದೇಶದ ಸರ್ಕಾರದ ಕಾರ್ಯಕ್ರಮಗಳಲ್ಲಿ ಹೆಚ್ಚು ಹೆಚ್ಚಾಗಿ ಸೇರಿಸಿಕೊಳ್ಳುವುದೇ ಆ ಮಾರ್ಗವೆಂದೂ" ಒತ್ತಿ ಹೇಳಿದ್ದರು. ಹೊಸ ವೈಸರಾಯ್ ಮೇಲೆ ಈ ಮನವಿ ಸ್ವಲ್ಪ ಮಟ್ಟಿನ ಪ್ರಭಾವ ಬೀರಿತೆಂಬುದು ಸ್ಪಷ್ಟ. ಅವನು ತನ್ನ ಕಾರ್ಯಕಾರಿ ಸಮಿತಿಗೆ ಭಾರತೀಯ ಸದಸ್ಯರೊಬ್ಬರನ್ನು ನೇಮಿಸಿಕೊಳ್ಳುವ ಯೋಚನೆ ಮಾಡಿದ ಹಾಗೂ ತನ್ನ ಕೌನ್ಸಿಲ್‌ನ ಪ್ರಮುಖ ಸದಸ್ಯರೊಂದಿಗೆ ಸಮಾಲೋಚನೆ ನಡೆಸಿದ. ಆದರೆ ಅವರಲ್ಲಿ ಬಹುಮಂದಿ ಇಂತಹ ಕ್ರಮ ತೆಗೆದುಕೊಳ್ಳುವುದನ್ನು ಬಲವಾಗಿ ವಿರೋಧಿಸಿದ್ದರು. ಸದ್ಯಕ್ಕೆ ಆ ವಿಚಾರ ಕೊನೆಗೊಂಡಿತು. ಆದರೆ ಈ ವಿಷಯ ಕುರಿತಂತೆ ಎಂದೂ ಮರೆತು ಬಿಡಲಿಲ್ಲ. ಈ ಬಗ್ಗೆ ಸಹಾನುಭೂತಿ ಪರ ಮನೋಭಾವನೆ ಉಳಿಸಿಕೊಂಡು ಬಂದ. ಮುಂದೆ ತೋರಿಸುವಂತೆ ಸೆಕ್ರೆಟರಿ ಆಫ್ ಸ್ಟೇಟ್ ಹಾಗೂ ಅವನ ಸ್ವತಂ ಸಲಹೆಗಾರರಿಗೆ ವಿರುದ್ಧವಾಗಿ ನಿಂತು ಸತತೋತ್ಸಾಹದಿಂದ ಹೋರಾಡಿ ಅಂತೂ ಕೊನೆಗೆ ತನ್ನ ಗುರಿ ಸಾಧಿಸಿಕೊಂಡ. ತುಂಬಾ ಮಹತ್ವ ಮತ್ತು ನಿರಂತರ ಸ್ಥಿರವಾಗಿ ಉಳಿಯುವ ಪರಿಣಾಮಗಳಿಂದ ಕೂಡಿದ ಈ ಗಟ್ಟಿಯಾದ ಹಾಗೂ ದಿಟ್ಟವಾದ ಆಡಳಿತಾತ್ಮಕ ಕ್ರಮವನ್ನು ಜಾರಿಗೆ ತರುವಲ್ಲಿ ಅವನು ತೋರಿಸುವ ಛಲ ಬಹು ಪ್ರಶಂಸಾರ್ಹವಾಗಿದೆ.

ಉಳಿದ ಸುಧಾರಣೆಗಳಿಗೆ ಚಾಲನೆ ದೊರೆತದ್ದು ಮಾರ್ಲೆಯಿಂದ. ಆದರೆ ಇಲ್ಲಿ ಕೂಡ ಅವನಿಗೆ ಕರ್ತವ್ಯ ಸೂಚನೆ ಸಿಕ್ಕಿದ್ದು ವೇಲ್ಸ್ ರಾಜಕುಮಾರನಿಂದ. "ಒಂದು ಮಹಾ ಶಕ್ತಿಯಾಗಿ" ವೇಗವಾಗಿ ಬೆಳೆಯುತ್ತಿದ್ದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನೂ ಕುರಿತೂ ಅವನು ಮಾರ್ಲೆಯೊಂದಿಗೆ ಮಾತನಾಡಿದ. ಅದೃಷ್ಟವಶಾತ್ ಆ ವೇಳೆಗೆ ಗೋಖಲೆ ಇಂಗ್ಲೆಂಡ್‌ನ್ನು ಸಂದರ್ಶಿಸಿದರು. ಕಾಂಗ್ರೆಸ್ ಪಕ್ಷದ ಕಾರ್ಯನಿರ್ವಹಣೆ ನೋಡಿಕೊಳ್ಳುತ್ತಿದ್ದ ಮಧ್ಯಗಾಮಿ ಪಕ್ಷದ ಮುಖಂಡರೆಂದು ಗೋಖಲೆಯವರನ್ನು ನ್ಯಾಯವಾಗಿಯೇ ಪರಿಗಣಿಸಲಾದ್ದರಿಂದ ಮಾಲಿಕ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡನು ಹಾಗೂ ಅವರೊಂದಿಗೆ ಭಾರತದ ರಾಜಕೀಯ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದನು. ಕಾಂಗ್ರೆಸ್ ಪಕ್ಷದ ಬಗ್ಗೆ ಮಾರ್ಲೆ ಹಾಗೂ ಮಿಂಟೋ ಇವರಿಗಿರುವ ಅಭಿಪ್ರಾಯಗಳು ಮೂಲಭೂತವಾಗಿ ಬೇರೆ ಬೇರೆಯಾಗಿಯೇ ಆಗಿದ್ದವು. ಮಾರ್ಲೆ ಹೀಗೆಂದಿದ್ದಾನೆ. "ಬಹು ಹಿಂದೆಯೇ ಬೆಳೆಸಿಕೊಂಡ ಹಾಗೂ ನಾನು ಈ ಕಛೇರಿಗೆ ಬಂದಾಗಿನಿಂದ ಖಚಿತ ಪಡಿಸಿಕೊಂಡ. ಅಭಿಪ್ರಾಯವೇನೆಂದರೆ ಕಾಂಗ್ರೆಸ್ ಪಕ್ಷವು ಒಳಿತಿಗಾಗಿರುವ ಶಕ್ತಿಯಾಗಿರಲಿ ಅಥವಾ ಕೆಡುಕಿಗಾಗಿರುವ ಶಕ್ತಿಯಾಗಿರಲಿ ಇದು ಪ್ರಧಾನವಾಗಿ ನಮ್ಮನ್ನೇ ಅವಲಂಬಿಸಿಕೊಂಡಿವೆ. ನಾವು ಕಾಂಗ್ರೆಸ್ ಪಕ್ಷವನ್ನು ಇಷ್ಟಪಡಲಿ ಅಥವಾ ಇಷ್ಟಪಡದೇ ಇರಲಿ ಆ ಪಕ್ಷವಂತೂ ಇದೆ. ಅಧಿವೇಶನ ಕೊನೆಗೊಳ್ಳುವ ತನಕ ಗೋಖಲೆ ಲಂಡನ್ನಿನಲ್ಲಿ ಇರುತ್ತಾರೆ. ಅವರಿಂದ ನನಗೆ ಸಹಾಯ ಸಿಗುತ್ತದೆ ಎಂಬ ನಿರೀಕ್ಷೆ ನನಗಿದೆ ಮತ್ತು ಯಾವುದೇ ಅಡ್ಡಿ ಅಡಚಣೆಗಳನ್ನುಂಟುಮಾಡದೆ ಹೌಸ್ ಆಫ್ ಕಾಮನ್ಸ್‌ನಲ್ಲಿ ಈ ಬಗ್ಗೆ ಹೆಚ್ಚುತ್ತಾ ಇರುವ ಉತ್ಸಾಹಕರವಾದ ಪ್ರಜಾಪ್ರಭುತ್ವವಾದ ಭಾವನೆಗಳಿಗೆ ಮಾರ್ಗದರ್ಶನ ನೀಡುವ ಬಯಕೆ ನನ್ನದಾಗಿದೆ". ಕಾಂಗ್ರೆಸ್ ಪಕ್ಷದ ಬಗೆಗಿನ ಮಿಂಟೋನ ಟೀಕೆಗೆ ಹಾಗೂ ಆ ಸಂಸ್ಥೆಯನ್ನು ಮೂಲೆಗೊತ್ತುವ ಅವನ ಅಪೇಕ್ಷೆಗೆ ಕೊಟ್ಟ ಸಮರ್ಪಕವಾದ ಉತ್ತರವೆಂದು ಇದನ್ನು ಭಾವಿಸಬಹುದು.

1906 ರ ಮೇ 9 ಮತ್ತು ಆಗಸ್ಟ್ 10 ರ ನಡುವಿನ ಅವಧಿಯಲ್ಲಿ ಗೋಖಲೆ ಮತ್ತು ಮಾರ್ಲೆ ಐದು ಸಲ ಸಂದರ್ಶನ ನಡೆಸಿದ್ದರು. ಮಧ್ಯಗಾಮಿಗಳ ಧೋರಣೆಯ ಮೇಲೆ ಮಾರ್ಲೆಯ ಪ್ರಭಾವ ಹೀಗೆ ಉಂಟಾಯಿತು ಎಂಬುದನ್ನು ಮಾರ್ಲೆ 1906 ನೆಯ ಆಗಸ್ಟ್ 2 ರಂದು ಮಿಂಟೋಗೆ ಬರೆದ ಪತ್ರದ ಈ ಕೆಳಕಾಣಿಸಿದ ಉದ್ಧೃತ ಭಾಗ ತುಂಬ ಸ್ಪಷ್ಟವಾಗಿ ತಿಳಿಸುತ್ತದೆ. "ನಾನು ನಿನ್ನೆ ಗೋಖಲೆಯವರೊಂದಿಗೆ ಐದನೆಯ ಹಾಗೂ ಕೊನೆಯ ಸಲ ಮಾತನಾಡಿದೆ ನಾನು ಅವರಿಗೆ ಹೀಗೆ ಹೇಳಿದೆ. "ನಿಮ್ಮ ನಿರ್ದೇಶನದಲ್ಲಿ ಯುಕ್ತವಾದ ಸುಧಾರಣೆಗಳನ್ನು ಕೈಗೊಳ್ಳಲು ಈಗ ಅನ್ಯಾದೃಶ್ಯವಾದ ಅವಕಾಶವಿದೆ. ನೀವು ಅವರೊಡನೆ ಸುಧಾರಣೆಗಳನ್ನು ಕೈಗೊಳ್ಳಲು ಈ ಅನಾದೃಶ್ಯವಾದ ಅವಕಾಶವಿದೆ. ನಿಮ್ಮ ಸೆಕ್ರೆಟರಿ ಆಫ್ ಸ್ಟೇಟ್‌ನಲ್ಲಿ ಕ್ಯಾಬಿನೆಟ್ ಹೌಸ್ ಆಫ್ ಕಾಮನ್ಸ್ ಎರಡೂ ವರ್ಷಗಳ ಪತ್ರಕರ್ತರು ಹಾಗೂ ಭಾರತಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಯಾವಾಗಲೂ ತೊಂದರೆಯನ್ನು ಉಂಟುಮಾಡುವ ಸಾರ್ವಜನಿಕ ಒಂದು ಸಣ್ಣ ಗುಂಪು - ಇದು ಸಾಕಷ್ಟು ಮಟ್ಟಿಗೆ ಭರವಸೆಯಿಟ್ಟಿವೆ. ವೈಸರಾಯ್ ಕೂಡ ಮಹತ್ವದ ಹಾಗೂ ಪರಿಣಾಮಕಾರಿಯಾದ ಪೌರಸೇವೆಯನ್ನು ಮುಂದುವರಿಸುತ್ತಿದ್ದಾರೆ. ಇದಕ್ಕಿಂತ ಹೆಚ್ಚಿನ ಆಶಾದಾಯಕ ಸನ್ನಿವೇಶ ಇನ್ನಾವುದು ಇರಲು ಸಾಧ್ಯ? ಇದನ್ನೇ ಒಂದೇ ಒಂದು ವಿಷಯವಷ್ಟೇ ಕೆಡಿಸಬಹುದು. ಇಡೀ ನಿಮ್ಮ ಸ್ನೇಹಿತರು ಅನುಸರಿಸುವ ವಕ್ರಮಾರ್ಗ ಹಾಗೂ ಅವರ ಅವಿವೇಕ ಪೂರ್ವ ಬಂಗಾಳದಲ್ಲಿನ ಕ್ಷೋಭೆ ಹಾಗೆಯೇ ಮುಂದುವರಿಯುವಂತೆ ಅವರು ಮಾಡಿದ ಪಕ್ಷದಲ್ಲಿ ಸರ್ಕಾರಕ್ಕೆ ಮುಂದಿನ ಕ್ರಮ ಕೈಗೊಳ್ಳುವುದು ಕಷ್ಟವಾಗುತ್ತದೆ ಅಥವಾ ಅಸಾಧ್ಯವೂ ಆಗಬಹುದು. ಯಾವುದೇ ರಾಜಿಗೆ ಬರುವಂತೆ ನಾನು ನಿಮ್ಮನ್ನು ಕೇಳಿಕೊಳ್ಳುವುದಿಲ್ಲ. ನಿಮ್ಮ ಸ್ವಂತ ಕರ್ತವ್ಯವವನ್ನು ಹೇಗೆ ಪಾಲಿಸಬೇಕೆಂದು ನಿರ್ಣಯಿಸುವವರು ನಿಸ್ಸಂದೇಹವಾಗಿ ನೀವೇ. ನಿಮಗೆ ನಿಮ್ಮದೇ ಆದ ಕಷ್ಟಗಳಿರುವುದೆಂದು ನನಗೆ ತಿಳಿದಿದೆ. ಪರಿಣಾಮಕಾರಿಯಾದ ಮಾರ್ಗದಲ್ಲಿ ಹೆಜ್ಜೆಯಿಡಲೂ ನೀವು ತೀರ್ಮಾನಿಸುತ್ತೀರಿ ಎಂಬ ಸಂಪೂರ್ಣ ನಂಬಿಕೆ ನಮಗಿದೆ. ನಿಮ್ಮ ಪರವಾಗಿ ಮಾತನಾಡುವವರು ಅಥವಾ ನಿಮ್ಮನ್ನು ಬೆಂಬಲಿಸುವ ಪತ್ರಕರ್ತರು ನಮ್ಮ ಕಾರ್ಯವನ್ನು ಅಲಕ್ಷಿಸಲು ಹೊರಟರೆ ಅಥವಾ ನಮಗೆ ಅಸಾಧ್ಯವಾದುದನ್ನು ಮಾಡುವಂತೆ ಆಗ್ರಹಪಡಿಸಿದರೆ ಆಗ ಕೆಡುಕುಗಳು ಫಲಿಸುತ್ತವೆ ನಾನು ಹೇಳಬೇಕಾಗಿರುವುದು ಇಷ್ಟು ಮಾತ್ರ".

"ಇವೆಲ್ಲವನ್ನೂ ತಾನು ಹೃತ್ಪೂರ್ವಕವಾಗಿ ಒಪ್ಪಿಕೊಂಡಂತೆ ಅವನು ನಟಿಸಿದ. ಅಷ್ಟೇ ಅಲ್ಲ, ನನ್ನ ಆಯವ್ಯಯ ಮುಂಗಡ ಪತ್ರದ ಭಾಷಣ ಮುಗಿದ ಕೂಡಲೆ ಭಾರತದಲ್ಲಿರುವ ತನ್ನ ಸ್ನೇಹಿತರಿಗೆ ಬರೆದಿರುವುದಾಗಿಯೂ ಅದಕ್ಕೆ ಅತ್ಯಂತ ಸ್ನೇಹಯುತವೂ ಆಶಾದಾಯಕವೂ ಆದ ಟಿಪ್ಪಣಿಯನ್ನು ಕೂಡ ಸೇರಿಸಿರುವುದಾಗಿಯೂ ನನಗೆ ನಂಬಿಕೆ ಹುಟ್ಟುವಂತೆ ಹೇಳಿದ".

ತೀವ್ರಗಾಮಿಗಳನ್ನು ಅಡಗಿಸುವ ಮೂಲಕ, ಸುಧಾರಣೆಗಳಿಗಿರುವ ಏಕೈಕ ಅಡಚಣೆಯನ್ನು ದೂರ ಮಾಡಲು ಗೋಖಲೆ ಒಪ್ಪಿದಾಗ, ಅವರಿಗೆ ಭಾರತದ ಬಗ್ಗೆ ಇರುವ ಬ್ರಿಟಿಷ್ ಧೋರಣೆಯನ್ನು ಕುರಿತ ಯಾವುದೇ ಭ್ರಮೆಯಿರಲಿಲ್ಲ ಎಂಬುದನ್ನು ಗಮನಿಸುವುದು ಅವಶ್ಯಕ. ಅದೇ ಸಂದರ್ಶನದಲ್ಲಿ ಸ್ವಯಂ ಆಡಳಿತ ಹೊಂದಿರುವಂತಹ ವಲಸೆ ನಾಡಿನ ಸ್ಥಾನವನ್ನು ಹೊಂದಬೇಕೆಂಬ ಭಾರತದ ಅಂತಿಮ ಆಸೆಯ ಬಗ್ಗೆ ಮಾರ್ಲೆ ಆಗಲೇ ಮಿಂಟೋಗೆ ನಿಷ್ಕಟುವಾಗಿ ಈ ಮಾತುಗಳಲ್ಲಿ ತಿಳಿಸಿದ್ದ. "ಬರಲಿರುವ ಅನೇಕ ದಿನಗಳನ್ನು ನನಗಿರುವ ಸಮಯಾವಕಾಶ ಬಹಳ ಕಡಿಮೆ ಎಂಬುದನ್ನು ನನೆಸಿಕೊಂಡಾಗ ಇದು ಕೇವಲ ಒಂದು ಕನಸಾಗಿ ಕಂಡು ಬಂತು. ಇದನ್ನು ತಿಳಿದೂ ಕೂಡ ಮಧ್ಯಗಾಮಿಗು ಸರ್ಕಾರದ ವಿರುದ್ಧ ನಡೆಸಿದ ಹೋರಾಟ, ಅವರ ಹಾಗೂ ತೀವ್ರಗಾಮಿಗಳ ನಡುವೆ ಇದ್ದ ಮೂಲಭೂತ ವ್ಯತ್ಯಾಸವನ್ನು ವಿವರಿಸುತ್ತದೆ.

ಮಾರ್ಲೆಯೊಂದಿಗೆ ಒಪ್ಪಂದಕ್ಕೆ ಬರಲು ಸೂಕ್ಷ್ಮವಾಗಿ ಒಪ್ಪಿಕೊಂಡ ಗೋಖಲೆಯವರ ವರ್ತನೆ, ತೀವ್ರಗಾಮಿಗಳು ಸಮರ್ಥಿಸಿದ "ಬಹಿಷ್ಕಾರ" ಚಳುವಳಿಯನ್ನು ಬೆಂಬಲಿಸುವ, 1906 ದ ಕಾಂಗ್ರೆಸ್ ಅಧಿವೇಶನದ ನಿರ್ಣಯಕ್ಕೆ ಮಧ್ಯಗಾಮಿಗಳು ತೋರಿಸಿದ ತೀವ್ರ ವಿರೋಧವನ್ನು ವಿವರಿಸುತ್ತದೆ. 1906 ರ ಕಾಂಗ್ರೆಸ್ ಅಧಿವೇಶನದ ಅನಂತರ ಮಧ್ಯಗಾಮಿಗಳು ಹಾಗೂ ತೀವ್ರಗಾಮಿಗಳ ನಡುವೆ ಥಟ್ಟನೆ ಕಹಿ ವಿವಾದ ಕಾಣಿಸಿಕೊಂಡಿದ್ದನ್ನು ಮತ್ತು ಅದು 1907 ನೆಯ ಇಡೀ ವರ್ಷ ಮುಂದುವರಿದುದನ್ನು ಇದು ವಿವರಿಸುತ್ತದೆ.

ಮಧ್ಯಗಾಮಿಗಳಿಗೆ ಸರ್ಕಾರದೊಡನೆ ಸೇರಿ ಯಾವುದೇ ಕಾರ್ಯವನ್ನು ಸಂಪೂರ್ಣವಾಗಿ ಮಾಡಲು ಸಾಧ್ಯವಾಗದಿದ್ದರೂ ಅವರು ತೀವ್ರಗಾಮಿಗಳ ಭದ್ರ ನೆಲೆಯಿಂದ ಸಾಧ್ಯವಾದಷ್ಟೂ ತಪ್ಪಿಸಿಕೊಂಡು ತಾವು ಕಳೆದುಕೊಂಡಿದ್ದಂತಹ ಸ್ಥಾನವನ್ನು ಪುನಃಗಳಿಸಿಕೊಳ್ಳಲು ಪ್ರಯತ್ನಿಸಿದಂತೆ ತೋರುತ್ತದೆ. ಅವರು ಹೀಗೆ ಮಾಡಬೇಕಾದ್ದು ಸುಧಾರಣೆಗಳನ್ನು ಕೈಗೊಳ್ಳುವ ದೃಷ್ಟಿಯಲ್ಲಿ ಅವಶ್ಯಕವೆಂಬುದು ಮಾರ್ಲೆಯ ಅಭಿಪ್ರಾಯವಾಗಿತ್ತು.

1907 ರ ಪ್ರಾರಂಭದಿಂದಲೂ ಮಧ್ಯಗಾಮಿಗಳು ಕಾರ್ಯತಃ ತೀವ್ರಗಾಮಿಗಳನ್ನು ತೊರೆದುದರಲ್ಲಿ ಮತ್ತು ಸರ್ಕಾರದೊಂದಿಗೆ ಭಿನ್ನಾಭಿಪ್ರಾಯ ಬೆಳೆಸಿಕೊಂಡುದರಲ್ಲಿ ಕೂಡ ಏನೂ ಸಂದೇಹವಿಲ್ಲ. ಹೀಗಾಗಿ ಮಿಂಟೋಗೆ ಹೆಮ್ಮೆಪಡಲು ಸರಿಯಾದ ಕಾರಣವಿತ್ತು. ಸುರೇಂದ್ರನಾಥರನ್ನು ಒಳಗೊಂಡಂತೆ ಮಧ್ಯಗಾಮಿ ಪಕ್ಷದ ಮುಖಂಡರುಗಳು, ಬೇರೂರಿದ ಶ್ರೀಮಂತ ವರ್ಗದವರ ಹಾಗೂ ಮುಸ್ಲಿಮರ ಜೊತೆ ಸಾರಿ ನಿಯೋಗದಲ್ಲಿ ವೈಸರಾಯ್‌ಯನ್ನು ಭೇಟಿ ಮಾಡಿ "ಬಿಪಿನ್ ಚಂದ್ರ ಪಾಲರ ಹದ್ದು ಮೀರಿದ ವರ್ತನೆಗಳಿಂದ ದಾರಿ ತಪ್ಪಿದ ಬಂಗಾಳಿಗಳ ಕೆಡಕುಂಟುಮಾಡುವ ಭಾವೋದ್ವೇಗವನ್ನು ಅಡಗಿಸಲು ಅವನ ಸಹಾಯವನ್ನು ಕೋರಿದುದನ್ನು ಮಿಂಟೋ ಮಾರ್ಲೆಗೆ ತಿಳಿಸಿದ್ದ".

ಎರಡನೆಯ ನಿಯೋಗದ ಭೇಟಿಯ ಆನಂತರ ಮಿಂಟೋ ಮಾರ್ಲೆಗೆ ಹೀಗೆ ಬರೆದ. "ಗೋಖಲೆಯವರು ತುಂಬ ವಿವೇಕಿಗಳು. ಭಾರತದ ಸಮಗ್ರ ತರುಣ ಜನಾಂಗ ತೀವ್ರಗಾಮಿಗಳತ್ತ ವಾಲುತ್ತಿದೆ ಎಂದು ಅವರು ಹೇಳುತ್ತಾರೆ. ಅವರು ತೀರ ಅವಿವೇಕಿಗಳು ಹಾಗೂ ತಮಗೆ ಬೋಧಿಸಲಾದ ಬ್ರಿಟಿಷ್ ಆಡಳಿತದಲ್ಲಿ ಕೊನೆಗೊಳಿಸುವ ಸಿದ್ಧಾಂತ ಅವರನ್ನು ಆಕರ್ಷಿಸಿದೆ. ಹಿಂದಿನ ಕಾಲದಲ್ಲಿ ಜನರ ಮೇಲೆ ಮೋಹಕ ಪರಿಣಾಮ ಬೀರಿದ ಬ್ರಿಟಿಷ್ ಆಡಳಿತದ ಮಾಯಾಜಾಲ ಈಗ ಮಾಯವಾಗಿದೆ. ದೇಶೀಯ ಕಲ್ಪನೆಗೆ ಹೊಂದುವಂತಹ ಯಾವುದಾದರೂ ಕಾರ್ಯವನ್ನು ಕೈಗೊಳ್ಳುವುದೇ ನಮ್ಮ ನೈತಿಕ ನಿಯಂತ್ರಣವನ್ನು ಪುನಃ ಸಂಪಾದಿಸುವ ಏಕೈಕ ಮಾರ್ಗ. ಇದು ಗೋಖಲೆಯವರ ದೃಢಾಭಿಪ್ರಾಯ".

ಅಷ್ಟಾದರೂ ಮಿಂಟೋ ಮತ್ತು ಮಾರ್ಲೆ ಇವರ ಅಗೋಚರ ಹಸ್ತಗಳು ಕಾಂಗ್ರೆಸ್ ಪಕ್ಷದ ಸೂರತ್ ಅಧಿವೇಶನದಲ್ಲಿ ಮಧ್ಯಗಾಮಿಗಳು ಹಾಗೂ ತೀವ್ರಗಾಮಿಗಳ ನಡುವೆ ಮಹಾ ಬಿರುಕು ಉಂಟಾದಾಗ, ಹಿನ್ನೆಲೆಯಲ್ಲಿ ನಿಂತೂ ಸೂತ್ರಧಾರರಂತೆ ಕಾರ್ಯ ನಿರ್ವಹಿಸಲಿಲ್ಲವೆಂದು ನಂಬಲು ಕಷ್ಟವಾಗುತ್ತದೆ. ಏಕೆಂದರೆ ಸೂರತ್ ಕಾಂಗ್ರೆಸ್‌ನ ಬಗ್ಗೆ ಮೇಲೆ ಹೇಳಲಾದ ಸಂಗತಿಗಳಿಂದ ಮಧ್ಯಗಾಮಿಗಳು ತೀವ್ರಗಾಮಿಗಳೊಂದಿಗೆ ಉದ್ದೇಶಪೂರ್ವಕವಾಗಿ ಜಗಳ ಹಾಡಿದರು ಹಾಗೂ ಸಂಧಾನಕ್ಕೆ ಇರಬಹುದಾದ ಎಲ್ಲ ಯುಕ್ತ ಅವಕಾಶಗಳನ್ನು ಬಿಟ್ಟು ಬಿಟ್ಟರು ಎಂದು ಅನುಮಾನಿಸುವುದು ಸೂಕ್ತವೆನಿಸುತ್ತದೆ.

ಗೋಖಲೆಯವರೊಂದಿಗೆ ನಡೆದ ಮಾತುಕತೆಗಳಿಂದ ಮಧ್ಯಗಾಮಿಗಳು ಸಹಾಯ ಮಾಡುವರೆಂಬ ವಿಶ್ವಾಸ ಹೊಂದಿದ್ದ ಮಾರ್ಲೆ ಕಾಲ ವಿಳಂಬ ಮಾಡದೆ ಒಪ್ಪಂದಕ್ಕೆ ಸಂಬಂಧಿಸಿದಂತೆ ತಾನು ಮಾಡಬೇಕಾಗಿದ್ದ ಕೆಲಸವನ್ನು ಮುಂದುವರೆಸಿದ. 1906 ನೆಯ ಜೂನ್ 15 ರಂದು ಸುಧಾರಣಾ ಮಾರ್ಗದಲ್ಲಿ ಜನಪ್ರಿಯ ದಿಕ್ಕಿನಲ್ಲಿ ಹೆಚ್ಚೆಯಿಡತೊಡಗುವಂತೆ ಮಿಂಟೋಗೆ ಅವನು ಪತ್ರ ಬರೆದ. "ನಿಮ್ಮ ವಿಧಾನ ಪರಿಷತ್ತಿನಲ್ಲಿ ದೇಶೀಯ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವುದು; ಸ್ಥಳೀಯ ಸಮಿತಿಗಳಲ್ಲಿಯೂ ಹೀಗೆ ಮಾಡುವುದು; ವಿಧಾನ ಪರಿಷತ್ತಿನಲ್ಲಿ ಆಯವ್ಯಯ ಮುಂಗಡ ಪತ್ರದ ಬಗ್ಗೆ ಚರ್ಚಿಸಲು ಕೇವಲ ನಾಲ್ಕೈದು ಘಂಟೆಗಳನ್ನು ಬಳಸುವ ಜಿಪುಣತನ ಬಿಟ್ಟು, ಅದಕ್ಕಾಗಿ ಅಧಿವೇಶನದ ಸಂಪೂರ್ಣ ಸಮಯವನ್ನು ವಿನಿಯೋಗಿಸುವುದು, ತಿದ್ದುಪಡಿಗಳನ್ನು ಮುಂದಿಡುವ ಹಕ್ಕು (ಬಹುಶಃ ಈ ವಿಷಯದಲ್ಲಿ ಅಧಿಕಾರಿಗಳೇ ಬಹುಸಂಖ್ಯಾತರಾಗಿ ಉಳಿಯುತ್ತಾರೆ) ಇಂತಹ ವಿಚಾರಗಳನ್ನು ತತ್‌ಕ್ಷಣ ಕಾರ್ಯರೂಪಕ್ಕೆ ತರಬೇಕಾದ ಸಂಗತಿಗಳೆಂದು ಈಗ ನೀವು ಏಕೆ ಭಾವಿಸಬಾರದು? ನಿಮ್ಮ ಪತ್ರಗಳನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಾಗ ಮೇಲೆ ಹೇಳಲಾದಂತಹ ಸುಧಾರಣೆಗಳನ್ನು ನೀವು ಒಪ್ಪಿರುವಂತೆಯೇ ಕಾಣುತ್ತದೆ. ಹೀಗಿರುವಾಗ ಈ ಬಗೆಯ ಸುಧಾರಣೆಗಳನ್ನು ಘೋಷಿಸಲು ನೀವೇಕೆ ಸಿದ್ಧರಾಗಬಾರದು? ನೀವೆ ನನಗೆ ಪತ್ರ ಬರೆಯಲಿ ಅಥವಾ ನಾನೇ ಬೇಕಾದರೂ ನಿಮಗೆ ಬರೆಯುತ್ತೇನೆ. ಅಂತೂ ಸುಧಾರಣಾ ಕಾರ್ಯಕ್ರಮಗಳಿಗೆ ನಾಂದಿ ಹಾಡೋಣ. ಇದಕ್ಕಾಗಿ ದೀರ್ಘ ಕಾಲ ಕಾಯಬೇಕಾಗಿಲ್ಲ ಅಥವಾ ಇದೊಂದು ವಾಗಾಡಂಬರದ ಕಾರ್ಯವೂ ಅಲ್ಲ. ನಿಮ್ಮ ಕಾರ್ಯಕಾರಿ ಸಮಿತಿಯು ದೇಶೀಯ ಸದಸ್ಯರ ಅಭಿಪ್ರಾಯವೊಂದರಿಂದಲೇ ಯೋವ ಕೆಲಸವೂ ನಡೆಯದು ಎಂದು ನಾನು ಭಾವಿಸುತ್ತೇನೆ ಸರಿಯಲ್ಲವೇ? ಸರಿಯೆಂದೇ ನನಗನಿಸುತ್ತದೆ. ಇಂತಹ ಸುಧಾರಣೆಗಳು ದುರ್ಬಲ (ಸಹಜವಾಗಿಯು ದುರ್ಬಲರಾದ) ಒಬ್ಬ ವ್ಯಕ್ತಿಯನ್ನು -ಆಂಗ್ಲೋ-ಇಂಡಿಯನ್‌ನನ್ನು ಹೆದರಿಸುತ್ತವೆ. ಮಾರ್ಲೆ ಆನಂತರ ಜೂನ್ 23 ರಂದು ಮಿಂಟೋಗೆ ಇನ್ನೊಂದು ಪತ್ರ ಬರೆದು, ಭಾರತದ ಬಗೆಗಿನ ಧೋರಣೆಯನ್ನು ಟೀಕಿಸುವವರ ಬಾಯಿ ಮುಚ್ಚಿಸಲು ತಾನು (ಮಾರ್ಲೆ) ಹೌಸ್ ಆಫ್ ಕಾಮನ್ಸ್‌ನಲ್ಲಿ (1906 ರ) ಜುಲೈ 20 ರಂದು ನಡೆಯುವ ಭಾರತೀಯ ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಈ ಸುಧಾರಣಾ ಪ್ರಸ್ತಾಪಗಳನ್ನು ಎತ್ತಲು ಬಯಸಿರುವುದಾಗಿ ತಿಳಿಸಿದ್ದ. ಆದ್ದರಿಂದ "ಈ ವಿಷಯವನ್ನು ಕುರಿತಂತೆ ಮಿಂಟೋಗೆ ಇರುವ ಒಲವು ಹಾಗೂ ಉದ್ದೇಶಗಳನ್ನು" ಸೂಚಿಸಿ ಟೆಲಿಗ್ರಾಮ್ ಕಳುಹಿಸುವಂತೆ ಮಿಂಟೋನನ್ನು ಕೋರಿದ. ಕಾಂಗ್ರೆಸ್ ಪಕ್ಷಕ್ಕೆ ಸರಿಸಮವಾದ ದೇಶೀಯ ರಾಜಕುಮಾರರ

ಸಮಿತಿಯೊಂದನ್ನು ರಚಿಸುವ ಮಿಂಟೋನ ಮೆಚ್ಚಿನ ಆಲೋಚನೆಯನ್ನು ಮಾರ್ಲೆ ವಿರೋಧಿಸಿದ. ಇಂತರ ಸಮಿತಿಯೊಂದನ್ನು ರಚಿಸಬೇಕೆಂದು ಲಾರ್ಡ್ ಕರ್ಜನ್ ಕೂಡ ಹಿಂದೊಮ್ಮೆ ಆಲೋಚಿಸಿದ್ದ.

ಹೀಗೆ ಸುಧಾರಣೆಗೆ ಸಂಬಂಧಿಸಿದ ಎರಡು ಸೂಚನೆಗಳು ಮಿಂಟೋನಿಂದ ಎಂದರೆ ಗವರ್ನರ್ ಜನರಲ್‌ನ ಕಾರ್ಯಕಾರಿ ಸಮಿತಿಯಲ್ಲಿರುವ ಭಾರತೀಯ ಸದಸ್ಯನಿಂದ ಪ್ರಸ್ತಾಪಿತವಾದವು ಹಾಗೂ ದೇಶೀಯ ರಾಜಕುಮಾರರ ಸಮಿತಿಯನ್ನು ರಚಿಸುವ ಪ್ರಸ್ತಾಪನೆ ಮಾರ್ಲೆಯಿಂದ ನಿರಾಕೃತವಾದವು. ಆದರೆ 1909 ರಲ್ಲಿ ವಾಸ್ತವವಾಗಿ ಕೈಗೊಳ್ಳಲಾದ ಉಳಿದೆಲ್ಲ ಸುಧಾರಣೆಗಳ ರೂಪುರೇಖೆಗಳನ್ನು ಸೂಚಿಸಿದವನು ಮಾರ್ಲೆಯೇ. ಮಿಂಟೋ ಅಂತಹ ಯಾವುದೇ ಸ್ಪಷ್ಟ ಸೂಚನೆಗಳನ್ನು ನೀಡಿಲ್ಲವೆಂಬುದು ತನ್ನ ಪ್ರಸ್ತಾಪಗಳ ಬಗ್ಗೆ ಮಿಂಟೋನ ಅಭಿಪ್ರಾಯಗಳನ್ನು ತಿಳಿಯಲು ಮಾರ್ಲೆ ವ್ಯಕ್ತಪಡಿಸಿದ ಕಾತರದಿಂದಲೇ ಸಾಬೀತಾಗುತ್ತದೆ. ತನ್ನ 'ರಿಕಲೆಕ್ಷನ್' ಕೃತಿಯಲ್ಲಿ ಆವರಣದಲ್ಲಿ ಮಾರ್ಲೆ ಕೆಳಗಿನ ಟಿಪ್ಪಣಿಯನ್ನು ಸೇರಿಸುತ್ತಾನೆ. "ಇವೆರಡೂ ಪತ್ರಗಳು (ಜೂನ್ 15 ಮತ್ತು 23) ಸುಧಾರಣೆಗಳು ನಿಶ್ಚಿತ ರೂಪವನ್ನು ಪಡೆದ ದಿನಾಂಕವನ್ನು ಗುರುತಿಸಿರುವುದರಿಂದ ಕೆಲಮಟ್ಟಿಗೆ ಆಸಕ್ತಿಯನ್ನು ಉಂಟುಮಾಡುತ್ತದೆ. ಇವೆಲ್ಲ ವಿಚಾರಣಾ ಬೆಳಕಿನಲ್ಲಿ 1907 ರ ಮಾರ್ಚ್ 27 ರಂದು ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಮಾಡಿದ ತನ್ನ ಭಾಷಣದಲ್ಲಿ ತಿಳಿಸಿದಂತೆ ಮಿಂಟೋ 1909 ರಲ್ಲಿ ಕೈಗೊಳ್ಳಲಾದ ಎಲ್ಲ ಸುಧಾರಣೆಗಳ ಕೀರ್ತಿ ಭಾರತ ಸರ್ಕಾರಕ್ಕೆ ಸಲ್ಲುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವುದು ಸ್ವಲ್ಪ ಮಟ್ಟಿಗೆ ವಿಲಕ್ಷಣವಾಗಿ ಕಾಣಬಹುದು. 1910 ರ ಜನವರಿ 25 ರಂದು 1909 ರ ಕಾಯ್ದೆಯನ್ವಯ ರಚಿಸಲಾದ ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್‌ನ್ನು ಉದ್ಘಾಟಿಸುವಾಗ ಲಾರ್ಡ್ ಮಿಂಟೋ ಗಮನಿಸಿದ್ದೇನೆಂದರೆ ನನ್ನ ಗೌರವಾರ್ಹ ಸಹೋದ್ಯೋಗಿಗಳು ಹಾಗೂ ಭಾರತದ ಜನರು, ಪಾರ್ಲಿಮೆಂಟ್ ಈಗಷ್ಟೇ ಮಂಜೂರು ಮಾಡಿದ ಸುಧಾರಣೆಗಳ ಹಿಂದಿನ ಇತಿಹಾಸವೇನೆಂಬುದನ್ನು ಹೇಗಾದರೂ ತಿಳಿಯಲೇಬೇಕಾದುದು ಅತ್ಯಗತ್ಯ. ಈ ಸುಧಾರಣೆಗಳ ಮೂಲವಿರುವುದು ಸುಮಾರು ಮೂರುವರೆ ವರ್ಷಗಳ ಹಿಂದೆ - ಆಗಸ್ಟ್ 1906 ರಲ್ಲಿ ನಾನು ನನ್ನ ಸಹೋದ್ಯೋಗಿಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಒಂದು ಟಿಪ್ಪಣಿಯಲ್ಲಿ ಭಾರತದ ಸ್ಥಿತಿಗತಿಗಳಿಗೆ ಸಂಬಂಧಿಸಿದಂತೆ ನಾನು ಸ್ವತಃ ರೂಪಿಸಿಕೊಂಡ ಅಭಿಪ್ರಾಯವನ್ನೇ ಇದು ಸಂಪೂರ್ಣವಾಗಿ ಆವರಿಸಿದೆ. ಈ ಸುಧಾರಣೆಗಳಿಗೆ ಸಂಬಂಧಿಸಿದಂತೆ ಇಂಗ್ಲೆಂಡಿನಿಂದ ಯಾವುದೇ ಸೂಚಿಸಿ ಬಂದಿಲ್ಲ. ಇವುಗಳ ಪರಿಣಾಮ ಒಳ್ಳೆಯದಾಗಲಿ, ಕೆಟ್ಟದಾಗಲಿ ಅದಕ್ಕೆ ನಾನೇ ಸಂಪೂರ್ಣ ಹೊಣೆಗಾದ".

ಇಂತದೊಂದು ಅಸ್ಪಷ್ಟವಾದ ಹಾಗೂ ಅಪಾರ್ಥಕ್ಕೆ ಎಡೆಮಾಡಿಕೊಡುವಂತಹ ಹೇಳಿಕೆಯನ್ನು ನೀಡಿದ ಮಾರ್ಲೆಯ ಪರವಾಗಿರುವ ಒಂದೇ ಒಂದು ಸಮರ್ಥನೀಯ ಅಂಶವೆ ಜೂನ್ 23 ರ ಪತ್ರಗಳಲ್ಲಿ ಅವನು ವ್ಯಕ್ತಪಡಿಸಿದಂಥ ಅಭೀಕ್ಷೆ ಮಿಂಟೋನ ಅಭಿಪ್ರಾಯಗಳನ್ನು ತಿಳಿದುಕೊಂಡು ನಂತರ ಹೌಸ್ ಆಫ್ ಕಾಮನ್ಸ್‌ನ ಮುಂದೆ ಮಂಡಿಸಲು ಇಷ್ಟಪಟ್ಟ ತನ್ನ ಸುಧಾರಣಾ ಪ್ರಸ್ತಾಪಗಳಿಗೆ ಸಂಬಂಧಿಸಿದಂತೆ ಮಾರ್ಲೆ ಹೀಗೆ ಸೇರಿಸಿದ್ದಾನೆ "ನನ್ನ ಈ ವಿಚಾರಧಾರೆ ನೇರವಾಗಿ ಮತ್ತು ನಿಕಟವಾಗಿ ನಿಮ್ಮ ಅಭಿಪ್ರಾಯವನ್ನೇ ಹೋಲುತ್ತದೆ ಎಂದು ನೀವು ಅರ್ಥಮಾಡಿಕೊಳ್ಳುತ್ತೀರಿ ಎಂದು ನಾನು ಆಶಿಸುತ್ತೇನೆ".

ಇದನ್ನು ಅನುಮೋದಿಸಿದ ಮಿಂಟೋ ಹೀಗೆ ಉತ್ತರ ಬರೆದ "ಭಾರತ ಸರ್ಕಾರ ತೆಗೆದುಕೊಂಡ ಅಧೀಕೃತ ಉತ್ಸಾಹಕ್ಕೆ ನಾನು ತುಂಬ ಮಹತ್ವ ನೀಡುತ್ತೇನೆ". ಇದಕ್ಕೆ ಅನುಸಾರವಾಗಿಯೇ ವಿಧಾನಗಳನ್ನು ಮುಂದೆ ಅನುಸರಿಸಲಾಯಿತು. ಅಧೀಕೃತ ಕಾಗದ ಪತ್ರದಲ್ಲಿ ಉದ್ದೇಶ ಪೂರ್ವಕವಾದ ನಟನೆಯನ್ನು ಮುಂದುವರಿಸಲಾಯಿತು. ಉದಾಹರಣೆಗೆ 1907 ನೆಯ ಮೇ 17 ರಂದು ಮಿಂಟೋಗೆ ಕಳುಹಿಸಿದ ಮಾರ್ಲೆಯ ಈ ಕೆಳಕಾಣಿಸಿದ ಟೆಲಿಗ್ರಾಮ್‌ನಲ್ಲಿ ಹೀಗಿದೆ. "ಮೈ ಲಾರ್ಡ್ ಮಾರ್ಚ್ 21 ರ ತಮ್ಮ ಪತ್ರದಲ್ಲಿ ನನಗೆ ತಿಳಿಸಲಾದ ಐದು ಪ್ರಸ್ತಾಪಗಳನ್ನು ಕುರಿತಂತೆ, ಅವುಗಳ ಅತಿ ಮಹತ್ವಕ್ಕೆ ಅಗತ್ಯವೆನಿಸಿದ ಎಲ್ಲ ಎಚ್ಚರಿಕೆಗಳೊಂದಿಗೆ ನಾನು ಸಮಿತಿಯಲ್ಲಿ ಪರಿಶೀಲನೆ ನಡೆಸಿದೆ. ಮಹಾ ಪ್ರಭುಗಳಾದ ತಾವು ಏಪ್ರಿಲ್ 6 ರಂದು ವಿಧಾನ ಪರಿಷತ್ತ್‌ನಲ್ಲಿ ಸ್ಪಷ್ಟಪಡಿಸಿದಂತೆ ಈ ಪ್ರಸ್ತಾಪಗಳನ್ನು ಬ್ರಿಟನ್ನಿನಿಂದ ತಮಗೆ ಬಂದ ಸೂಚನೆಗಳ ಅನುಸಾರವಾಗಿ ರೂಪಿಸಲಾಗಲಿಲ್ಲ. ಇಂತಹ ಪ್ರಸ್ತಾಪಗಳು ಮೊದಲೇ ಹೊರಟಿದ್ದು ಸಂಪೂರ್ಣವಾಗಿ ಭಾರತ ಸರ್ಕಾರದಿಂದಲೇ ಭಾರತ ಸಾಮ್ರಾಜ್ಯದ ಪ್ರಸ್ತುತ ಅಗತ್ಯಗಳನ್ನು ಪೂರೈಸುವಲ್ಲಿ ಒಂದು ಮಹತ್ವದ ಹೆಜ್ಜೆಯಾಗಿ ತಾವು ಈ ಪ್ರಾರಂಭ ಮಾಡಿದ್ದೀರಿ". ಆದರೆ ಇವೆಲ್ಲವು ಮೇಲೆ ಉಲ್ಲೇಖಿಸಲಾದಂತಹ ಮಿಂಟೋನ ಸ್ಪಷ್ಟ ಪ್ರತಿಪಾದನೆಯನ್ನು ಸಮರ್ಥಿಸುವಂತೆ ತೋರುವುದಿಲ್ಲ. ವಾಸ್ತವವಾಗಿ ಹೇಳುವುದಾದರೆ ಕಾಗದ ಪತ್ರಗಳು, ಟಿಪ್ಪಣಿಗಳು, ದಸ್ತೈವಜುಗಳು ಮೊದಲಾದ ಲಭ್ಯ ದಾಖಲೆಗಳ ಪ್ರಾರಂಭದಿಂದ ಅಂತ್ಯದವರೆಗಿನ ಎಲ್ಲ ಸುಧಾರಣೆಗಳ ಹಿಂದೆ ಮಾರ್ಲೆಯ ಮಾರ್ಗದರ್ಶನವೂ ಅದಕ್ಕೆ

ಇದ್ದಿರುವುದನ್ನು ಸ್ಪಷ್ಟವಾಗಿ ಪ್ರಕಟಿಸುತ್ತದೆ. ಇಂಡಿಯನ್ ಕೌನ್ಸಿಲ್ ಬಗ್ಗೆ ಲಾರ್ಡ್‌ನಲ್ಲಿ ನಡೆದ ಚರ್ಚೆಯಲ್ಲಿ ಲಾರ್ಡ್ ಕರ್ಜನ್ ನೇರವಾಗಿಯೇ ಹೀಗೆ ಹೇಳಿದ್ದ " ಈ ಕಾಗದ ಪತ್ರಗಳನ್ನು ತಾಳೆ ನೋಡಿದರೆ ಹಾಗೂ ಹೋಲಿಸಿದರೆ ಆಯಾ ಸ್ಥಳದಲ್ಲಿಯೇ ಜನರ ಅಭಿಪ್ರಾಯಗಳನ್ನು ಸ್ವೀಕರಿಸಿದ ಸೆಕ್ರೆಟರಿ ಆಫ್ ಸ್ಟೇಟ್ ಅಲ್ಲಿಂದ ಈವರೆಗೂ ಪ್ರತಿಯೊಂದು ವಿಷಯ ಹಾಗೂ ಮಹತ್ವದ ಹಂತದಲ್ಲಿ ವಾಸ್ತವವಾಗಿ ಜನಮತವನ್ನೇ ಮೀರಿ ಅವರಿಗಾಗಿ ತನ್ನದೇ ಆದ ಸಂಪೂರ್ಣ ಭಿನ್ನವಾದ ಪ್ರಪ್ತಾಪಗಲನ್ನು ಮುಂದಿಟ್ಟಂತೆ ನಮಗೆ ಕಂಡು ಬರುತ್ತದೆ".

1892 ರ ಇಂಡಿಯನ್ ಕೌನ್ಸಿಲ್ ಕಾಯಿದೆಗೆ ಸಂಬಂಧಿಸಿದಂತೆ ಹಿಂದೆ ಲಾರ್ಡ್ ಡಫೆರಿನ್ ಮಾಡಿದ ಹಾಗೆ, ಸಮಿತಿಯೊಂದನ್ನು ನೇಮಿಸುವ ಮೂಲಕ ಲಾರ್ಡ್ ಮಿಂಟೋ ಅಧಿಕೃತವಾಗಿ ಮೊದಲ ಹೆಜ್ಜೆಯನ್ನು ತೆಗೆದುಕೊಂಡ. 1906 ರಲ್ಲಿ ನೇಮಿಸಲಾದ ಈ ಸಮಿತಿಯಲ್ಲಿ ಮಿಂಟೋನ ಸಮಿತಿಯ ನಾಲ್ವರು ಸದಸ್ಯರು ಸೇರಿದ್ದರು. ಅವರೇ ಸರ್ .ಎ.ಟಿ. ಅರುಂಡೇಲ್, ಸರ್ ಡೆಂಜೆಲ್ ಇಬ್ಬೆಟಸನ್, ಮಿ. ಎಚ್.ಇ. ಲಿಚರ್ಡ್ ಮತ್ತು ಮಿ. ಇ.ಎಮ್. ಬೇಕರ್, ಸರ್. ಎ.ಟಿ. ಅರುಂಡೇಲ್ ಹಾಗೂ ಮಿ. ಎಚ್. ಲಿಸ್ಲಿ ಅನುಕ್ರಮವಾಗಿ ಈ ಸಮಿತಿಯ ಅಧ್ಯಕ್ಷರು ಕಾರ್ಯದರ್ಶಿಗಳೂ ಆಗಿದ್ದರು. ರಾಜಕೀಯ ಸುಧಾರಣೆಗಳಿಗೆ ಸಂಬಂಧಿಸಿದ ಸಮಗ್ರ ಪ್ರಶ್ನೆಯನ್ನು ಪರಿಶೀಲಿಸುವಂತೆ ಈ ಸಮಿತಿಯನ್ನು ಕೋರಲಾಗಿತ್ತು. ಇವರ ಮಾರ್ಗದರ್ಶನಕ್ಕಾಗಿ ಮಿಂಟೋ ಸಂಕ್ಷಿಪ್ತ ವರದಿಯೊಂದನ್ನು ಬರೆದಿದ್ದ. ಈ ವರದಿಯಲ್ಲಿ ಅವನು ಪ್ರಾರಂಭದ ಹೆಜ್ಜೆಯನ್ನು ತೆಗೆದುಕೊಳ್ಳಬೇಕಾದ ಅತ್ಯಗತ್ಯದ ಬಗ್ಗೆ ಹೀಗೆ ಒತ್ತಿ ಹೇಳಿದ್ದ "ಈ ದೇಶದಲ್ಲಿ ನಡೆಯುತ್ತಿರುವ ಚಳುವಳಿಯಿಂದಾಗಲಿ, ಅಥವಾ ಬ್ರಿಟನ್ನಿನ ಒತ್ತಡದಿಂದಾಗಲಿ ಭಾರತ ಸರ್ಕಾರ ಬಲವಂತಕ್ಕೊಳಗಾಗಿದೆಯೆಂದು ತೋರುವ ಪರಿಸ್ಥಿತಿಯಲ್ಲಿ ಇರಕೂಡದು". ಆನಂತರ ಲಾರ್ಡ್ ಮಿಂಟೋ ರಕ್ಷಣೆ ಅಗತ್ಯವಾಗಿರುವ ಸುಧಾರಣೆಗಳು ಹಾಗೂ ಮಹತ್ವದ ರಾಜಕೀಯ ಹಿತಾಸಕ್ತಿಗಳಿಗೆ ಸಂಬಂಧಿಸಿದ ವಿವಿಧ ಪ್ರಸ್ತಾವನೆಗಳತ್ತ ಗಮನ ಸೆಳೆದ. ಉದಾಹರಣೆಗೆ, ಅನುವಂಶಿಕ ಕುಲೀನತೆ ಮತ್ತು ಜಮೀನುಳ್ಳ ವರ್ಗಗಳವರು ವ್ಯಾಪಾರ ವ್ಯವಹಾರ; ಉದ್ಯೋಗಿಗಳು ಹಾಗೂ ಕೃಷಿಕ ವರ್ಗಗಳವರು; ತೋಟಗಾರರು ಮತ್ತು ಯುರೋಪಿಯನ್ ವಣಿಕ ಸಮುದಾಯ. "ಸ್ಥಿರವಾದ ಹಾಗೂ ಪರಿಣಾಮಕಾರಿಯಾದ ಆಡಳಿತವನ್ನು" ಉಳಿಸಿಕೊಂಡು ಬರುವ ಅಗತ್ಯವನ್ನು ಅವನು ಒತ್ತಿ ಹೇಳಿದ. ಸಮಿತಿಯ ಪರಿಶೀಲನೆಗಾಗಿ ಪ್ರಸ್ತಾಪಿಸಲಾದ ವಿಷಯಗಳೆಂದರೆ;

ಅ) ಕೌನ್ಸಿಲ್ ಆಫ್ ಪ್ರಿನ್ಸಸ್; ಇದು ಅಸಾಧ್ಯವಾದ ಪಕ್ಷದಲ್ಲಿ ಈ ರಾಜಕುಮಾರರಿಗೆ ವೈಸರಾಯಿ ವಿಧಾನ ಪರಿಷತ್‌ನಲ್ಲಿ ಪ್ರಾತಿನಿಧ್ಯ ನೀಡಬಹುದೆ?

ಆ) ವೈಸರಾಯಿಯ ಕಾರ್ಯಕಾರಿ ಸಮಿತಿಗೆ ಒಬ್ಬ ಭಾರತೀಯ ಸದಸ್ಯ

ಇ) ವೈಸರಾಯಿಯ ವಿಧಾನ ಪರಿಷತ್ ಹಾಗೂ ಸ್ಥಳೀಯ ಸರ್ಕಾರಗಳಲ್ಲಿ ಭಾರತೀಯರಿಗೆ ಹೆಚ್ಚಿನ ಪ್ರಾತಿನಿಧ್ಯ

ಈ) ಆಯವ್ಯಯ ಮುಂಗಡ ಪತ್ರದ ಚರ್ಚೆಯ ಅವಧಿಯನ್ನು ವಿಸ್ತರಿಸುವುದು ಮತ್ತು ಆಯವ್ಯಯ ಮುಂಗಡ ಪತ್ರವನ್ನು ಮುಂದಿಡುವ ವಿಧಾನ ಮತ್ತು

ಉ) ತಿದ್ದು ಪಡಿಗಳನ್ನು ಮುಂದಿಡುವ ಅಧಿಕಾರ

ಅರುಂಡೇಲ್ ಸಮಿತಿ 1906 ರ ಅಕ್ಟೋಬರ್‌ನಲ್ಲಿ ತನ್ನ ವರದಿಯನ್ನು ವೈಸರಾಯಿಗೆ ಸಲ್ಲಿಸಿತು. ವೈಸರಾಯ್ ಸಮಿತಿಗೆ ಭಾರತೀಯನೊಬ್ಬನನ್ನು ನೇಮಿಸುವ ಪ್ರಶ್ನೆಗೆ ಸಂಬಂಧಿಸಿದಂತೆ, ಈ ಸಮಿತಿಯ ಸದಸ್ಯರಲ್ಲಿ ಸರಿಸಮನಾದ ಭಿನ್ನಾಭಿಪ್ರಾಯವಿದ್ದುದರಿಂದ ಈ ಬಗ್ಗೆ ತನ್ನ ಸ್ವಂತ ಟಿಪ್ಪಣಿಯೊಂದನ್ನು ಸೇರಿಸಿ ಲಾರ್ಡ್ ಮಿಂಟೋ ಸಮಿತಿಯ ವರದಿಯನ್ನು ಕಾರ್ಯಕಾರಿ ಸಮಿತಿಯ ಇತರ ಸದಸ್ಯರಿಗೆ ಕಳುಹಿಸಿದ. ಕಾರ್ಯಕಾರಿ ಸಮಿತಿಯ ಅನೇಕ ಸಭೆಗಳಲ್ಲಿ ಅರುಂಡೇಲ್ ಸಮಿತಿಯ ಪ್ರಸ್ತಾಪಗಳನ್ನು ಸುದೀರ್ಘವಾಗಿಯೇ ಚರ್ಚಿಸಲಾಯಿತು. ಹತ್ತಿರ ಹತ್ತಿರ 1907 ರ ಮಾರ್ಚ್ ಕೊನೆಯವರೆಗೂ ಭಾರತ ಸರ್ಕಾರಕ್ಕೆ ತನ್ನ ಅಭಿಪ್ರಾಯಗಳನ್ನು ಸೆಕ್ರೆಟರಿ ಆಫ್ ಸ್ಟೇಟ್‌ಗೆ ಕಳುಹಿಸುವುದು ಸಾಧ್ಯವಾಗಲಿಲ್ಲ. ಆ ವೇಳೆಗೆ ಅವನು ತಡವಾಗುತ್ತಿರುವ ಬಗ್ಗೆ ತುಂಬ ಅಸಹನೆ ತಾಳಿದ್ದ. ಕೊನೆಗೂ 1907 ನೆಯ ಮಾರ್ಚ್ 27 ರಂದು ಇದಕ್ಕೆ ಸಂಬಂಧಿಸಿದಂತೆ ಲಾರ್ಡ್ ಮಿಂಟೋ ವಿಧಾನ ಪರಿಷತ್‌ನಲ್ಲಿ ಒಂದು ಘೋಷಣೆಯನ್ನು ಮಾಡಿದ.

"ಭಾರತ ಸರ್ಕಾರದ ಮಾರ್ಚ್ 1907 ರ ಕಾಗದ ಪತ್ರಗಳಿಗೆ ಸಂಬಂಧಿಸಿದಂತೆ ಕ್ಯಾಬಿನೆಟ್ ಹಾಗೂ ಕೌನ್ಸಿಲ್‌ಗಳ ಸಲಹೆ ಪಡೆಯುವಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಯಾವುದೇ ಕಾಲವಿಳಂಬ ಮಾಡಲಿಲ್ಲ. ಸ್ಥಳೀಯ ಸರ್ಕಾರಗಳೊಡನೆ ಸಮಾಲೋಚಿಸಲು ಮತ್ತು ಪ್ರಸ್ತಾಪಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯಗಳನ್ನು ಆಹ್ವಾನಿಸಲು ಅವನು ಭಾರತ ಸರ್ಕಾರಕ್ಕೆ ಅಧಿಕಾರ ನೀಡಿದ್ದನು. 1907 ನೆಯ ಆಗಸ್ಟ್ 24 ರಂದು ಭಾರತ ಸರ್ಕಾರ ಅಭಿಪ್ರಾಯ ಸಂಗ್ರಹಕ್ಕಾಗಿ ವಿವಿಧ ಸ್ಥಳೀಯ ಸರ್ಕಾರಗಳಿಗೆ ಹಾಗೂ ಆಡಳಿತ ವಿಭಾಗಗಳಿಗೆ ಸುತ್ತೋಲೆಯೊಂದನ್ನು ಹೊರಡಿಸಿತ್ತು. ಸಾರ್ವಜನಿಕ ಮಾಹಿತಿಗಾಗಿ ಮತ್ತು ಅಭಿಪ್ರಾಯಕ್ಕಾಗಿ ಈ ಸುತ್ತೋಲೆ ಪ್ರಕಟವು ಆಯಿತು.

## 82.1 ಮುಸ್ಲಿಂ ಸಮಸ್ಯೆ

ಅರುಂಡೇಲ್ ಸಮಿತಿ ತನ್ನ ವರದಿಯನ್ನು ಸಲ್ಲಿಸುವುದಕ್ಕೂ ಮೊದಲೇ ಮುಂದಿನ ಸುಧಾರಣೆಗಳ ಮೇಲೆ ಖಚಿತ ಮುದ್ರೆಯನ್ನೊತ್ತುವಂತಹ ಮುಖ್ಯ ಹೆಜ್ಜೆಯೊಂದನ್ನು ಮಿಂಟೋ ತೆಗೆದುಕೊಂಡಿದ್ದ. ಮಹಮ್ಮದೀಯರಿಗೆ ಪ್ರತ್ಯೇಕ ಚುನಾಯಿಕ ಸಮುದಾಯವನ್ನು ಕಟ್ಟಿಸಿಕೊಡುವ ಭರವಸೆಯನ್ನು ಅವನು ಮೊದಲೆ ನೀಡಿದ್ದನಲ್ಲದೆ ಇತರ ಕೆಲವು ವಿಶೇಷ ರಿಯಾಯಿತಿಗಳ ಬಗ್ಗೆ ಕೂಡ ಅಸ್ಪಷ್ಟ ಸೂಚನೆಗಳನ್ನು ನೀಡಿದ್ದ. ಭಾರತದ ಮುಂದಿನ ಇತಿಹಾಸದಲ್ಲಿ ಈ ತೀರ್ಮಾನ ವಹಿಸಿದ ಪ್ರಮುಖ ಪಾತ್ರದ ದೃಷ್ಟಿಯಿಂದ ಈ ವಿಷಯ ಕುರಿತಂತೆ ವಿವರವಾಗಿ ನಿರೂಪಿಸುವ ಅಗತ್ಯವಿದೆ.

ಹಿಂದಿನ ಸಂಪುಟದಲ್ಲಿ ಅಲಿಗದ ಚಳುವಳಿಯ ಬಗ್ಗೆ ವರದಿಯೊಂದನ್ನು ನೀಡಲಾಗಿದೆ. ಸರ್ ಸೈಯಿದ್ ಅಹ್ಮದ್ ಉದ್ಘಾಟಿಸಿದ ಈ ಚಳುವಳಿಯಿಂದಾಗಿ 19 ನೆಯ ಶತಮಾನದ ಅಂತ್ಯದ ವೇಳೆಗೆ ಭಾರತೀಯ ಮುಸ್ಲಿಮರ ಇತಿಹಾಸದಲ್ಲಿ ನವಜೀವನದ ಒಂದು ನೂತನ ಯುಗವೇ ಆರಂಭವಾಯಿತು. ರಾಜಕೀಯ ಕ್ಷೇತ್ರದಲ್ಲಿ ಮುಸ್ಲಿಮರು ಹಿಂದುಗಳಿಂದ ಕ್ರಮೇಣ ದೂರವಾಗಲು ಚಳುವಳಿ ಕಾರಣವಾಯಿತು ಎಂಬುದನ್ನೂ ಇದು ತೋರಿಸುತ್ತದೆ. ಹಿಂದೂ -ಮುಸ್ಲಿಂಮರ ನಡುವೆ ಬಿರುಕುಂಟಾಗಲು ಇಂಗ್ಲೀಷರ ಕುತಂತ್ರ ಹಾಗೂ ಬ್ರಿಟಿಷ್ ಅಧಿಕಾರಿಗಳ ಉತ್ತೇಜನವೇ ಬಹುಮಟ್ಟಿನ ಕಾರಣ. ಭಾರತ ರಾಷ್ಟ್ರೀಯ ಕಾಂಗ್ರೆಸ್ ಪ್ರಾರಂಭವಾದಂದಿನಿಂದಲೂ ಅದರ ಬಗೆಗೆ ಮುಸ್ಲಿಮರು ತೋರಿಸಿದ ಮನೋಭಾವದಲ್ಲಿ ಅವರಿಗಿದ್ದ ಹಿಂದೂ-ವಿರೋಧಿ ಭಾವನೆ ಎದ್ದು ಕಾಣುತ್ತದೆ. ಮೇಲೆ ತೋರಿಸಿದಂತೆ, ಬಂಗಾಳದ ವಿಭಜನೆ ಕೂಡ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಸೂಕ್ಷ್ಮವಾದ ಒಡಕುಂಟಾಗುವಂತೆ ಮಾಡಲು ಉದ್ದೇಶಪೂರ್ವಕವಾಗಿ ರೂಪಿಸಲಾದ ಒಂದು ಬುದ್ಧಿವಂತಿಕೆಯ ಹೆಜ್ಜೆಯಾಗಿತ್ತು.

ಸುಧಾರಣೆಗಳ ಸುದ್ದಿ ಹರಡುತ್ತಿದ್ದಂತೆ ಹಾಗೂ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಪ್ರಾತಿನಿಧ್ಯವನ್ನು ವಿಸ್ತರಿಸುವ ಪ್ರಶ್ನೆಯನ್ನು ಇತರ ವಿಷಯಗಳೊಂದಿಗೆ ಪರಿಶೀಲಿಸಲು ಸಮಿತಿಯೊಂದನ್ನು ವೈಸರಾಯ್ ನೇಮಿಸಿದ್ದು ತಿಳಿದು ಬಂದ ಕೂಡಲೇ ಸೈಯದ್ ಅಹ್ಮದ್ ಅನಂತರ ಮುಖಂಡತ್ವ ವಹಿಸಿಕೊಂಡ ನವಾಬ್ ಮೊಹಸಿನ್ ಉಲ್-ಮುಲ್ಕ್ ನಿಯೋಗವೊಂದರಲ್ಲಿ ಸಿಮ್ಲಾದಲ್ಲಿ ವೈಸರಾಯಿಯನ್ನು ಭೇಟಿ ಮಾಡಲು ನಿರ್ಧರಿಸಿದರು. ಆಗಾಖಾನ್ 36 ಮಂದಿ ಸದಸ್ಯರಿದ್ದ ಈ ನಿಯೋಗದ ಮುಖಂಡರಾಗಿದ್ದರು. 1906 ನೆಯ ಅಕ್ಟೋಬರ್ 1 ರಂದು ನಿಯೋಗಕ್ಕೆ ಲಾರ್ಡ್ ಮಿಂಟೋನ ಸಂದರ್ಶನ ಸಿಕ್ಕಿತು. ಅವನೆದುರು ನಿಯೋಗ ಮಂಡಿಸಿದ ಬೇಡಿಕೆಯಲ್ಲಿ ಮುಸ್ಲಿಂ ಸಮುದಾಯಕ್ಕಾಗಿಯೇ ಕೋರಲಾದ ವಿವಿಧ ವಿಶೇಷ ವಿನಾಯಿತಿಗಳಿದ್ದವು.

ಮೊದಲನೆಯದಾಗಿ, "ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾವುದೇ ಸ್ವರೂಪದ ಪ್ರಾತಿನಿಧ್ಯದಲ್ಲಿ ಹಾಗೂ ಮುಸ್ಲಿಂ ಸಮುದಾಯದ ಅಂತಸ್ತು ಮತ್ತು ಪ್ರಭಾವಗಳ ಮೇಲೆ ಪರಿಣಾಮ ಬೀರುವ ಇತರ ಎಲ್ಲ ವಿಧಗಳಲ್ಲಿ ಅವರಿಗೆ ನೀಡಲಾದ ಸ್ಥಾನವು ಅವರ ಸಂಖ್ಯಾಬಲಕ್ಕೆ ಅನುಸಾರವಾಗಿಯಷ್ಟೇ ಅಲ್ಲ. ಅವರ ರಾಜಕೀಯ ಮಹತ್ವ ಹಾಗೂ ಸಾಮ್ರಾಜ್ಯದ ರಕ್ಷಣೆಗಾಗಿ ಅವರು ನೀಡುತ್ತಿರುವ ಕೊಡುಗೆಯ ಮೌಲ್ಯ ಇವುಗಳಿಗೆ ತಕ್ಕಂತೆ ಕೂಡ ಇರತಕ್ಕದ್ದು", ಮತ್ತು "ಹಿಂದಿನ ಸುಮಾರು ನೂರು ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ಮುಸ್ಲಿಮರು ಭಾರತದಲ್ಲಿ ಹೊಂದಿದ್ದಂತಹ ಸ್ಥಾನವನ್ನು " ಗಣನೆಗೆ ತೆಗೆದುಕೊಳ್ಳಬೇಕು. ಎರಡನೆಯದಾಗಿ, ಇಲ್ಲಿಯವರೆವಿಗೆ ಪ್ರಚಲಿತವಾಗಿದ್ದ ನಾಮಕರಣದ ಹಾಗೂ ಚುನಾವಣೆಯ ವಿಧಾನಗಳು ಯುಕ್ತ ರೀತಿಯ ಹಾಗೂ ಸಾಕಷ್ಟು ಸಂಖ್ಯೆಯ ಪ್ರಾತಿನಿಧ್ಯವನ್ನು ಮುಸ್ಲಿಮರಿಗೆ ನೀಡುವಲ್ಲಿ ವಿಫಲವಾಗಿವೆ. ಆದ್ದರಿಂದ ಪ್ರಸ್ತಾಪಿಸಲಾದಂತಹ ಸುಧಾರಣೆಗಳಲ್ಲಿ ಪ್ರತ್ಯೇಕ ಕೋಮುವಾರು ಚುನಾಯಕ ಸಮುದಾಯದ ಮೂಲಕ ತಮ್ಮ ಸ್ವಂತ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಹಕ್ಕನ್ನು ಅವರಿಗೆ ನೀಡತಕ್ಕದ್ದು.

ಈ ಎರಡು ಪ್ರಮುಖ ಬೇಡಿಕೆಗಳನ್ನಷ್ಟೇ ಅಲ್ಲದೆ, ಸೇವಾ ಕ್ಷೇತ್ರಗಳಲ್ಲಿ ಕೂಡ ನಿಯೋಗ ಹೆಚ್ಚಿನ ಪ್ರಾತನಿಧ್ಯವನ್ನು ಕೋರಿತು. ಉದಾಹರಣೆಗೆ, ಭಾರತೀಯ ಕಾರ್ಯಕಾರಿ ಸಮಿತಿಯ ನೇಮಕವಾದ ಸಂದರ್ಭದಲ್ಲಿ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವುದು; ಮುಸ್ಲಿಂ ವಿಶ್ವವಿದ್ಯಾನಿಲಯದ ಸ್ಥಾಪನೆಯಲ್ಲಿ ನೆರವು ನೀಡುವುದು; ಉದ್ಯೋಗ ನೇಮಕಾತಿಗಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ರದ್ದುಪಡಿಸುವುದು; ಪ್ರತಿಯೊಂದು ಹೈಕೋರ್ಟ್‌ನಲ್ಲಿ ಸುಪ್ರಿಂ ಕೋರ್ಟ್‌ನಲ್ಲಿ ಮುಸ್ಲೀಂ ನ್ಯಾಯಾಧೀಶರ ನೇಮಕ. ಪುರಸಭೆಗಳಿಗೆ ಕೋಮು ಆಧಾರಿತ ಚುನಾಯಿಕ ಸಮುದಾಯ, ಹಾಗೂ ವಿಧಾನ ಪರಿಷತ್‌ಗಳ ಚುನಾವಣೆಗಾಗಿ ಮುಸ್ಲೀಂ ಎಲೆಕ್ಟೋರಲ್ ಕಾಲೇಜುಗಳು.

ಸಾಮಾನ್ಯ ಸ್ವರೂಪದ ಕೆಲವು ಪ್ರಾಥಮಿಕ ಪರಿಶೀಲನೆಗೆ ನಡೆಸಿದ ಅನಂತರ ನಿಯೋಗದ ಬೇಡಿಕೆಗಳಿಗೆ ಉತ್ತರ ರೂಪವಾಗಿ ಲಾರ್ಡ್ ಮಿಂಟೋ ಈ ಕೆಳಗಿನ ಆಶ್ವಾಸನೆ ನೀಡಿದ. "ಪ್ರತಿನಿಧ್ಯದ ಯಾವುದೇ ಪದ್ಧತಿಯನ್ನು ಪುರಸಭೆಯಲ್ಲಾಗಲಿ, ಜಿಲ್ಲಾ ಬೋರ್ಡಿನಲ್ಲಾಗಲಿ ಅಥವಾ ವಿಧಾನ ಪರಿಷತ್ತಿನಲ್ಲಾಗಲಿ ಪ್ರಾರಂಭಿಸಲು ಇಲ್ಲವೇ ಚುನಾಯಕ ಸಂಘಟನೆಯನ್ನು ಬಲಪಡಿಸಲು, ಪ್ರಸ್ತಾಪಿಸಲಾದ ಈ ಪದ್ಧತಿಯಿಂದ ಯಾವುದೇ ಪರಿಣಾಮ ಉಂಟಾಗಲಿ ಮಹಮ್ಮದೀಯ ಸಮುದಾಯವನ್ನು ಒಂದು ಸಮುದಾಯವಾಗಿಯೇ ಪ್ರತಿನಿಧಿಸತಕ್ಕದ್ದು. ಸ್ಥಾನವನ್ನು ಕೇವಲ ಸಂಖ್ಯಾತ್ಮಕ ಬಲದಿಂದಲ್ಲ, ಬದಲಾಗಿ ಅದರ ರಾಜಕೀಯ ಮಹತ್ವ ಹಾಗೂ ಸಾಮ್ರಾಜ್ಯಕ್ಕೆ ಅದು ಸಲ್ಲಿಸಿದ ಸೇವೆ, ಇವುಗಳನ್ನು ದೃಷ್ಟಿಯಲ್ಲಿರಿಸಿಕೊಂಡು ನಿರ್ಧರಿಸತಕ್ಕದ್ದು".

ಮಿಂಟೋನ ಈ ಉತ್ತರ ಭಾರತದಲ್ಲಿ ಬ್ರಿಟಿಷರ ಆಡಳಿತಕ್ಕೆ ಸಂಬಂಧಿಸಿದಂತೆ ಹೊಸ ಧೋರಣೆಯೊಂದನ್ನು ಘೋಷಿಸಿತು. ಮೊದಲನೆಯದಾಗಿ, ಹಿಂದೂಗಳು ಮತ್ತು ಮುಸ್ಲಿಮರು ವಾಸ್ತವವಾಗಿ, ವಿಭಿನ್ನ ಹಿತಾಸಕ್ತಿಗಳು ಹಾಗೂ ವಿಭಿನ್ನ ದೃಷ್ಟಿಕೋನದಿಂದ ಕೂಡಿದ ಎರಡು ಪ್ರತ್ಯೇಕ ರಾಷ್ಟ್ರಗಳನ್ನು ರಚಿಸಿದ್ದರೆಂಬ ಸಿದ್ಧಾಂತಕ್ಕೆ ಅಧಿಕೃತ ಅನುಮೋದನೆಯ ಮುದ್ರೆಯನ್ನೊತ್ತಿತ್ತು. ಎರಡನೆಯದಾಗಿ, ಭಾರತದ ಒಟ್ಟು ಜನಸಂಖ್ಯೆಯೊಂದಿಗೆ ಮುಸ್ಲಿಂ ಸಮುದಾಯ ಹೊಂದಿದ್ದ ಅನುಪಾತವನ್ನು ಮೀರಿ, ವಿಧಾನ ಪರಿಷತ್‌ನಲ್ಲಿ ಪ್ರಾತಿನಿಧ್ಯ ನೀಡುವ ಮೂಲಕ ಭಾರತ ಸರ್ಕಾರ ಕಾರ್ಯತಃ ಮುಸ್ಲಿಂರಿಗೆ ತಕ್ಕುದಲ್ಲದ ಸೌಲಭ್ಯವನ್ನು ತೋರಿಸಲು ಭರವಸೆ ನೀಡಿತು. ಇವೆರಡೂ ಅಂಶಗಳು ಮುಸ್ಲಿಂ ರಾಜಕೀಯದ ಪ್ರಮುಖ ಗುರಿಗಳಾದವು. ಸುಮಾರು ನಲವತ್ತು ವರ್ಷಗಳ ಅನಂತರ ಉದಯವಾದ ಪಾಕಿಸ್ತಾನದ ಅಸ್ತಿಭಾರವನ್ನು ಮುಸ್ಲಿಮರು ಆಗಲೇ ರೂಪಿಸಿದರು ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯೆನಿಸದು.

ಸರ್ಕಾರವೇ ಅಥವಾ ಕನಿಷ್ಠ ಪಕ್ಷ ಸರ್ಕಾರಿ ಕಛೇರಿಗಳ ಉತ್ತೇಜನದಿಂದ ಬ್ರಿಟಿಷ್ ಅಧಿಕಾರಿಗಳೇ ಈ ನಿಯೋಗದ ಸಮಗ್ರ ಏರ್ಪಾಟು ಮಾಡಿದ್ದರೆಂದು ಈಗ ಖಚಿತವಾಗಿ ತಿಳಿದು ಬಂದಿದೆ. ಮೌಲ್ವಿ ಸೈಯದ್ ತುಫೈಲ್ ಅಹ್ಮದ್ ಮಂಗಳೂರಿ ಅವರ ಸವಿವರ ಹೇಳಿಕೆಯಿಂದ ಇದು ಸಾಬೀತಾಗಿದೆ. ಅಲಿಗಡ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಮಿ. ಆರ್ಚ್ ಬೋಲ್ಡ್ ಮತ್ತು ವೈಸರಾಯ್‌ಯ ಆಪ್ತ ಕಾರ್ಯದರ್ಶಿಯಾಗಿದ್ದ ಡನ್‌ಲಪ್‌ಸ್ಮಿತ್ ಇವರ ನಡುವೆ ಸಿಮ್ಲಾದಲ್ಲಿ ನಡೆದ ಮಾತುಕತೆಗಳಲ್ಲಿ ಈ ವಿಚಾರ ಇತ್ಯರ್ಥಕ್ಕೆ ಬಂತೆಂಬುದನ್ನು ಸದರಿ ಹೇಳಿಕೆ ತೋರಿಸುತ್ತದೆ.

ಈ ಘಟನೆ ನಡೆದ ಬಹು ಕಾಲದ ಅನಂತರ ಆಗ ಗಾಂದೀಜಿಯವರ ನಿಷ್ಠ ಅನುಯಾಯಿಯಾಗಿದ್ದ ಮಹಮ್ಮದ್ ಅಲಿ ಅವರು ಗುಟ್ಟನ್ನು ರಟ್ಟು ಮಾಡಿ ಇಡೀ ನಿಯೋಗವೇ "ಹುಕುಂ ಮಾಡಿ ನಡೆಸಲಾದ ಒಂದು ನಾಟಕ" ವಾಗಿತ್ತೆಂದು ಪ್ರಕಟಪಡಿಸಿದರೆಂಬುದನ್ನು ಇಲ್ಲಿ ಸೇರಿಸಬಹುದು. ಲೇಡಿ ಮಿಂಟೋ ಕೂಡ ತಮ್ಮ ದಿನಚರಿಯಲ್ಲಿ ವಾಸ್ತವವಾಗಿ ಮಹಮ್ಮದೀಯರ ನಿಯೋಗಕ್ಕೆ ಸಂಬಂಧಿಸಿದಂತೆ ಬರೆಯವಾಗ "ವ್ಯವಸ್ಥಿತಗೊಳಿಸಲಾದದ್ದು" ಎಂಬ ಶಬ್ದವನ್ನೇ ಬಳಸಿದ್ದಾರೆ. ನಿಯೋಗದ ಏರ್ಪಾಟು ಮಾಡಿದವರು ಕೆಲವು ಅಧಿಕಾರಿಗಳು ಹಾಗೂ ಹಿಂದೂಗಳು ಮತ್ತು ಮುಸ್ಲಿಮರ ನಡುವಣ ಮುಂದಿನ ಸಂಬಂಧಗಳ ಮೇಲೆ ಈ ಕ್ರಮ ಎಂತಹ ಅನಿವಾರ್ಯ ಪರಿಣಾಮ ಬೀರಬಹುದು ಎಂಬ ಸ್ಪಷ್ಟ ತಿಳುವಳಿಕೆ ಅವರಿಗಿತ್ತು ಎಂಬ ವಾಸ್ತವಾಂಶ. ಮಿಂಟೋ ಅವರ 1906 ನೆಯ ಅಕ್ಟೋಬರ್ 1 ರ ದಿನಚರಿಯಲ್ಲಿನ ಈ ಕೆಳಗೆ ಕಾಣಿಸಿದ ಭಾಗದಿಂದ ತಿಳಿದು ಬರುತ್ತದೆ. "ಈ ಸಂಜೆ ಅಧಿಕಾರಿಯೊಬ್ಬರಿಂದ ನನಗೆ ಈ ಕೆಳಗಿನ ಪತ್ರ ಬಂತು. "ಇದು ತುಂಬಾ ತುಂಬಾ ದೊಡ್ಡದಾದ ಘಟನೆಯೆಂದು ನಡೆದ ಬಗ್ಗೆ ನಾಮ ಘನತೆವೆತ್ತ ತಮಗೆ ಒಂದು ಮಾತು ತಿಳಿಸಲೇ ಬೇಕಾಗಿದೆ. ಸುದೀರ್ಘ ಕಾಲ ಭಾರತ ಹಾಗೂ ಭಾರತೀಯ ಇತಿಹಾಸದ ಮೇಲೆ ಪರಿಣಾಮ ಬೀರುವಂತಹ ಒಂದು ರಾಯಭಾರಿ ಕಾರ್ಯ ನಡೆದಿದೆ. ಸರ್ಕಾರದ ವಿರುದ್ಧ ಒಳಸಂಚು ನಡೆಸುವ ಸಮೂಹವನ್ನು ಸೇರಿದಂತೆ 62 ಮಿಲಿಯ ಜನರನ್ನು ತಡೆಯುವ ಕೆಲಸಕ್ಕಿಂತ ಇದೇನೂ ಕಡಿಮೆ ಇಲ್ಲ". ಮಿಂಟೋನ ಜೇಮ್ಸ್ ಚರಿತ್ರೆಯನ್ನು ಬರೆದ ಬುಖನ್ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ಸಾಕಷ್ಟು ಅರ್ಥಗರ್ಭಿತವಾದ ರೀತಿಯಲ್ಲಿಯೇ ಬುಖನ್ ಹೀಗೆಂದಿದ್ದಾನೆ. ಮುಸ್ಲೀಂ ನಿಯೋಗಕ್ಕೆ ಮಿಂಟೋ

ನೀಡಿದ ಉತ್ತರ "ನಿಸ್ಸಂಶಯವಾಗಿಯೂ ಮುಸ್ಲಿಂ ಸಿಪಾಯಿಗಳ ಸೇರ್ಪಡೆಯಿಂದ ಬಲಗೊಂಡ ಸೈನ್ಯವನ್ನು ತಡೆಯಿತು; ತೊಂದರೆಗಳು ಪ್ರಾರಂಭವಾಗುವ ಆ ದಿನಗಳಲ್ಲಿ ಇದು ನಿಜವಾಗಿಯೂ ಲಾಭಕರವಾದ ಸಂಗತಿಯಾಗಿತ್ತು". ಲೇಡಿ ಮಿಂಟೋ ಅಭಿಪ್ರಾಯವೂ ಇದೇ ಈಗಿತ್ತು. ಅವರು ಹೇಳಿದಂತೆ "ಇದು ವಿಶೇಷ ಘಟನೆಗಳ ಒಂದು ಮಹಾದಿನ ಭಾರತೀಯ ಇತಿಹಾಸದಲ್ಲಿಯೇ ಒಂದು ನವಯುಗಾರಂಭ".

ಬಹಳ ಹಿಂದೆಯೇ ಬ್ರಿಟನ್ನಿನ ಭಾವೀ ಪ್ರಧಾನಮಂತ್ರಿ ರ್‍ಯಾಮ್‌ಸೀ ಮ್ಯಾಕ್ ಡೊನಾಲ್ಡ್ "ಕುಟಿಲ ಪ್ರಭಾವಗಳು ಕಾರ್ಯಶೀಲವಾಗಿವೆ, ಕೆಲವು ಆಂಗ್ಲೋ-ಇಂಡಿಯನ್ ಅಧಿಕಾರಿಗಳಿಂದ ಮಹಮ್ಮದೀಯ ಮುಖಂಡರು ಸ್ಫೂರ್ತಿ ಪಡೆದಿದ್ದಾರೆ. ಈ ಅಧಿಕಾರಿಗಳು ಸಿಮ್ಲಾದಲ್ಲಿ ಹಾಗೂ ಲಂಡನ್ನಿನಲ್ಲಿ ಹಿಂದೆ ನಿಂತು ಸೂತ್ರದ ಗೊಂಬೆಯಾಟವಾಡುತ್ತಿದ್ದಾರೆ. ಇವರು ಮುಸ್ಲಿಮರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿ ಕೊಡುವ ನಟನೆ ಹೂಡಿ, ಹಿಂದೂ ಹಾಗೂ ಮಹಮ್ಮದೀಯ ಸಮುದಾಯಗಳ ನಡುವೆ ದ್ವೇಷದ ಬೀಜ ಬಿತ್ತುತ್ತಿದ್ದಾರೆ" ಎಂಬ ಅನುಮಾನಕ್ಕೆ ತಮ್ಮ ಬೆಂಬಲ ನೀಡಿದ್ದಾರೆ.

ಅನೇಕ ಇತಿಹಾಸಕಾರರು ಈ ಮಹಾಕುಟಿರ ಘಟನೆಯ ಬಗ್ಗೆ ಯಾವ ಅಪನಂಬಿಕೆಗೂ ಎಡೆಯಿಲ್ಲದಂತಹ ಅಭಿಪ್ರಾಯ ವ್ಯಕ್ತಪಡಿಸದೆ ಹೋಗಿದ್ದ ಪಕ್ಷದಲ್ಲಿ ಇದರ ದುಷ್ಪರಿಣಾಮಗಳನ್ನು ಕುರಿತಂತೆ ಮನದಟ್ಟಾಗುವ ರೀತಿಯಲ್ಲಿ ಸಮರ್ಥಿಸುವುದು ಸಾಧ್ಯವಾಗುತ್ತಿರಲಿಲ್ಲ. ಬ್ರಿಟಿಷರ ವಿರುದ್ಧವಾಗಿ ಹಿಂದೂಗಳು ನಡೆಸುತ್ತಿರುವ ರಾಜಕೀಯ ಹೋರಾಟದಲ್ಲಿ ಸೇರದಂತೆ ಮುಸ್ಲಿಮರನ್ನು ತಡೆಯಲು ಸರ್ಕಾರ ಎಷ್ಟೊಂದು ಕಾತುರವಾಗಿತ್ತೆಂಬುದನ್ನು ಈ ಒಂದೇ ಘಟನೆ ತೋರಿಸುತ್ತದೆ. ಮುಸ್ಲಿಂ ನಿಯೋಗದ ರಚನೆಗೆ ತಾನೇ ಕಾರಣರಾಗಿರಲು, ಅಥವಾ ತನ್ನ ಅಧಿಕಾರಿಗಳಿಂದ ಇಲ್ಲವೇ ಇತರ ಅಧಿಕಾರೇತರ ಬ್ರಿಟಿಷರಿಂದ ಅದು ರೂಪಿತವಾಗಿರವಿ, ಆ ನಿಯೋಗಕ್ಕೆ ಲಾಡ್ ಮಿಂಟೋ ನೀಡಿದ ಸ್ವಾಗತವು ಕಾಂಗ್ರೆಸ್ ಪ್ರಭಾವಕ್ಕೆ ಸರಿತೂಗಬಲ್ಲ ಒಂದು ಕಾರ್ಯವಾಗಿತ್ತು ಎಂಬ ತೀರ್ಮಾನಕ್ಕೆ ಬರಲು ಯಾವ ಕಲ್ಪನಾ ಚಾತುರ್ಯವೂ ಬೇಕಾಗಿಲ್ಲ. ಹೀಗೆ ಭಾರತಕ್ಕೆ ಬಂದಂದಿನಿಂದ ತನ್ನ ಮನಸ್ಸನ್ನು ಚಿಂತೆಗೀಡುಮಾಡಿದ್ದ ಕಾಂಗ್ರೆಸ್ಸಿನ ಮಹತ್ವವನ್ನು ಕಡಿಮೆ ಮಾಡುವ ಕ್ಲೇಶಕರ ಸಮಸ್ಯೆಗೆ ಪರಿಹಾರವೊಂದನ್ನು ಮಿಂಟೋ ಕೊನೆಗೂ ಕಂಡುಕೊಂಡ.

## 82.2 ಸುಧಾರಣಾ ಪ್ರಸ್ತಾಪಗಳ ಕರಡು ಪ್ರತಿ

ಮುಂದಿನ ಇಡೀ ಎರಡು ವರ್ಷ (ಎಂದರೆ 1907 ಮತ್ತು 1908) ಪ್ರಮುಖ ಗುರಿಗಳನ್ನು ರೂಪಿಸಿದ್ದ ಸಿದ್ಧಾಂತಗಳಿಗೆ ಎಂದರೆ ಮುಸ್ಲಿಮರಿಗೆ ಪ್ರಾಮುಖ್ಯ ಹಾಗೂ ಕೋಮು ಆಧಾರಿತ ಪ್ರಾತಿನಿಧ್ಯ ಇವುಗಳಿಗೆ ಸಂಬಂಧಿಸಿದಂತೆ ತೀಕ್ಷ್ಣ ಚರ್ಚೆಗಳು ಮುಸ್ಲಿಂ ರಾಜಕೀಯ ವೇದಿಕೆಯಲ್ಲಿ ನಡೆದವು. ಈ ವಾದವಿವಾದ ಮತ್ತು ಚರ್ಚೆಗಳ ನಡುವೆಯೇ ಭಾರತ ಸರ್ಕಾರ ತಾನು ಭರವಸೆ ನೀಡಿದ್ದ ಸುಧಾರಣೆಗಳ ಕರಡು ಪ್ರತಿ ಸಿದ್ಧಪಡಿಸುವಲ್ಲಿ ತನ್ನದೇ ಆದ ಮಾರ್ಗವನ್ನು ಅನುಸರಿಸಿತು. 1907 ನೆಯ ಆಗಸ್ಟ್ 24 ರಂದು ತನ್ನ ಪ್ರಸ್ತಾಪಗಳನ್ನು ಪ್ರಾಂತೀಯ ಸರ್ಕಾರಗಳಿಗೆ ಕಳುಹಿಸಿತು. 1908 ನೆಯ ಅಕ್ಟೋಬರ್ 1 ರಂದು ಸೆಕ್ರೆಟರಿ ಆಫ್ ಸ್ಟೇಟ್‌ಗೆ ಕಳುಹಿಸಲಾದ ಸುಧಾರಣಾ ಪ್ರಸ್ತಾಪಗಳನ್ನು ಕುರಿತ ಸುದೀರ್ಘ ಪತ್ರದಲ್ಲಿ ಭಾರತ ಸರ್ಕಾರ ಮತ್ತು ಎಲ್ಲ ಸ್ಥಳೀಯ ಸರ್ಕಾರಗಳೂ ಮುಸ್ಲಿಮರಿಗೆ ವಿಶೇಷ ಪ್ರಾತಿನಿಧ್ಯ ನೀಡಲು ಒಪ್ಪಿವೆಯೆಂದೂ, ಆದರೆ ಪ್ರತ್ಯೇಕ ಮುಸ್ಲಿಂ ಚುನಾಯಿಕ ಸಮುದಾಯವನ್ನು ಸಂಘಟಿಸುವ ಸಲಹೆಯ ಔಚಿತ್ಯಕ್ಕೆ ಸಂಬಂಧಿಸಿದಂತೆ ಅವುಗಳು ಕೆಲವು ಸಂದೇಹದಿಂದ ಕೂಡಿವೆಯೆಂಬುದನ್ನು ಗಮನಿಸುವಲ್ಲಿ ಸೋತಿವೆಯೆಂದೂ ಉಲ್ಲೇಖಿಸಿತು. ಅಲ್ಲದೆ ಮುಂದೆ ಹೀಗೆ ಸೇರಿಸಿತು. "ಹಿಂದೂಗಳ ನಿಯಮದಂತೆ ಈ ಪ್ರಸ್ತಾಪಗಳ ವಿರುದ್ಧವಾಗಿ ಟೀಕೆ ಮಾಡಿದ್ದಾರೆ. ಅವರ ಅಭಿಪ್ರಾಯದಲ್ಲಿ ಈ ಸುಧಾರಣೆಗಳು ಒಂದು ಧರ್ಮದವರಿಗೆ ಇನ್ನೊಂದು ಧರ್ಮದವರೊಡನೆ ದ್ವೇಷ ಮೂಡುವಂತೆ ಮಾಡುವ ಒಂದು ಪ್ರಯತ್ನವಾಗಿದೆ. ಸುಶಿಕ್ಷಿತ ಮಧ್ಯಮ ವರ್ಗದವರ ಪ್ರಭಾವಕ್ಕೆ ಸರಿದೂಗವ ಇನ್ನೊಂದು ಪ್ರತಿ ಪ್ರಭಾವವನ್ನು ಈ ಸುಧಾರಣೆಗಳು ಮುಂಟುಮಾಡುತ್ತವೆ. ಭಾರತೀಯ ಮುಸ್ಲಿಮರು ಕೇವಲ ಒಂದು ಧಾರ್ಮಿಕ ಜನಾಂಗವಷ್ಟೇ ಅಲ್ಲ. ವಾಸ್ತವವಾಗಿ ಅವರದು ಸ್ಪಷ್ಟವಾಗಿ ಹಿಂದುಗಳಿಗಿಂತ ವಿಭಿನ್ನವೆನಿಸಿದ ಪ್ರತ್ಯೇಕ ಸಮುದಾಯವಾಗಿದೆ. ವಿವಾಹ, ಆಹಾರಭ್ಯಾಸ, ಸಂಪ್ರದಾಯ ಮುಂತಾದ ಅನೇಕ ವಿಷಯಗಳಲ್ಲಿ ಮುಸ್ಲಿಮರು ಹಿಂದುಗಳಿಗಿಂತ ಭಿನ್ನರೆನಿಸಿದ್ದಾರೆ". ಇತರ ಸಮುದಾಯುಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಭಾರತೀಯ ವಿಧಾನ ಪರಿಷತ್ತಿನ ಸಂದರ್ಭದಲ್ಲಿ ಪ್ರಾಂತೀಯ ವಿಧಾನ ಪರಿಷತ್ತಿನ ಅಧಿಕಾರೇತರ ಸದಸ್ಯರ ಮೂಲಕ ಹಾಗೂ ಪ್ರಾಂತೀಯ ಪರಿಷತ್‌ಗಳ ಸಂದರ್ಭದಲ್ಲಿ ಪುರಸಭೆ ಮತ್ತು ಜಿಲ್ಲಾ ಬೋರ್ಡ್ ಸದಸ್ಯರ ಮೂಲಕ, ಪರೋಕ್ಷವಾಗಿ ಪ್ರತಿನಿಧಿಸಬೇಕಾಗುತ್ತದೆಂಬ ಪ್ರಸ್ತಾಪವನ್ನು ಭಾರತ ಸರ್ಕಾರ ಮುಂದಿರಿಸಿತು.

ಭಾರತ ಸರ್ಕಾರ ಸಲ್ಲಿಸಿದ ಈ ಯೋಜನೆ ಮಾರ್ಲೆಯ ಮೇಲೆ ಹೆಚ್ಚಿನ ಪ್ರಭಾವವನ್ನೇನೂ ಬೀರಲಿಲ್ಲ. ಭಾರತ ಸರ್ಕಾರದ ಸುಧಾರಣಾ ಪ್ರಸ್ತಾಪಗಳಿಗೆ ಸಂಬಂಧಿಸಿದಂತೆ, 1908 ರ ನವೆಂಬರ್ 27 ರಂದು ಬರೆದ ತನ್ನ ಪತ್ರದಲ್ಲಿ ಪ್ರತ್ಯೇಕ ಚುನಾಯಿಕ ಸಮುದಾಯಗಳ ಯೋಜನೆಗೆ ಹಾಗೂ ಭಾರತ ಸರ್ಕಾರದ ಇತರ ಪ್ರಸ್ತಾಪಗಳಿಗೆ ಅವನು ಅನುಮೋದನೆ ನೀಡಲಿಲ್ಲ. ಇಂತಹ ಪ್ರತ್ಯೇಕ ಚುನಾಯಿಕ ಸಮುದಾಯಗಳಿಂದ ಹಿಂದೂಗಳು ಮತ್ತು ಮುಸ್ಲಿಮರ ನಡುವಿನ ಅಂತರ ಹೆಚ್ಚುತ್ತದೆ ಹಾಗೂ ರಾಷ್ಟ್ರೀಯ ಸ್ಫೂರ್ತಿಯ ಬೆಳವಣಿಗೆಗೆ ತಡೆಯುಂಟಾಗುತ್ತದೆ ಎಂದು ಭಾರತದ ರಾಷ್ಟ್ರೀಯವಾದಿಗಳ ವಿರೋಧಗಳಷ್ಟೇ ಅಲ್ಲದೆ, ಇನ್ನಿತರ ಎರಡು ಆಕ್ಷೇಪಗಳನ್ನು ಸೆಕ್ರೆಟರಿ ಆಫ್ ಸ್ಟೇಟ್ ಉಲ್ಲೇಖಿಸಿದ್ದ. ಭಾರತ ಸರ್ಕಾರದ ಪ್ರಸ್ತಾಪಗಳು ಮುಸ್ಲಿಮರು ಹಾಗೂ ಹಿಂದೂಗಳ ನಡುವೆ ಮಾತ್ಸರ್ಯ ಬೆಳೆಯುವಂತೆ ಮಾಡುತ್ತವೆ ಎಂಬುದು ಮೊದಲ ಆಕ್ಷೇಪವಾದರೆ. ಈ ಸುಧಾರಣೆಗಳಿಂದಾಗಿ ಹಲವು ಸಂದರ್ಭಗಳಲ್ಲಿ ಮುಸ್ಲಿಮರಿಗೆ ಒಂದರ ಬದಲಿಗೆ ಎರಡು ಮತಗಳನ್ನು ಹಾಕುವ ಅವಕಾಶ ಸಿಗುತ್ತದೆ ಎಂಬುದು ಎರಡನೆಯ ಆಕ್ಷೇಪ. ಈ ಲೋಪ ದೋಷಗಳನ್ನು ಪರಿಹರಿಸಲು ಲಾರ್ಡ್ ಮಿಂಟೋ ನೀಡಿದ ಸಲಹೆಯೆಂದರೆ "ಮೀಸಲು ಮತಗಳ ಪದ್ಧತಿಯನ್ನು ಈ ಕೆಳಗಿನಂತೆ ಕಾರ್ಯ ರೂಪಕ್ಕೆ ತರಬಹುದೆಂದು ಭಾರತ ಸರ್ಕಾರದ ಪರಿಶೀಲನೆಗಾಗಿ ಸೂಚಿಸುತ್ತಿದ್ದೇನೆ. ಪ್ರತಿಯೊಂದು ಚುನಾಯಿತ ಕ್ಷೇತ್ರದಲ್ಲಿಯೂ ಎಲೆಕ್ಟೋರಲ್ ಕಾಲೇಜನ್ನು ಸ್ಥಾಪಿಸಬೇಕು. ಇದರ ಸದಸ್ಯರು ಕೋಮು ಪ್ರಮಾಣಾನುಸಾರವಾಗಿ ಸ್ವತಃ ತಮ್ಮಿಂದಲೇ ಚುನಾಯಿತರಾಗಬೇಕು. (ಎಂದರೆ ಸಂಬಂಧಪಟ್ಟ ಮತದಾನ ಕ್ಷೇತ್ರದಲ್ಲಿ ಇರುವ ಹಿಂದುಗಳು ಮತ್ತು ಮಹಮ್ಮದೀಯರ ಸಂಖ್ಯಾ ಬಲಕ್ಕೆ ಅನುಗುಣವಾಗಿ ಅವರ ಒಂದು ನಿಗದಿತ ಸಂಖ್ಯೆ). ಇವರನ್ನು ಚುನಾಯಿಸುವ ಜಂಟಿ ಚುನಾಯಿಕ ಸಮುದಾಯದಲ್ಲಿ ಈ ಕೆಳಗಿನವರು ಸೇರಿರಬೇಕು. ನಿರ್ದಿಷ್ಟ ಮೊತ್ತದ ಭೂಕಂದಾಯವನ್ನು ಪಾವತಿ ಮಾಡುವ ಬಹುಮಟ್ಟಿನ ಭೂಮಾಲೀಕರು, ಗ್ರಾಮೀಣ ಅಥವಾ ಉಪ-ವಿಭಾಗೀಯ ಸಮಿತಿಗಳ ಸದಸ್ಯರು: ಜಿಲ್ಲಾ ಬೋರ್ಡ್‌ಗಳ ಸದಸ್ಯರು ಹಾಗು ಮುನಿಸಿಪಲ್ ಕಾರ್ಪೋರೇಷನ್‌ಗಳ ಸದಸ್ಯರು ಈ ಎಲೆಕ್ಟೋರಲ್ ಕಾಲೇಜುಗಳು ಪ್ರಾಂತೀಯ ಸಮಿತಿಗಳಿಗೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುತ್ತವೆ. ಯಾವುದೇ ಅಭ್ಯರ್ಥಿಗೆ ಮತ ನೀಡುವ ಸ್ವಾತಂತ್ರ್ಯ ಸದಸ್ಯರಿಗಿರುತ್ತದೆ. ಆದರೆ ಈ ಸ್ಥಾನಗಳನ್ನು ಕೋಮು ಆಧಾರದ ಮೇಲೆ ಮೊದಲೇ ನಿಗದಿಪಡಿಸಲಾಗಿರುತ್ತದೆ". ಆದಾಗ್ಯೂ ಮಹಮ್ಮದೀಯ ಸಮುದಾಯದವರು ಈ ಪ್ರಸ್ತಾಪಕ್ಕೆ ತಮ್ಮ ತೀವ್ರ ವಿರೋಧವನ್ನು ಸೂಚಿಸಿದರು. 1909 ನೆಯ ಜನವರಿ 27 ರಂದು ಈ ಪ್ರಸ್ತಾಪದ ವಿರುದ್ಧ ಪ್ರತಿಭಟಿಸಲು ಅಖಿಲ ಭಾರತ ಮುಸ್ಲೀಂ ಲೀಗಿನ ನಿಯೋಗವೊಂದು ಸೆಕ್ರೆಟರಿ ಆಫ್ ಸ್ಟೇಟ್‌ನ್ನು ಭೇಟಿ ಮಾಡಿತು. ಅಮೀರ್ ಅಲಿ (ಅನಂತರ ರೈಟ್ ಅನರಬಲ್ ಸರ್ ಅಮೀರ್ ಅಲಿ) ಈ ನಿಯೋಗದ ಮುಖಂಡರಾಗಿದ್ದರು.

ಮಾರ್ಲೆಯು ಉತ್ತರದಿಂದ ಮುಸ್ಲಿಂ ಲೀಗ್‌ಗೆ ಸಮಾಧಾನವುಂಟಾಗಲಿಲ್ಲ. ಮುಸ್ಲಿಮರು ಇವೇ ಬೇಡಿಕೆಗಳೊಂದಿಗೆ ಮಿಂಟೋನನ್ನು ಸಂದರ್ಶಿಸಿದರು. ಇದರಿಂದ ಅವರು ಅಪೇಕ್ಷಿಸಿದ ಫಲಿತಾಂಶ ದೊರೆಯಿತು. ಭಾರತ ಸರ್ಕಾರ ಮಾರ್ಲೆಯ ಯೋಜನೆಯನ್ನು ಒಪ್ಪಲಿಲ್ಲ. ಕೋಮು ಪ್ರಾತಿನಿಧ್ಯವನ್ನು ನೀಡುವ ವಿಚಾರದಲ್ಲಿ ಅದರ ಅದರ ತೀರ್ಮಾನ ದೃಢವಾಯಿತು. ಮಾನಸಿಕ ಯಾತನೆಯಲ್ಲಿ ಮಾರ್ಲೆ 1909 ನೆಯ ಡಿಸೆಂಬರ್ 6 ರಂದು ಮಿಂಟೋಗೆ ಹೀಗೆ ಪತ್ರ ಬರೆದ. "ಮಹಮ್ಮದೀಯರಿಗೆ ಸಂಬಂಧಿಸಿದ ಈ ವಿವಾದದಲ್ಲಿ ನಾನು ನಿಮ್ಮನ್ನು ಮತ್ತೆ ಹಿಂಬಾಲಿಸುವುದಿಲ್ಲ. ಸಂಪೂರ್ಣ ಗೌರವದೊಡನೆ ನಾನು ಇನ್ನೊಮ್ಮೆ ನಿಮ್ಮ ನೆನಪಿಗೆ ತರಲು ಬಯಸುವುದಿಷ್ಟೆ. ಮುಸ್ಲಿಮರು ಪ್ರತ್ಯೇಕ ಬೇಡಿಕೆಗಳನ್ನು ಮುಂದಿಡುವಂತೆ ಮಾಡಿದ್ದು ನಿಮ್ಮ ಮೊದಲ ಉಪನ್ಯಾಸವೇ ನನ್ನ ನಿರ್ಧಾರ ಉತ್ತಮವಾಗಿದೆ ಎಂದು ನನಗೆ ಮನದಟ್ಟಾಗಿದೆ". ಆದರೆ, ಅವಿಧೇಯ ಸೆಕ್ರೆಟರಿ ಆಫ್ ಸ್ಟೇಟ್‌ನ ಕೈಕಟ್ಟುವುದು ಹೇಗೆಂದು ಭಾರತ ಸರ್ಕಾರಕ್ಕೆ ತಿಳಿದಿತ್ತು. ಕೊನೆಗೂ ಸೆಕ್ರೆಟರಿ ಆಫ್ ಸ್ಟೇಟ್ ಸೋಲನ್ನು ಒಪ್ಪಿಕೊಂಡ. ಅದರಂತೆ ಪ್ರತ್ಯೇಕ ಚುನಾಯಿಕ ಸಮುದಾಯದ ಅವಕಾಶದ ಬಗ್ಗೆ ಕಾಯಿದೆಯಲ್ಲಿ ಯಾವುದೇ ಉಲ್ಲೇಖವಿಲ್ಲದಿದ್ದರೂ, ಅದರಡಿಯಲ್ಲಿ ಭಾರತ ಸರ್ಕಾರ ರೂಪಿಸಿದ ನಿಯಮಗಳಿಂದಾಗಿ ಮಹಮ್ಮದೀಯರಿಗಾಗಿ ಪ್ರತ್ಯೇಕ ಚುನಾಯಿಕ ಸಮುದಾಯಗಳು ಸೃಷ್ಟಿಯಾದವು. ಅಷ್ಟೇ ಅಲ್ಲ, ಅವರಿಗೆ ಸಾಮಾನ್ಯ ಚುನಾಯಿಕ ಸಮುದಾಯದಲ್ಲಿ ಮತದಾನ ಮಾಡುವ ಹಕ್ಕೂ ಸಿಕ್ಕಿತು. ತಮ್ಮ ಸಂಖ್ಯಾ ಬಲಕ್ಕೂ ತುಂಬ ಹೆಚ್ಚಾದ ಪ್ರಾತಿನಿಧ್ಯ ಕೂಡ ಸಮಿತಿಗಳಲ್ಲಿ ಮುಸ್ಲಿಮರಿಗೆ ದೊರಕಿತು.

ಪ್ರತ್ಯೇಕ ಚುನಾಯಿಕ ಸಮುದಾಯಗಳಿಗಾಗಿ ಮುಸ್ಲೀಂ ಲೀಗ್ ಒತ್ತಾಯಿಸುತ್ತಿದ್ದಾಗ ಹಿಂದೂಗಳು ಇದನ್ನು ಬಲವಾಗಿ ವಿರೋಧಿಸುತ್ತಿದ್ದರು. ಕೆಲವು ಮುಸ್ಲಿಮರೂ ಈ ಹಿಂದೂಗಳನ್ನು ಸೇರಿದರು. ಒಂದು ರಾಷ್ಟ್ರವನ್ನು ನಿರ್ಮಿಸುವ ಉದ್ದೇಶದಿಂದ ಒಟ್ಟು ಸೇರದಂತೆ ಹಿಂದೂಗಳನ್ನು ಹಾಗೂ ಮುಸ್ಲಿಮರನ್ನು ತಡೆಯಲು ಅಧಿಕಾರಶಾಹಿಗಳು ಯೋಜಿಸಿದ ಒಂದು ಕುಶಲ ಕಾರ್ಯವೇ ಈ

ಪ್ರತ್ಯೇಕ ಚುನಾಯಿಕ ಸಮುದಾಯ ಎಂಬುದು ಈ ವಿರೋಧಿಗಳ ವಾದವಾಗಿತ್ತು. "ಭಾರತಕ್ಕೆ ಸರಿಹೊಂದದ ಮೇಲಂಗಿಯನ್ನು ತಯಾರಿಸುವ" ಪ್ರಯತ್ನಕ್ಕಾಗಿ ತನ್ನ ಸಹ - ಧಾರ್ಮಿಕರನ್ನು ಮುಸ್ಲಿಮನೊಬ್ಬ ಸಾರ್ವಜನಿಕವಾಗಿಯೇ ಟೀಕಿಸಿದ.

## 82.3 ಸುಧಾರಣೆಯ ಪ್ರಮುಖ ಲಕ್ಷಣಗಳು

ಮೇಲೆ ಹೇಳಿದಂತೆ, ಸುಧಾರಣಾ ಪ್ರಸ್ತಾಪಗಳ ಕರಡು ಪ್ರತಿಯನ್ನು ಸಿದ್ಧಪಡಿಸಲು ಮಿಂಟೋ ಸಮಿತಿಯೊಂದನ್ನು ನೇಮಿಸಿದ. ಈ ಪ್ರಾಸ್ತಪಗಳನ್ನು ಕುರಿತಂತೆ ವಿವಿಧ ಸಂಘ ಸಂಸ್ಥೆಗಳಲ್ಲಿ ಕೂಲಂಕುಷ ಚರ್ಚೆಗಳು ನಡೆದವು. ಅಂತಿಮ ಸ್ವರೂಪ ತಾಳಿದ ಪ್ರಸ್ತಾಪಗಳನ್ನು 1908 ನೆಯ ಅಕ್ಟೋಬರ್ 1 ರಂದು ಸೆಕ್ರೆಟರಿ ಆಫ್ ಸ್ಟೇಟ್‌ಗೆ ಕಳುಹಿಸಲಾಯಿತು. 1908 ರ ಏಪ್ರಿಲ್‌ನಲ್ಲಿ 'ವಯರೇಜ್' ಪದವಿಗೇರಿದ ಮಾರ್ಲೆ 1909 ನೆಯ ಫೆಬ್ರವರಿ 23 ರುದ ಹೌಸ್ ಆಫ್ ಲಾರ್ಡ್‌ನಲ್ಲಿ ಚಿಕ್ಕ ಮಸೂದೆಯೊಂದನ್ನು ಮಂಡಿಸಿದ.

ಒಂದು ಪ್ರಮುಖ ಅಂಶವನ್ನು ಹೊರತು ಪಡಿಸಿದಂತೆ, ಭಾರತ ಸರ್ಕಾರ ಸಿದ್ಧಪಡಿಸಿದ ಪ್ರಸ್ತಾಪಗಳನ್ನು ಈ ಮಸೂದೆ ಆಧರಿಸಿತ್ತು. ಕೇಂದ್ರಕ್ಕಾಗಿ ಮತ್ತು ಅಂತೆಯೇ ಪ್ರಾಂತಗಳಿಗಾಗಿ ಕೂಡ ಸಲಹಾ ಸಮಿತಿಗಳನ್ನು ರಚಿಸಬೇಕೆಂದು ಭಾರತ ಸರ್ಕಾರ ಸಲಹೆ ಮಾಡಿತ್ತು. ಕೇಂದ್ರ ಸಲಹಾ ಸಮಿತಿಯಲ್ಲಿ 60 ಮಂದಿ ಸದಸ್ಯರು ಇರಬೇಕಾಗಿದ್ದು ಇವರಲ್ಲಿ 20 ಮಂದಿ ಆಡಳಿತ ವಿಭಾಗಕ್ಕೆ ಸೇರಿದ ಮುಖ್ಯಾಧಿಕಾರಿಗಳು ಮತ್ತು ಉಳಿದವರು ವಿವಿಧ ಪ್ರಾಂತಗಳ ಜಮೀನುದಾರರೂ ಆಗಿರಬಹುದಿತ್ತು. ಮೇಲೆ ಹೇಳಿದಂತೆ ಭಾರತ ರಾಷ್ಟ್ರೀಯ ಕಾಂಗ್ರೆಸ್‌ಗೆ ಸರಿದೂಗವ ಇಂತದೊಂದು ನಿರಂಕುಶ ಕಾರ್ಯಾಂಗವನ್ನು ರಚಿಸುವುದೇ ಮಿಂಟೋಗೆ ಇಷ್ಟವಾದ ವಿಷಯವಾಗಿತ್ತು. ಈ ಪ್ರಸ್ತಾಪವನ್ನು ಜನತೆಯಷ್ಟೇ ಅಲ್ಲದೆ, ಸ್ವತಃ ರಾಜಕುಮಾರರು ಕೂಡ ವಿರೋಧಿಸಿದರು. ಪ್ರಸ್ತಾಪಗಳಿಗೆ ತಿದ್ದುಪಡಿ ಸೂಚಿಸುವ ಸಲಹೆಗಳು ಬಂದವು. ಆದರೆ ಸೆಕ್ರೆಟರಿ ಆಫ್ ಸ್ಟೇಟ್ ಸಮಗ್ರ ಪ್ರಸ್ತಾಪವನ್ನೇ ನಿರಾಕರಿಸಿಬಿಟ್ಟ.

ಚರ್ಚೆ ಮುಂದುವರಿಯುತ್ತಿದ್ದಾಗಿ ಹಾಗೂ ಹೊಸ ಕಾಯಿದೆಯಲ್ಲಿ ರೂಪಿಸಲಾದ ಸುಧಾರಣೆಗಳ ಪ್ರಮುಖ ಭಾಗವೆನಿಸಿದ ವಿಧಾನ ಪರಿಷತ್ ಸದಸ್ಯರುಗಳ ಆಯ್ಕೆಗಾಗಿ ಯೋಜನೆಗಳನ್ನು ಸಿದ್ಧಪಡಿಸುತ್ತಿದ್ದಂತೆ ಇತರ ಎರಡು ಪ್ರಸ್ತಾಪಗಳನ್ನು ಕುರಿತಂತೆ ಕಾವೇರಿದ ಚರ್ಚೆಗಳು ನಡೆಯುತ್ತಿದ್ದವು. ಗವರ್ನರ್ ಜನರಲ್‌ನ ಕಾರ್ಯಕಾರಿ ಸಮಿತಿಗೆ ಭಾರತೀಯ ಸದಸ್ಯನೊಬ್ಬನ ನೇಮಕ ಹಾಗೂ ಸೆಕ್ರೆಟರಿ ಆಫ್ ಸ್ಟೇಟ್‌ನ ಸಮಿತಿಗೆ ಒಬ್ಬ ಅಥವಾ ಒಬ್ಬನಿಗಿಂತ ಹೆಚ್ಚು ಮಂದಿ ಭಾರತೀಯ ಸದಸ್ಯರ ನೇಮಕ ಇವೆ ಆ ಎರಡು ವಿಷಯಗಳಾಗಿದ್ದವು.

ಮೊದಲ ವಿಷಯವನ್ನು ಮುಂದುವರಿಸಿದವನು ಸ್ವತಃ ಮಿಂಟೋ ಆದರೆ ಬೇಕರ್ ಒಬ್ಬನ ವಿನಾ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರೂ, ಸೆಕ್ರೆಟರಿ ಆಫ್ ಸ್ಟೇಟ್ ಹಾಗೂ ಅವನ ಸಮಿತಿ ಮತ್ತು ಕೊನೆಯಲ್ಲಿ ಬ್ರಿಟಿಷ್ ಕ್ಯಾಬಿನೆಟ್ ಕೂಡ ಇದನ್ನು ವಿರೋಧಿಸಿತು. ಈ ವಿರೋಧಕ್ಕೆ ಮೂರು ಮುಖ್ಯ ಕಾರಣಗಳಿದ್ದವು.

1. ಅಷ್ಟೊಂದು ದೊಡ್ಡ ಹೊಣೆಯಿಂದ ಕೂಡಿದ ಸ್ಥಾನದಲ್ಲಿ ಸ್ಥಳೀಯನೊಬ್ಬ ಕಾರ್ಯನಿರ್ವಹಿಸುತ್ತಾನೆಂದು ನಂಬಲು ಸಾಧ್ಯವಿರಲಿಲ್ಲ.

2. ಸೈನ್ಯ ಸಂಬಂಧವಾದ ಹಾಗೂ ವಿದೇಶಿ ರಹಸ್ಯಗಳನ್ನು ತಿಳಿದಿರುವ ಅವನನ್ನು ನಂಬುವುದು ವಿವೇಕವೂ ಆಗಿರಲಿಲ್ಲ. ಮತ್ತು

3. ಆಂಗ್ಲೋ-ಇಂಡಿಯನ್ ಸಮುದಾಯದ ಮೇಲೆ ಹಿಂದೆ ಇಲ್‌ಬರ್ಟ್ ಮಸೂದೆ ಮಾಡಿದಂತೆ, ಈ ಮಸೂದೆ ಮಾಡಬಹುದಾದ ಪರಿಣಾಮಗಳ ಬಗೆಗಿನ ಭಯ. ಆದರೆ ಮಿಂಟೋ ತನ್ನ ಪಟ್ಟು ಬಿಡಲಿಲ್ಲ. ತುಂಬಾ ಚರ್ಚೆಗಳ ಆನಂತರ, ಭಯ-ಶಂಕೆಗಳೊಂದಿಗೆ ಪ್ರಸ್ತಾಪಕ್ಕೆ ಮಂಜುರಾತಿ ದೊರಕಿತು.

ಗವರ್ನರ್ ಜನರಲ್‌ನ ಸಮಿತಿಗೆ ಭಾರತೀಯ ಸದಸ್ಯನ ನೇಮಕವನ್ನು ವಿರೋಧಿಸುತ್ತಿದ್ದಾಗಲೇ ಬ್ರಿಟಿಷ್ ಕ್ಯಾಬಿನೆಟ್ ಸ್ಪಷ್ಟವಾಗಿ ರಾಜಿ ಮಾಡಿಕೊಳ್ಳುವ ಉದ್ದೇಶದಿಂದಲೇ ಕೌನ್ಸಿಲ್ ಆಫ್ ಇಂಡಿಯಾಗಳ ಎಂದರೆ ಲಂಡನ್ನಿನಲ್ಲಿರುವ ಸೆಕ್ರೆಟರಿ ಆಫ್ ಸ್ಟೇಟ್ ಸಮಿತಿಗೆ ಒಬ್ಬ ಅಥವಾ ಇಬ್ಬರು ಭಾರತೀಯ ಸದಸ್ಯರನ್ನು ನೇಮಿಸಿಕೊಳ್ಳಲು ಒಪ್ಪಿಕೊಂಡಿತು. ಮಾರ್ಲೆ ಬಹಳ ಹಿಂದೆಯೆ ಮಿಂಟೋಗೆ ಈ ಸಲಹೆಯನ್ನು ನೀಡಿದ್ದ. ಆದರೆ ಮಿಂಟೋ ಇದನ್ನು ತೀವ್ರವಾಗಿ ವಿರೋಧಿಸಿದ್ದ. ಈಗ ಪಟ್ಟು ಹಿಡಿಯುವ ಸರದಿ

ಮಾರ್ಲೆಯದಾಯಿತು ಮತ್ತು ಇಂಡಿಯಾ ಕೌನ್ಸಿಲ್‌ನ ಸಂವಿಧಾನಕ್ಕೆ ತಿದ್ದುಪಡಿ ಮಾಡಿರುವ ಮಸೂದೆ 1907 ನೆಯ ಆಗಸ್ಟ್ 28 ರುದ ಅಂಗೀಕೃತವಾಯಿತು.

1907 ರ ಈ ಕೌನ್ಸಿಲ್ ಆಫ್ ಇಂಡಿಯಾ ಕಾಯಿದೆ ಇಂಡಿಯಾ ಕೌನ್ಸಿಲ್‌ನ ಸಂವಿಧಾನದಲ್ಲಿ ಈ ಕೆಳಗೆ ಕಾಣಿಸಿದ ತಿದ್ದು ಪಡಿಗಳನ್ನು ಮಾಡಿದೆ.

ಮೊದಲನೆಯದಾಗಿ, ಕೌನ್ಸಿಲ್‌ನ ಸದಸ್ಯರ ಸಂಖ್ಯೆಯನ್ನು ಸೆಕ್ರೆಟರಿ ಆಫ್ ಸ್ಟೇಟ್ ನಿರ್ಧರಿಸಬೇಕಾಗಿದ್ದು, ಈ ಸದಸ್ಯರ ಗರಿಷ್ಠ ಸಂಖ್ಯೆ 14 ಮತ್ತು ಕನಿಷ್ಠ ಸಂಖ್ಯೆ 10. ಎರಡನೆಯದಾಗಿ 1858 ರ ಕಾಯಿದೆಯಂತೆ ಸದಸ್ಯರಲ್ಲಿ ಬಹುಮಂದಿ ಭಾರತದಲ್ಲಿ ಸೇವೆ ಸಲ್ಲಿಸತಕ್ಕದ್ದು ಅಥವಾ ನೆಲಸತಕ್ಕದ್ದು ಎಂದು ನಿರ್ಧಾರಿಸಲ್ಪಟ್ಟ ಅವಧಿ "ಹತ್ತು ವರ್ಷಗಳಿಗಿಂತ ಹೆಚ್ಚು" ಆಗಿತ್ತು. ಇದನ್ನು "ಐದು ವರ್ಷಗಳಿಗಿಂತ ಹೆಚ್ಚು" ಎಂದು ಬದಲಾಯಿಸಲಾಯಿತು. ಮೂರನೆಯದಾಗಿ ಸದಸ್ಯರ ವೇತನವನ್ನು ವರ್ಷಕ್ಕೆ 1200 ಪೌಂಡ್‌ಗಳಿಂದ 1000 ಪೌಂಡ್‌ಗಳಿಗೆ ಇಳಿಸಲಾಯಿತು ಮತ್ತು ಕೊನೆಯದಾಗಿ ಅಧಿಕಾರಾವಧಿಯನ್ನು (1869 ರ ಕಾಯಿದೆ ನಿಗಧಿಗೊಳಿಸಿದ್ದ) 10 ವರ್ಷಗಳಿಂದ ಏಳು ವರ್ಷಗಳಿಗೆ ಇಳಿಸಲಾಯಿತು.

ಈ ಕಾಯಿದೆ ಅನುಸಾರವಾಗಿ ಮಾರ್ಲೆ ನಾಲ್ವರು ಹೆಚ್ಚಿಗೆ ಸದಸ್ಯರನ್ನು ನೇಮಿಸಿಕೊಂಡ. ಇವರಲ್ಲಿ ಇಬ್ಬರು ಭಾರತೀಯರಾಗಿದ್ದರು. ಇವರಲ್ಲೊಬ್ಬರು ಹಿಂದೂ ಸಮುದಾಯದ ಕೆ.ಜಿ. ಗುಪ್ತ. ಇವರು ಬಂಗಾಳದ ಕಂದಾಯ ಮಂಡಳಿಯ ಸದಸ್ಯರ ಸ್ಥಾನಕ್ಕೆ ಏರಿದ್ದರು. ಇನ್ನೊಬ್ಬ ಭಾರತೀಯ ಸದಸ್ಯರು ಮಹಮ್ಮದೀಯರಾದ ಸಯ್ಯದ್ ಹುಸೇನ್ ಬಿಲ್‌ಗ್ರಾಮಿ. ಅವರು ಆಗ ಹೈದರಾಬಾದ್ ನಿಜಾಮನ ಪ್ರಮುಖ ಸಲಹೆಗಾರರಾಗಿದ್ದರು. ಈ ಆಯ್ಕೆ ಅಷ್ಟೇನೂ ಸಂತೋಷಕರವಾಗಿದ್ದಿರಲಿಲ್ಲ. ಏಕೆಂದರೆ ಇವರಿಬ್ಬರಲ್ಲಿ ಯಾರಿಗೂ ಭಾರತದ ರಾಜಕೀಯ ಪರಿಸ್ಥಿತಿಗಳ ಬಗೆಗೆ ಸಾಕಷ್ಟು ಅರಿವಿರಲಿಲ್ಲ. ಆಗ ಮಾರ್ಲೆ ಗವರ್ನರ್ ಜನರಲ್‌ನ ಕಾರ್ಯಕಾರಿ ಸಮಿತಿಗೆ ಭಾರತೀಯ ಸದಸ್ಯನೊಬ್ಬನನ್ನು ನೇಮಿಸುವ ಯೋಜನೆಯೊಂದಿಗೆ ಮುನ್ನುಗ್ಗಲು ನಿರ್ಧರಿಸಿದ. 1908 ನೆಯ ಡಿಸೆಂಬರ್ 17 ರಂದು ನಡೆದ ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಅವನು ಈ ವಿಷಯವನ್ನು ಮುಂದಿಟ್ಟ. ಆಗ ಹೌಸ್ ಆಫ್ ಲಾರ್ಡ್ಸ್‌ನ ಒಳಗಿನಂದಷ್ಟೇ ಅಲ್ಲದೆ, ಹೊರಗಿನಿಂದ ಕೂಡ ತೀವ್ರ ವಿರೋಧ ವ್ಯಕ್ತವಾಯಿತು. ಘನತೆವೆತ್ತ ಚಕ್ರವರ್ತಿಗಳು ಕೂಡ ತಾವು ಈ ಕ್ರಮವನ್ನು ತೀವ್ರವಾಗಿ ವಿರೋಧಿಸುತ್ತಿರುವುದನ್ನು ಮಾರ್ಲೆಗೆ ತಿಳಿಸಿದರು. ಆಗ ಮಾರ್ಲೆ ಹೀಗೆ ಉತ್ತರಿಸಿದ "ಭಾರತೀಯ ಸದಸ್ಯನನ್ನು ಹಿಂದೆಗೆದುಕೊಳ್ಳುವುದು ಎಂದರೆ ಈಗ ವಾಹನದ ಚಕ್ರದ ಕಡಾಣೆಯನ್ನು ತೆಗೆದು ಬಿಟ್ಟಂತಾಗುತ್ತದೆ".

1909 ನೆಯ ಜನವರಿ 21 ರಂದು ಮಾರ್ಲೆ ಮಿಂಟೋಗೆ ಹೀಗೆ ಬರೆದ "ನಿಮ್ಮ ಕಾರ್ಯಕಾರಿ ಸಮಿತಿಗೆ ನಾನು ಮಾಡಿದ ಭಾರತೀಯ ಸದಸ್ಯನ ನೇಮಕಕ್ಕೆ ಪಾರ್ಲಿಮೆಂಟಿನ ಮಂಡುರಾತಿಯ ಅಗತ್ಯವಿಲ್ಲವೆಂಬುದು ನನ್ನ ಅದೃಷ್ಟದ ವಿಷಯವಾಗಿದೆ. ಏಕೆಂದರೆ ಇದಕ್ಕೆ ಹೌಸ್ ಆಫ್ ಲಾರ್ಡ್ಸ್ ಅನುಮೋದನೆ ನೀಡುತ್ತದೆ ಎಂಬ ನಂಬಿಕೆಯೇನೂ ನನಗಿಲ್ಲ. ನನ್ನ ಸಮಿತಿಯೇ ಅಥವಾ ಸಮಿತಿಯ ಸದಸ್ಯರಲ್ಲಿ ಬಹುಮಂದಿಯು ಇದಕ್ಕೆ ವಿರುದ್ಧವಾಗಿದ್ದಾರೆ".

ಫೆಬ್ರವರಿ 1 ರಂದು ಮಾರ್ಲೆ ಮಿಂಟೋಗೆ ಹೀಗೆ ಬರೆದ. "ಮಸೂದೆಯನ್ನು ಕುರಿತ ಚರ್ಚೆಯ ಕಾಲದಲ್ಲಿ, ಕಾರ್ಯಕಾರಿ ಸಮಿತಿಗೆ ಭಾರತೀಯ ಸದಸ್ಯನನ್ನು ನೇಮಿಸಿಕೊಂಡ ಬಗ್ಗೆ ವಿಚಾರ ಮಾಡಲಾಗುತ್ತದೆ. ಆದರೆ, ಅವರೇನೇ ಹೇಳಲಿ ನಾನು ಭಾರತೀಯನ ನೇಮಕವನ್ನು ಶಿಫಾರಸ್ ಮಾಡುತ್ತೇನೆ ಎಂದು ಅವರಿಗೆ ಖಚಿತವಾಗಿ ತಿಳಿಸುತ್ತೇನೆ". ಆದರೆ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಕೌನ್ಸಿಲ್ ಕಾಯಿದೆಗೆ ಅವಿರೋಧ ಅಂಗೀಕಾರ ದೊರಕಿತು. ಓರ್ವ ಪ್ರಾಖ್ಯಾತ ನ್ಯಾಯಶಾಸ್ತ್ರಜ್ಞರೂ ಬಂಗಾಳದ ಅಡ್ವೋಕೇಟ್ ಜನರಲ್ ಕೂಡ ಆಗಿದ್ದ ಎಸ್.ಪಿ. ಸಿನ್ಹ ಅವರ ನಾಮಕರಣಕ್ಕೆ ಕ್ಯಾಬಿನೇಟ್ ಅವಿರೋಧ ಸಮ್ಮತಿ ಸೂಚಿಸಿತು. ದೊರೆ ಏಳನೆಯ ಎಡ್ವರ್ಡ್ ಮಾತ್ರ ವಿರೋಧಿಸಿದ; ಆದರೆ ಕೊನೆಗೆ ಅವನೂ ಒಪ್ಪಲೇಬೇಕಾಯಿತು. ಏಕೆಂದರೆ - "ಸರ್ವಾನುಮತ ಸಿಕ್ಕಿದ ಕ್ಯಾಬಿನೆಟ್‌ಗೆ ಪ್ರತಿಯಾದ ಯಾವುದೇ ಪರ್ಯಾಯ ಮಾರ್ಗವೂ ಇರಲಿಲ್ಲ. ಎಸ್.ಪಿ. ಸಿನ್ಹ ಅವರನ್ನು ಹಿಂದೆ 1909 ನೆಯ ಮಾರ್ಚ್ 24 ರಂದು ಗವರ್ನರ್ ಜನರಲ್‌ನ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನಾಗಿ ನೇಮಿಸಲಾಗಿತ್ತು.

## 82.4 1909 ರ ಇಂಡಿಯನ್ ಕೌನ್ಸಿಲ್ ಕಾಯಿದೆ

ಗವರ್ನರ್ ಜನರಲ್‌ನ ಸಮಿತಿಗೆ ಭಾರತೀಯ ಸದಸ್ಯನ ನೇಮಕ ಕುರಿತ ಚರ್ಚೆಗೆ ತೆರೆಬಿದ್ದ ಆನಂತರ, ಇಂಡಿಯನ್ ಕೌನ್ಸಿಲ್ ಮಸೂದೆಯ ಬಗ್ಗೆ ಹೌಸ್ ಆಫ್ ಕಾಮನ್ಸ್‌ನಲ್ಲಿ ಚರ್ಚಿಸಲಾಯಿತು. ಇದು ಕೆಲಮಟ್ಟಿನ ಕುತೂಹಲವನ್ನು ಎಬ್ಬಿಸಿತು. ಮಸೂದೆಯ ಎರಡನೆಯ ವಾಚನದ ಹಂತದಲ್ಲಿ ಸಭೆಯಲ್ಲಿ ಹೆಚ್ಚು ಮಂದಿ ಸದಸ್ಯರೇ ಇರಲಿಲ್ಲ. ಆಡಳಿತ ಪಕ್ಷದ ಹದಿನಾಲ್ಕು ಮಂದಿ ಹಾಗೂ ಇತರ ಪಕ್ಷಗಳಿಗೆ ಸೇರಿದ ಎಂಟು ಮಂದಿ ಮಾತ್ರ ಇದ್ದರು. ಹಾಗಿದ್ದರೂ ಚರ್ಚೆಯಲ್ಲಿ ಆಗಾಗ ಕಾವೇರಿದ ಪರಿಸ್ಥಿತಿ ಕಂಡು ಬರುತ್ತಿತ್ತು. ಕನ್ಸರ್ವೇಟಿವ್ ಪಕ್ಷದ ಸದಸ್ಯರು ಭಾರತದ ಆಡಳಿತದಲ್ಲಿ ಪ್ರಜಾಸತ್ತಾತ್ಮಕ ಸಿದ್ಧಾಂತಗಳನ್ನು ಅನುಸರಿಸುವುದರ ಬಗ್ಗೆ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದರು. ಕನ್ಸರ್ವೇಟಿವ್ ಪಕ್ಷದ ಮುಖಂಡ ಬಾಲ್‌ಫೋರ್ ಅವರ ಅಭಿಪ್ರಾಯ ಹೀಗಿತ್ತು. ಈ ಮಸೂದೆಯಿಂದ "ಯಾವುದೇ ಪ್ರಯೋಜನಗಳಿಲ್ಲ ಇದು ಪ್ರಾತಿನಿಧಿಕ ಸರ್ಕಾರದ ಎಲ್ಲ ಅರೆಕೊರೆಗಳ ಹಾಗೂ ಅನುಪಯುಕ್ತತೆಗಳ ಎದುರು ಭಾರತವನ್ನು ಪ್ರದರ್ಶಿಸುತ್ತದೆ, ಅಷ್ಟೇ ಮುಸ್ಲಿಂ ಸಮುದಾಯಕ್ಕೆ ಇನ್ನಷ್ಟು ಹೆಚ್ಚು ಅನುಕೂಲಕರವಾಗುವ ರೀತಿಯಲ್ಲಿ ಪ್ರತ್ಯೇಕ ಚುನಾಯಿಕ ಸಮುದಾಯಗಳ ಅವಕಾಶವನ್ನು ಒದಗಿಸುವ ಪ್ರಸ್ತಾಪವನ್ನು ಲಾರ್ಡ್ ರೊನಾಲ್ಡ್ ಸೇ ಮುಂದಿರಿಸಿದ. ಹೊಸ ಕೌನ್ಸಿಲ್‌ಗಳು ಅನಿವಾರ್ಯವಾಗಿ "ಪಾರ್ಲಿಮೆಂಟರಿ ಅಂಗಗಳ ಸೂಕ್ಷ್ಮ ಪ್ರತಿರೂಪಗಳಾಗಿ ಬಿಡುವ" ಪ್ರವೃತ್ತಿ ತೋರಿಸುತ್ತವೆ ಎಂಬ ಭಯವನ್ನು ಲಾರ್ಡ್ ಕರ್ಜನ್ ವ್ಯಕ್ತಪಡಿಸಿದ. ಈ ದೃಷ್ಟಿಯಿಂದಲೇ ಹಿಂದೆ ಮಾರ್ಲೆ ಇದನ್ನು ಅನುಮೋದಿಸಿರಲಿಲ್ಲ. ಇನ್ನೊಂದೆಡೆ ಸರ್ ಹೆನ್ರಿ ಕಾಟ್ನ್ ಸಿ.ಲೆ. ಒಡೊನೆಲ್ ಮತ್ತು ಕೈರ್ ಹಾರ್ಡಿ ಅವರಂಥ ಉದಾರ ಮನೋಭಾವನೆಯ ಇಂಗ್ಲೀಷರು ಭಾರತದ ರಾಷ್ಟ್ರೀಯವಾದಿಗಳ ಉದ್ದೇಶವನ್ನು ಕೈಗೆತ್ತಿಕೊಂಡು ವರ್ಗ, ಮತ ಅಥವಾ ಸಮುದಾಯಗಳನ್ನು ಆಧರಿಸಿದ ಪ್ರತ್ಯೇಕ ಚುನಾಯಿಕ ಸಮುದಾಯಗಳಂತಹ ಪ್ರತಿಕ್ರಿಯಾತ್ಮಕ ಚಟುವಟಿಕೆಗಳನ್ನು ಪ್ರಬಲವಾಗಿ ವಿರೋಧಿಸಿದರು. ಕೊನೆಗೂ 1902 ನೆಯ ಮೇ 21 ರಂದು ಮಸೂದೆ ಅಂಗೀಕೃತವಾಯಿತು. ರಾಜಾನುಮತಿಯೂ ದೊರೆತು ಇಂಡಿಯನ್ ಕೌನ್ಸಿಲ್ ಕಾರ್ಖಾನೆಯು 1909 ನೆಯ ಮೇ 25 ರಂದು ಜಾರಿಗೆ ಬಂತು. ಎಂಟು ಒಳ ಪ್ರಕರಣಗಳಿಂದ ಕೂಡಿದ ಇಂಡಿಯನ್ ಕೌನ್ಸಿಲ್ ಕಾಯಿದೆ ಕೇವಲ ಹೊಸ ಕೌನ್ಸಿಲ್‌ಗಳ ನಕ್ಷೆಯನ್ನು ಮುಂದುವರೆಸಿತ್ತ. ಅಷ್ಟೇ ಕಾಯಿದೆ ಅಡಿಯಲ್ಲಿ ರೂಪಿಸಲಾದ ನಿಯಮಗಳು ವಿವರಗಳನ್ನು ನಿರ್ದಿಷ್ಟಪಡಿಸಿವೆ. ಈ ಕಾಯಿದೆ ಮುಖ್ಯ ಷರತ್ತುಗಳನ್ನು ಈ ಕೆಳಗಿನಂತೆ ಸಂಕ್ಷಿಪಿಸಬಹುದು.

**ಕಲಂ 1** ವಿಧಾನ ಪರಿಷತ್ ಸದಸ್ಯರಲ್ಲಿ ನಾಮಕರಣಗೊಂಡ ಕೆಲವರು ಇರಬೇಕು ಹಾಗೂ ಇತರರು ಚುನಾಯಿತರೂ ಆಗಿರಬೇಕು. ಇವರ ಒಟ್ಟು ಗರಿಷ್ಠ ಸಂಖ್ಯೆ ಹೀಗಿರತಕ್ಕದ್ದು. ಗವರ್ನರ್ ಜನರಲ್‌ನ ಕೌನ್ಸಿಲ್‌ಗೆ 60; ಪ್ರಮುಖ ಪ್ರಾಂತಗಳಿಗಿರುವ ಬೊಂಬಾಯಿ, ಮದ್ರಾಸ್ ಬಂಗಾಳ, ಯು.ಪಿ. ಪೂರ್ವ ಬಂಗಾಳ ಮತ್ತು ಅಸ್ಸಾಮ್‌ಗಳಿಗೆ ಪ್ರತಿಯೊಂದಕ್ಕೆ 50. ಉಳಿದವುಗಳಿಗೆ 30, ಇವರಲ್ಲದೆ ಈ ವಿಧಾನ ಪರಿಷತ್ತುಗಳ ಅಧಿಕಾರ ಪ್ರಯುಕ್ತ ಸದಸ್ಯರಾಗಿದ್ದ ಕಾರ್ಯಕಾರಿ ಸಮಿತಿಗಳ ಸದಸ್ಯರೂ ಸೇರಿರುತ್ತಾರೆ.

**2-3 ಕಲಂ:-** ಗವರ್ನರ್ ಜನರಲ್ ಇನ್ ಕೌನ್ಸಿಲ್‌ಗೆ ಬಂಗಾಳ ಮತ್ತು ಇತರ ಪ್ರಾಂತಗಳ ಲೆಫ್ಟಿನೆಂಟ್ ಗವರ್ನರ್‌ಗಳಿಗಾಗಿ ಕಾರ್ಯಕಾರಿ ಸಮಿತಿಗಳನ್ನು ರಚಿಸುವ ಅಧಿಕಾರವಿರುತ್ತದೆ. ಬಂಗಾಳದ ಮತ್ತು ಅಂತೆಯೇ ಬೊಂಬಾಯಿ ಹಾಗೂ ಮದ್ರಾಸ್‌ಗಳ ಸದಸ್ಯರ ಗರಿಷ್ಠ ಸಂಖ್ಯೆ ನಾಲ್ಕು ಎಂದು ನಿಗದಿಗೊಳಿಸುತ್ತದೆ.

**ಕಲಂ 5:-** ಗವರ್ನರ್ ಜನರಲ್ ಇನ್ ಕೌನ್ಸಿಲ್ ಮತ್ತು ಕೌನ್ಸಿಲ್‌ಗಳ ಲೆಫ್ಟಿನೆಂಟ್ ಗವರ್ನರ್‌ಗಳು, ಆಯವ್ಯಯ ಮುಂಗಡ ಪತ್ರದ ಬಗೆಗಿನ ಚರ್ಚೆ, ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ಯಾವುದೇ ವಿಷಯಗಳು ಮತ್ತು ಕೌನ್ಸಿಲ್‌ಗಳ ಸದಸ್ಯರು ಕೇಳುವ ಪ್ರಶ್ನೆಗಳು - ಮುಂತಾದುವಕ್ಕೆ ಸಂಬಂಧಪಟ್ಟ ನಿಯಮ ನಿಬಂಧನೆಗಳನ್ನು ರೂಪಿಸಬೇಕು.

**ಕಲಂ 6:-** ಗವರ್ನರ್ ಜನರಲ್ ಇನ್ ಕೌನ್ಸಿಲ್‌ಗೆ ಸೆಕ್ರೆಟರಿ ಆಫ್ ಸ್ಟೇಟ್‌ನ ಅನುಮೋದನೆಗೆ ಒಳಪಟ್ಟು ಇತರ ವಿಷಯಗಳೊಂದಿಗೆ ಚುನಾವಣಾ ವಿಧಾನ ಹಾಗೂ ಎಲ್ಲ ಕೌನ್ಸಿಲ್‌ಗಳಿಗೂ ಸದಸ್ಯರುಗಳ ನಾಮಕರಣ ಮತ್ತು ಅವರಿಗಿರಬೇಕಾದ ಅರ್ಹತೆಗಳ ನಿರ್ಧಾರಗಳಿಗೆ ಸಂಬಂಧಪಟ್ಟ ನಿಯಮ ನಿಬಂಧನೆಗಳನ್ನು ರೂಪಿಸುವ ಅಧಿಕಾರವಿರುತ್ತದೆ.

**2-3 ನೆಯ ಕಲಂಗಳು** ಹೌಸ್ ಆಫ್ ಲಾರ್ಡ್‌ನಲ್ಲಿ ನಿರಾಕೃತವಾದವು. ಆದರೆ ಇವುಗಳನ್ನು ಪುನಃ ಪರಿಷ್ಕೃತ ರೂಪದಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಮಂಡಿಸಲಾಯಿತು. ಆನಂತರ ಇವು ಹೌಸ್ ಆಫ್ ಲಾರ್ಡ್‌ನ ಅಂಗೀಕಾರ ಪಡೆದವು.

ಸುಧಾರಣೆಗಳಿಗೆ ಸಂಬಂಧಿಸಿದ ತನ್ನ 1908 ರ ಸರ್ಕಾರಿ ಪತ್ರದಲ್ಲಿ (36 ನೆಯ ಪ್ರಕರಣ) ಮಾರ್ಲೆ ವಿವರಿಸಿದ್ದಂತೆ ಕಾರ್ಯಕಾರಿ ಸಮಿತಿಗೆ ಸದಸ್ಯರ ಸಂಖ್ಯೆಯನ್ನು 4 ಎಂದು ನಿರ್ಧರಿಸುದದರ ಮೂಲಭೂತ ಉದ್ದೇಶ. ಕನಿಷ್ಠ ಪಕ್ಷ ಇವರಲ್ಲೊಬ್ಬ ಭಾರತೀಯನಾಗಿರಬೇಕು ಎಂಬುದೇ ಆಗಿತ್ತು. ಆದರೆ ಅವನು ಹೇಳಿದಂತೆ ಯಾವುದೇ ಶಾಸನಗಳ ಅವಕಾಶದ ಮೂಲಕವಲ್ಲದೆ, ರೂಢಿಯ ಹಾಗೂ ಆಚರಣೆಯ ಮೂಲ ಹೀಗೆ ಮಾಡಬೇಕಾಗಿತ್ತು.

## 82.5 ಲೆಜಿಸ್ಲೇಟಿವ್ ಕೌನ್ಸಿಲ್‌ಗಳು

ಈ ಹೊಸ ಕಾಯಿದೆ ನಿಜವಾಗಿಯೂ ಎರಡು ವಿಷಯಗಳಿಗೆ ಸಂಬಂಧಿಸಿದಂತೆ 1892 ರ ಕಾಯಿದೆಯ ಸುಧಾರಣೆಯೆನಿಸಿದೆ. ಮೊದಲನೆಯದಾಗಿ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರುಗಳ ಸಂಖ್ಯೆ ಹೆಚ್ಚಿತು. ಹಾಗೂ ಎರಡನೆಯದಾಗಿ ಅಧಿಕಾರೇತರ ಸದಸ್ಯರುಗಳ ನೇಮಕಾತಿಗಾಗಿ ಚುನಾವಣಾ ಪದ್ಧತಿಯನ್ನು ಅಳವಡಿಸಲಾಯಿತು. ಉಳಿದ ವಿಷಯಗಳಿಗೆ ಸಂಬಂಧಪಟ್ಟಂತೆ ಹೊಸ ಕೌನ್ಸಿಲ್‌ಗಳ ಹೇಗಿರಬೇಕೆಂಬುದನ್ನು ನಿಯಮಗಳೇ ನಿರ್ಧರಿಸಬೇಕಾಗಿತ್ತು. ದುರದೃಷ್ಟವಶಾತ್ ಈ ವಿಚಾರದಲ್ಲಿ ಪ್ರಾರಂಭದ ಹೆಜ್ಜೆ ತೆಗೆದುಕೊಳ್ಳುವ ಹಕ್ಕನ್ನು ಗವರ್ನರ್ ಜನರಲ್ ಇನ್ ಕೌನ್ಸಿಲ್‌ಗೆ ಬಿಟ್ಟು ಬಿಡಲಾದ್ದರಿಂದ, "ಚಿನೋಪ್‌ನಿಕ್‌ಗಳು" (ಐ ಸಿ ಎಸ್ ಅಧಿಕಾರಿಗಳನ್ನು ಮಾರ್ಲೆ ಕರೆಯುತ್ತಿದ್ದುದು ಹೀಗೆ ಸುಧಾರಣೆಗಳನ್ನು (ತಮ್ಮ ದೃಷ್ಟಿಯಲ್ಲಿ) ಸಾಧ್ಯವಾದಷ್ಟೂ ಕೆಡಕಾಗದ ರೀತಿಯಲ್ಲಿ ಜಾರಿಗೆ ತರಲು ಪ್ರಯತ್ನಿಸಿದರು. ನಿಯಮಗಳನ್ನಾಧರಿಸಿ ಅಂತಿಮವಾಗಿ ಕರೆಯಪ್ರತಿ ತಯಾರಿಸಾದಂತಹ, ಹೊಸ ಕೌನ್ಸಿಲ್‌ಗಳ ಒಂದು ಸಮಗ್ರ ಚಿತ್ರದಿಂದ ಇದು ಸ್ಪಷ್ಟವಾಗುತ್ತದೆ.

(1) ರಚನೆ:-

ಕೌನ್ಸಿಲ್‌ಗಳ ರಚನೆ ಎರಡು ಮೂಲಭೂತ ಸಿದ್ಧಾಂತಗಳನ್ನು ಆಧರಿಸಿತ್ತು. ಮೊದಲನೆಯದಾಗಿ ಗವರ್ನರ್ ಜನರಲ್‌ಗೆ ವಿಧಾನ ಪರಿಷತ್‌ನಲ್ಲಿ "ಅತ್ಯಂತ ಅಧಿಕವಲ್ಲ" ದಿದ್ದರೂ ವಾಸ್ತವ ವೆನಿಸುವಂತಹ "ಬಹುಸಂಖ್ಯೆಯ ಅಧಿಕಾರಿಗಳು ಇರಬೇಕಾಗಿತ್ತು. ಎರಡನೆಯದಾಗಿ ಪ್ರಾಂತೀಯ ವಿಧಾನ ಪರಿಷತ್‌ಗಳಿಗೆ ಹೀಗೆ ಬಹುಸಂಖ್ಯೆಯ ಅಧಿಕಾರಿಗಳ ಅಗತ್ಯವಿರಲಿಲ್ಲ. ಅವರ ಅಧಿಕಾರಿಗಳು ತುಂಬ ಸೀಮಿತವೆಂಬುದು ಇದಕ್ಕೆ ಭಾಗಶಃ ಕಾರಣವಾಗಿದ್ದರೆ ಸರ್ಕಾರದ ಮುಖ್ಯಸ್ಥರಿಗೆ ಕೌನ್ಸಿಲ್‌ನಿಂದ ಅಂಗೀಕೃತವಾದ ಯಾವುದೇ ಕ್ರಮಕ್ಕೆ ಅನುಮೋದನೆ ನೀಡದಿರಬಹುದಾದ ಹಕ್ಕು ಇರುವುದೂ ಭಾಗಶಃ ಕಾರಣವಾಗಿತ್ತು. ಆದರೆ ಅಧಿಕಾರೇತರ ಸದಸ್ಯರು ಅಧಿಕ ಸಂಖ್ಯೆಯಲ್ಲಿದ್ದರೆಂಬುದನ್ನು ಚುನಾಯಿತ ಅಧಿಕಾರೇತರ ಸದಸ್ಯರು ವಿಶೇಷವಾಗಿದ್ದರೆಂದು ಅರ್ಥೈಸಬೇಕಾಗಿಲ್ಲ. ವಾಸ್ತವವಾಗಿ ಹೇಳುವುದಾದರೆ ಬಂಗಾಳದ ಹೊರತಾಗಿ ಬೇರಾವುದೇ ಪ್ರಾಂತದ ಕೌನ್ಸಿಲ್‌ನಲ್ಲಿಯೂ ಅಂತಹ ಅಧಿಕ ಸಂಖ್ಯೆಯಿರಲಿಲ್ಲ. ವಿವಿಧ ಕೌನ್ಸಿಲ್‌ಗಳಲ್ಲಿನ ಸಾಪೇಕ್ಷ ಸಂಖ್ಯೆಯನ್ನು ಮುಂದಿನ ತಃಖ್ತೆಯಲ್ಲಿ ತೋರಿಸಲಾಗಿದೆ. ಇಲ್ಲಿನ ಒಟ್ಟು ಸಂಖ್ಯೆಗಳಲ್ಲಿನ ಸರ್ಕಾರದ ಮುಖ್ಯಸ್ಥರು ಮತ್ತು ತಜ್ಞರ ಸಲಹೆ ಅಗತ್ಯವಿರುವಂತಹ ಪ್ರತಿಯೊಂದು ಪ್ರಾಂತೀಯ ಕೌನ್ಸಿಲ್‌ಗಳಿಗೆ ನೇಮಿಸಬಹುದಾದ" ಇಬ್ಬರು ತಜ್ಞರು ಸೇರಿಲ್ಲ. ಕಂಸಗಳಲ್ಲಿ ಕೊಡಲಾದ ಸಂಖ್ಯೆಗಳು 1912 ರಲ್ಲಿ ಮಾಡಲಾದ ಬದಲಾವಣೆಗಳನ್ನು ಸೂಚಿಸುತ್ತವೆ.

| ವಿಧಾನ ಪರಿಷತ್ ದೇಶ ಪ್ರಾಂತ | ಚುನಾಯಿತರು | ನಾಮಕರಣಗೊಂಡವರು ಅಧಿಕಾರೇತರರು | ಅಧಿಕಾರಿಗಳು | ಒಟ್ಟು (ಸರ್ಕಾರದ ಮುಖ್ಯಸ್ಥರು ಮತ್ತು ತಜ್ಞರನ್ನು ಹೊರತುಪಡಿಸಿ) |
|---|---|---|---|---|
| ಬ್ರಿಟಿಷ್ ಇಂಡಿಯಾ | 25(27) | 7(5) | 36 | 68 |
| ಮದ್ರಾಸ್ | 19(21) | 7(5) | 20 | 46 |
| ಬೊಂಬಾಯಿ | 21 | 7 | 18 | 46 |
| ಸಂಯುಕ್ತ ಪ್ರಾಂತಗಳು | 20(21) | 6 | 20 | 46(47) |
| ಬಂಗಾಳ | 26(28) | 5(4) | 20 | 51(52) |
| ಪೂರ್ವ ಬಂಗಾಳ ಮತ್ತು ಅಸ್ಸಾಮ್ | 18 | 5 | 17 | 40 |
| ಪಂಜಾಬ್ | 5(8) | 9(6) | 10 | 24 |
| ಬರ್ಮಾ | 1 | 8 | 6 | 15 |
| ಬಿಹಾರ ಮತ್ತು ಒರಿಸ್ಸ | (21) | (4) | (18) | (43) |
| ಅಸ್ಸಾಮ್ | (11) | (4) | (9) | (24) |

(2) ನಾಮಕರಣ ಮತ್ತು ಚುನಾವಣೆ

ಚುನಾವಣೆಯ ಮೂಲಕ ಸರಿಯಾಗಿ ಮತ್ತು ಸಮಾಧಾನಕರವಾಗಿ ಪ್ರತಿನಿಧಿಸಲು ಸಾಧ್ಯವಾಗದೆ ಇರಬಹುದಾದ ಸಾರ್ವಜನಿಕ ಹಿತಾಸಕ್ತಿಗಳ ವಿಷಯದಲ್ಲಿ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ನಾಮಕರಣ ವಿಧಾನವನ್ನು ಅನುಸರಿಸಲಾಯಿತು. ಭಾರತ ಸರ್ಕಾರಕ್ಕೆ ಇಂತಹ ನಾಮಕರಣಗಳನ್ನು ಮಾಡುವ ವಿಷಯದಲ್ಲಿ ಸ್ಪಷ್ಟವಾಗಿಯೂ ಸಂಪೂರ್ಣ ಸ್ವಾತಂತ್ರ್ಯವಿತ್ತು; ಕಾಯಿದೆಯ ಅಡಿ ರೂಪಿಸಲಾದ ನಿಯಮಗಳಲ್ಲಿ ಯಾವುದೇ ಅರ್ಹತೆಗಳನ್ನು ನಿರ್ದಿಷ್ಟಗೊಳಿಸಲಾಗಿರಲಿಲ್ಲ. ಹಾಗಿದ್ದರೂ ಕಾಯಿದೆಯ 6ನೆಯ ಒಳಪ್ರಕರಣದ ಅಡಿ ರೂಪಿಸಲಾದ ನಿಯಮಗಳಲ್ಲಿ ಚುನಾವಣೆಗೆ ಸಂಬಂದಿಸಿದೆ. ವಿಸ್ತೃತ ನಿಯಮಗಳನ್ನು ನಮೂದಿಸಲಾಗಿದೆ. ಸೇವೆಯಿಂದ ವಜಾ ಆದವನಾಗಿದ್ದರೆ ಅಥವಾ (ಎ) ಆರು ತಿಂಗಳುಗಳಿಗಿಂತ ಅಧಿಕ ಅವಧಿಯ ಸೆರೆಮನೆ ಶಿಕ್ಷೆ ಅಥವಾ ಗಡೀಪಾರು ಶಿಕ್ಷೆ ಇವುಗಳಿಗೆ ಒಳಗಾಗುಬಹುದಾದ ಅಪರಾಧಕ್ಕಾಗಿ ಕ್ರಿಮಿನಲ್ ಕೋರ್ಟ್‌ನಿಂದ ಬಂಧನಕ್ಕೆ ಒಳಗಾಗಿದ್ದರೆ ಇಲ್ಲವೆ ಸದ್ಭಾವನೆಗಾಗಿ ಜಾಮೀನು ಪಡೆಯಲು ಆಜ್ಞಾಪತನಾಗಿದ್ದರೆ ಅಥವಾ (ಏ) ವಕೀವಿ ವೃತ್ತಿ ನಡೆಸದಂತೆ ಬಹಿಷ್ಕೃತನಾದವನಾಗಿದ್ದರೆ ಅಥವಾ (ಐ) ಕೌನ್ಸಿಲ್‌ನ ಗವರ್ನರ್ ಜನರಲ್, ತನ್ನ ಅಭಿಪ್ರಾಯದಲ್ಲಿ ಅವನನ್ನು ಚುನಾಯಿಸುವುದು ಸಾರ್ವಜನಿಕ ಹಿತಾಸಕ್ತಿಗೆ ವಿರೋಧವಾಗುತ್ತದೆ ಎಂದು ಪೂರ್ವ ನಿದರ್ಶನಗಳ ಸಹಿತ ಘೋಷಿಸಿದ್ದರೆ; ಅಂತಹ ವ್ಯಕ್ತಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹತೆಯಿರುವುದಿಲ್ಲ. "ಕೊನೆಯ ನಾಲ್ಕು ಸಂದರ್ಭಗಳಲ್ಲಿನ ಅನರ್ಹತೆಗಳನ್ನು ಗವರ್ನರ್ ಜನರಲ್ ಇನ್ ಕೌನ್ಸಿಲ್ ಆದೇಶದ ಮೂಲಕ ದೂರ ಮಾಡಬಹುದು".

ಮತದಾರರಿಗೆ ಸಂಬಂಧಿಸಿದಂತೆ ಹೇಳುವುದಾದರೆ ಸ್ತ್ರೀಯರು ಅಪ್ರಾಪ್ತ ವಯಸ್ಕರು ಅಥವಾ ಅಸ್ವಸ್ಥ ಮನಸ್ಕರಿಗೆ ಯಾವುದೇ ಚುನಾವಣೆಗಳಲ್ಲಿ ಮತದಾನ ಮಾಡುವ ಹಕ್ಕು ಇಲ್ಲ.

ಅ. ಭೂಮಾಲೀಕರ ಮತದಾನ ಕ್ಷೇತ್ರಗಳು ಹಾಗೂ

ಆ. ಮುಸ್ಲಿಮ್ ಚುನಾಯಿತ ಸಮುದಾಯಗಳಿಗೆ ಪ್ರತ್ಯೇಕ ಅರ್ಹತೆಗಳನ್ನು ನಿಗಧಿಪಡಿಸಲಾಗಿತ್ತು. "ರಾಷ್ಟ್ರದ ಕೌನ್ಸಿಲ್ ಚುನಾವಣೆಗಳಿಗೆ ಮತದಾನ ಮಾಡುವ ಹಕ್ಕನ್ನು ನಿರ್ದಿಷ್ಟಪಡಿಸಲಾದ ಆದಾಯವುಳ್ಳ ಅಥವಾ ನಿರ್ದಿಷ್ಟಪಡಿಸಲಾದ ಕನಿಷ್ಟ ಭೂಕಂದಾಯವನ್ನು ಪಾವತಿ ಮಾಡುವ ಅಥವಾ ವಿಶೇಷ ಬಿರುದಾಂಕಿತರು ಅಥವಾ ನಿರ್ದಿಷ್ಟ ಕಛೇರಿಗಳಲ್ಲಿ ಗೌರವ ಹುದ್ದೆ ಹೊಂದಿರುವ ನಿಜವಾದ ಭೂ ಮಾಲೀಕರಿಗೆ ಮಾತ್ರ ನೀಡಲಾಗಿತ್ತು. ಮುಸ್ಲಿಮರಿಗೆ ಸಂಬಂಧಿಸಿದಂತೆ ಹೇಳುವುದಾದರೆ, "ನಿರ್ದಿಷ್ಟ ಮೊತ್ತದ ಭೂಕಂದಾಯವನ್ನು ಪಾವತಿ ಮಾಡುವವರು ಅಥವಾ ಆದಾಯ ತೆರಿಗೆ ಪಾವತಿ ಮಾಡುವವರು ಅಥವಾ ಪ್ರಾಂತೀಯ ಕೌನ್ಸಿಲ್‌ಗಳ ಸದಸ್ಯರಾಗಿರುವವರು ಅಥವಾ ಭಾರತೀಯ ವಿಶ್ವವಿದ್ಯಾನಿಲಯಗಳ ಫೆಲೋಗಳು ಅಥವಾ ನಿರ್ದಿಷ್ಟ ಸ್ಥಾನವನ್ನು ಹೊಂದಿದ ಪದವೀಧರರು ಅಥವಾ ಸರ್ಕಾರಿ ಪಿಂಚಣಿದಾರರು ಮತದಾರರ ಪಟ್ಟಿಯಲ್ಲಿ ಸೇರಿದ್ದರು".

(3) ಅಧಿಕಾರಿಗಳು ಮತ್ತು ವಿಶೇಷ ಹಕ್ಕುಗಳು

ಕಾಯಿದೆಯ 5ನೆಯ ಕಲಂನ ಅನುಸಾರವಾಗಿ ರಾಷ್ಟ್ರದ ಹಾಗೂ ಸ್ಥಳೀಯ ಸರ್ಕಾರಗಳಿಗೆ ಲಭಿಸಿದ್ದ ನಿಯಮಗಳನ್ನು ರೂಪಿಸುವ ಅಧಿಕಾರಗಳಿಂದಾಗಿ ರಾಷ್ಟ್ರ ಹಾಗೂ ಸ್ಥಳೀಯ ಹೀಗೆ ಇವೆರಡೂ ಬಗೆಯ ವಿಧಾನ ಪರಿಷತ್‌ಗಳಿಗಿರುವ ಅಧಿಕಾರಗಳು ಮತ್ತು ವಿಶೇಷ ಹಕ್ಕುಗಳು ಪರಿಗಣನಾರ್ಹವಾಗಿ ಹೆಚ್ಚಿದವು. ಹಣಕಾಸಿಗೆ ಸಂಬಂಧಿಸಿದ ವಿಚಾರಗಳನ್ನು ಕುರಿತ ಚರ್ಚೆಯಲ್ಲಿ ಅಧಿಕಾರ ಹೆಚ್ಚಿದ್ದು ಇವುಗಳಲ್ಲಿ ಅತಿಮುಖ್ಯವಾಗಿದೆ. ವಾರ್ಷಿಕ ಆಯವ್ಯಯ ಮುಂಗಡ ಪತ್ರದ ಸಂಬಂಧದಲ್ಲಿ ಕಾರ್ಯರೂಪಕ್ಕೆ ತರಲಾದ ರಾಷ್ಟ್ರದ ವಿಧಾನ ಪರಿಷತ್ತಿನ ಈ ಕೆಳಕಾಣಿಸಿದ ವಿಧಾನದ ಮೂಲಕ ಇದನ್ನು ಸರಿಯಾಗಿ ನಿರೂಪಿಸಬಹುದು. "ವಿತ್ತ ಸದಸ್ಯರು ಹಣಕಾಸು ವರದಿಯನ್ನು ಮಂಡಿಸಿದ ಅನಂತರ, ತೆರಿಗೆ ಪದ್ಧತಿಯಲ್ಲಿನ ಯಾವುದೇ ಬದಲಾವಣೆ ಅಂತ ಹೇಳಿಕೆಯಲ್ಲಿ ಅಥವಾ ವಿವರಣಾತ್ಮಕ ಜ್ಞಾಪನಾ ಪತ್ರದಲ್ಲಿ ಪ್ರಸ್ತಾಪಿಸಲಾದ ಇಲ್ಲವೇ ಉಲ್ಲೇಖಿಸಲಾದ ಸ್ಥಳೀಯ ಸರ್ಕಾರಗಳಿಗೆ ನೀಡಲಾಗುವ ಹೊಸಸಾಲ ಅಥವಾ ಯಾವುದೇ ಹೆಚ್ಚುವರಿ ಧನ ಸಹಾಯ ಇವುಗಳಿಗೆ ಸಂಬಂಧಪಟ್ಟ ನಿರ್ಣಯದತ್ತ ಯಾವುದೇ ಸದಸ್ಯರ ಗಮನ ಸೆಳೆಯಬಹುದು". ನಿರ್ದಿಷ್ಟ ಪಡಿಸಲಾದ ದಿನ ಅಂತಹ ನಿರ್ಣಯಗಳನ್ನು ಕೌನ್ಸಿಲ್‌ನ ಮುಂದಿರಿಸಿ, ಚರ್ಚೆ ನಡೆಸಿ ಮತದಾನಕ್ಕೆ ಇರಿಸಲಾಗುತ್ತದೆ. ಆಮೇಲೆ ಎಲ್ಲ ನಿರ್ಣಯಗಳನ್ನು ವಿಲೆ ಮಾಡಲಾಗುತ್ತದೆ. ಪ್ರತಿಯೊಂದು ಶೀರ್ಷಿಕೆಯನ್ನು ಅಥವಾ ಶೀರ್ಷಿಕೆಗಳ ಸಮೂಹವನ್ನು ಪ್ರತ್ಯೇಕವಾಗಿ ಪರಿಗಣಿಸಿ ತೆಗೆದುಕೊಳ್ಳತಕ್ಕದ್ದು. ಇವುಗಳಲ್ಲಿ ಪ್ರತಿಯೊಂದು ಸಂದರ್ಭದಲ್ಲಿಯೂ ಯಾವುದೇ ಸದಸ್ಯ ತೀರ್ಮಾನವನ್ನು ಮುಂದಿರಿಸಬಹುದು. ಅದನ್ನು ಕುರಿತಂತೆ ಅನಂತರ ಚರ್ಚಿಸಿ, ಕೌನ್ಸಿಲ್‌ನಲ್ಲಿ ಮತದಾನಕ್ಕೆ ಇರಸಲಾಗುತ್ತದೆ. ಎಲ್ಲ ಶೀರ್ಷಿಕೆಗಳು ಅಥವಾ ಶೀರ್ಷಿಕೆಗಳ ಸಮೂಹವನ್ನು ವಿಲೆ ಮಾಡಿದ ಅನಂತರ, ವಿತ್ತ ಸದಸ್ಯ ಮಾರ್ಚ್ 24 ರಂದು ಅಥವಾ ಆ ದಿನಕ್ಕೆ ಮೊದಲು ಆಯವ್ಯಯ ಮುಂಗಡ ಪತ್ರವನ್ನು ಮಂಡಿಸತಕ್ಕದ್ದು ಹೀಗೆ ಮಾಡುವಾಗ ಅವನು ಹಣಕಾಸು ವರದಿಯ ಅಂಕಿ ಅಂಶಗಳನ್ನು ಮಾಡಬಹುದಾದ ಯಾವುದೇ ಬದಲಾವಣೆಗಳನ್ನು ಹಾಗೂ ಕೌನ್ಸಿಲ್ ಮುಂದಿರಿಸಲಾದ ಯಾವುದೇ ನಿರ್ಣಯ ಏಕೆ ಅಂಗೀಕೃತವಾಗಲಿಲ್ಲ ಎಂಬುದಕ್ಕೆ ಕಾರಣಗಳನ್ನು ವಿವರಿಸತಕ್ಕದ್ದು. ಅನಂತರ ಆಯವ್ಯಯ ಮುಂಗಡ ಪತ್ರದ ಬಗೆಗಿನ ಸಾಮಾನ್ಯ ಚರ್ಚೆಗೆ ದಿವನ್ನು ನಿಗಧಿ ಮಾಡಲಾಗುತ್ತದೆ. ಆದರೆ ಅಲ್ಲಿಂದ ಮುಂದೆ ಯಾವುದೇ ನಿರ್ಣಯವನ್ನು ಮುಂದಿಡಲು ಯಾವುದೇ ಸದಸ್ಯನಿಗೆ ಅನುಮತಿ ನೀಡಲಾಗುವುದಿಲ್ಲ; ಅಂತೆಯೇ ಕೌನ್ಸಿಲ್‌ನಲ್ಲಿ ಮತದಾನಕ್ಕಾಗಿ ಆಯವ್ಯಯ ಮುಂಗಡ ಪತ್ರವನ್ನು ಮುಂದಿರಿಸುವ ಅವಕಾಶವೂ ಇರುವುದಿಲ್ಲ".

ಸಾಮಾನ್ಯ ಸಾರ್ವಜನಿಕ ಹಿತಾಸಕ್ತಿಗಳಿಗೆ ಸಂಬಂಧಿಸಿದ ನಿರ್ಣಯಗಳ ಬಗ್ಗೆ ಚರ್ಚಿಸುವ ಹಾಗೂ ಅವುಗಳನ್ನು ಮತದಾನಕ್ಕೆ ಇಡುವ ಹಕ್ಕು ಕೂಡ ಕೌನ್ಸಿಲ್‌ಗಳಿಗೆ ಇರುತ್ತದೆ. ಆದರೂ, ಕೌನ್ಸಿಲ್‌ಗಳ ನಿರ್ಣಯಗಳು "ಸರ್ಕಾರ ಒಪ್ಪಬಹುದಾದ ಅಥವಾ ಒಪ್ಪದೆ ಇರಬಹುದಾದ ಶಿಫಾರಸ್‌ಗಳ ರೂಪದಲ್ಲಿ ಇರಬೇಕು".

ಪ್ರಶ್ನೆಗಳನ್ನು ಕೇಳುವ ಅಧಿಕಾರವನ್ನು ಕೂಡ ಹೊಸ ನಿಯಮಗಳು ಕೆಲಮಟ್ಟಿಗೆ ಹೆಚ್ಚಿಸಿದವು. ಪ್ರಶ್ನೆ ಕೇಳಿದ ಸದಸ್ಯನಿಗೆ ಉತ್ತರವನ್ನು ವಿಶದಪಡಿಸಿಕೊಳ್ಳಲೋಸುಗ ಪೂರಕ ಪ್ರಶ್ನೆ ಕೇಳುವ ಹಕ್ಕನ್ನು ನೀಡಲಾಯಿತು.

## 82.6 ಸುಧಾರಣೆಗಳ ಬಗ್ಗೆ ಭಾರತೀಯರ ಪ್ರತಿಕ್ರಿಯೆ

1909 ನೆಯ ಇಂಡಿಯನ್ ಕೌನ್ಸಿಲ್ ಕಾಯಿದೆಯಿಂದ ಪ್ರಾರಂಭವಾದ ಸುಧಾರಣೆಗಳ ಸ್ವರೂಪದ ಬಗ್ಗೆ ತೀರ್ಪು ನೀಡುವ ಮೊದಲು, ಸುಧಾರಣೆಗಳ ಕರಡು ಪ್ರತಿಯನ್ನು ಸಿದ್ಧಪಡಿಸಿದವರ ದೃಷ್ಟಿಯಲ್ಲಿ ಏನಿತ್ತು ಎಂಬುದರ ಸ್ಪಷ್ಟ ತಿಳುವಳಿಕೆ ಹೊಂದಬೇಕಾದ್ದು ಅಗತ್ಯವಾಗಿದೆ. ಭಾರತದ ಆಡಳಿತದಲ್ಲಿ ಹೆಚ್ಚಿನ ಅಧಿಕಾರಗಳನ್ನು ಹಾಗೂ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕನ್ನು ಭಾರತೀಯರಿಗೆ ನೀಡುವ ಮೂಲಕ, ಭಾರತದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಲು ಮಾರ್ಲೆ ಕಾತುರನಾಗಿದ್ದನೆಂಬುದರಲ್ಲಿ ಸಂದೇಹವಿಲ್ಲ; ಆದರೆ ಇದು ಮೂರು ಮುಖ್ಯ ಮಿತಿಗಳಿಗೆ ಒಳಪಟ್ಟಿತು.

ಮೊದಲನೆಯದಾಗಿ ಮಾರ್ಲೆ ಗೋಖಲೆಗೆ ತಿಳಿಸಿದಂತೆ, ವಸಾಹತು ಸರ್ಕಾರ ಎಂಬ ಆದರ್ಶ ಭಾವನೆಯೇ ಕೇವಲ ಕಾರ್ಯ ರೂಪಕ್ಕೆ ತರಲಾಗದ ಮನಃ ಕಲ್ಪನೆಯಾಗಿತ್ತು. ಏನೆಂದರೆ ಅವನೇ ಆನಂತರ ಅಭಿಪ್ರಾಯ ಪಟ್ಟಂತೆ ವಸಾಹತು ಮಾದರಿಯ ಸರ್ಕಾರ ಭಾರತಕ್ಕೆ ಅಷ್ಟೇನೂ ತಕ್ಕದಾಗಿರಲಿಲ್ಲ.

ಎರಡನೆಯದಾಗಿ, ಸರ್ಕಾರ ಹೊಂದಿದ್ದ ಪರಿಣಾಮಕಾರಿ ಅಧಿಕಾರಕ್ಕೆ ಏನೂ ಹಾನಿಬರದಂತೆ ನೋಡಿಕೊಳ್ಳುವುದು ಮಾರ್ಲೆ ಒಪ್ಪಿಕೊಂಡ ಉದ್ದೇಶವಾಗಿತ್ತು. ಸರ್ಕಾರದ ಅಧಿಕಾರಕ್ಕೆ ಯಾವುದೇ ರೀತಿಯಲ್ಲಿಯೂ ಕುಂದು ಉಂಟಾಗಬಾರದು; ಅದರ ಬಗ್ಗೆ ಯಾವುದೇ ಭ್ರಮೆ ಕೂಡ ಇರಬಾರದು. ಅತ್ಯಂತ ಅಧಿಕವಲ್ಲವಾದರೂ ಅಧಿಕಾರಿಗಳ 'ವಾಸ್ತವಿಕ' ಆಧಿತ್ಯ ವೈಸರಾಯಿಯ ವಿಧಾನ ಪರಿಷತ್ತಿನಲ್ಲಿ ನಿಜವಾಗಿಯೂ ಅವಶ್ಯಕವೆಂದು ಅವನು ಭಾವಿಸಿದ್ದ.

ಮೂರನೆಯದಾಗಿ, ಪಾರ್ಲಿಮೆಂಟಿನ ಅಥವಾ ಜವಾಬ್ದಾರಿ ಹಾಗೂ ಪ್ರಾತಿನಿಧಿತ ಸರ್ಕಾರದ ಯಾವುದೇ ಸೇನೆಯನ್ನು ಭಾರತದ ನೆಲದಲ್ಲಿ ನಡತಕ್ಕದ್ದಲ್ಲ ಎಂಬ ಬಗ್ಗೆ ಮಾರ್ಲೆ ವಿಶೇಷ ಕಾತುರವನ್ನು ಹೊಂದಿದ್ದ. ಅವನು ಪಾರ್ಲಿಮೆಂಟಿನಲ್ಲಿ ಬಹಿರಂಗವಾಗಿಯೇ ಹೀಗೆ ಹೇಳಿದ್ದ. "ಸುಧಾರಣೆಗಳ ಈ ಅಧ್ಯಾಯ ಪ್ರತ್ಯೇಕವಾಗಿ ಅಥವಾ ಪರೋಕ್ಷವಾಗಿ ಭಾರತದಲ್ಲಿ ಪಾರ್ಲಿಮೆಂಟರಿ ಪದ್ಧತಿಯ ಸ್ಥಾಪನೆಗೆ ಕಾರಣವಾಗುತ್ತದೆ ಎಂದು ಹೇಳಬಹುದಾದ ಪಕ್ಷದಲ್ಲಿ, ನಾನಂತೂ ಈ ವಿಷಯದಲ್ಲಿ ಏನನ್ನೂ ಮಾಡಲಾರೆ".

ಭಾರತ ಸರ್ಕಾರ ಈ ಮೂರು ಅಂಶಗಳಿಗೆ ಸಂಬಂಧಿಸಿದಂತೆ ಮಾರ್ಲೆಯೊಡನೆ ಒಮ್ಮತ ಹೊಂದಿರುವಾಗಲೇ ಸುಧಾರಣೆಗಳ ಬಗ್ಗೆ ಭಿನ್ನಾಭಿಪ್ರಾಯವನ್ನು ಹೊಂದಿತ್ತು. ಇದನ್ನು ಈ ಕೆಳಗಿನಂತೆ ನಿರೂಪಿಸಬಹುದು.

1. ಭಾರತದಲ್ಲಿನ ಭೀಕರ ಅಶಾಂತಿ ಹಾಗೂ ಭಯೋತ್ಪಾದಕ ಚಟುವಟಿಕೆಗಳ ಮತ್ತು ಇಂಗ್ಲೆಂಡಿನಲ್ಲಿರುವ ಸೆಕ್ರೆಟರಿ ಆಫ್ ಸ್ಟೇಟ್‌ನ ಸುಧಾರಣೆಯ ದೃಷ್ಟಿಗಳಿಂದ ಬಲವಂತವಾಗಿ ತಮ್ಮ ಮೇಲೆ ಹೇರಲಾದ ಒಂದು ಅವಶ್ಯಕ ಕೆಡಕು ಇದು ಎಂದು ಅವರು ಭಾವಿಸಿದ್ದರು. ಒಬ್ಬರನ್ನು ಸಮಾಧಾನಗೊಳಿಸಲು ಮತ್ತು ಇತರರಿಗೆ ತೃಪ್ತಿಯನ್ನು ಉಂಟುಮಾಡಲು ಸಾಕೆಂದು ಭಾವಿಸಲಾದುದಕ್ಕಿಂತ ಹೆಚ್ಚೇನನ್ನು ಸುಧಾರಣೆಗಳಿಂದ ಮಾಡಲು ಅವರು ಉತ್ಸುಕರಾಗಿರಲಿಲ್ಲ.

2. ಜನರ ಚೀಟಿಕೆಗಳಿಗೆ ವಿನಾಯಿತಿಗಳನ್ನು ನೀಡುವಂತೆ ಭಾರತ ಸರ್ಕಾರದ ಮೇಲೆ ಒತ್ತಡವಿದ್ದಾಗ ಅದು ಪ್ರಸ್ತುತ ಪರಿಸ್ಥಿತಿಗಳು ಮತ್ತೆ ಸಂಭವಿಸಿದಂತೆ ತಡೆಯಲು ಹಾಗೂ ಆ ಮೂಲಕ ಭಾರತದಲ್ಲಿನ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಮುಂದೆ ಶಾಂತಿ ಮತ್ತು ಸ್ಥಿರತೆಗಳು ಉಳಿಯುವಂತೆ ನೋಡಿಕೊಳ್ಳಲು, ಅಲ್ಪಾವಧಿ ಹಾಗೂ ದೀರ್ಘಾವಧಿ ಕ್ರಮಗಳೆರಡರ ಮೂಲಕವೂ ಕೆಲವು ಅವುಗಳನ್ನು ಅನುಸರಿಸಿತು. ಆಡಳಿತದಲ್ಲಿ ಯಾವುದೇ ರೀತಿಯ ಪಾತ್ರ ವಹಿಸದಂತೆ ರಾಷ್ಟ್ರೀಯವಾದಿಗಳನ್ನು ಅಥವಾ ತೀವ್ರಗಾಮಿಗಳನ್ನು "ದೂರದಲ್ಲಿರಿಸುವುದು ಹಾಗೂ ರಾಜನಿಷ್ಠೆಯುಳ್ಳವರೆಂದು ತಿಳಿಯಲಾದ"-ಜೋಹುಕುಮ್ಸ್ ಅಥವಾ ಹೌದಪ್ಪ ಗಳನ್ನು ವಿವರಿಸುವ ಸೌಮ್ಯೋಕ್ತ ವಿಧಾನ - ಭಾರತೀಯರಿಗೆ ಮಾತ್ರ ಅವರ ದೇಶದ ಸರ್ಕಾರದಲ್ಲಿ ಹೆಚ್ಚಿನ ಪಾತ್ರ ವಹಿಸುವ ಅವಕಾಶ ನೀಡುವುದು ಇದೇ ಮೊದಲನೆಯದಾಗಿತ್ತು. ವರ್ಗಗಳ ವಿರುದ್ಧ ವರ್ಗಗಳನ್ನು ಮತಗಳ ವಿರುದ್ಧ ಮತಗಳನ್ನು ಎತ್ತಿಕಟ್ಟುವ ಮೂಲಕ ಭಾರತದ ಜನರಲ್ಲಿ ಬೆಳೆಯುತ್ತಿರುವ ಐಕಮತ್ಯಕ್ಕೆ ಹಾನಿಯುಂಟಾಮಾಡುವುದು ಎರಡನೆಯದಾಗಿತ್ತು.

ಮೊದಲನೆಯದಕ್ಕಾಗಿ ಸಂಬಂಧಿಸಿದಂತೆ ಹೀಗೆ ಹೇಳಬಹುದು. ಚುನಾವಣೆಗೆ ನಿಲ್ಲುವ ಯಾವನೇ ಅಭ್ಯರ್ಥಿ, ಅಪೇಕ್ಷಣೀಯ ವ್ಯಕ್ತಿಯಲ್ಲವೆಂದು ಅನಿಸಿದಾಗ, ಅನರ್ಹನೆಂದು ಘೋಷಿಸಿ ಅವನನ್ನು ತಡೆಯಲು ಅಗತ್ಯವಾದ ವಿಪುಲ ಅಧಿಕಾರಗಳನ್ನು ಕಾಯಿದೆ

ನಿಯಮಗಳು ಭಾರತ ಸರ್ಕಾರಕ್ಕೆ ನೀಡಿದ್ದವು. ಅಲ್ಲದೇ ಭಾರತ ಸರ್ಕಾರ ತನ್ನಷ್ಟಕ್ಕೇ ತಾನೇ ಗಡೀಪಾರು ಶಿಕ್ಷೆಗೊಳಗಾಗದವರು ಅಥವಾ ಬಂಧನದಲ್ಲಿದ್ದವರು ಎಂಬ ಕಾರಣದಿಂದ ಅನೇಕ ಗಣ್ಯ ಮುಖಂಡರನ್ನು ಆಗಲೇ ಅನರ್ಹಗೊಳಿಸಿತ್ತು. ಮೊದಲು, ಹೀಗೆ ಅನರ್ಹಗೊಳಿಸುವುದನ್ನು ಮಾರ್ಲೆ ಸಂಪೂರ್ಣ ವಿರೋಧಿಸಿದ್ದ. ಈ ಸಂಬಂಧದಲ್ಲಿ ಅವನು ತುಂಬ ದೃಢವಾದ ನಿರ್ಧಾರವನ್ನು ತೆಗೆದುಕೊಂಡಿದ್ದ. ಅವನ ವಾದ ಹೀಗಿತ್ತು "ಗಡೀಪಾರು ಶಿಕ್ಷೆಗೊಳಗಾದ ವ್ಯಕ್ತಿ ಒಮ್ಮೆ ಬಿಡುಗಡೆ ಪಡೆದ ಅನಂತರ, ಗಡೀಪಾರು ಶಿಕ್ಷೆ ಅನುಭವಿಸಿದನೆಂಬ ಕಾರಣವನ್ನು ಮುಂದಿಟ್ಟು ಅವನನ್ನು ರಾಜಕೀಯವಾಗಿ ಅನರ್ಹಗೊಳಿಸುವುದನ್ನು ಸಮರ್ಥಿಸುವುದು ಸಾಧ್ಯವೇ ಇಲ್ಲ. ತನ್ನ ಈ ಅಭಿಪ್ರಾಯವನ್ನು ಪಾರ್ಲಿಮೆಂಟಿನಲ್ಲಿ ದೃಢವಾಗಿ ವ್ಯಕ್ತಪಡಿಸುವುದಾಗಿ ಅವನು ಮಿಂಟೋಗೆ ಟೆಲಿಗ್ರಾಮ್ ಕೂಡ ಮಾಡಿದ್ದ. ಗಡೀಪಾರು ಶಿಕ್ಷೆಗೊಳಗಾದವರನ್ನು ತನ್ನ ಕೌನ್ಸಿಲ್‌ನಿಂದ ಹೊರದೂಡುವ ವಿಷಯದಲ್ಲಿ ಮಿಂಟೋ ಕೂಡ ಅಷ್ಟೇ ದೃಢತೆ ಹೊಂದಿದ್ದ. ಈ ಬಗ್ಗೆ ಬಿರುಸಾದ ಚರ್ಚೆಯೇ ನಡೆಯಿತು. ಕೊನೆಯಲ್ಲಿ ಮಾರ್ಲೆ ಏನೆಲ್ಲ ಹೇಳಿದ್ದರೂ ಭಾರತ ಸರ್ಕಾರ ತನ್ನ ನಿರ್ಣಯದಂತೆಯೇ ಮುಂದುವರಿಯಿತು. ಕೌನ್ಸಿಲ್-ಸದಸ್ಯತ್ವಕ್ಕೆ ಗಡೀಪಾರು ಶಿಕ್ಷೆಯನ್ನೆ ಅನರ್ಹತೆಯ ಆಧಾರವಾಗಿ ಅದು ಉಳಿಸಿಕೊಂಡಿತು.

ಎರಡನೆಯದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಸುಶಿಕ್ಷಿತ ಮಧ್ಯಮ ವರ್ಗದವರನ್ನು ಸಾಧ್ಯವಾದಷ್ಟು ದೂರವಿಡಲು ಹಾಗೂ ಅವರಿಗೆ ಸರಿದೂಗುವ ಸ್ಥಾನದಲ್ಲಿ ಭೂಮಾಲೀಕರು ಮತ್ತು ಇತರ ವರ್ಗದವರನ್ನು ಕೌನ್ಸಿಲ್‌ನಲ್ಲಿ ಇರುವಂತೆ ಮಾಡಲು ಸರ್ಕಾರ ಉದ್ದೇಶಪೂರ್ವಕವಾಗಿಯೇ ಪ್ರಾಂತೀಯ ಮತದಾನ ಕ್ಷೇತ್ರಗಳ ರಚನೆಯಾಗದಂತೆ ನೋಡಿಕೊಂಡಿತು. ಇಡೀ ಉದ್ದೇಶವನ್ನು ಸಾಧಿಸಲು ಅದು ಪ್ರತ್ಯೇಕ ಚುನಾಯಿಕ ಸಮುದಾಯಗಳ ರಚನೆ ಹಾಗೂ ಮಹಮ್ಮದೀಯರಿಗೆ ಮಹತ್ವ ನೀಡುವತ್ತ ತನ್ನ ಗಮನ ಹರಿಸಿತು. ಕಲ್ಕತ್ತದ ಪ್ರಮುಖ ಆಂಗ್ಲೋ-ಇಂಡಿಯನ್ ದಿನ ಪತ್ರಿಕೆಯಾದ 'ಸ್ಟೇಟ್‌ಮನ್' ಕೂಡ ಹೀಗೆ ಬರೆಯಬೇಕಾಗಿ ಬಂತು; ಭಾರತ ಸರ್ಕಾರ ಚರ್ಚೆಗೆ ಎತ್ತಿಕೊಂಡಿದ್ದ ಕೌನ್ಸಿಲ್ ಸುಧಾರಣೆಗಳನ್ನು ಕುರಿತು ಹೆಚ್ಚು ಎಚ್ಚರಿಕೆಯಿಂದ ಪರಿಶೀಲನೆ ನಡೆಸಿದಷ್ಟು, ಹೆಚ್ಚು ಹೆಚ್ಚು ಸ್ಪಷ್ಟವಾಗುವುದೇನೆಂದರೆ, ಅಧಿಕ ಸಂಖ್ಯೆಯ ಭೂಮಾಲೀಕರನ್ನು ಮತ್ತು ಅಧಿಕ ಸಂಖ್ಯೆಯ ಮಹಮ್ಮದೀಯರನ್ನು ವಿಧಾನ ಪರಿಷತ್‌ಗಳಲ್ಲಿ ಸದಸ್ಯರನ್ನಾಗಿ ಸೇರಿಸಿಕೊಳ್ಳುವ ಅವಕಾಶದಷ್ಟು ಈ ಯೋಜನೆ ಪರಿಣಾಮಕಾರಿಯಾಗುವುದಿಲ್ಲ".

ಸ್ವಾಭಾವಿಕವಾಗಿಯೇ ಮಾಂಟಗ್ಯೂ - ಚೆಮ್ಸ್‌ಫರ್ಡ್ ವರದಿಯಲ್ಲಿ ಕೂಡ ಪ್ರಬಲವಾಗಿ ನಿರಾಕೃತವಾದ ಮಹಮ್ಮದೀಯರಿಗೆ ಪ್ರತ್ಯೇಕ ಚುನಾಯಿತ ಸಮುದಾಯ ರಚಿಸುವ ವಿಷಯವೇ ಹೊಸ ಸಂವಿಧಾನದ ಬಗೆಗಿನ ಅತ್ಯಂತ ಅಪೇಕ್ಷಣೀಯ ಅಂಶವಾಗಿತ್ತು. ಇದಕ್ಕೆ ಪ್ರಮುಖವಾಗಿ ಸ್ವತಃ ಮಿಂಟೋ ಹೊಣೆಗಾರನಾಗಿದ್ದರೂ, ಮಾರ್ಲೆಯೇ ಮೊದಲು ಹೆಚ್ಚು ಉತ್ಸಾಹ ತಾಳಿದನೆಂಬ ವಾಸ್ತವಾಂಶವನ್ನು ಸಾಮಾನ್ಯವಾಗಿ ನಿರ್ಲಕ್ಷಿಸಲಾಗಿದೆ. 1906 ನೆಯ ಅಕ್ಟೋಬರ್ 26 ರಂದು ಅವನು ಮಿಂಟೋಗೆ ಹೀಗೆ ಬರೆದಿದ್ದ ; "ಇಡೀ ವಿಷಯವೇ (ಎಂದರೆ ಅಕ್ಟೋಬರ್ 12 ರ ಮುಸ್ಲಿಮರ ನಿಯೋಗ) ಸಾಧ್ಯವಿರುವಷ್ಟು ಅತ್ಯುತ್ತಮ ವಿಷಯವಾಗಿದೆ". ಮುಂದಿನ ಒಂದು ಹಂತದಲ್ಲಿ ಪ್ರತ್ಯೇಕ ಚುನಾಯಿಕ ಸಮುದಾಯಗಳ ವಿರುದ್ಧವಾಗಿ ಮಾರ್ಲೆ ಪ್ರತಿಭಟಿಸಿದ. ಆದರೆ ಕೊನೆಯಲ್ಲಿ ಭಾರತ ಸರ್ಕಾರದ ನಿರ್ಣಯಕ್ಕೆ ಅವನು ಒಪ್ಪಲೇ ಬೇಕಾಗಿ ಬಂತು. ಈ ಕ್ರಮದಿಂದ ಪ್ರತ್ಯಕ್ಷ ಪ್ರಯೋಜನ ನಿರ್ಣಯಕ್ಕೆ ಅವನು ಬಿಟ್ಟುಳಿಯದಂತೆ ಬ[illegible]ಮಟ್ಟಿಗೆ ಉಳಿದೆಲ್ಲರೂ ಇದನ್ನು ಖಂಡಿಸಿದರು. ಅನಂತರ ಸಂಭವಿಸಿದ ಘಟನೆಗಳು, ಈ ಕ್ರಮವನ್ನು ವಿರೋಧಿಸಿದವರ ಅಭಿಪ್ರಾಯವನ್ನು ಅಂತೆಯೇ ಅದರ ಕೆಡುಕಿನ ಪರಿಣಾಮಗಳನ್ನು ಸಂಪೂರ್ಣವಾಗಿ ಸಮರ್ಥಿಸಿದವು. ನಿಜವಾಗಿಯೂ, ಮುಸ್ಲಿಮರಿಗೆ ಪ್ರತ್ಯೇಕ ಚುನಾಯಿಕ ಸಮುದಾಯದ ಅವಕಾಶ ಒದಗಿಸಿಕೊಡುವ ಮಿಂಟೋನ 1906 ನೆಯ ಅಕ್ಟೋಬರ್ 1 ರ ಆಶ್ವಾಸನೆಯೇ ನಾಂದಿಯಾಗಿದ್ದು ನಿಧಾನವಾಗಿ ಹಾಗೂ ಒಂದೇ ಸಮನೆ ಮುಂದುವರಿದ ಈ ಪ್ರಕ್ರಿಯೆ ನಲ್ವತ್ತು ವರ್ಷಗಳ ಅನಂತರ ಭಾರತದ ವಿಭಜನೆಯೆಂಬ ಅನಿವಾರ್ಯ ಅಂತ್ಯದಲ್ಲಿ ಕೊನೆಗೊಂಡಿತು. ಮಾರ್ಲೆ ಮತ್ತು ಮಿಂಟೋ ಇಬ್ಬರೂ ಬ್ರಿಟಿಷರ ಆಡಳಿತ ಕಾಲದಲ್ಲಿ ಭಾರತೀಯರ ಮಹಾ ಸಾಧನೆಯೆನಿಸಿದ ಭಾರತದ ರಾಜಕೀಯ ಐಕ್ಯಮತ್ಯಕ್ಕೆ ಮಾರಕ ಕೊಡಲಿಯೇಟು ಹೊಡೆದ ಆರೋಪಕ್ಕೆ ಸರಿಸಮನಾಗಿ ಪಾತ್ರವೆನಿಸಿದ್ದಾರೆ.

ಸುಲಭವಾಗಿ ನಿರೀಕ್ಷಿಸಬಹುದಾದಂತೆ, ಸುಧಾರಣೆಗಳಿಗೆ ಸಂಬಂಧಪಟ್ಟಂತೆ ಭಾರತದ ಬೇರೆ ಬೇರೆ ರಾಜಕೀಯ ಪಕ್ಷಗಳ ಮನೋಭಾವನೆ ತುಂಬಾ ವಿಭಿನ್ನವಾಗಿತ್ತು; ರಾಷ್ಟ್ರೀಯವಾದಿಗಳು ಹಾಗೂ ತೀವ್ರಗಾಮಿ ಪಕ್ಷದವರೂ ಇದರ ಬಗ್ಗೆ ಯಾವುದೇ ಮಾತುಕತೆ ಹೊಂದಿರಲಿಲ್ಲ ಮತ್ತು ಇದು ಮೂಲವಸ್ತುವೇ ಇಲ್ಲದ ಕೇವಲ ಒಂದು ನೆರಳು ಎಂದು ಅವರು ಭಾವಿಸಿದ್ದರು. ಇನ್ನೊಂದೆಡೆ,

ಮದ್ಯಗಾಮಿಗಳು ಅತ್ಯುತ್ಸಾಹದಿಂದ ಈ ಸುಧಾರಣೆಗಳನ್ನು ಸ್ವಾಗತಿಸಿದ್ದರು. ಡಿಸೆಂಬರ್ 1908 ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ನುಮೋದಿಸಿದ ನಿರ್ಣಯದಿಂದ ಇದು ಸಾಬೀತಾಗುತ್ತದೆ. ಮದ್ಯಗಾಮಿ ಪಕ್ಷದ್ದೇ ಆದ ಇನ್ನೊಂದು ಸಂಘಟನೆ ಕೂಡ ಆನಂತರ ಈ ನಿರ್ಣಯವನ್ನು ಅನುಮೋದಿಸಿದರೆ ಈ ಎಲ್ಲ ಸಂದರ್ಭಗಳಲ್ಲಿ ಪಕ್ಷದ ಇಬ್ಬರು ಪ್ರಮುಖ ಮುಖಂಡರಾದ ಸುರೇಂದ್ರನಾಥ ಬ್ಯಾನರ್ಜಿ ಮತ್ತು ಜಿ.ಕೆ. ಗೋಖಲೆ ನೀಡಿದ ಉಪನ್ಯಾಸಗಳಿಂದಲೂ ಈ ಅಂಶ ಖಚಿತವಾಗುತ್ತದೆ.

ಆದರೂ ಮದ್ಯಗಾಮಿಗಳ ಉತ್ಸಾಹವೂ ಅಲ್ಪಾವಧಿಯಾಗಿತ್ತು. ಸರಿಯಾಗಿ ಒಂದು ವರ್ಷದ ಆನಂತರ, 1909 ನೆಯ ಡಿಸೆಂಬರ್ 27 ರಂದು ನಡೆದ ಕಾಂಗ್ರೆಸ್ ಲಾಹೋರ್ ಅಧಿವೇಶನದಲ್ಲಿ ಅಧ್ಯಕ್ಷ ಮದನ್ ಮೋಹನ್ ಮಾಳವೀಯ ಅವರು ಅಭಿಪ್ರಾಯದ ಸಮಗ್ರ ಬದಲಾವಣೆಯಾಗಿರುವ ಅಂಶವನ್ನು ಪ್ರಕಟ ಪಡಿಸಿದರು. ಹಿಂದಿನ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಸಂತೋಷದಿಂದಲೇ ಸುಧಾರಣೆಗಳನ್ನು ಸ್ವಾಗತಿಸಿದ್ದರು. ಆದರೆ ಪ್ರಸ್ತುತ ಅಧಿವೇಶನದ ಐದು ವಾರಗಳ ಹಿಂದೆ ಹೊರಡಿಸಲಾದ ನಿಯಮಗಳು ತುಂಬಾ ನಿರಾಸೆ, ಅತೃಪ್ತಿಗಳನ್ನು ಉಂಟು ಮಾಡಿದವು. ಆದ್ದರಿಂದ ಕಾಂಗ್ರೆಸ್ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಕಾಣಿಸಿದ ನಿರ್ಣಯವನ್ನು ಅಂಗೀಕರಿಸಿತು.

1909 ನೆಯ ಇಂಡಿಯಾ ಕೌನ್ಸಿಲ್ ಕಾಯಿದೆಯನ್ವಯ, ಸಾಕಷ್ಟು ಉದಾರವಾದ ಸಂವಿಧಾನಾತ್ಮಕ ಸುಧಾರಣಾ ಕ್ರಮಗಳನ್ನು ಈ ದೇಶದ ಜನತೆಗೆ ವಿಸ್ತರಿಸುವಲ್ಲಿ ಲಾರ್ಡ್ ಮಾರ್ಲೆ ಮತ್ತು ಲಾರ್ಡ್ ಮಿಂಟೋ ಅವರ ಪ್ರಾಮಾಣಿಕ ಹಾಗೂ ಪ್ರಯಾಸಕರ ಪ್ರಯತ್ನಗಳನ್ನು ಕೃತಜ್ಞತೆಯೊಂದಿಗೆ ಮೆಚ್ಚಿಕೊಳ್ಳುವಾಗಲೇ ಈ ಕಾಂಗ್ರೆಸ್ ಪಕ್ಷವು ಧರ್ಮದ ಆಧಾರದ ಮೇಲೆ ಪ್ರತ್ಯೇಕ ಚುನಾಯಿಕ ಸಮುದಾಯಗಳನ್ನು ರಚಿಸುವ ಕ್ರಮಕ್ಕೆ ತನ್ನ ಅನುಮೋದನೆಯಿಲ್ಲವೆಂದು ಸ್ಪಷ್ಟವಾಗಿ ಸೂಚಿಸುವುದು ತನ್ನ ಕರ್ತವ್ಯವೆಂದು ಭಾವಿಸುತ್ತದೆ; ಅಷ್ಟೇ ಅಲ್ಲ, ಕಾಯಿದೆಯ ಅಡಿ ರೂಪಿಸಲಾದ ನಿಯಮಗಳನ್ನು ಲಾರ್ಡ್ ಮಾರ್ಲೆ,ಕಳೆದ ವರ್ಷದ ಪತ್ರದಲ್ಲಿ ವ್ಯಕ್ತ ಪಡಿಸಿದ ಅದೇ ಉದಾರ ಭಾವನೆಯ ಸ್ಪೂರ್ತಿಯಲ್ಲಿ ರೂಪಿಸಲಾಗಿಲ್ಲ ಎಂಬ ಬಗ್ಗೆ ವಿಷಾದವನ್ನು ಸೂಚಿಸುತ್ತದೆ. ಮುಖ್ಯವಾಗಿ, ಈ ನಿಯಮಗಳು ದೇಶಾದ್ಯಂತ ತುಂಬ ಅತೃಪ್ತಿಗಳನ್ನು ಉಂಟುಮಾಡಿವೆ ಇದಕ್ಕೆ ಕಾರಣಗಳು ಹೀಗಿವೆ;

(ಅ) ಒಂದು ನಿರ್ದಿಷ್ಟ ಧರ್ಮದ ಅನುಯಾಯಿಗಳಿಗೆ ನೀಡಲಾದ ಅತ್ಯಧಿಕವೆನಿಸುವ ಹಾಗೂ ಸಾಕಷ್ಟು ನ್ಯಾಯ ಬದ್ಧವೆನಿಸಿದ ಪ್ರಾತಿನಿಧ್ಯ

(ಆ) ಚುನಾಯಿಕ ಸಮುದಾಯಗಳು, ಮತದಾನದ ಹಕ್ಕು ಹಾಗೂ ಅಭ್ಯರ್ಥಿಗಳ ಅರ್ಹತೆಗಳೇ ಮೊದಲಾದ ವಿಷಯಗಳಲ್ಲಿ ಘನತೆವೆತ್ತ ಮಹಾಪ್ರಭುಗಳು ಮುಸ್ಲಿಂ ಮತ್ತು ಮುಸ್ಲಿಮೇತರ ಪ್ರಜೆಗಳ ನಡುವೆ ಉಂಟುಮಾಡಿರುವ ಅಸಮರ್ಥನೀಯ ಮಾತ್ಸರ್ಯಕಾರಕವೂ ಅಪಮಾನಕಾರವೂ ಆದ ಬೇಧಭಾನೆಗಳು;

(ಇ) ಕೌನ್ಸಿಲ್‌ಗಳ ಚುನಾವಣೆಗೆ ನಿಲ್ಲುವ ನಿರ್ಬಂಧಗಳು; ಮತ್ತು ಅವಿಚಾರಕ ಹಾಗೂ ಅವಿವೇಕ ಪೂರ್ಣವಾದ ಅನರ್ಹತೆಗಳು ಮತ್ತು ನಿರ್ಬಂಧಗಳು; ಮತ್ತು

(ಈ) ಸಮಗ್ರ ನಿಯಮಗಳನ್ನು ಕುರಿತಂತೆ ಸುಶಿಕ್ಷಿತ ವರ್ಗಗಳಿಗೆ ಸೇರಿದವರಲ್ಲಿ ಸಾಮಾನ್ಯವಾಗಿ ಕಂಡು ಬರುವ ಅವಿಶ್ವಾಸ.

(ಉ) ಪ್ರಾಂತೀಯ ಕೌನ್ಸಿಲ್‌ಗಳಲ್ಲಿ ಬಹುಸಂಖ್ಯಾತ ಅಧಿಕಾರೇತರರಿಗೆ ನೀಡಲಾದ ಅತೃಪ್ತಿಕರ ಪ್ರಾತಿನಿಧ್ಯ ಹಾಗೂ ಕಾರ್ಯರೂಪದ ಎಲ್ಲ ಉದ್ದೇಶಗಳಲ್ಲಿ ಆ ಸದಸ್ಯರಿಗೆ ನೀಡಲಾದ ಪರಿಣಾಮರಹಿತ ಮತ್ತು ಅವಾಸ್ತವಿಕ ಮಹತ್ವ.

ಆದ್ದರಿಂದ ಸದ್ಯದ ಚುನಾವಣೆಗಳು ಮುಗಿದ ಕೂಡಲೇ ನಿಯಮಗಳ ಈ ಅಪೇಕ್ಷಣೀಯ ಅಂಶಗಳು ದೂರವಾಗುವಂತೆ ಅವುಗಳನ್ನು ಪರಿಪಾಲಿಸಬೇಕೆಂದೂ ರಾಜ ಸಂದೇಶ ಹಾಗೂ ಸೆಕ್ರೆಟರಿ ಆಫ್ ಸ್ಟೇಟ್ ಅವರ ಕಳೆದ ವರ್ಷದ ಪತ್ರ - ಇವುಗಳಲ್ಲಿ ಕಂಡು ಬರುವ ಸ್ಪೂರ್ತಿಯೊಂದಿಗೆ ಸಾಮರಸ್ಯ ಮೂಡಿಸಬೇಕೆಂದು ಪ್ರಸ್ತುತ ಕಾಂಗ್ರೆಸ್ ಸವಿನಯವಾಗಿ ಸರ್ಕಾರವನ್ನು ಪ್ರಾರ್ಥಿಸುತ್ತದೆ".

ಈ ನಿರ್ಣಯವನ್ನು ಮುಂದಿಡುವಾಗ, ಸುರೇಂದ್ರನಾಥ ಬ್ಯಾನರ್ಜಿ ಹೀಗೆಂದರು: "ಉದ್ದೇಶದ ಉಪಯುಕ್ತತೆ ಹಾಗೂ ಗೌರವಾರ್ಹವಾದ ರಾಯಭಾರೀ ಕೌಶಲ ಇವುಗಳೊಂದಿಗೆ ಮೂಲತಃ ರೂಪಿಸಲಾದ ಸುಧಾರಣಾ ಯೋಜನೆಯನ್ನು ಕಾಯಿದೆಯ

ನಿಯಮ-ನಿರ್ಬಂಧನೆಗಳು ಕಾರ್ಯತಃ ಶಿಥಿಲಗೊಳಿಸಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯೆನಿಸದು. ಯೋಜನೆಯನ್ನು ಶಿಥಿಲಗೊಳಿಸಿದವರು ಯಾರು? ಭರವಸೆಯಿಂದ ಕೂಡಿದ ಪ್ರಯೋಗವನ್ನು ನಿರುತ್ಸಾಹಕರ ಸೋಲನ್ನಾಗಿ ಪರಿವರ್ತಿಸಿದವರು ಯಾರು? ಅಧಿಕಾರಿಶಾಹಿಗಳ ಭುಜಗಳ ಮೇಲೆ ಈ ಜವಾಬ್ದಾರಿ ನಿಂತಿದೆ, ಈ ವಿನಾಯಿತಿಗಳನ್ನು ಪಡೆದುಕೊಳ್ಳುವಲ್ಲಿ ನಾವು ವಹಿಸಿದ ಪಾತ್ರಕ್ಕೆ ಪ್ರತಿಯಾಗಿ ಅಧಿಕಾರಿಶಾಹಿಗಳು ನಮ್ಮ ಮೇಲೆ ಪ್ರತೀಕಾರ ಭಾವನೆ ಹೊಂದಿದ್ದಾರೆಯೇ?" ಇಷ್ಟಾಗಿಯೂ, ಮಧ್ಯಗಾಮಿಗಳು ಆಸೆಯನ್ನು ಬಿಡಬಾರದು ಹಾಗೂ ಸಂವಿಧಾನಾತ್ಮಕ ಪ್ರತಿಭಟನೆಯಲ್ಲಿ ಶ್ರದ್ಧೆಯನ್ನು ಕಳೆದುಕೊಳ್ಳಬಾರದು ಎಂದು ಅವರು ಜನತೆಯನ್ನು ಒತ್ತಾಯಿಸಿದರು.

1909 ರ ಸುಧಾರಣೆಗಳಿಗೆ ತೀವ್ರಗಾಮಿಗಳು ಮತ್ತು ಅಂತೆಯೆ ಮಧ್ಯಗಾಮಿಗಳು ತೆ ೀರಿಸಿದ ಪ್ರತಿಕ್ರಿಯೆಗಳನ್ನು ನಾವು ಈಗಲೇ ತಿಳಿಸಿದ್ದೇವೆ. ಪ್ರಾಯಶಃ ಅಂತಿಮವಾಗಿ ಇವುಗಳ ಪರವಾಗಿ ಹೇಳಬಹುದಾದುದೇನೆಂದರೆ ಮಾಂಟಿಗ್ಯೂ - ಚೆಮ್ಸ್‌ಫರ್ಡ್ ವರದಿಯ ಬಗೆಗಿನ ವಿಮರ್ಶೆಯ ಮಾತುಗಳು ಅಷ್ಟೇ. ಸುಧಾರಣೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಉದ್ದೇಶ ಮತ್ತು ನಿರೀಕ್ಷೆಗಳ ಬಗ್ಗೆ ಈ ವರದಿಯಲ್ಲಿ ಹೀಗೆ ಹೇಳಲಾಗಿದೆ:

"ಭಾರತದಲ್ಲಿ ಬ್ರಿಟಿಷ್ ಸರ್ಕಾರ ಸ್ಥಾಪನೆಯ ಮೂಲಾಂಶಗಳಲ್ಲಿ ವಿವೇಚನೆಯಿಂದ ಕೂಡಿದ್ದೆಂದು ತಾನು ಗ್ರಹಿಸಿದ ಎರಡು ಘಟಕಗಳನ್ನು ಒಂದೇ ಸರ್ಕಾರದಲ್ಲಿ ಒಂದುಗೂಡಿಸುವುದು ಹೇಗೆ ಎಂಬುದೇ ಲಾರ್ಡ್ ಮಿಂಟೋ ಸರ್ಕಾರ ಪರಿಹರಿಸಲು ಯೋಜಿಸಿದ ಸಮಸ್ಯೆಯಾಗಿತ್ತು. ಅದು ಮೊಘಲ್ ಚಕ್ರವರ್ತಿಗಳು ಮತ್ತು ಹಿಂದೂ ರಾಜರುಗಳಿಂದ ಪಡೆದುಕೊಂಡ ಸ್ವಯಂ ಪ್ರಭುತ್ವದ ಸಿದ್ಧಾಂತವನ್ನು ಬ್ರಿಟಿಷ್ ಚಕ್ರಾಧಿಪತ್ಯ ಹಾಗೂ ಬ್ರಿಟಿಷ್ ಪಾರ್ಲಿಮೆಂಟ್‌ಗಳಿಂದ ಪಡೆದುಕೊಂಡ ಸಂವಿಧಾನಾತ್ಮಕತಾ ಸಿದ್ಧಾಂತದೊಂದಿಗೆ ಸಂಯೋಜಿಸಲು ಮತ್ತು ಏಷ್ಯಾ ಖಂಡದ ನಿರಂಕುಶ ಪ್ರಭುತ್ವದಿಂದ ಆಕಾಶದಷ್ಟು ವ್ಯತ್ಯಾಸ ಹೊಂದಿದ ಸಂವಿಧಾನಾತ್ಮಕ ನಿರಂಕುಶ ಪ್ರಭುತ್ವವನ್ನು ಜಾರಿಗೆ ತರಲು ಬಯಸಿತು. ಇಂತ ಸರ್ಕಾರ ನಿಯಮಾನುಸಾರ ಆಡಳಿತ ನಡೆಸಲು ಸ್ವಯಂ ಬದ್ಧವಾಗಿರುತ್ತದೆ; ಪ್ರತಿನಿಧಿಸಲು ಸಮರ್ಥವಾದ ಎಲ್ಲ ಹಿತಾಸಕ್ತಿಗಳ ಕೌನ್ಸಿಲ್ ಪ್ರತಿನಿಧಿಗಳ ಸಲಹೆ ಕೇಳುತ್ತದೆ. ಸರ್ಕಾರ ರಚಿಸಬಯಸಿದ ಸಂವಿಧಾನಕ್ಕೆ ಸಂಪ್ರದಾಯವಾದೀ ಅಭಿಪ್ರಾಯ ಸ್ಪಷ್ಟ ರೂಪ ಕೊಡುತ್ತದೆ ಹಾಗೂ ಮುಂದೆ ಯಾವುದೇ ಬದಲಾವಣೆ ಉಂಟಾಗದಂತೆ ವಾಸ್ತವವಾಗಿ ವಿರೋಧಿಸುತ್ತದೆ. ಸಮಾಜದಲ್ಲಿ ಮತ್ತು ಆಗ ಭಾರತದ ರಾಜಕೀಯದಲ್ಲಿ ಯಾವುದೇ ಸ್ಥಾನವನ್ನು ಹೊಂದಿರದ ಮಧ್ಯಗಾಮಿ ಪಕ್ಷದ ವ್ಯಕ್ತಿಗಳಲ್ಲಿ ಕಂಡುಬರುವ ನಿರಂಕುಶಾಧಿಕಾರದ ಘಟಕ ಸರ್ಕಾರದತ್ತ ವ್ಯಾಪಿಸಿರುತ್ತದೆ ಹಾಗೂ ಅಧಿಕಾರದ ಸ್ಥಿರತೆಯಲ್ಲಿ ಮುಂದೆ ಆಗುವ ಯಾವುದೇ ಬದಲಾವಣೆಗೆ ಮತ್ತು ಭಾರತೀಯ ಸಂಘ ಸಂಸ್ಥೆಗಳನ್ನು ಪ್ರಜಾಸತ್ತಾತ್ಮಕಗೊಳಿಸಲು ಯಾವುದೇ ಪ್ರಯತ್ನಕ್ಕೆ ವಿರೋಧ ಕಂಡು ಬರುತ್ತದೆ".

ಸುಧಾರಣೆಗಳ ನಿಜವಾದ ಸ್ವರೂಪಕ್ಕೆ ಸಂಬಂಧಪಟ್ಟಂತೆ ಅದೇ ವರದಿ ಹೀಗೆ ಹೇಳಿದೆ: "ಆದರೆ 1909 ರ ಸುಧಾರಣೆಗಳಿಂದ ಯಾವುದೇ ಉತ್ತರ ಸಿಕ್ಕಿಲ್ಲ. ಭಾರತದ ರಾಜಕೀಯ ಸಮಸ್ಯೆಗಳನ್ನು ಕುರಿತಂತೆ ಯಾವ ಉತ್ತರವನ್ನು ನೀಡುವ ಸಾಮರ್ಥ್ಯವೂ ಈ ಸುಧಾರಣೆಗಳಿಗಿಲ್ಲ. ಪರಿಮಿತವಾದ ಚುನಾವಣಾಧಿಕಾರ ಹಾಗೂ ಪರೋಕ್ಷವಾದ ಚುನಾವಣೆಗಳು ಸದಸ್ಯರಲ್ಲಿ ಸಾಮಾನ್ಯವಾಗಿ ಸಾರ್ವಜನಿಕರ ಬಗ್ಗೆ ತೋರಬೇಕಾದ ಜವಾಬ್ದಾರಿಯ ಮನೋಭಾವನೆಯನ್ನು ಉತ್ತೇಜಿಸುವಲ್ಲಿ ವಿಶೇಷ ಮತದಾನ ಕ್ಷೇತ್ರಗಳನ್ನು ಹೊರತು ಪಡಿಸಿ, ಉಳಿದ ಮತದಾನ ಕ್ಷೇತ್ರಗಳಲ್ಲಿ ಮತದಾನದ ಹಕ್ಕುಳ್ಳವರಿಗೆ, ಗ್ರಹಣಶಕ್ತಿಯೊಂದಿಗೆ ಹಾಗೂ ಪರಿಣಾಮಕಾರಿಯಾಗಿ ತಮ್ಮ ಮತಗಳನ್ನು ಬಳಸಿಕೊಳ್ಳುವುದು ಅಸಾಧ್ಯವಾಗಿದೆ. ಇದಕ್ಕಿಂತ ಹೆಚ್ಚಾಗಿ ಆಡಳಿತದ ಹೊಣೆಗಾರಿಕೆ ಅವಿಭಜಿತವಾಗಿ ಉಳಿದಿದೆ. ಇದರ ಫಲಿತಾಂಶವಾಗಿ ಈವರೆಗೆ ಹೆಚ್ಚಾಗಿ ಸರ್ಕಾರವೇ ಪ್ರಶ್ನೆಗಳಿಗೆ ಮತ್ತು ಟೀಕೆಗಳಿಗೆ ಸ್ಪಷ್ಟೀಕರಣ ನೀಡಬೇಕಾಗಿ ಬಂದಿದೆ. ಸಮಗ್ರವಾಗಿ ಅಥವಾ ಭಾಗಶಃ ಆಗಿ ಚುನಾಯಿತ ಕೌನ್ಸಿಲ್‌ಗಳಿಗೆ ಬಗ್ಗುವ ಜವಾಬ್ದಾರಿ ಕಾರ್ಯಾಂಗದ ಕಲ್ಪನೆಯನ್ನು ಒಪ್ಪಿಕೊಳ್ಳಲಾಗಿಲ್ಲ. ಅಧಿಕಾರ ಸರ್ಕಾರದ ಕೈಯಲ್ಲಿ ಉಳಿದಿದೆ. ಕೌನ್ಸಿಲ್‌ಗಳಿಗೆ ಟೀಕೆ ಮಾಡುವುದನ್ನು ಬಿಟ್ಟರೆ ಬೇರೆ ಕೆಲಸವೇ ಇಲ್ಲ. ಕಛೇರಿ ಅಧಿಕಾರಿಗಳ ಕಟ್ಟುಪಾಡುಗಳನ್ನು ಸಡಿಲಗೊಳಿಸಲು ಯಾವುದೇ ಕಾರಣ ಕಂಡು ಬರುತ್ತಿಲ್ಲ. ಸ್ಥಳೀಯ ಸರ್ಕಾರಗಳು ಭಾರತ ಸರ್ಕಾರದ ಹಾಗೂ ಅನಂತರ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಪಾರ್ಲಿಮೆಂಟ್‌ಗಳ ಅಧೀನಕ್ಕೆ ಒಳಪಟ್ಟಿವೆ. ನಮ್ಮ ಅಭಿಪ್ರಾಯದಲ್ಲಿ ಮಾರ್ಲೆ ಮಿಂಟೋ ಸುಧಾರಣೆಗಳು, ಭಾರತ ಸರ್ಕಾರವನ್ನು ಉಪಕಾರಬುದ್ಧಿಯುಳ್ಳ ನಿರಂಕುಶ ಪ್ರಭುತ್ವವನ್ನಾಗಿ (ಬಹುದೂರದಲ್ಲಿರುವ ಹಾಗೂ ಸಾಂದರ್ಭಿಕವಾಗಿ ಮಾತ್ರ ಜಾಗರೂಕವಾಗುವ ಪ್ರಜಾಪ್ರಭುತ್ವದಿಂದ ಸಿದ್ಧಗೊಂಡದ್ದು) ಮಾಡಿದ ಹಳೆಯ ನರಿಕಲ್ಪನೆಯ ಅಂತಿಮ ಫಲಿತಾಂಶವಾಗಿದೆ. ಇಂತಹ ಸರ್ಕಾರ ಪ್ರಜೆಗಳ ಉದ್ದೇಶ ಪೂರೈಕೆಗೆ ತಕ್ಕುದಾಗಿದ್ದು, ಅವರ ಆಸೆ ಆಕಾಂಕ್ಷೆಗಳನ್ನು ಗಣನೆಗೆ

ತೆಗೆದುಕೊಳ್ಳುತ್ತದೆ. ಕೌನ್ಸಿಲ್‌ಗಳು ಗರಿಷ್ಠ ಪ್ರಮಾಣದ ಘರ್ಷಣೆಗೆ ಕಾರಣವಾಗುವ ಹಂತದವರೆಗೆ ಅವುಗಳಲ್ಲಿ ಪಾರ್ಲಿಮೆಂಟ್ ಸಂಪ್ರದಾಯಗಳನ್ನು ಆರಂಭಿಸಲಾಗಿದೆ ಹಾಗೂ ಅನುಸರಿಸಲಾಗಿದೆ. ಆದರೆ ಅವುಗಳ ಹಿಂದೆ ನಿಜವಾದ ಅನುಮೋದನೆಯಿದ್ದಾಗ ಅವು ಒಳಿತನ್ನು ಮಾಡಲು ಪ್ರಾರಂಭಿಸುತ್ತವೆ. ಭಾರತದ ಪ್ರಸ್ತುತ ಪರಿಸ್ಥಿತಿಯಲ್ಲಿ ನಾವು ಹಳೆಯ ಪದ್ಧತಿಯ ಉತ್ತಮತೆಯನ್ನು ಹೊಂದಿಲ್ಲ, ಹೊಸ ಪದ್ಧತಿಯ ಉತ್ತಮತೆಯನ್ನು ಹೊಂದಿಲ್ಲ.

## 82.7 ಉಪಸಂಹಾರ

ಆದ್ದರಿಂದ 1909 ರ ಸುಧಾರಣೆಗಳು ಭಾರತದಲ್ಲಿನ ಸಾರ್ವಜನಿಕ ಅಭಿಪ್ರಾಯವನ್ನು ತೃಪ್ತಿಪಡಿಸುವಲ್ಲಿ ವಿಫಲವಾದುದರಲ್ಲಿ ಆಶ್ಚರ್ಯವೇನೂ ಇಲ್ಲ. ಇವುಗಳನ್ನು 1908 ರಲ್ಲಿ ಮಧ್ಯಗಾಮಿಗಳೇನೂ ಸ್ವಾಗತಿಸಿದರೆಂಬುದರಲ್ಲಿ ಸಂಶಯವಿಲ್ಲ. ಆಗ ಅವರಿಗೆ ರಾಜಕೀಯವಾಗಿ ಜಾಗೃತವಾದ ಭಾರತವನ್ನು ಪ್ರತಿನಿಧಿಸುವ ಅವಕಾಶವಿರಲಿಲ್ಲ. ಆದರೆ ಒಂದು ವರ್ಷ ಕಳೆಯುವ ಮುನ್ನವೇ ಅವರಿಗೆ ಭ್ರಮನಿರಸನವಾಯಿತು. ಮಾಂಟೆಗ್ಯೂ - ಜೆಮ್ಸ್‌ಫರ್ಡ್ ವರದಿಯ ಪ್ರಕಾರ 1918 ರ ವೇಳೆಗೆ ಸುಧಾರಣೆಗಳು ತಮ್ಮ ಉಪಯುಕ್ತತೆಯನ್ನು ಕಳೆದುಕೊಂಡವು ಹಾಗೂ ಇವು ಬಹಳ ಕಾಲ ಭಾರತದ ಜನಾಭಿಪ್ರಾಯಕ್ಕೆ ಒಪ್ಪಿಗೆಯಾಗುವಂತೆ ಉಳಿಯಲಿಲ್ಲ. 1909 ರ ಕಾಯಿದೆಯನ್ನು ಒಪ್ಪುವುದು ಎಂದಿಗೂ ಸಾಧ್ಯವಿಲ್ಲ. ನಿಜವಾಗಿ ಅದೊಂದು 'ಮೃತಜಾತ ಶಿಶು' ಎಂದು ಹೇಳುವುದು ಹೆಚ್ಚು ಸರಿಯಾಗಿದೆ.

## 82.8 ಮಾದರಿಯ ಪ್ರಶ್ನೆಗಳು

1. 1909 ರ ಮಿಂಟೋ -ಮಾರ್ಲೆ ಸುಧಾರಣೆಗಳ ಪ್ರಮುಖ ಲಕ್ಷಣಗಳನ್ನು ಬರೆಯಿರಿ?
2. ರಾಷ್ಟ್ರೀಯ ನಾಯಕತ್ವದ ಹಿನ್ನೆಲೆಯಲ್ಲಿ ಮಿಂಟೋ-ಮಾರ್ಲೆ ಸುಧಾರಣೆಗಳ ಸಂವಿಧಾನಾತ್ಮಕ ಪ್ರಗತಿಯನ್ನು ವಿವರಿಸಿ?

## 82.9 ಪರಾಮರ್ಶನ ಕೃತಿಗಳು

1. M.V. Pylee : **"The Constitutional Histlry of India"**
2. R.C. Majumdar : **"Advanced History of India"**

ಡಾ. ಎನ್. ಸರಸ್ವತಿ
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,
ಮೈಸೂರು

## ಟಿಪ್ಪಣಿಗಳು

## ಘಟಕ - 83

# ಮೊದಲನೆಯ ಮಹಾಯುದ್ಧ, ಭಾರತದ ಕ್ರಾಂತಿಕಾರಿ ಚುನಾವಣೆಗಳು ಮತ್ತು ಮಾಂಟಿಗ್ಯೂ ಜೆಮ್ಸ್‌ಫರ್ಡ್ ವರದಿ

83.0 ಪ್ರಸ್ತಾವನೆ

83.1 ಬಂಗಾಳದಲ್ಲಿ ಕ್ರಾಂತಿಕಾರಿ ಚಟುವಟಿಕೆಗಳು

83.2 ಪಂಜಾಬ್‌ನಲ್ಲಿ ಕ್ರಾಂತಿಕಾರಿ ಚಟುವಟಿಕೆಗಳು- ಮುಸ್ಲಿಂ ಪಿತೂರಿ

83.3 ಅಮೆರಿಕಾದಿಂದ ಹಿಂದಿರುಗುತ್ತಿದ್ದ ಕ್ರಾಂತಿಕಾರಿ ಚಟುವಟಿಕೆಗಳು

83.4 ಮಾಂಟಿಗ್ಯೂ-ಜೆಮ್ಸ್ ಫರ್ಡ್ ವರದಿಗೆ ಪ್ರತಿಕ್ರಿಯೆ

83.5 ಉಪಸಂಹಾರ

83.6 ಮಾದರಿಯ ಪ್ರಶ್ನೆಗಳು

83.7 ಪರಾಮರ್ಶನ ಕೃತಿಗಳು

## 83.0 ಪ್ರಸ್ತಾವನೆ

ಬರ್ಲಿನ್ ಸಮಿತಿ ಹಾಗೂ ಅಮೇರಿಕಾದಲ್ಲಿ ಕಾರ್ಯ ನಿರತವಾಗಿದ್ದ ಘಟಕ ಸಮಿತಿ ಇವುಗಳ ವ್ಯಾಪಕ ಪರಿಣಾಮ ಭಾರತದ ಮೇಲೆ ಉಂಟಾಯಿತು. ಜರ್ಮನಿಯಿಂದ ಭಾರತಕ್ಕೆ ಶಸ್ತ್ರಾಸ್ತ್ರಗಳ ಸರಬರಾಜು ಮಾಡುವ ವ್ಯವಸ್ಥೆ ನಡೆದಿದೆಯಾದರೂ, ತಮ್ಮೊಡನೆ ಸೇರಲು ಹೆಚ್ಚಿನ ಸಂಖ್ಯೆಯಲ್ಲಿ ಅಮೆರಿಕಾದಿಂದ ಪಂಜಾಬಿ ಕ್ರಾಂತಿಕಾರಿಗಳು ಆಗಮಿಸುತ್ತಿದ್ದಾರೆಂದೂ ತಿಳಿದ ಭಾರತೀಯ ಕ್ರಾಂತಿಕಾರಿಗಳು ಹೆಚ್ಚಿನ ಹುಮ್ಮಸ್ಸಿನಿಂದ ಕೆಲಸ ಮಾಡತೊಡಗಿದರು. ಒಟ್ಟಾರೆಯಾಗಿ ಕಾರ್ಯೋನ್ಮುಖವಾಗುವ ಯೋಜನೆ ನಿರ್ದಿಷ್ಟ ರೂಪ ತಳೆಯತೊಡಗಿತು. ಕೊನೆಗೂ ಬಹಳ ಕಾಲದಿಂದ ನಿರೀಕ್ಷಿಸುತ್ತಿದ್ದ ದಿನ ಬಂದೇ ಬಂದಿತು. ಶಸ್ತ್ರಾಸ್ತ್ರಗಳನ್ನು ಪಡೆದುಕೊಳ್ಳುವುದಕ್ಕೆ ಹಾಗೂ ಜೋಪಾನವಾಗಿ ಕಾಪಾಡಿಡುವುದಕ್ಕೆ ಅವುಗಳನ್ನು ಬಳಸಿ ಸಶಸ್ತ್ರ ಕ್ರಾಂತಿ ನಡೆಸುವುದಕ್ಕೆ ತೀವ್ರವಾಗಿ ಸಿದ್ಧತೆಗಳು ನಡೆದವು. ಶಸ್ತ್ರಾಸ್ತ್ರಗಳನ್ನು ಸುರಕ್ಷಿತವಾಗಿ ನೋಡಿಕೊಳ್ಳುವುದಂತೂ ತುಂಬ ಕಷ್ಟ ಸಾಧ್ಯವಾದ ಕೆಲಸವೆನಿಸಿತ್ತು.

## 83.1 ಬಂಗಾಳದಲ್ಲಿ ಕ್ರಾಂತಿಕಾರಿ ಚಟುವಟಿಕೆಗಳು

ಈ ಮಹತ್ವದ ಜವಾಬ್ದಾರಿಯನ್ನು ಜತಿನ್ ಮುಖರ್ಜಿ ಮತ್ತು ಯದುಗೋಪಾಲ ಮುಖರ್ಜಿ ಎಂಬ ಇಬ್ಬರು ಅನುಭವಸ್ಥರಾದ ಕ್ರಾಂತಿಕಾರಿಗಳು ಹಂಚಿಕೊಂಡು ನಿರ್ವಹಿಸಿದರು. ಮಾವೆರಿಕ್ ಹಡಗಿನ ಮೂಲಕ ಬಂದಿಳಿಯುವ ಶಸ್ತ್ರಾಸ್ತ್ರಗಳಲ್ಲಿ ಸ್ವಲ್ಪ ಭಾಗ ಒರಿಸ್ಸಾ ತೀರದ ಬಾಲಸೋಡ್ ಬಳಿಯಲ್ಲೂ ಇನ್ನೊಂದು ಭಾಗ ಸುಂದರ ಬನ್ಸ್ ಬಳಿಯಿರುವ ರಾಮ ಮಂಗಲ್ ಬಳಿಯಲ್ಲೂ ಬರುತ್ತದೆಂದು ಗೊತ್ತಾದಾಗ ಈ ಇಬ್ಬರು ಮುಖಂಡರು ಒಂದೊಂದು ಸ್ಥಳದ ಜವಾಬ್ದಾರಿ ಹೊತ್ತುಕೊಂಡರು. ರಾಮಮಂಗಲದ ಬಳಿಯಿದ್ದ ಜಮೀನ್ದಾರರೊಬ್ಬರ ಮನವೊಲಿಸಿ ಯದು ಗೋಪಾಲ ಮುಖರ್ಜಿ ಹಡಗಿನಿಂದ ಆಯುಧಗಳನ್ನು ಇಳಿಸಲು ಅಗತ್ಯವಾದ ಜನರು, ಕಂದೀಲು ಮುಂತಾದವುಗಳನ್ನು ಪಡೆದುಕೊಂಡರು. ಮಾವೆರಿಟ್ ಹಡಗು ಬಂದಾಗ ಅದರಿಂದ ಸಾಮಾನುಗಳನ್ನು ಇಳಿಸಿಕೊಳ್ಳಲು ಸಹಾಯ ಮಾಡುವ ಸಲುವಾಗಿ ಕೆಲವು ಜನರನ್ನು ಆ ಸ್ಥಳಕ್ಕೆ ಕಳುಹಿಸಿಕೊಡಲಾಯಿತು. ಆದರೆ ಅವರು ಸ್ವಲ್ಪ ದಿನಗಳ ಕಾಲ ಅಲ್ಲಿ ಕಾದಿದ್ದು ಜಪಾನ್ ಕೊನೆಯ ಭಾಗದ ಹೊತ್ತಿಗೆ ಹಾಗೆಯೇ ಹಿಂದಿರುಗಿದರು. ಏಕೆಂದರೆ ಅವರು ನಿರೀಕ್ಷೆ ಮಾಡುತ್ತಿದ್ದ ಮಾವೆರಿಕ್ ಬಂದು ತಲುಪಲಿಲ್ಲ. ಆ ಕಾರಣಗಳನ್ನು ಈ ಹಿಂದೆಯೇ ಪ್ರಸ್ತಾಪಿಸಲಾಗಿದೆಯಷ್ಟೆ.

ತಮ್ಮ ಚಟುವಟಿಕೆಗಳನ್ನು ಸುಗಮವಾಗಿ ನಡೆಸುವ ಸಲುವಾಗಿ ಜತಿನ್ ಮುಖರ್ಜಿ ಬಾಲಸೋಡ್‌ನಲ್ಲಿ ಶಾಖೆಯೊಂದನ್ನು ತೆರೆದರು. ಈ ಶಾಖೆಗೆ ಹಣ ಸಹಾಯ ಬಟೇವಿಯದಲ್ಲಿದ್ದ ಜರ್ಮನ್ ಮೂಲದಿಂದ ಬಂದೊದಗುತ್ತಿತ್ತು. ಕೆಲವು ಕಂತುಗಳಲ್ಲಿ ಒಟ್ಟು 43,000 ರೂಪಾಯಿಗಳ ಹಣ ಕಳುಹಿಸಿಕೊಡಲಾಯಿತಾದರೂ 10,000 ರೂಪಾಯಿಗಳ ಕೊನೆಯ ಕಂತು ಬಂದು ಕೈಸೇರುವ ಮೊದಲೇ ಅದು ಸರ್ಕಾರದ ಕೈವಶವಾಗಿ ಬಾಲಸೋಡ್ ಬಳಿ ರಹಸ್ಯ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ನಿರತರಾಗಿದ್ದ ಜನರ ಸುಳಿವು ಗೊತ್ತಾಗಿ ಹೋಯಿತು. ಪೋಲಿಸರ ಸಹಿತವಾಗಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಪಟ್ಟಣದಿಂದ ಸುಮಾರು ಮೂವತ್ತು ಮೈಲಿ ದೂರವಿದ್ದ ಆ ಸ್ಥಳವನ್ನು ತಲುಪುವ ಮೊದಲೇ ಕ್ರಾಂತಿಕಾರಿಗಳು ಜಾಗ ಖಾಲಿ ಮಾಡಿದ್ದರು. ಮೂರು ದಿನಗಳ ಆನಂತರ ಅವರಲ್ಲಿ ಐದು ಮಂದಿಯ ಸುಳಿವು ಸಿಕ್ಕಿತು. ಆದರೆ ಪೋಲಿಸರು ಹತ್ತಿರ ಬರುವ ವೇಳೆಗೆ ಅವರು ಎತ್ತರದ ಗದ್ದೆ ಬಯಲೊಂದರಲ್ಲಿ ಅವಿತುಕೊಂಡು ಬಿಟ್ಟಿದ್ದರು. ಸುಮಾರು ಇಪ್ಪತ್ತು ನಿಮಿಷಗಳ ಕಾಲ ಕ್ರಾಂತಿಕಾರಿಗಳ ಹಾಗೂ ಪೋಲಿಸರ ನಡುವೆ ತೀವ್ರ ಕಾಳಗ ನಡೆಯಿತು. ಈ ಕದನದಲ್ಲಿ ಜತಿನ್ ಮುಖರ್ಜಿಯವರಿಗೆ ಪ್ರಾಣಾಂತಿಕವಾದ ಗಾಯಗಳಾದವು. ಒಬ್ಬ ಸಹಚರ ಮರಣ ಹೊಂದಿದ. ಇನ್ನೊಬ್ಬ ತೀವ್ರವಾಗಿ ಗಾಯಗೊಂಡ. ಉಳಿದಿಬ್ಬರು ಶರಣಾದರು. ಬಂಗಾಳದಲ್ಲಿ ನಡೆದ ಕ್ರಾಂತಿಕಾರಿ ಚಳುವಳಿಯಲ್ಲಿ ಬೂರಿಬಲಮ್ ನದಿಯ ಬಳಿ ನಡೆದ ಈ ಕದನ ಒಂದು ಚರಿತ್ರಾರ್ಹ ಘಟನೆಯೆನಿಸಿದೆ.

## 83.2 ಪಂಜಾಬ್‌ನಲ್ಲಿ ಕ್ರಾಂತಿಕಾರಿ ಚಟುವಟಿಕೆಗಳು - ಮುಸ್ಲೀಂ ಪಿತೂರಿ

ಮೇಲೆ ಹೇಳಿದ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಸಾಮಾನ್ಯವಾಗಿ ಹೇಳಬೇಕೆಂದರೆ ಮುಸಲ್ಮಾನರು ಯಾವುದೇ ಸಕ್ರಿಯ ಪಾತ್ರ ವಹಿಸಲಿಲ್ಲ. ಆದರೂ ವಾಯುವ್ಯ ಮುಂಚೂಣಿ ಪ್ರಾಂತದಲ್ಲಿದ್ದ ಸ್ವತಂತ್ರ ಭಾಗದ ಸಣ್ಣ ವಸಾಹತುವೊಂದರಲ್ಲಿ ನೆಲೆಸಿದ್ದ ಹಳೆಯ ವಹಾಬಿಗಳು (ಧರ್ಮ ಯುದ್ಧದಲ್ಲಿ ತೊಡಗಬಯಸಿದ ಈ ಮುಸಲ್ಮಾನರನ್ನು ಮುಜಾಹಿದಿನ್ ಎಂದು ಸಹ ಕರೆಯುತ್ತಾರೆ). ಬ್ರಿಟಿಷ್ ಸರ್ಕಾರದ ವಿರುದ್ಧ ತಮ್ಮ ಪ್ರಾಚೀನ ಕಲ್ಪನೆಯ ಧರ್ಮ ಯುದ್ಧವನ್ನು (ಜಿಹಾದ್) ಸಾರಲು ಉತ್ಸುಕರಾದರು. ಅವರು ಗಡಿ ಪ್ರದೇಶದಲ್ಲಿ

ನಡೆದ ಅನೇಕ ಯುದ್ಧಗಳಲ್ಲಿ ಭಾಗವಹಿಸಿದರು. ರುಸ್ತುಮ್ ಮತ್ತು ಶಬ್‌ಕದರ್ ಎಂಜಿಡೆಗಳಲ್ಲಿ ನಡೆದ ಹೋರಾಟಗಳಿಗೆ ಅಣಿ ಮಾಡಿಕೊಟ್ಟ. 1915 ರ ಬಂಡಾಯದಲ್ಲಿ ಇವರ ಪಾತ್ರವಿತ್ತು. ಸಾಂಪ್ರದಾಯಿಕ ಉಡುಪಿನಲ್ಲಿದ್ದ ಇಂತಹ ಹನ್ನೆರಡು ಮಂದಿ ಶಬ್ ಕದರ್ ರಣಭೂಮಿಯಲ್ಲಿ ಸತ್ತು ಬಿದ್ದಿದ್ದುದು ಕಂಡು ಬಂದಿತು.

1914 ರಲ್ಲಿ ಬ್ರಿಟನ್ನಿನ ವಿರುದ್ಧ ತುರ್ಕಿ ಯುದ್ಧ ರಂಗಕ್ಕೆ ಇಳಿದದ್ದು ಭಾರತೀಯ ಮುಸಲ್ಮಾನರ ಮನಸ್ಸಿನಲ್ಲಿ ಬ್ರಿಟಿಷ್ ವಿರೋಧಿ ಅಲೆಗಳನ್ನೆಬ್ಬಿಸಿತು. ಫೆಬ್ರವರಿ 1915 ರಲ್ಲಿ ಲಾಹೋರಿನಿಂದ ಹದಿನೈದು ಮಂದಿ ಯುವ ಮುಸಲ್ಮಾನ ವಿದ್ಯಾರ್ಥಿಗಳು ಹಾಗೂ ಪೇಷಾವರ್ ಮತ್ತು ರೋಹತ್‌ಗಳಿಂದ ಬಂದ ಇನ್ನೂ ಹಲವಾರು ಮಂದಿ ವಿದ್ಯಾರ್ಥಿಗಳು ಮುಜಾಹಿದಿಗಳ (ಧರ್ಮಯುದ್ಧಕ್ಕೆ ಹೊರಟವರ) ಜೊತೆ ಸೇರಿ ಅನಂತರ ಆಬೂಲಿಗೆ ಪ್ರಯಾಣ ಬೆಳೆಸಿದರು. "1917 ರ ಜನವರಿಯಲ್ಲಿ ಎಂಟು ಮಂದಿ ಮುಸಲ್ಮಾನರ ಒಂದು ತಂಡ ಪೂರ್ವ ಬಂಗಾಳದ ರಂಗಪುರ ಮತ್ತು ಢಾಕಾ ಜಿಲ್ಲೆಗಳಿಂದ ಬಂದ ಮುಜಾ ಹಿದಿಗಳ ಜೊತೆ ಸೇರಿದ್ದು ಪತ್ತೆಯಾಯಿತು. 1917 ರ ಮಾರ್ಚಿಯಲ್ಲಿ ವಾಯುವ್ಯ ಮುಂಚೂಣಿ ಪ್ರಾಂತದಲ್ಲಿ ಇಬ್ಬರು ಬಂಗಾಳ ಮುಸಲ್ಮಾನರ ದಸ್ತಗಿರಿಯಾಯಿತು. ಅವರನ್ನು ಜಪ್ತಿ ಮಾಡಿದಾಗ ಮುಜಾ ಹಿದಿಗಳ ವಸಾಹತಿಗೆಂದು ಅವರು ಕೊಂಡೊಯ್ಯುತ್ತಿದ್ದ ಎಂಟು ಸಾವಿರ ರೂಪಾಯಿಗಳಷ್ಟು ಹಣ ದೊರೆಯಿತು. ಈ ಇಬ್ಬರು ಸ್ವಲ್ಪ ಕಾಲ ತಾವೇ ಮುಜಾಹಿದಿಗಳಾಗಿದ್ದರು ಹಾಗೂ ವಂತಿಗೆ ಸಂಗ್ರಹಿಸುವ ಸಲುವಾಗಿ ಅವರನ್ನು ತಮ್ಮ ಸ್ವಂತ ಜಿಲ್ಲೆಗೆ ಕಳುಹಿಸಲಾಗಿತ್ತು".

ಭಾರತದಲ್ಲಿ ಬ್ರಿಟಿಷರ ವಿರುದ್ಧ ನಡೆಯುತ್ತಿದ್ದ ಸಾರ್ವತ್ರಿಕ ಮುಸಲ್ಮಾನ ಸಮುದಾಯದ ಬಂಡಾಯದ ಅಂಶಗಳಾಗಿ ಇವು ಕಂಡು ಬರುತ್ತಿದ್ದವೆನ್ನುವುದಕ್ಕೆ ಸಾಕ್ಷಿ ದೊರೆಯುತ್ತದೆ. ಕನಿಷ್ಠ ಆ ಬಂಡಾಯದ ಪರಿಣಾಮವಾದರೂ ಇದರ ಮೇಲೆ ಬಿದ್ದಿದೆ ಎನಿಸುತ್ತದೆ. ದೇವಬಂದ್ (ಸಹರನ್‌ಪುರ ಜಿಲ್ಲೆ, ಉತ್ತರ ಪ್ರದೇಶ) ಎಂಬೆಡೆಯಲ್ಲಿದ್ದ ಮುಸಲ್ಮಾನ ಧಾರ್ಮಿಕ ಶಾಲೆಯೊಂದರ ಅರಾಮ್ ಮೌಲ್ವಿ ಒಬೆದುಲ್ಲಾ ಈ ಚಳುವಳಿಯ ಮುಖಂಡರಾಗಿದ್ದರು. ಆ ಶಾಖೆಯ ಮುಖ್ಯೋಪಾಧ್ಯಾಯರಾಗಿದ್ದ ಮೌಲ್ವಿ ಮೌಲಾಯ ಮಹಮ್ಮದ್ ಹಸನ್ ಎಂಬುವವರು ಒಬೆದುಲ್ಲಾರಿಗೆ ನೆರವಾಗಿದ್ದರು. ಭಾರತದಲ್ಲಿ ಮುಸಲ್ಮಾನರ ಬ್ರಿಟಿಷ್ ವಿರೋಧಿ ಬಂಡಾಯ ನಡೆಯುತ್ತಿದ್ದ ಸಮಯಕ್ಕೆ ಸರಿಯಾಗಿ ಇವರು ವಾಯುವ್ಯ ಮುಂಚೂಣಿ ಪ್ರದೇಶದ ಮೇಲೆ ಆಕ್ರಮಣ ಮಾಡುವುದರ ಮೂಲಕ ಬ್ರಿಟಿಷ್ ಅಧಿಪತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಒಬೆದುಲ್ಲಾ ಮುಜಾಹಿದಿ ಹೋರಾಟಗಾರರೊಂದಿಗೆ ಸಂಪರ್ಕ ಬೆಳೆಸಿಕೊಂಡುಸ ಕಾಬೂಲಿಗೆ ಗುಟ್ಟಾಗಿ ಪ್ರಯಾಣ ಬೆಳೆಸಿದರು. ಭಾರತದಿಂದ ಬಂದಿದ್ದ ಕ್ರಾಂತಿಕಾರಿಗಳನ್ನು ಅಲ್ಲಿ ಭೇಟಿ ಮಾಡಿದ್ದರು. ಅವರನ್ನು ಮತ್ತು ಕೆಲವು ಮಂದಿ ಭಾರತೀಯರನ್ನು ಅಲ್ಲಿ ನಿರ್ಬಂಧನದಲ್ಲಿ ಇಡಲಾಯಿತು. ಈ ಭಾರತೀಯರನ್ನು ಭಾರತದಲ್ಲಿ ವಿಚಾರಣೆಗೆ ಗುರಿಪಡಿಸಲಾಗಿತ್ತಾದರೂ ಇವರು ಆಫ್‌ಘಾನಿಸ್ತಾನಕ್ಕೆ ತಪ್ಪಿಸಿಕೊಂಡು ಓಡಿ ಹೋಗಿದ್ದರು. ಹಾಗಾಗಿ ಇವರನ್ನು ಸರಪಳಿಗಳಿಂದ ಬಂಧಿಸಲಾಯಿತು. ಆದರೆ ಕಾಬೂಲಿಗೆ ನಿಯೋಗವೊಂದನ್ನು ಕೊಂಡೊಯ್ದಿದ್ದ ಮಹೇಂದ್ರ ಪ್ರತಾಪರ ಕೋರಿಕೆಯ ಮೇಲೆ ಇವರನ್ನೆಲ್ಲ ಬಿಡುಗಡೆ ಮಾಡಲಾಯಿತು.

ಒಬೆದುಲ್ಲಾ ಕಾಬೂಲಿಗೆ ಹೊರಟ ಸ್ವಲ್ಪ ಕಾಲದ ತರುವಾಯ ಮಿಯಾನ್ ಅನ್ಸಾರಿ ಹಾಗೂ ಇತರ ಕೆಲವರನ್ನು ಜೊತೆಗೂಡಿಸಿಕೊಂಡು ಮೌಲಾನಾ ಮಹಮ್ಮದ್ ಹಸನ್ ಅರೇಬಿಯಾದ ಹೆದ್‌ಜಾದ್ ಪ್ರದೇಶಕ್ಕೆ ಹೊರಟರು. ಅಲ್ಲಿ ಹೈದ್‌ಜಾದಿನ ತುರ್ಕಿ ಮಿಲಿಟರಿ ಗವರ್ನರ್ ಆಗಿದ್ದ ಗೌಲಿಬ್ ಪಾಷಾರವರ ಜೊತೆಯಲ್ಲಿ ಸಂಪರ್ಕ ಬೆಳೆಸಿ ಬ್ರಿಟಷರ ವಿರುದ್ಧ ಧರ್ಮಯುದ್ಧ (ಜಿಹಾದ್) ಸಾರಲು ಅವರಿಂದ ಘೋಷಣೆ ಪಡೆದುಕೊಂಡರು. ಗಾಲಿಬ್‌ನಾಮಾ ಎಂದು ಕರೆಯಲಾಗುತ್ತಿದ್ದ ಈ ಘೋಷಣಾ ಪತ್ರವನ್ನು ಮಿಯಾನ್ ಅನ್ಸಾರಿ ತೆಗೆದುಕೊಂಡು ಕಾಬೂಲಿಗೆ ಹೊರಟು ತಮ್ಮ ಪ್ರಯಾಣದಲ್ಲಿ ಅದರ ಪ್ರತಿಗಳನ್ನು ಭಾರತದಲ್ಲಿ ಮತ್ತು ಹಾದಿಯಲ್ಲಿದ್ದ ಮಂಚೂರಿಯ ಪ್ರದೇಶಗಳ ಜನರಿಗೆ ಹಂಚುತ್ತಾ ಹೋದರು. ಅನ್ಸಾರಿ ಕಾಬೂಲನ್ನು ಸೇರುವ ಹೊತ್ತಿಗೆ ಅವರಿಗೆ ಅಲ್ಲಿಯ ಅಮೀರ್ ದೊರೆಯಿಂದ ಭಾರತೀಯ ಕ್ರಾಂತಿಕಾರರಿಗೆ ಒಳ್ಳೆಯ ಸ್ವಾಗತ ದೊರೆತಿತ್ತೆಂಬ ವಿಷಯ ಅರಿವಾಯಿತು. ಈಗಾಗಲೇ ಮೇಲೆ ಹೇಳಿರುವಂತೆ ಆ ವೇಳೆಗೆ ಪ್ರಾಂತೀಯ ಸರ್ಕಾರದ ಸ್ಥಾಪನೆಯಾಗಿ ಒಬೆದುಲ್ಲಾ ಅವರನ್ನು ಗೃಹ ಸಚಿವರನನ್ನಾಗಿ ನೇಮಕ ಮಾಡಲಾಗಿತ್ತು. ತಮ್ಮ ಯಶಸ್ಸಿನಿಂದ ಉತ್ತೇಜಿತರಾಗಿ ಒಬೆದುಲ್ಲಾ ಮಹಮ್ಮದ್ ಹಸನ್‌ರಿಗೆ ಒಂದು ದೀರ್ಘವಾದ ಪತ್ರವನ್ನು ಬರೆದು ತುರ್ಕಿ ಸರ್ಕಾರದ ಸಕ್ರಿಯ ಸಹಕಾರವನ್ನು ಪಡೆದುಕೊಳ್ಳುವಂತೆ ಒತ್ತಾಯ ಮಾಡಿದ್ದೇ ಅಲ್ಲದೆ ಮೆಕ್ಕಾದ ಷರೀಫರನ್ನೂ ಕೂಡ ಸಂಪರ್ಕಿಸಿ ಒಂದು ಸಮಗ್ರ ಇಸ್ಲಾಂ ಸೈನ್ಯವನ್ನು - ದೇವರ ಸೈನ್ಯವನ್ನು ಸಿದ್ಧಪಡಿಸುವ ಯೋಜನೆಯನ್ನು ವಿವರಿಸಿದ್ದರು. ಈ ಯೋಜಿತ ಸೈನ್ಯಕ್ಕೆ ಮದೀನಾ ಕೇಂದ್ರ ಕಛೇರಿಯಾಗಿದ್ದು ಕಾನ್‌ಸ್ಟ್ಯಾಂಟಿನೋಪಲ್, ಟೆಹರಾನ್ ಮತ್ತು ಕಾಬೂಲ್‌ಗಳಲ್ಲಿ ಉಪಕಛೇರಿಗಳು ಇರತಕ್ಕದೆಂದು ಸಲಹೆ

ಮಾಡಿದ್ದರು. ಕಾಬೂಲಿನಲ್ಲಿ ನಡೆಯುತ್ತಿದ್ದ ಕ್ರಾಂತಿಕಾರಿ ಚಟುವಟಿಕೆಗಳ ಮುನ್ನಡೆಯನ್ನು ತಿಳಿಯಪಡಿಸುವ ಇತರ ಪತ್ರಗಳು ಕೂಡ ಅದರ ಜೊತೆಯಲ್ಲೇ ಇದ್ದವು. 1916 ರ ಜುಲೈ 9 ರ ಜೊತೆಯಿದ್ದ ಈ ಪತ್ರಗಳ ಮೇಲೆ ಸಿಂಧ್‌ಗೆ ಅಥವಾ ನಂಬಲರ್ಹನಾದ ಸಂದೇಶವಾಹಕನೊಬ್ಬನ ಮೂಲಕ ಮಹಮ್ಮದ್ ಹಸನ್‌ರಿಗೆ ತಲುಪಿಸಲು ಸೂಚನೆ ನೀಡಲಾಗಿತ್ತು. ಈ ಪತ್ರಗಳನ್ನು ಲಾಹೋರನ್ನು ಬಿಟ್ಟು ಕಾಬೂಲಿಗೆ ಹೋಗಿದ್ದ ಇಬ್ಬರು ವಿದ್ಯಾರ್ಥಿಗಳು ಇಬ್ಬರು ಸಹೋದರರು ಮನೆಗೆಲಸದವನೊಬ್ಬನ ಮೂಲಕ ಭಾರತಕ್ಕೆ ರಹಸ್ಯವಾಗಿ ಕಳುಹಿಸಿಕೊಟ್ಟರು.

ಈ ಮೇಲ್ಕಂಡ ಪತ್ರಗಳನ್ನು ಹಳದಿ ಬಣ್ಣದ ರೇಷ್ಮೆ ಬಟ್ಟೆಯ ಮೇಲೆ ಅಚ್ಚುಕಟ್ಟಾಗಿ ಪರ್ಷಿಯನ್ ಭಾಷೆಯಲ್ಲಿ ಬರೆದು ಆ ಮನೆಯೊಳಗಿನ ಕೋಟಿನ ಒಳಭಾಗಕ್ಕೆ ಸೇರಿಸಿ ಹೊಲಿಯಲಾಗಿತ್ತು. ಮನೆಯೊಳು ಆ ಹುಡುಗರ ತಂದೆಯನ್ನು ಭೇಟಿಯಾಗಿ ಅವರ ಕ್ಷೇಮ ಸಮಾಚಾರವನ್ನು ತಿಳಿಸಿದಾಗ ಆ ವೃದ್ಧನಿಗೆ ಈ ಆಳಿನ ನಡವಳಿಕೆಯ ಮೇಲೆ ಅನುಮಾನ ಬಂದು ಬಲವಂತವಾಗಿ ಬಾಯಿಬಿಡಿಸಿದಾಗ ರೇಷ್ಮೆ ಬಟ್ಟೆಯ ಮೇಲೆ ಬರೆದಿದ್ದ ಪತ್ರಗಳ ಗುಟ್ಟು ಹೊರಬಿತ್ತು. ಆ ವೃದ್ಧ ತಡಮಾಡದೆ ರೇಷ್ಮೆ ಪತ್ರಗಳನ್ನು ಬ್ರಿಟಿಷ್ ಅಧಿಕಾರಿಗಳಿಗೆ ಒಪ್ಪಿಸಿದಾಗ, "ಕ್ರಾಂತಿಯ ಬಗ್ಗೆ ಭಾರತದಲ್ಲಿ ಸಹಾನುಭೂತಿ ಹೊಂದಿದ್ದ ಅನೇಕರ ವಿಚಾರವಾಗಿ", ಅಮೂಲ್ಯವಾದ ಮಾಹಿತಿ ಹೊರಬಂದಿತು. ಸರ್ಕಾರ ಸುಮಾರು ಹತ್ತು, ಹದಿನೈದು ಜನರನ್ನು ಸ್ಥಾನ ಬದ್ಧತೆಯಲ್ಲಿಟ್ಟು, ಅಗತ್ಯವಾದ ತರ ಪ್ರತಿಬಂಧಕ ಕ್ರಮಗಳನ್ನು ಕೈಗೊಂಡಿತು. ಈ ರೀತಿಯಾಗಿ "ರೇಷ್ಮೆ ಪತ್ರಗಳ" ರಹಸ್ಯ ಬಂಡಾಯ ಕೊನೆಗೊಂಡಿತು.

## 83.3 ಅಮೇರಿಕಾದಿಂದ ಹಿಂದಿರುಗುತ್ತಿದ್ದ ಕ್ರಾಂತಿಕಾರಿಗಳ ಚಟುವಟಿಕೆಗಳು

ಅಮೇರಿಕಾದಲ್ಲಿ ಭಾರತ-ಜರ್ಮನ್ ಪಿತೂರಿ ಕಾರ್ಯಾಚರಣೆ ಭಾರತಕ್ಕೆ ಶಸ್ತ್ರಾಸ್ತ್ರಗಳನ್ನು ಮತ್ತು ಮದ್ದು ಗುಂಡುಗಳನ್ನು ಕಳುಹಿಸುವ ಕೆಲಸದಲ್ಲಿ ನಿರತವಾಗಿದ್ದಾಗಿ ಘದರ್ ಪಕ್ಷ ಭಾರತೀಯರನ್ನು, ಅದರಲ್ಲೂ ಮುಖ್ಯವಾಗಿ ಕ್ರಾಂತಿಕಾರಿ ಭಾವನೆಗಳನ್ನು ಅಳವಡಿಸಿಕೊಂಡಿದ್ದ ಪಂಜಾಬಿಗಳನ್ನು ಭಾರತದಲ್ಲಿ ಕ್ರಾಂತಿಯನ್ನು ಚುರುಕುಗೊಳಿಸುವ ಸಲುವಾಗಿ ಹಿಂದಕ್ಕೆ ಕಳುಹಿಸಿಕೊಡುವ ಕೆಲಸದಲ್ಲಿ ಪ್ರಮುಖವಾಗಿ ತೊಡಗಿತ್ತು. ರಾಮಚಂದ್ರ ಮತ್ತು ಅವರ ಸಹಚರರು ಆ ಹೊತ್ತಿಗೆ ನಡೆಯುತ್ತಿದ್ದ ಮಹಾಯುದ್ಧದ ಸದುಪಯೋಗವನ್ನು ಪಡೆದುಕೊಳ್ಳಲು ಭಾರತೀಯರನ್ನು ಒತ್ತಾಯಿಸುವ ತುರ್ತು ಪ್ರಚಾರ ಕಾರ್ಯವನ್ನು ಕೈಗೊಂಡರು. ಇಂಗ್ಲೀಷರನ್ನು ಭಾರತದಿಂದ ಹೊರಗೋಡಿಸಲು ಇದೊಂದು ಉತ್ತಮ ಅವಕಾಶವೆಂದು ಮನದಟ್ಟು ಮಾಡಿಕೊಳ್ಳಲು ಅವರು ಪ್ರಯತ್ನಿಸಿದರು. ಸಾವಿರಾರು ಸಂಖ್ಯೆಯಲ್ಲಿ ಆ ಜನ ಭಾರತಕ್ಕೆ ಹಿಂದಿರುಗಿ ಆ ವೇಳೆಗಾಗಲೇ ಹೋರಾಟದಲ್ಲಿ ತೊಡಗಿದ್ದ ತಮ್ಮ ನಾಡ ಬಾಂಧವರ ಜೊತೆ ಸೇರಿ ಬ್ರಿಟಿಷರ ದಬ್ಬಾಳಿಕೆಯಿಂದ ತಮ್ಮ ತಾಯ್ನಾಡನ್ನು ವಿಮುಕ್ತಗೊಳಿಸಬೇಕೆಂದು ಕರೆಗೊಟ್ಟರು. ಸಿಡಿಮದ್ದಿನ ಉಗ್ರಾಣ ಸಿದ್ಧವಾಗಿತ್ತು. ಅದನ್ನು ಸ್ಫೋಟಿಸಲು ಕೇವಲ ಒಂದು ಕಿಡಿಯ ಅವಶ್ಯಕತೆ ಇತ್ತು. ಅವರು ಆ ಕಿಡಿಯ ಕೆಲಸ ಮಾಡಬೇಕಿತ್ತು. ಸಧಾವಕಾಶ ಒಮ್ಮೆ ಕೈತಪ್ಪಿ ಹೋಯಿತೆಂದರೆ ಮತ್ತೆಎಂದೂ ನಗುವಂತಿರಲಿಲ್ಲ. ಭಾರತಕ್ಕೆ ಸ್ವಯಂ ಪ್ರೇರಣೆಯಿಂದ ಹಿಂದುರುಗಬಯಸುವ ಜನರ ವಶ ಮಾಡಲಾಯಿತು. ಅವರ ಪ್ರಯಾಣಕ್ಕೆಂದು ಖರ್ಚು ವೆಚ್ಚದ ಹಣವನ್ನು ಸಂಗ್ರಹಿಸಲಾಯಿತು. ಕೆನಡ, ಜಪಾನ್, ಶಾಂಘೈ, ಹಾಂಕಾಂಗ್, ಮನಿಲಾ, ಸಿಂಗಪುರ, ಬ್ರಿಟಿಷ್ ಗಯಾನ, ಫಿಜಿ, ದಕ್ಷಿಣ ಆಫ್ರಿಕ ಮೊದಲಾಗಿ ಪ್ರಪಂಚದ ಬಹಳಷ್ಟು ಕಡೆಗಳಲ್ಲಿ ನೆಲೆಯೂರಿದ್ದ ಭಾರತೀಯರು ಈ ಚಳುವಳಿಯ ಕರೆಗೆ ಓಗೊಟ್ಟು ಜನಸಹಾಯ ಮತ್ತು ಧನ ಸಹಾಯ ಮಾಡಿದರು. ಬೇರೆ ಬೇರೆ ತಂಡಗಳಲ್ಲಿ ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಮಾರ್ಗಗಳ ಮೂಲಕ ಸುಮಾರು ಮೂರು ಸಾವಿರ ಮಂದಿ ಬಂದು ಭಾರತವನ್ನು ಸೇರಿದರು.

ಭಾರತ ಸರ್ಕಾರ ಘದರ್ ವರ್ಷದ ಈ ಎಲ್ಲ ಚಟುವಟಿಕೆಗಳ ಬಗ್ಗೆ ಕಣ್ಣಿಟ್ಟಿದ್ದು ಅಗತ್ಯವಾದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿತು. ಸಾನ್‌ಫ್ರಾನ್ಸಿಸ್ಕೋದಿಂದ 1914 ರ ಆಗಸ್ಟ್ 29 ರಂದು ಹೊರಟ ಎಸ್.ಎಸ್. ಕೊರಿಯಾ ಎಂಬ ಹಡಗಿನಲ್ಲಿ ಪ್ರಖ್ಯಾತ ನಾಯಕರಲ್ಲಿ ಕೆಲವರನ್ನು ಒಳಗೊಂಡಂತೆ ಸುಮಾರು 60 ಮಂದಿ ಕ್ರಾಂತಿಕಾರಿಗಳು ಪ್ರಯಾಣ ಬೆಳೆಸಿದರು. ದಾರಿಯಲ್ಲಿ ಸುಮಾರು ಇನ್ನು ನೂರು ಮಂದಿ ಅವರನ್ನು ಕೂಡಿಕೊಂಡರು. ಅವರನ್ನು ಹಾಂಕಾಂಗಿನಲ್ಲಿ ತಡೆಹಿಡಿಯಲಾಗಿ ಅವರು ತೋಸಾ ಮಾರು ಎಂಬ ಇನ್ನೊಂದು ಹಡಗನ್ನೇರಿ 1914 ರ ಅಕ್ಟೋಬರ್ 29 ರಂದು ಕಲ್ಕತ್ತಾ ತಲುಪಿದರು. ಹೀಗೆ ಬಂದು ಸೇರಿದ 173 ಮಂದಿ ಪ್ರಯಾಣಿಕರಲ್ಲಿ ಅಮೇರಿಕ, ಮನಿಲಾ, ಶಾಂಘೈ ಮತ್ತು ಹಾಂಕಾಂಗ್ ನಿಂದ ಬಂದ ಸಿಖ್ಖರೇ ಹೆಚ್ಚಾಗಿದ್ದರು. ಇವರಲ್ಲಿ ನೂರು ಮಂದಿಯನ್ನು ಸ್ಥಾನ ಬದ್ಧತೆಯಲ್ಲಿಡಲಾಯಿತು. ಇದೇ ರೀತಿಯಲ್ಲಿ ಇನ್ನೂ ಹಲವಾರು ಮಂದಿಯನ್ನು ತುಂಬಿಕೊಂಡು ಬಂದ ಹಡಗುಗಳ ಮುಂದಿನ

ಎರಡು ತಿಂಗಳಲ್ಲಿ ಭಾರತ ಸೇರಿದವು. ಸರ್ಕಾರ ಎಷ್ಟೇ ಮುನ್ನೆಚ್ಚರಿಕೆ ಮತ್ತು ಸ್ಥಾನಬದ್ಧತೆ ಕ್ರಮಗಳನ್ನು ಕೈಗೊಂಡರೂ, ಹೊರಗಿನಿಂದ ಅಪಾರ ಸಂಖ್ಯೆಯಲ್ಲಿ ಜನ ಭಾರತಕ್ಕೆ ಬಂದು ಸೇರಿದರು. ಇವರ ಸಂಖ್ಯೆಯನ್ನು ಸುಮಾರು ಮೂರರಿಂದ ಐದು ಸಾವಿರದವರೆಗೆ ಎಂದು ಅಂದಾಜು ಮಾಡಲಾಗಿದೆ. ಇವರೇ ಅಲ್ಲದೆ ಇದೇ ಬಗೆಯ ಸುಮಾರು ನಾಲ್ಕು ನೂರು ಮಂದಿಯನ್ನು ಜೈಲಿನಲ್ಲಿ ಇಟ್ಟಿದ್ದರಲ್ಲದೆ ಎರಡೂವರೆ ಸಾವಿರ ಮಂದಿಗೆ ತಮ್ಮ ಹಳ್ಳಿಗಳನ್ನು ಬಿಟ್ಟು ಹೋಗದಂತೆ ನಿರ್ಬಂಧಿಸಿದ್ದರು.

ಪಂಜಾಬಿನಲ್ಲಿ ಏನು ಕೆಲಸ ಮಾಡಬೇಕೆಂಬ ನಿರ್ದಿಷ್ಟ ಕಾರ್ಯ ಕ್ರಮವನ್ನು ಈ ರೀತಿಯಲ್ಲಿ ಭಾರತಕ್ಕೆ ಹಿಂದಿರುಗುತ್ತಿರುವ ಕ್ರಾಂತಿಕಾರಿಗಳಿಗೆ ಹಾಕಿ ಕೊಟ್ಟಿದ್ದರು. ಜರ್ಮನ್ ಶಸ್ತ್ರಾಸ್ತ್ರಗಳು ಮತ್ತು ಮದ್ದು ಗುಂಡುಗಳು ಬಂದು ತಲುಪಿದ ಕೂಡಲೇ ಭಾರತದ ಉದ್ದಕ್ಕೂ ಸಾರ್ವತ್ರಿಕವಾಗಿ ಕ್ರಾಂತಿಯ ಕಹಳೆಯನ್ನು ಊದತಕ್ಕದ್ದೆಂದು ಗೊತ್ತು ಪಡಿಸಲಾಗಿತ್ತು. ಅಷ್ಟೇ ಅಲ್ಲದೆ ಹೊರದೇಶಗಳಿಂದ ಹಿಂದಿರುಗುತ್ತಿದ್ದ ಕ್ರಾಂತಿಕಾರಿಗಳು ತಮ್ಮ ಹಾದಿಯಲ್ಲಿ ಎದುರಾಗುವ ಹಾಂಕಾಂಗ್, ಸಿಂಗಪುರ, ಪೇನಾಂಗ್, ರಂಗೂನ್ ಮತ್ತಿತ್ತರ ಸ್ಥಳಗಳನ್ನು ಒಳಗೊಂಡಂತೆ ಭಾರತದಲ್ಲಿ ಕೂಡ ಎಲ್ಲೆಡೆಯಲ್ಲೂ ಭಾರತೀಯ ಸೈನಿಕರ ಮನಸ್ಸಿನಲ್ಲಿ ರಾಷ್ಟ್ರೀಯ ಭಾವನೆಯ ಬಿಜವನ್ನು ಬಿತ್ತಿ ಅವರ ಮನಸ್ಸನ್ನು ವಿಚಲಿತಗೊಳಿಸುವುದು ಕ್ರಾಂತಿಕಾರಿಗಳಿಗೆ ಹಾಕಿಡಲಾಗಿದ್ದ ಒಂದು ಪೂರ್ವ ಭಾವೀ ಕ್ರಮವಾಗಿತ್ತು. ಮುಖ್ಯವಾದ ಬಂದರುಗಳಲ್ಲಿ ಹಡಗುಗಳು ಸಾಕಷ್ಟು ಹೆಚ್ಚು ಕಾಲ ನಿಲ್ಲುತ್ತಿದ್ದುದರಿಂದ ಕ್ರಾಂತಿಕಾರಿ ಸಿಖ್ಖರು ಆ ಸದುಪಯೋಗವನ್ನು ಬಳಸಿಕೊಂಡು ಸ್ಥಳೀಯ ಸಿಖ್ ಸೈನಿಕರನ್ನು ಅಲ್ಲಿಯ ಗುರುದ್ವಾರಗಳಿಗೆ ಕರೆಸಿಕೊಂಡು ಅವರ ಮನಸ್ಸು ಪರಿವರ್ತನೆಯಾಗುವಂತೆ ಮಾಡುತ್ತಿದ್ದರು.

ಭಾರತೀಯ ಸೈನಿಕರ ತಂಡಗಳ ನೆರವನ್ನು ಪಡೆದುಕೊಂಡು ಬ್ರಿಟಿಷರ ವಿರುದ್ಧವಾಗಿ ಹೋರಾಟ ನಡೆಸಲು ಯೋಜನೆಗಳನ್ನು ರೂಪಿಸಿಕೊಳ್ಳುವ ಸಲುವಾಗಿ ಕ್ರಾಂತಿಕಾರಿಗಳು ಆಗಾಗ್ಗೆ ಸಭೆ ಸೇರಿ ಚರ್ಚೆ ನಡೆಸುತ್ತಿದ್ದರು. ಡಕಾಯಿತಿ ನಡೆಸಲು ಅಗತ್ಯವಾಗಿದ್ದ ಹಣವನ್ನು ಸಂಗ್ರಹಿಸಬೇಕೆಂದು ಅವರು ತೀರ್ಮಾನಿಸಿದರು. 1914 ರ ಡಿಸೆಂಬರ್‌ನಿಂದ 1915 ರ ಸೆಪ್ಟೆಂಬರ್ ಅವಧಿಯೊಳಗೆ ಇಂತಹ ಇಪ್ಪತ್ತಕ್ಕೆ ಕಡಿಮೆಯಿಲ್ಲದಷ್ಟು ದರೋಡೆಗಳನ್ನು ಅವರು ನಡೆಸಿದರೆಂದು ನಂಬಲಾಗಿದೆ. ಹಾಗೆಯೇ ಕಡೆಯ ಪಕ್ಷ ಆರು ಬಾರಿಯಾದರೂ ರೈಲುಗಳ ಹಳಿ ತಪ್ಪಿಸುವ ಕೃತ್ಯಗಳು ನಡೆದವೆನ್ನಲಾಗಿದೆ. ಅಧಿಕೃತ ಸುದ್ದಿಗಳ ಪ್ರಕಾರ ಕ್ರಾಂತಿಕಾರಿಗಳು ನಡೆಸಿದ ಅನೇಕ ಅಪರಾಧಗಳಲ್ಲಿ ಈ ಕೆಳಕಂಡ ಬಗೆಯವು ಕೂಡ ಇದ್ದವೆಂದು ಆಪಾದನೆ ಮಾಡಲಾಗಿದೆ:

1. ಹಾಂಕಾಂಗ್ ಮತ್ತು ಭಾರತದ ಕನಿಷ್ಟ ಹತ್ತು-ಹದಿನೈದು ಸೇನಾ ದಂಡು ಪ್ರದೇಶಗಳಲ್ಲಿ ದಂಗೆಯೆದ್ದ ಸೈನಿಕರ ಮನವೊಲಿಸಿ ಅವರು ಮೌಲಿಯಲ್ಲಿ ಪಾಲುಗೊಳ್ಳುವಂತೆ ಪ್ರೇರಣೆ ನೀಡಲು ಪ್ರಯತ್ನಿಸಲಾಗಿದೆ.
2. ಬಾಂಬುಗಳನ್ನು ತಯಾರಿಸುವುದು ಹಾಗೂ ಇತರೆ ಕಡೆಗಳಿಂದ ಅವುಗಳನ್ನು ಪಡೆದುಕೊಳ್ಳುವುದು.
3. ಶಸ್ತ್ರಾಸ್ತ್ರಗಳ ಮತ್ತು ಮದ್ದು ಗುಂಡುಗಳನ್ನು ಸಂಗ್ರಹಣೆ ಮಾಡುವುದು.
4. ನಿಷ್ಠ ಅಧಿಕಾರಿಗಳ ಮತ್ತು ಪ್ರಜೆಗಳ ಕೊಲೆ.
5. ಖಜಾನೆಗಳನ್ನು ಮತ್ತು ಠಾಣೆಗಳನ್ನು ಲೂಟಿ ಮಾಡುವ ಪ್ರಯತ್ನ
6. ನಿಷ್ಠಾವಂತರ ನಿಷ್ಠೆಯನ್ನು ಪ್ರಲೋಭಿಸುವ ಸಾಹಿತ್ಯದ ಪ್ರಕಾಶನ ಮತ್ತು ಪ್ರಚಾರ

ಅಮೃತಸರದಲ್ಲಿ 1915 ರ ಜೂನ್ 2 ರಂದು ಕಾವಲು ಸಿಪಾಯಿಗಳ ತಂಡವೊಂದರ ಮೇಲೆ ನಡೆಸಿದ ಆಕ್ರಮಣ ಕ್ರಾಂತಿಕಾರಿಗಳ ಮೇಲಿರುವ ಅತ್ಯಂತ ದೊಡ್ಡ ಆರೋಪಗಳಲ್ಲಿ ಒಂದು. ಈ ಆಕ್ರಮಣದಲ್ಲಿ ಕ್ರಾಂತಿಕಾರಿಗಳು ಇಬ್ಬರು ಸಿಪಾಯಿಗಳನ್ನು ಕೊಂದು, ಅನೇಕರನ್ನು ಗಾಯಗೊಳಿಸಿ ಆರು ಬಂದೂಕುಗಳನ್ನು ಮತ್ತು ಅಪಾರ ಪ್ರಮಾಣದ ಮದ್ದು ಗುಂಡುಗಳನ್ನು ಕಸಿದುಕೊಂಡು ಹೋದರು.

ಬಂಗಾಳ ಮತ್ತು ಪಂಜಾಬುಗಳಲ್ಲಿದ್ದ ಕ್ರಾಂತಿಕಾರಿಗಳ ಮನಸ್ಸಿನಲ್ಲಿ ಬೇರೂರಿದ್ದ ಹಾಗೂ ಅವರು ಯೋಜಿಸಿಕೊಂಡಿದ್ದ ಮಹಾ ಸಮರಕ್ಕೆ ಈ ಮೇಲೆ ಹೇಳಿದ ಎಲ್ಲ ಅಂಶಗಳು ಕೇವಲ ಸಿದ್ಧತೆಗಳಾಗಿದ್ದವು. ಅವರಿಗೆ ಸನ್ನಿವೇಶಗಳು ತುಂಬ ಅನುಕೂಲಕರವಾಗಿ ಕಂಡು ಬಂದವು. ಭಾರತದಲ್ಲಿ ಸೈನ್ಯ ಉಳಿದಿರಲಿಲ್ಲ. ಜರ್ಮನಿ ಶಸ್ತ್ರಾಸ್ತ್ರಗಳನ್ನು ಮತ್ತು ಮದ್ದು ಗುಂಡುಗಳನ್ನು ಸರಬರಾಜು ಮಾಡಲು ಒಪ್ಪಿಕೊಂಡಿತ್ತು. ಬ್ರಿಟಿಷರ ವಿರುದ್ಧ ಹೋರಾಡಲು ಮುಸಲ್ಮಾನರ ಮೇಲೆ ಪ್ರಭಾವ ಬೀರಲು ತುರ್ಕಿ ಮುಂದೆ ಬಂದಿತ್ತು.

ಮುಸಲ್ಮಾನ ದೇಶವಾಗಿದ್ದ ಆಫ್‌ಘಾನಿಸ್ತಾನ ನೇರವಾಗಿ ಭಾರತದ ಮೇಲೆ ಆಕ್ರಮಣ ಮಾಡುವುದರ ಮೂಲಕ ಅಥವಾ ಬ್ರಿಟಿಷರ ವಿರುದ್ಧ ಹಗೆತನವನ್ನು ವ್ಯಕ್ತಪಡಿಸಿ ಆ ಕಾರಣದಿಂದ ಅವರು ತಮ್ಮ ಹಾಲಿ ಭಾರತದಲ್ಲಿ ಉಳಿದಿದ್ದ ಸೇನೆಯನ್ನು ವಾಯುವ್ಯ ಗಡಿಯಲ್ಲೇ ಸಾಂದ್ರಗೊಳಿಸುವಂತೆ ಮಾಡುವುದರ ಮೂಲಕ ಕ್ರಾಂತಿಕಾರಿಗಳಿಗೆ ಬೆಂಬಲ ನೀಡಲು ಸಮ್ಮತಿಸಿತ್ತು. ಹಾಗೆ ಮಾಡುವುದರಿಂದ ಭಾರತದ ವಿವಿಧ ಭಾಗಗಳಲ್ಲಿ ಸೈನ್ಯವಿರದೆ ಅವು ಸಾಪೇಕ್ಷವಾಗಿ ದುರ್ಬಲವಾಗಿ, ಅರಕ್ಷಿತವಾಗಿ ಉಳಿಯುವ ಸಾಧ್ಯತೆಗಳಿದ್ದವು.

ಈ ದೊಡ್ಡ ಹೋರಾಟದ ಮಂಚೂಣಿಯಲ್ಲಿದ್ದ ನಾಯಕರಾದರೆ ರಾಷ್‌ಬಿಹಾರಿಬೋಸ್. ದೆಹಲಿಯಲ್ಲಿ ಲಾರ್ಡ್ ಹಾರ್ಡಿಂಜ್ ಮೇಲೆ ಅವರು ಬಾಂಬು ಎಸೆದ ಘಟನೆಯ ಬಗ್ಗೆ ಈ ಹಿಂದೆ ಪ್ರಸ್ತಾಪಿಸಲಾಗಿದೆಯಷ್ಟೇ. ರಾಷ್ ಬಿಹಾರಿ ವಾರಣಾಸಿಯನ್ನು ತಮ್ಮ ಹೋರಾಟದ ಕೇಂದ್ರವಾಗಿ ಮಾಡಿಕೊಂಡಿದ್ದರು. 1914 ರಲ್ಲಿ ಘದರ್ ಪಕ್ಷದ ಸಿಖ್ಖರ ಜೊತೆಯಲ್ಲಿ ಅಮೇರಿಕಾದಿಂದ ಹಿಂದಿರುಗಿ ಬಂದ ಅನೇಕ ಮಂದಿ ಕ್ರಾಂತಿಕಾರಿ ಮುಂದಾಳುಗಳು ಕ್ರಮೇಣ ಅವರ ಜೊತೆ ಸೇರಿಕೊಂಡರು. ಉತ್ತರ ಭಾರತದ ಉದ್ದಕ್ಕೆ ಏಕಕಾಲದಲ್ಲಿ ಹಮ್ಮಿಕೊಳ್ಳಲು ಯೋಜಿಸಲಾಗಿದ್ದ ಸಾರ್ವತ್ರಿಕ ದಂಗೆಯಲ್ಲಿ ಭಾಗವಹಿಸುವಂತೆ ಭಾರತೀಯ ಸೈನಿಕರ ಮನವೊಲಿಸುವ ಪ್ರಚಾರ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಯಿತು. ದೀನಾ ಪುರದಿಂದ ಹಿಡಿದು ಜಲಂಧರ್‌ವರೆಗೆ ಉತ್ತರ ಭಾರತದ ಎಲ್ಲ ದಂಡು ಪ್ರದೇಶಗಳಲ್ಲಿ ಭಾರತೀಯ ಸೈನಿಕರ ಜೊತೆಯಲ್ಲಿ ಕ್ರಾಂತಿಕಾರಿಗಳು ಸಂಪರ್ಕ ಪಡೆದುಕೊಂಡರೆಂದು ರಾಷ್ ಬಿಹಾರಿಯವರ ಹೆಚ್ಚಿನ ಸಹಚರರಾದ ಸಚೀಂದ್ರ ಸನ್ಯಾಲ್ ತಮ್ಮ ಆತ್ಮ ಕತೆಯಲ್ಲಿ ಹೇಳಿಕೊಂಡಿದ್ದಾರೆ. ಅವರು ಬರೆದಿರುವಂತೆ ಪಂಜಾಬಿನ ಎರಡು ಸೇನಾ ರೆಜಿಮೆಂಟುಗಳ ದಂಗೆ ವಾಸ್ತವವಾಗಿ ಪ್ರಾರಂಭವಾದ ಕೂಡಲೇ ತಾವೂ ರಂಗಕ್ಕಿಳಿಯುವ ಆಶ್ವಾಸನೆ ನೀಡಿದರು.

ಸಚೀಂದ್ರ ದಾಖಲು ಮಾಡಿರುವಂತೆ ದಂಗೆಯ ಯೋಜನೆಯ ಸಾಮಾನ್ಯ ರೂಪುರೇಖೆಗಳು ಈ ರೀತಿ ಇದ್ದವು. ಸಾಕಷ್ಟು ಮುಂಚೆಯೇ ನಿರ್ಧರಿಸಿದ ನಿರ್ದಿಷ್ಟ ರಾತ್ರಿಯಂದು ಉತ್ತರ ಭಾರತದಲ್ಲಿರುವ ಎಲ್ಲ ದಂಡು ಪ್ರದೇಶಗಳಲ್ಲಿರುವ ಸಿಪಾಯಿಗಳು ಹಠಾತ್ತಾಗಿ ಬ್ರಿಟಿಷ್ ಸೈನಿಕರ ಮೇಲೆ ದಾಳಿ ಮಾಡುವುದು; ಅವರಲ್ಲಿ ಶರಣಾಗತರಾದವರನ್ನು ಬಂಧಿಸುವುದು, ಅದೇ ರೀತಿ ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದು, ಇಂಗ್ಲೀಷರನ್ನು ಸ್ವಯಂ ಸೇವಕರು ಹಾಗೂ ಇತರ ವಯಸ್ಕ ನಾಗರೀಕರು - ಸೆರೆಹಿಡಿಯುವುದು, ಖಜಾನೆಗಳನ್ನು ಲೂಟಿ ಮಾಡುವುದು, ಜೈಲಿನಿಂದ ಖೈದಿಗಳನ್ನು ಬಿಡುಗಡೆ ಮಾಡುವುದು, ಇವೆಲ್ಲ ಮಾಡಿದ ಅನಂತರ, ಆ ಜಾಗದ ಆಡಳಿತವನ್ನು ವಹಿಸಿಕೊಳ್ಳಲು ಯಾರನ್ನಾದರೂ ಆಯ್ಕೆ ಮಾಡಿದ ಮೇಲೆ ಕ್ರಾಂತಿಗಳೆಲ್ಲ ಲಾಹೋರಿನಲ್ಲಿ ಸಭೆ ಸೇರುವುದು.

ಈ ಯೋಜನೆಯನ್ನು ಕಾರ್ಯಗತ ಮಾಡುವ ವೇಳೆಯಲ್ಲಿ ಭಾರತದಲ್ಲಿ ಇಂಗ್ಲೀಷ್ ಸೈನಿಕರ ಸಂಖ್ಯೆ ತುಂಬ ಕಡಿಮೆಯಿರುತ್ತದೆಂಬ ಆಧಾರದ ಮೇಲೆ ಕ್ರಾಂತಿಕಾರರು ದಂಗೆಯೇಳುವ ಅಂದಾಜು ಮಾಡಿಕೊಂಡಿದ್ದರು. ಅವರ ಆಲೋಚನೆಯಂತೆ ಆ ಉಳಿದ ಬ್ರಿಟಿಷ್ ಸೈನಿಕರಲ್ಲೂ ಹೆಚ್ಚು ಮಂದಿ ಬ್ರಿಟಿಷ್ ಸ್ಥಳೀಯ ಸೈನ್ಯಕ್ಕೆ ಆಯ್ಕೆಯಾದ ಅನನುಭವಿ ಯುವಕರು ಮಾತ್ರ. ಇವರನ್ನು ಸುಲಭವಾಗಿ ಸದೆಬಡಿದು ಬೇರೆ ಬೇರೆ ದಂಡು ಪ್ರದೇಶಗಳಲ್ಲಿ ಸಂಗ್ರಹಿಸಿದ ಶಸ್ತ್ರಾಸ್ತ್ರಗಳನ್ನು ಮತ್ತು ಮದ್ದು ಗುಂಡುಗಳನ್ನು ವಶಪಡಿಸಿಕೊಂಡರೆ ಹೋರಾಟವನ್ನು ಒಂದು ವರ್ಷ ಕಾಲವಾದರೂ ಕ್ರಾಂತಿಯ ಹೋರಾಟವನ್ನು ಮುಂದುವರಿಸಿಕೊಂಡು ಹೋದಷ್ಟೇ ಆದರೆ ಐರೋಪ್ಯ ರಾಷ್ಟ್ರಗಳ ನಡುವಣ ಪ್ರತಿಸ್ಪರ್ಧೆ, ಇಂಗ್ಲೀಷರ ಶತ್ರುಗಳ ಕಡೆಯಿಂದ ಬದಲಾಗಬಹುದಾದ ನೆರವು ಹಾಗೂ ಅಂತರರಾಷ್ಟ್ರೀಯ ಸ್ಥಿತಿಗತಿಗಳು ಭಾರತ ಸ್ವಾತಂತ್ರ್ಯ ಗಳಿಸಿಕೊಳ್ಳಲು ಖಂಡಿತ ಸಹಾಯ ಮಾಡಬಲ್ಲವೆಂದು ಭಾವಿಸಲಾಗಿತ್ತು.

ದಂಗೆಯನ್ನು ಸಾರ್ವತ್ರಿಕವಾಗಿ ನಡೆಸುವ ಉದ್ದೇಶವಿದ್ದುದರಿಂದ ಬಂಗಾಳದಲ್ಲಿದ್ದ ಕ್ರಾಂತಿಕಾರಿ ತಂಡೆಗಳಿಗೆ ಪೂರ್ವ ಭಾವಿಯಾಗಿಯೇ ಯೋಜನೆಯ ವಿಚಾರವಾಗಿ ಮಾಹಿತಿ ನೀಡಲಾಯಿತು. ನಾಗರಿಕರ ನಡುವೆಯೆ ಇದ್ದುಕೊಂಡು ಎಲ್ಲೆಡೆಯಲ್ಲೂ ಏಕಕಾಲದಲ್ಲೇ ಬಂಡೇಳಲು ಅನುಕೂಲವಾಗುವಂತೆ ಅವರು ಅಗತ್ಯವಾದ ವ್ಯವಸ್ಥೆ ಮಾಡಿಕೊಳ್ಳಲು ಸಾಧ್ಯವಾಗಲೆಂದು ಹೀಗೆ ಮಾಡಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಬಾಂಬುಗಳನ್ನು ಒದಗಿಸಬೇಕೆಂದು ಅವರನ್ನು ವಿಶೇಷವಾಗಿ ಕೇಳಿಕೊಂಡಿದ್ದರು. ಅನೇಕ ಮಂದಿ ಬಂಗಾಳಿ ಕ್ರಾಂತಿಕಾರಿಗಳು ದಾಖಲಿಸಿರುವ ಹೇಳಿಕೆಗಳಿಂದ ಮತ್ತು ನೆನಪಿನ ಬರವಣಿಗೆಗಳಿಂದ ಮುಂಬರುವ ದಂಗೆಯ ಸುದ್ದಿ ಇಡೀ ಬಂಗಾಳವನ್ನೇ ರೋಮಾಂಚನಗೊಳಿಸಿತ್ತಂತೆ. ಕ್ರಾಂತಿಕಾರಿ ತಂಡಗಳು ಹೊಸಬರನ್ನು ನೇಮಕ ಮಾಡಿಕೊಳ್ಳುತ್ತಿದ್ದವು. ಕಾಡುಗಳಲ್ಲಿ ಅವರಿಗೆ ಹೋರಾಟದ ತರಬೇತಿಯನ್ನು ನೀಡುತ್ತಿದ್ದವು. ಹಾಗೆಯೇ ಬಂದೂಕುಗಳ ಕಳವು ಸಹ ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿತ್ತು. ವಿವಿಧ ಕೇಂದ್ರಗಳಿಗೆ ಹೋರಾಟಗಾರರಿಗೆ ಅಗತ್ಯವಾದ ಶಿಸ್ತಿನ ಉಡುಪುಗಳನ್ನು ರವಾನೆ ಮಾಡುತ್ತಿದ್ದರು, ಆಹಾರ ಮಳಿಗೆಗಳು ಸ್ಥಾಪನೆಯಾಗುತ್ತಿದ್ದವು. ಸ್ಥಳೀಯವಾಗಿ ಲಭ್ಯವಾಗಬಹುದಾಗಿದ್ದ ಮೋಟಾರುಗಳು, ಲಾರಿಗಳು ಮತ್ತು ಇತರ ವಾಹನ ಸೌಕರ್ಯಗಳ

ಪಟ್ಟಿಯನ್ನು ತಯಾರಿಸಿದ್ದರು. ಢಾಕಾದಿಂದ ಲಾಹೋರ್‌ವರೆಗೆ ಜನರ ಮನಸ್ಸಿನಲ್ಲಿ ಮುಂಬರುವ ಕ್ರಾಂತಿಯ ಅಥವಾ ದಂಗೆಯ ವಿಚಾರವಾಗಿ ಅಸ್ಪಷ್ಟವಾದ ಕಲ್ಪನೆ ಮೂಡಿತ್ತು. ಕ್ರಾಂತಿಕಾರಿಗಳು ಬಂಗಾಳದಿಂದ ವಾರಣಾಸಿಗೆ, ಅಲ್ಲಿಂದ ಲಾಹೋರಿಗೆ ಬಾಂಬುಗಳನ್ನು ಸುರಕ್ಷಿತವಾಗಿ ಸಾಗಿಸಿದರು.

ಹೋರಾಟದ ಸಿದ್ಧತೆಯಲ್ಲಿ ಪ್ರಗತಿ ಕಂಡು ಬರುತ್ತಿದ್ದಂತೆ, ರಾಷ್ ಬಿಹಾರಿ ತಾವೇ ಸ್ವತಃ ದೆಹಲಿಯ ಮೂಲಕ ಲಾಹೋರಿಗೆ ಹೊರಟರು. ಭಾರತದ ಉದ್ದಕ್ಕೂ ಫೆಬ್ರವರಿ 21 ರಂದು ದಂಗೆಯೇಳುವುದೆಂದು ನಿರ್ಧಾರ ಮಾಡಲಾಗಿತ್ತು. ಆದರೆ ರಾಷ್ ಬಿಹಾರಿಯವರ ಗುಂಪಿನಲ್ಲಿ ಹಾಗೂ ಹೀಗೂ ಸೇರಿಕೊಂಡಿದ್ದ ಕೃಪಾಲ್‌ಸಿಂಗ್ ಎಂಬಾತ ದಂಗೆಯ ತಾರೀಖಿನ ಬಗ್ಗೆ ಪೋಲೀಸರಿಗೆ ರಹಸ್ಯವಾಗಿ ಸಮಾಚಾರ ಮುಟ್ಟಿಸಿಬಿಟ್ಟ. ಇದು ಅರಿವಿಗೆ ಬಂದ ಕೂಡಲೇ ಕ್ರಾಂತಿಕಾರಿಗಳು ತಾರೀಖನ್ನು ಫೆಬ್ರವರಿ 19 ಕ್ಕೆ ಬದಲಾಯಿಸಿಕೊಂಡರು. ಕೃಪಾಲಸಿಂಗ್‌ನ ಮೇಲೆ ಎಷ್ಟೇ ಎಚ್ಚರಿಕೆಯಿಂದ ಕಣ್ಣಿಟ್ಟಿದ್ದರೂ ಅವನು ಬದಲಾವಣೆಯ ಸುದ್ದಿಯನ್ನು ಕೂಡ ಪೋಲೀಸರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾದ. ಸರ್ಕಾರ ಕೂಡಲೇ ಕ್ರಮ ಕೈಗೊಂಡು ಅನುಮಾನಾಸ್ಪದವಾದ ಸಿಬ್ಬಂಧಿಯನ್ನು ಬೇರೆ ಬೇರೆ ಕಡೆಗಳಿಗೆ ವರ್ಗಾಯಿಸಿತು. ಭಾರೀ ಪ್ರಮಾಣದಲ್ಲಿ ದಸ್ತಗಿರಿಗಳು ನಡೆದವು. ರಾಷ್ ಬಿಹಾರಿ ಮತ್ತು ಪಿಂಗ್ಲೆ ದಸ್ತಗಿರಿಗೊಳ್ಳುವುದರಿಂದ ತಪ್ಪಿಸಿಕೊಂಡು ಸುರಕ್ಷಿತವಾಗಿ ವಾರಾಣಾಸಿ ಸೇರಿದರು. ಆದರೆ ದಂಗೆಯ ಇಡೀ ಹಂಚಿಕೆ ಭಗ್ನಗೊಂಡು ಸುದೀರ್ಘವಾಗಿ ತಯಾರಿಸಿಕೊಂಡಿದ್ದ ಯೋಜನೆ ಮಣ್ಣು ಪಾಲಾಯಿತು.

ಪಿತೂರಿಗಾರರು ಲಾಹೋರಿನಲ್ಲಿ ವಾಸ ಮಾಡುತ್ತಿದ್ದ ನಿವಾಸಗಳಿಗೆ ಪೋಲೀಸರು ಮುತ್ತಿಗೆ ಹಾಕಿ ಶೋಧನೆ ನಡೆಸಿದರು. ಸೈನಿಕರ ನಿಷ್ಠೆ ಭಗ್ನಗೊಳಿಸಿ ಮನವೊಲಿಸುವ ಸಾಹಿತ್ಯ, ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು, ಬಾಂಬುಗಳು, ಬಾಂಬು ತಯಾರಿಸುವ ರಾಸಾಯನಿಕಗಳು, ಕ್ರಾಂತಿ ಧ್ವಜಗಳು ಹಾಗೂ ಟೆಲಿಫೋನ್ ತಂತಿಗಳನ್ನು ಬೀಗಗಳನ್ನು ಮತ್ತು ಕಪಾಟುಗಳನ್ನು ಕತ್ತರಿಸುವ ಇಲ್ಲವೆ ತೆಗೆಯುವ ಸಾಧನಗಳು ಇವೆಲ್ಲ ಪೋಲೀಸರಿಗೆ ದೊರೆತವು. ಅಪಾರ ಸಂಖ್ಯೆಯಲ್ಲಿ ಕ್ರಾಂತಿಕಾರಿಗಳು ಬಂಧನಕ್ಕೊಳಗಾದರು. 1915 ರ IV ನೇ ಕಾಯಿದೆಯನ್ವಯ ನೇಮಕಗೊಂಡ ಕಮೀಷನರುಗಳು ವಿಚಾರಣೆ ನಡೆಸಿ ಕಡೆಗೆ ಹೋರಾಟ ನಡೆಸಿದ್ದಕ್ಕಾಗಿ, ಮೂರು ವಿಚಾರಣೆಗಳನ್ನು ನಡೆಸಿದರು. ಸಾಮಾನ್ಯವಾಗಿ ಲಾಹೋರ್ ಪಿತೂರಿ ಮೊಕದ್ದಮ್ಮೆ ಹಾಗೂ ಲಾಹೋರ್ ಹೆಚ್ಚುವರಿ ಪಿತೂರಿ ಮೊಕದ್ದಮ್ಮೆ ಎಂದು ಕರೆಯಲಾಗುವ ಈ ಮೊಕದ್ದಮ್ಮೆಗಳ ಫಲಿತಾಂಶಗಳ ವಿಚಾರವಾಗಿ ಹಿಂದಿನ ಅಧ್ಯಾಯನದಲ್ಲಿ ಚರ್ಚೆ ಮಾಡಲಾಗಿದೆ.

## 83.4 ಮಾಂಟಿಗ್ಯೂ-ಜೆಮ್ಸ್ ಫರ್ಡ್ ವರದಿಗೆ ಪ್ರತಿಕ್ರಿಯೆ

1917 ರ ಆಗಸ್ಟ್ 20 ರ ಘೋಷಣೆ ಮಾಡಿದಾಗ ಆದಂತೆ, 1918 ರ ಜುಲೈ 8 ರಂದು ಮಾಂಟಿಗ್ಯೂ - ಜೆಮ್ಸ್‌ಫರ್ಡ್ ವರದಿ ಪ್ರಕಟವಾದಾಗಲೂ ಬೇರೆ ಬೇರೆ ವಲಯಗಳಲ್ಲಿ ಬೇರೆ ಬೇರೆ ಪ್ರತಿಕ್ರಿಯೆಗಳು ಪ್ರಕಟವಾದವು. ಕೆಲವು ಪ್ರಮುಖ ನಾಯಕರ ತಕ್ಷಣದ ಪ್ರತಿಕ್ರಿಯೆಯನ್ನು ಸಂಕ್ಷೇಪವಾಗಿ ಹೀಗೆ ಹೇಳಬಹುದು: "ತಿಲಕರು ಇದನ್ನು ಸೂರ್ಯನಿಲ್ಲದ ಸುರ್ಯೋದಯ ಎಂದು ಬಣ್ಣಿಸಿದರು. ರಾಜಕೀಯ ಸುಧಾರಣೆಗಳು ಇಂಗ್ಲೆಂಡ್ ಕೊಡುವುದಕ್ಕೂ ಯೋಗ್ಯವಾಗಿಲ್ಲ, ಭಾರತ ಸ್ವೀಕರಿಸಲೂ ಯೋಗ್ಯವಾಗಿಲ್ಲ ಎಂದು ಶ್ರೀಮತಿ ಬೆಸೆಂಟ್ ವಿವರಿಸಿದರು. ಮಾನ್ಯ ಪಟೇಲ್ ಅವರು ಕೆಲವು ಅಂಶಗಳಲ್ಲಿ ವರದಿಯು ಪ್ರತಿಗಾಮಿ ಪ್ರಸ್ತಾಪಗಳನ್ನು ಮಾಡಿದೆ ಎಂಬುದನ್ನು ತೋರಿಸಿದರು. ಎನ್.ಸಿ. ಕೇಳ್ಕರ್ ಅವರು ಪ್ರಸ್ತಾಪಗಳು ನಿರ್ದಯವಾಗಿಯೂ ನಿರಾಶಾದಯಕವೂ ಆಗಿವೆ ಮತ್ತು ಭಾರತೀಯ ನೌಕರರಿಗೆ ಮಾರಿದ್ದುಣ್ಣೋ ಮಹಾರಾಯ ಎಂದು ಬಿಟ್ಟ ದುಷ್ಟ ಪ್ರಯತ್ನ ಎಂಬಂತಿದೆ ಎಂದರು. ಪ್ರೊ. ಜೆ. ಎಲ್. ಬ್ಯಾನರ್ಜಿ ಅವರು, ಸುಧಾರಣೆಗಳು ಒಲ್ಲದ ಮನಸ್ಸಿನಿಂದ ನೀತಿದಂಥವು; ಆದ್ದರಿಂದಲೇ ಅವು ನಿರಾಶಾದಾಯಕವಾದವು ಮತ್ತು ನಿಷ್ಪ್ರಯೋಜಕವಾದವು ಎಂದು ಘೋಷಿಸಿದರು. ಅನುಭವಿಯಾದ ಸುಬ್ರಹ್ಮಣ್ಯ ಐಯ್ಯರ್ ಅವರು ತಮ್ಮ ದೇಶ ಬಾಂಧವರಿಗೆ ನೀಡಲಾದ ವಶೀಲಿ ವಸ್ತುವನ್ನು ಮುಟ್ಟಬಾರದೆಂದು ಬುದ್ಧಿವಾದ ಹೇಳಿದರು". ಆದರೆ, ಮಧ್ಯವರ್ಗಿ ನಾಯಕರು ಈ ಯೋಜನೆಯನ್ನು ಹೃತ್ಪೂರ್ವಕವಾಗಿ ಅನುಮೋದಿಸಿದರು. ಸರ್ ದಿನ್ ಷಾ ವಾಚ, ಶ್ರೀ ಚಮನ್ ಲಾಲ್ ಸೆಟ್ಲವಾಂತ್ ಮತ್ತು ಸರ್ ನಾರಾಯಣ ಚಂದಾವರ್ಕರ್ ಅವರೂಗಳೂ ಸೇರಿದಂತೆ ಒಂಬತ್ತು ಜನ ಮಾಧ್ಯಮಾರ್ಗ ನಾಯಕರು ಉದ್ದಿಷ್ಟ ಸುಧಾರಣೆಗಳನ್ನು ಬೆಂಬಲಿಸಿ ದೀರ್ಘವಾದ ಘೋಷಣಾ ಪತ್ರವೊಂದನ್ನು ಹೊರಡಿಸಿದರು.

ಬ್ರಿಟಿಷ್ ಇಂಡಿಯಾದ ಪ್ರಾಂತಗಳು ಸಂಪೂರ್ಣ ಜವಾಬ್ದಾರಿಯುತ ಸರ್ಕಾರದ ಗುರಸಾಧನೆ ಮಾಡುವ ಅವಧಿಯಲ್ಲಿ ಸದರಿ ಯೋಜನೆಯು ಒಂದು ಪ್ರಗತಿ ಪರವಾದ ಸುಧಾರಣಾ ಕ್ರಮ ಎಂದು ಅವರು ಅಭಿಪ್ರಾಯಪಟ್ಟರು. ಆದರೆ ಅವರು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಪ್ರಸ್ತಾಪಗಳ ಬಗ್ಗೆ ಉತ್ಸುಕರಾಗಿರಲಿಲ್ಲ ಮತ್ತು ಅವು ಅತಿಯಾದ ಎಚ್ಚರಿಕೆಯಿಂದ ಹಾಗೂ ಸಂಕುಚಿತ ಮನಸ್ಸಿನಿಂದ ಮಾಡಿದವು; ಏಕೆಂದರೆ ಅವು ಪ್ರಶ್ನಾರ್ಹವಾದ ಸೂತ್ರವನ್ನು ಆಧರಿಸಿದವು ಎಂದು ಬಣ್ಣಿಸಿದರು.

1918 ರ ಜುಲೈ 8 ರಂದು ಮದ್ರಾಸ್‌ನಲ್ಲಿ ಹದಿನೆಂಟು ಮಂದಿ ಹೋಂರೂಲ್ ಚಳುವಳಿಗಾರರು ಹೊರಡಿಸಿದ ಘೋಷಣಾ ಪತ್ರವು ಇದಕ್ಕೆ ತೀರಾ ವಿರುದ್ಧವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಅದನ್ನೇ ಈ ಕೆಳಕಂಡ ಉದ್ಧೃತ ಭಾಗ ವಿಶದಪಡಿಸುತ್ತದೆ. "ಈ ಯೋಜನೆಯು ಭಾರತದ ಜನತೆಯ ಬಗ್ಗೆ ಸಂಪೂರ್ಣವಾಗಿ ಅಪನಂಬಿಕೆಯನ್ನಿಟ್ಟುಕೊಂಡೇ ಮಾಡಿದ್ದು; ಆದ್ದರಿಂದ ಅದು ತಾತ್ವಿಕವಾಗಿಯೂ ವಿವರಗಳಲ್ಲಿಯೂ ಮೂಲಭೂತವಾಗಿಯೇ ದೋಷಪೂರ್ಣವಾಗಿದೆ. ನಮ್ಮ ಅಭಿಪ್ರಾಯದಲ್ಲಿ ಇದನ್ನು ರೂಪಾಂತರಿಸುವುದಕ್ಕಾಗಲಿ ಸುಧಾರಿಸುವುದಕ್ಕಾಗಲೀ ಸಾಧ್ಯವಿಲ್ಲ. ಈ ಇಡೀ ಸಂಕೀರ್ಣವಾದ ಯೋಜನೆಯ ಕೆಟ್ಟ ಕಾರ್ಯ ವಿಧಾನದ ಯಾವುದೇ ರಕ್ಷಣೋಪಾಯಗಳ ವ್ಯವಸ್ಥೆಯನ್ನು ರೂಪಿಸುವುದು ಸಾಧ್ಯವೆಂದು ನಾವು ನಂಬಿಲ್ಲ. ಆದ ಕಾರಣ, ಅದು ಜನರ ಅಥವಾ ಅವರ ಪ್ರತಿನಿಧಿಗಳ ಚರ್ಚೆಗೆ ಇಲ್ಲವೆ ರಾಜಿಗೆ ಆಧಾರವಾಗಲು ಸಾಧ್ಯವಿಲ್ಲ".

ಎರಡು ಅತಿರೇಕದ ಅಭಿಪ್ರಾಯಗಳ ನಡುವಣ ವ್ಯತ್ಯಾಸ ಬಂಗಾಳದಲ್ಲಿ ಚೆನ್ನಾಗಿ ವ್ಯಕ್ತವಾಯಿತು. ಅಲ್ಲಿ ಮಧ್ಯಮಾರ್ಗಿಗಳು ತಾವೇ ಸೇರಿಕೊಂಡು ಒಂದು ಪಕ್ಷವನ್ನು ನ್ಯಾಷನಲ್ ಲಿಬರಲ್ ಲೀಗ್ ಮಾಡಿಕೊಂಡರು. ವರದಿ ಪ್ರಕಟವಾಗುವುದಕ್ಕೆ ಕೆಲವೇ ದಿವಸಗಳಿಗೆ ಮುಂಚೆ "ಈ ಯೋಜನೆಯು ನಮ್ಮನ್ನು ಜವಾಬ್ದಾರಿಯುತ ಸರ್ಕಾರದ ಗುರಿಯತ್ತ ಸಾಕಷ್ಟು ಮುಂದಕ್ಕೆ ಒಯ್ಯುವುದಾದರೆ ಅದು ತೃಪ್ತಿಕರವಾಗಿರುವವರೆಗೆ ನಾವು ಅದಕ್ಕೆ ನಮ್ಮ ಒಪ್ಪಿಗೆಯನ್ನು ಬೆಂಬಲವನ್ನು ನೀಡಬೇಕು. ಅದು ನಮ್ಮ ನಿರೀಕ್ಷೆಯನ್ನು ಮುಟ್ಟದಿದ್ದರೆ, ಆಗ ನಮ್ಮ ನಿರಾಶೆಯನ್ನು ವ್ಯಕ್ತಪಡಿಸಿ, ನಮ್ಮ ಪ್ರತಿಭಟನೆಯನ್ನು ದಾಖಲಿಸುವುದು ನಮ್ಮ ಕರ್ತವ್ಯವಾಗಿರುತ್ತದೆ ಎಂಬ ಘೋಷಣಾ ಪತ್ರ ಹೊರಡಿಸಿದರು. ಈ ಆಡಂಬರದ ಮಾತುಗಳನ್ನು ತಕ್ಕ ಮಟ್ಟಿಗೆ ಅರ್ಥೈಸಬಹುದು. ತರುವಾಯದ ಘಟನೆಗಳಿಂದ, ಬಂಗಾಳದಲ್ಲಿನ ಮಧ್ಯಮಾರ್ಗಿಗಳು ಕನಿಷ್ಟ ಪಕ್ಷ ಘೋಷಣಾ ಪತ್ರದಲ್ಲಿ ಹೆಸರಿಸಿರುವವರು ತಮ್ಮ ಅನುಮೋದನೆಯನ್ನು ಮುಂಚಿತವಾಗಿಯೇ ತಿಳಿಯಪಡಿಸಲು ತೀರ್ಮಾನಿಸಿಬಿಟ್ಟಿದ್ದರು. ಬೆಂಗಾಲ್ ಪ್ರೊವಿನ್ಸಿಯಲ್ ಕೌನ್ಸಿಲ್ ಆದರೋ 1918 ರ ಜುಲೈ 14 ರಂದು ನಡೆದ ವಿಶೇಷ ಅಧಿವೇಶನದಲ್ಲಿ ಹೆಚ್ಚು ಕಡಿಮೆ ಸರ್ವಾನುಮತದಿಂದ ಕೇವಲ ಹತ್ತು ಜನ ವಿರುದ್ಧವಾಗಿ ಮತ ಹಾಕಿದರು. ಈ ಕೆಳಕಂಡ ನಿರ್ಣಯವನ್ನು ಅಂಗೀಕರಿಸಿತು. "ವೈಸರಾಯ್ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಅವರ ಈ ಯೋಜನೆಯ ನಿರಾಶಾದಾಯಕವಾದುದು ಮತ್ತು ಅಸಮರ್ಪಕವಾದುದು; ಮತ್ತು ಅದು ಜವಾಬ್ದಾರಿಯುತ ಸರ್ಕಾರದತ್ತ ಯಾವುದೇ ನಿಜವಾದ ಪ್ರಗತಿಪರ ಹೆಜ್ಜೆಯನ್ನು ಇಡುವುದಿಲ್ಲ".

ಆದರೆ ಮೊದಮೊದಲ ಉದ್ವೇಶಗಳು ತಣ್ಣಗಾದ ಮೇಲೆ ಸಾಮಾನ್ಯ ಒಲವು ಈ ವರದಿಯ ಪರವಾಗಿ ತಿರುಗಿದಂತೆ ಕಂಡಿತು. ಕೊನೆಗೆ ಮೂರು ಬೇರೆ ಬೇರೆ ಪಂಥಗಳು ಹುಟ್ಟಿಕೊಂಡವು. ಇವು ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನಲ್ಲೂ ಪ್ರತಿಫಲಿತವಾದವು ಮತ್ತು ಮಹತ್ವ ಪೂರ್ಣವಾದವು ಎಂದು ಮಧ್ಯಮಾರ್ಗಿಗಳು ಭಾವಿಸಿದರು. ಪ್ರಸ್ತಾವಗಳು ಮೂಲಭೂತವಾಗಿ ತಾತ್ವಿಕವಾಗಿಯೂ ವಿವರಗಳಲ್ಲಿಯೂ ಎಷ್ಟು ದೋಷಪೂರ್ಣವಾದವು ಎಂದರೆ, ಅದನ್ನು ಮಾರ್ಪಡಿಸಿ ಉತ್ತಮಗೊಳಿಸಲು ಸಾಧ್ಯವೇ ಇಲ್ಲ" ಎಂದು ಕಟ್ಟಾ ವಾಮ ಪಂಥಿಗಳು ಅಭಿಪ್ರಾಯ ಪಟ್ಟರು. ಇವೆರಡರ ಮಧ್ಯೆ ಒಂದು ಗುಂಪು ಇತ್ತು. ಅದು ಈ ವರದಿ ಅಸಮರ್ಪಕ ಎಂದು ಭಾವಿಸಿ, ಸಾರಭೂತವಾದ ಬದಲಾವಣೆ ಮಾಡಬೇಕೆಂದು ಹೇಳಿತೋ ಹೊರತು, ಅದನ್ನು ಒಟ್ಟಾರೆ ತಿರಸ್ಕರಿಸಲಿಲ್ಲ. ವರದಿಯನ್ನು ಸ್ವಾಗತಿಸುವಲ್ಲಿ ಮತ್ತು ವರದಿಯನ್ನು ತಯಾರಿಸುವವರ ಪ್ರಾಮಾಣಿಕತೆ ಹಾಗೂ ನಿಷ್ಕಪಟತೆಗಳ ಬಗ್ಗೆ ಒತ್ತಿ ಹೇಳುವಲ್ಲಿ ಬಳಸಿರುವ ಭಾಷೆಯ ವ್ಯತ್ಯಾಸವನ್ನು ಬಿಟ್ಟರೆ, ಈ ಗುಂಪು ಹಾಗೂ ಮಧ್ಯಮಾರ್ಗಿಗಳ ನಡುವೆ ಅಂಥದೇನೂ ಹೆಚ್ಚಿನ ವ್ಯತ್ಯಾಸವಿರಲಿಲ್ಲ. ಏಕೆಂದರೆ ವರದಿಯಲ್ಲಿರುವ ಯೋಜನೆಯನ್ನು ಉತ್ತಮ ಪಡಿಸಲು ಇವೆರಡು ಪಂಥಗಳು ಕೊಟ್ಟಿರುವ ಸಲಹೆ ಸೂಚನೆಗಳಲ್ಲಿ ಯೋಜನೆಯನ್ನು ಉತ್ತಮ ಪಡಿಸಲು ಇವೆರಡು ಪಂಥಗಳು ಕೊಟ್ಟಿರುವ ಸಲಹೆ ಸೂಚನೆಗಳಲ್ಲಿ ಹೇಳಿಕೊಳ್ಳುವ ವ್ಯತ್ಯಾಸಗಳೇನೂ ಇರಲಿಲ್ಲ. ಕಾಂಗ್ರೆಸ್ಸಿನ ಈ ಮಧ್ಯವರ್ತಿ ಗುಂಪು ತೀವ್ರವಾದ ಗುಂಪಿಗಿಂತ ಪ್ರಬಲವಾಗಿತ್ತು ಮತ್ತು ಕಾಂಗ್ರೆಸ್ ಖಂಡಿತವಾಗಿ ಒಟ್ಟಾರೆ ವರದಿಯನ್ನು ತಿರಸ್ಕರಿಸುತ್ತದೆಂಬ ಶಂಕೆಗೆ ಯಾವ ನ್ಯಾಯ ಸಮ್ಮತವಾದ ಆಧಾರವೂ ಇರಲಿಲ್ಲ. ಆದರೆ ಈ ಶಂಕೆಯಿಂದ ದಾರಿ ತಪ್ಪಿ ಮತ್ತು ಹೊರ

ನೋಟಕ್ಕೆ ತಿಳಿಯದ ಇತರ ಕಾರಣಗಳಿಂದಾಗಿ ಕಾಂಗ್ರೆಸ್ಸಿನ ಮಧ್ಯಮಾರ್ಗಿ ತಂಡವು ಆ ರಾಷ್ಟ್ರೀಯ ಪಕ್ಷವನ್ನು ತೊರೆದು, ಹೊಸದೊಂದು ಪ್ರತ್ಯೇಕವಾದ ಪಕ್ಷವನ್ನು ಕಟ್ಟಲು ತೀರ್ಮಾನಿಸಿತು. ದುರದೃಷ್ಟವಶಾತ್ ಕಾಂಗ್ರೆಸ್ ಹೀಗೆ ಇಬ್ಭಾಗವಾದುದರಲ್ಲಿ ಮಾಂಟೆಗ್ಯೂ ಕೈವಾಡ ಎಷ್ಟಿತ್ತು ಎಂಬುದನ್ನು ಈಗಾಗಲೇ ಹೇಳಿದೆ.

ಪ್ರತ್ಯೇಕ ಪ್ರಾತಿನಿಧ್ಯವನ್ನು ಕೇಳಿದ್ದ ಜಾತಿ ಮತಗಳನ್ನು ಈ ವರದಿ ನಿರಾಶೆಗೊಳಿಸಿತ್ತು. ಸಿಖ್ಖರು ಹೆಚ್ಚಿನ ಪ್ರಾತಿನಿಧ್ಯಕ್ಕಾಗಿ ಚಳುವಳಿ ಆರಂಭಿಸಿ, ಈ ಉದ್ದೇಶಕ್ಕಾಗಿ ಒಂದು ನಿಯೋಗವನ್ನು ಇಂಗ್ಲೆಂಡಿಗೆ ಕಳುಹಿಸಿದರು. ಪ್ರತ್ಯೇಕ ಮತೀಯ ಪ್ರಾತಿನಿಧ್ಯಕ್ಕಾಗಿ ಆಂಗ್ಲೋ-ಇಂಡಿಯನ್ನರು ಮತ್ತು ಭಾರತೀಯ ಕ್ರೈಸ್ತರು ಯುರೋಪಿಯನ್ ಅಸೋಸಿಯೇಷನ್‌ಗೆ ಸೇರಿಕೊಂಡರು. ಮದ್ರಾಸಿನ ಬ್ರಾಹ್ಮಣೇತರರು 'ಜಸ್ಟೀಸ್ ಪಾರ್ಟಿಯನ್ನು' ಕಟ್ಟಿ ಪ್ರತ್ಯೇಕ ಪ್ರಾತಿನಿಧ್ಯಕ್ಕಾಗಿ ತೀವ್ರ ಚಳುವಳಿ ಆರಂಭಿಸಿದರು. ಮುಂದೆ ನಾವು ನೋಡುವಂತೆ ಈ ಎಲ್ಲಾ ಮತಗಳ ಚಳುವಳಿ ಫಲಪ್ರದವಾಯಿತು.

ಈ ವರದಿಯಿಂದ ತಲ್ಲಣಗೊಂಡ ಇನ್ನೊಂದು ವರ್ಗವೆಂದರೆ ಇಂಡಿಯನ್ ಸಿವಿಲ್ ಸರ್ವೀಸ್ ಅಥವಾ ಅದರ ಯುರೋಪಿಯನ್ ಸದಸ್ಯರು, ತಮ್ಮ ಕೆಲವು ಅಧಿಕಾರಗಳನ್ನೂ, ಸವಲತ್ತುಗಳನ್ನೂ ಕಸಿದುಕೊಳ್ಳುವ ಬೆದರಿಕೆಯೊಡ್ಡಿದ ಸುಧಾರಣೆಗಳ ವಿರುದ್ಧ ತೀವ್ರವಾಗಿ ಪ್ರತಿಭಟಿಸಲು ಅವರು ಒಂದು ಸಂಘವನ್ನು ಮಾಡಿಕೊಂಡರು. ಅವರ ಅಭಿಪ್ರಾಯ ತಪ್ಪು ಎಂಬುದನ್ನು ವರದಿಯ ಈ ಭಾಗ ತೋರಿಸುತ್ತದೆ; "ಕಳೆದ ಆಗಸ್ಟ್‌ನಲ್ಲಿ ಘೋಷಿಸಿದ ನೀತಿಯನ್ನು ವಿರೋಧಿಸಿದ್ದಾಗಿಯೂ ಅಥವಾ ವಿರೋಧಿಸುವುದಾಗಿಯೂ ಹೇಳುವುದು ಇಂಡಿಯನ್ ಸಿವಿಲ್ ಸರ್ವೀಸ್ ಎಂಬ ಸಂಸ್ಥೆಗೆ ಅವಮಾನ ಎಂದು ಭಾವಿಸಿದ್ದೇವೆ.

ಮದ್ರಾಸ್ ಮತ್ತು ಬಿಹಾರ್‌ಗಳಲ್ಲಿನ ಐ.ಸಿ.ಎಸ್. ಸದಸ್ಯರು ಸುಧಾರಣಾ ಪ್ರಸ್ತಾಪಗಳ ವಿರುದ್ಧ ಪ್ರತಿಭಟಿಸಲು ಸಭೆಗಳನ್ನು ನಡೆಸಿದರು. ಸರ್ವೀಸ್‌ನ ಬ್ರಿಟಿಷ್ ಸದಸ್ಯರುಗಳಿಗೆ ರಹಸ್ಯ ಸುತ್ತೋಲೆಗಳನ್ನು ಕಳುಹಿಸಿದರು. ವರದಿಯಲ್ಲಿದ್ದ ಐ.ಸಿ.ಎಸ್. ಈ ಯೋಜನೆಯನ್ನು ಅನುಮೋದಿಸುತ್ತದೆ ಮತ್ತು ಸ್ವಾಗತಿಸುತ್ತದೆ ಎಂಬ ಮಾತಿನ ಬಗ್ಗೆ ಮದ್ರಾಸ್ ಸುತ್ತೋಲೆಯು ಹೀಗೆ ಟೀಕಿಸಿತು: " ಈ ಮಾತು ನಿಜಲ್ಲ ಎಂದು ನಾವು ಹೇಳಲಿಚ್ಛಿಸುತ್ತೇವೆ" ಭಾರತದ ಸೆಕ್ರೆಟರಿ ಆಫ್ ಸ್ಟೇಟ್‌ಗೆ ಒಂದು ಪತ್ರವನ್ನು ಕಳುಹಿಸಲೇಬೇಕೆಂದು ತೀರ್ಮಾನಿಸಿ ಅದಕ್ಕೆ ಒಂದು ಕರಡನ್ನು ಸಿದ್ಧಪಡಿಸಿ, ಮದ್ರಾಸ್ ಸಂಘವು ಎಲ್ಲರಿಗೂ ಕಳುಹಿಸಿಕೊಟ್ಟಿತು. ಐ.ಸಿ.ಎಸ್.ಗೆ ಸೇರಿದ ಒಬ್ಬ ಸದಸ್ಯರ ಬಳಿ ಸಹಿಗಾಗಿ ಕರಡನ್ನು ಕಳುಹಿಸಿದಾಗ ಅವರು "ಇದು ರಾಜಕೀಯ ಕೊಂಕು ನುಡಿಗಳಿಂದ ತುಂಬಿದೆ. ಸಿಡುಕಿನಿಂದ ಕೂಡಿವೆ ಎನ್ನಬಹುದೇ ಹೊರತು ಇದರಲ್ಲಿ ಬಂಡಾಯ ಎಬ್ಬಿಸುವ ದನಿಯಿದೆ ಎಂದು ಹೇಳಲಾಗದು" ಎಂದು ವಿಧಿಯಿರಲಿಲ್ಲ.

ಭಾರತೀಯರು ಐ.ಸಿ.ಎಸ್. ಸಂಘಗಳ ಧೋರಣೆಯನ್ನು ತಟುವಟಿಕೆಗಳನ್ನೂ, ಒಕ್ಕೊರಲಿನಿಂದ ತೀವ್ರವಾಗಿ ಪ್ರತಿಭಟಿಸಿದರು. ಆದರೆ, ವೈಸರಾಯ್ ವರದಿಯಲ್ಲಿನ ತನ್ನ ಮಾತುಗಳನ್ನು ಮಾನಗೆಟ್ಟು ತಾನೇ ಹಿಂತೆಗೆದುಕೊಂಡು, 1919 ರ ಫೆಬ್ರವರಿ 6 ರಂದು ಇಂಡಿಯನ್ ಲೆಜಿಸ್ಲೇಟಿವ್ ಕೌನ್ಸಿಲ್ ಮುಂದೆ ಮಾಡಿದ ತನ್ನ ಭಾಷಣದಲ್ಲಿ ಐ.ಸಿ.ಎಸ್. ನವರನ್ನು ಸಮಾಧಾನ ಮಾಡಲು ಅವರ ಮೇಲೆ ಹೊಗಳಿಕೆಯ ಮಳೆಗೆರೆದು, ಯಾವುದೇ ಸುಧಾರಣಾ ಯೋಜನೆಯಲ್ಲಿ ಅವರ ಆರ್ಥಿಕ ಮತ್ತು ರಾಜಕೀಯ ಹಿತಕ್ಕೆ ಧಕ್ಕೆ ಬರದಂತೆ ಪೂರ್ಣ ರಕ್ಷಣೆಯ ಗ್ಯಾರಂಟಿ ಕೊಟ್ಟನು. ವೈಸರಾಯ್ ಭಾಷಣವಾದೊಡನೆ, ಹೋಂ ಮೆಂಬರ್ ದೌಲತ್ ಮಸೂದೆ ಎಂದು ಖ್ಯಾತವಾದ ದಮನಕಾರಿ ಶಾಸನವನ್ನು ತಂದಿದ್ದು ಕೇವಲ ಕಾಕತಾಳೀಯವಲ್ಲ. ಇದನ್ನು ಮುಂದೆ ಉಲ್ಲೇಖಿಸಲಾಗುವುದು. ಇವೆಲ್ಲ ಅಪಶಕುನಗಳು, ಸುಧಾರಣೆಗಳಿಗೆ ಕೆಟ್ಟ ಶಕುನಗಳು. ಚೆಮ್ಸ್‌ಫರ್ಡ್‌ನ ದೌರ್ಭಾಗ್ಯ ಪೂರ್ಣ ಭಾಷಣ ಹಾಗೂ ದೌಲತ್ ಮಸೂದೆ ಎರಡನ್ನೂ ಭಾರತೀಯರು ಪ್ರಗತಿ ವಿರೋಧಿ ಐ.ಸಿ.ಎಸ್. ಗಳಿಗೆ ನಂದ ಜಯವೆಂದು ವ್ಯಾಖ್ಯಾನಿಸಿದರು ಎನ್ನುವುದರಲ್ಲಿ ಸಂದೇಹವಿಲ್ಲ; ಮತ್ತು ಮೌಂಟ್ -ಫರ್ಡ್ ಸುಧಾರಣೆಗಳನ್ನಾಧರಿಸಿದ ಭಾರತ ಸರ್ಕಾರದ ಕಾಯಿದೆಯನ್ನು (1919) ಸರಿಯಾಗಿ ಪರೀಕ್ಷಿಸಿದಿದ್ದುದರಿಂದ ಅದು ಸಂಪೂರ್ಣವಾಗಿ ವಿಫಲವಾಯಿತು.

## 83.5 ಉಪಸಂಹಾರ

ಭಾರತೀಯ ಕ್ರಾಂತಿಕಾರಿಗಳು ಪ್ರತಿಪಾದನೆ ಮಾಡುತ್ತಿದ್ದ ಹಾಗೂ ಕಾರ್ಯ ರೂಪಕ್ಕೆ ತರುತ್ತಿದ್ದ ಭಯೋತ್ಪಾದಕ ವಿಧಾನಗಳನ್ನು ಕುರಿತಂತೆ ರಾಜಕೀಯ ಡಕಾಯಿತಿಗಳ ಹಾಗೂ ಅಧಿಕಾರಿಗಳ ಕೊಲೆ ಮತ್ತು ಬ್ರಿಟಿಷರ ವಿರುದ್ಧ ಅವರು ಸಾರಿದ್ದ ಸಶಸ್ತ್ರ ಬಂಡಾಯದ ಬಗ್ಗೆ ಅಪಾರವಾಗಿ ವಿರೋಧಾಭಿಪ್ರಾಯಗಳು ವ್ಯಕ್ತವಾಗುತ್ತಿದ್ದವು. ಭಯೋತ್ಪಾದಕತೆಯ ವಿಚಾರವಾಗಿ ಎತ್ತುತ್ತಿದ್ದ ಆಕ್ಷೇಪಗಳು

ನೈತಿಕ ತಳಹದಿಯ ಮೇಲೆ ಇರುತ್ತಿದ್ದವು. ಅಂತೆಯೇ ಭಾರತದಿಂದ ಬ್ರಿಟಿಷರನ್ನು ಹೊರಗಟ್ಟಲು ಈ ಬಗೆಯ ಉಪಾಯಗಳು ಯಾವುದೇ ಫಲವನ್ನು ಕೊಡಲಾರವು ಎಂಬುದು ಸಾಮಾನ್ಯ ಅಭಿಪ್ರಾಯವಾಗಿದ್ದು ಭಯೋತ್ಪಾದಕತೆ ಮತ್ತು ಕ್ರಾಂತಿ ಎರಡೂ ನಿಷ್ಪ್ರಯೋಜಕ ಎಂದು ಧಿಕ್ಕರಿಸಲಾಗುತ್ತಿತ್ತು.

ಈ ರೀತಿಯಾಗಿ ತುಂಬ ತೂಕವಾಗಿರುವ ಪ್ರತಿಪಾದನೆಗಳನ್ನು ಮತ್ತೆ ಮತ್ತೆ ಬೇಸರ ಹಿಡಿಯುವಷ್ಟು ಬಾರಿ ಜನ ಮಾಡುತ್ತಿದ್ದರು. ಆದರೂ ಆಧುನಿಕ ಭಾರತದ ಚರಿತ್ರೆಯಲ್ಲಿ ಈ ಸಂಪುಟದ ವಿಷಯ ನಿರೂಪಣೆಯ ದೃಷ್ಟಿಯಿಂದ ಇದಕ್ಕೆ ಹಿಂದಿನ ಚರಿತ್ರಾಕಾರರೇ ಆಗಲಿ, ಸಾರ್ವಜನಿಕರೇ ಆಗಲಿ, ಹರಿಸಿರುವ ಗಮನಕ್ಕಿಂತ ಹೆಚ್ಚಿನ ಮಟ್ಟದ ಗಮನವನ್ನು ನೀಡಬೇಕಾಗಿದೆ. ಇದನ್ನು ಏಕೆ ಎಚ್ಚರಿಕೆಯಿಂದ ಪರಿಗಣಿಸಬೇಕೆಂದರೆ ಹಿಂಸಾಚಾರವನ್ನು ಬೆಂಬಲಿಸುವ ಹಾಗೂ ವಿರೋಧಿಸಿರುವ ಮಂದಿ ವಿವೇಚನೆಗಿಂದ ಮಿಗಿಲಾಗಿ ಭಾವಾವೇಶದೊಡನೆ ಈ ಬಗ್ಗೆ ಆಲೋಚಿಸುತ್ತಾ ಬಂದಿದ್ದಾರೆ. ಪ್ರಾಯಃಶ ಈ ವಿಷಯವಾಗಿ ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬರಲು ಸಾಧ್ಯವಾಗಲಾರದೇನೋ ಆದರೂ ಈ ಸಮಸ್ಯೆಯನ್ನು ಹೆಚ್ಚು ತಾರ್ಕಿಕವಾಗಿ ಅರ್ಥ ಮಾಡಿಕೊಳ್ಳಲು ನೆರವಾಗುವಂತಹ ಕೆಲವು ಅಗತ್ಯವಾದ ಮಾಹಿತಿಗಳ ಮತ್ತು ದೃಷ್ಟಿಕೋನಗಳ ಮೇಲೆ ಇಲ್ಲಿ ಬೆಳಕು ಚೆಲ್ಲಬಹುದು.

## 83.6 ಮಾದರಿಯ ಪ್ರಶ್ನೆಗಳು

1. ಮೊದಲನೆ ಮಹಾಯುದ್ಧದ ಕೊನೆಯ ವೇಳೆಗೆ ಭಾರತದ ಸ್ವತಂತ್ರ ಸಂಗ್ರಾಮವು ಚುರುಕುಗೊಂಡಿತು, ಇದಕ್ಕೂ ಮಾಂಟಿಗ್ಯೂ -ಜೈಮ್ಸ್‌ಫರ್ಡ್ ಕಾಯಿದೆಗೂ ಸಂಬಂಧವಿದೆಯೇ? ಚರ್ಚಿಸಿ?
2. ಮಾಂಟಿಗ್ಯೂ ಚೇಮ್ಸ್‌ಫರ್ಡ್ ಕಾಯಿದೆಯ ನಿಬಂಧನೆಗಳನ್ನು ಉಲ್ಲೇಖಿಸಿ ಮತ್ತು ಅವುಗಳ ಮೇಲೆ ಮೊದಲನೆಯ ಮಹಾಯುದ್ಧದ ಪ್ರಭಾವ ತಿಳಿಸಿ?

## 83.7 ಪರಾಮರ್ಶನ ಕೃತಿಗಳು


1. Sumith Sarkar : **"Modern India"**
2. Burtyn Stein : **"Indian History"**



ಡಾ. ಎನ್. ಸರಸ್ವತಿ
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,
ಮೈಸೂರು

## ಟಿಪ್ಪಣೆಗಳು

# ಘಟಕ - 84

## 1919 ರ ಭಾರತ ಸರ್ಕಾರದ ಕಾಯಿದೆ

84.0 ಪ್ರಸ್ತಾವನೆ

84.1 1919 ರ ಕಾಯ್ದೆಯ ಮುಖ್ಯ ಯೋಜನೆಗಳು

84.2 ಪ್ರಾಂತೀಯ ಕಾರ್ಯ ನಿರ್ವಹಕ ಶಾಖೆ : ದ್ವಿಪ್ರಭುತ್ವ

84.3 ಕೇಂದ್ರ ಸರ್ಕಾರದ ವಿನ್ಯಾಸ

84.4 ಉಪಸಂಹಾರ

84.5 ಮಾದರಿಯ ಪ್ರಶ್ನೆಗಳು

84.6 ಪರಾಮರ್ಶನ ಕೃತಿಗಳು

## 84.0 ಪ್ರಸ್ತಾವನೆ

1909 ರ ಆಕ್ಟ್ ಉಂಟುಮಾಡಿದ ಭ್ರಮನಿರಸ ಸ್ವಯಮಾಡಳಿತದ ಬೇಡಿಕೆಯನ್ನು ಕೆರಳಿಸಿತು ಮತ್ತು ಪುಷ್ಟೀಕರಿಸಿತು. ಸ್ವಯಮಾಡಳಿತವು ಬ್ರಿಟಿಷರಿಂದ ಒಂದು ಉಡುಗೊರೆಯಾಗಿ ಏನೂ ತಿಳಿದುಬರುವಂತದಲ್ಲ ಎಂಬುದನ್ನು ಭಾರತದ ಜನತೆ ಅರ್ಥಮಾಡಿಕೊಂಡಿತು. ಈ ಮಧ್ಯೆ ಸ್ವಯಂಮಾಡಳಿತ ಎಂದರೆ ಏನು ಎಂಬುದರ ಸ್ಪಷ್ಟ ಚಿತ್ರ ಅವರಿಗೆ ಬಂದಿತು. ಗೋಖಲೆ ಹೇಳಿದಂತೆ "ಪಶ್ಚಿಮದ ರಾಜಕೀಯ ತತ್ವಶಾಸ್ತ್ರ ಮತ್ತು ಸೂತ್ರಗಳು ಭಾರತೀಯ ಜೀವನದ ಅಗತ್ಯ ಭಾಗವಾಗಿ ಪರಿಣಮಿಸಿವೆ. ಅಲ್ಲಿನ ಶಿಕ್ಷಣವು ಭಾರತಕ್ಕೆ ಬಂದಾಗಲೇ ತನ್ನೊಂದಿಗೆ ರಾಷ್ಟ್ರೀಯತೆ, ಉದಾರತೆ ಮತ್ತು ಸ್ವಾತಂತ್ರ್ಯಗಳ ರಾಜಕೀಯವನ್ನು ತಂದಿತು".

ಭಾರತದೊಳಗೂ ಹೊರಗೂ ಘಟನೆಗಳು ವೇಗವಾಗಿ ಮುಂದುವರಿಯುತ್ತಿದ್ದವು. 1911 ರ ಪ್ರಾಂತೀಯ ಸ್ವಯಂ ಆಡಳಿತಕ್ಕೆ ಮಾಡಿದ ನಿರ್ಣಯ ಮತ್ತು ರಾಜಧಾನಿಯು ಕಲ್ಕತ್ತದಿಂದ ದೆಹಲಿಗೆ ವರ್ಗಾವಣೆಗೊಂಡದ್ದು ಮುಖ್ಯವಾದ ಬೆಳವಣಿಗೆಗಳು. 1919 ರಲ್ಲಿ ಮೊದಲನೆ ಮಹಾಯುದ್ಧ ಪ್ರಾರಂಭವಾದದ್ದು ಭಾರತೀಯರ ಆಕಾಂಕ್ಷೆಗಳನ್ನು ತೀವ್ರತರಗೊಳಿಸಿತು. ಭಾರತಕ್ಕಾಗಿ ನೂತನ ಸಿದ್ಧಾಂತಗಳನ್ನು ರೂಪಿಸಲು ರಾಜಕೀಯ ತತ್ವಜ್ಞರು ಕಾರ್ಯ ಮಗ್ನರಾದರು. ಇಂಥ ಮೊದಲಿಗರಲ್ಲೊಬ್ಬರು ಗೋಖಲೆ. ಅಮೇಲೆ ಬಂದದ್ದು ಕೃತಿಯ ಲಯೊಸೆಲ್ ಪ್ರತಿನಿಧಿಗಳು ರಾಜಕೀಯ ಅಧಿಕಾರವನ್ನು ಹಂಚಿಕೊಳ್ಳುವ ದ್ವಿಪ್ರಭುತ್ವ ಅದು. ವೈಸರಾಯ್‌ರ ಲೆಜಿಸ್ಲೇಟಿವ್ ಕೌನ್ಸಿಲ್‌ನ ಹತ್ತೊಂಭತ್ತು ಜನ ಸದಸ್ಯರು ತಯಾರಿಸಿದ ಯೋಜನೆಯನ್ನು ಇಲ್ಲಿ ಉಲ್ಲೇಖಿಸಬೇಕು. ಆಮೇಲೆ 1916 ರಲ್ಲಿ ಅದನ್ನು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಎರಡೂ ಒಪ್ಪಿ ತಮಗೆ ಹೊಂದಿಸಿಕೊಂಡವು. ಅದರ ಮುಖ್ಯ ಲಕ್ಷಣಗಳು ಪ್ರಾಂತೀಯ ಸರಕಾರಗಳಿಗೆ ನೇರ ಚುನಾವಣೆ ಕೌನ್ಸಿಲ್ ನಿರ್ಣಯಗಳನ್ನು ಪಾಲಿಸಬೇಕಾದ ಬಗ್ಗೆ ಗವರ್ನರ್‌ನಿಗೆ ಬದ್ಧತೆ, ಕೇಂದ್ರ ವಿಧಾನ ಮಂಡಲದಲ್ಲಿ ಚುನಾಯಿತ ಸದಸ್ಯರ ಐದನೆ ನಾಲ್ಕು ಬಹುಮತ, ಕಾರ್ಯಕಾರಿ ಮಂಡಳಿಯ ಸದಸ್ಯರಲ್ಲಿ ಅರ್ಧದಷ್ಟು ಜನ ಚುನಾಯಿತ ಸದಸ್ಯರಾಗಿರಬೇಕೆನ್ನುವುದು.

ಈ ಯೋಜನೆಗಳ ಮೇಲೆ ಮತ್ತು ಇತರ ವಿಷಯಗಳ ಮೇಲೆ ನಡೆಯುತ್ತಿದ್ದ ಚರ್ಚೆ ರಾಜಕೀಯ ವಾತಾವರಣವನ್ನು ಗಡುಸಾಗಿ ಮಾಡುತ್ತಿದ್ದವು. ಆಗ 1917 ರ ಆಗಸ್ಟ್ 20 ರಂದು ಮಾಂಡಿಗ್ಯೂ - ಆಗ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದವರು - ಹೌಸ್ ಆಫ್ ಕಾಮನ್ಸ್‌ನಲ್ಲಿ ಈ ರೀತಿ ಘೋಷಿಸಿದರು.

ಪ್ರಭುಗಳ ಸರಕಾರದ ನೀತಿಯ - ಭಾರತ ಸರಕಾರವು ಸಂಪೂರ್ಣವಾಗಿ ಅದನ್ನು ಅನುಸರಿಸುತ್ತದೆ - ಆಡಳಿತದ ಪ್ರತಿಯೊಂದು ಶಾಖೆಯಲ್ಲಿಯೂ ಭಾರತೀಯರನ್ನು ಹೆಚ್ಚು ಹೆಚ್ಚಾಗಿ ಸೇರಿಸಿಕೊಳ್ಳಬೇಕು ಎನ್ನುವುದು ಮತ್ತು ಬ್ರಿಟಿಷ್ ಸಾಮ್ರಾಜ್ಯದ ಒಂದು ಅಂತರ್ಗತ ಅಂಗವಾಗಿ ಭಾರತದಲ್ಲಿ ಒಂದು ಜವಾಬ್ದಾರಿಯುತ ಸರಕಾರವನ್ನು ರೂಪಿಸುವ ದೃಷ್ಟಿಯಿಂದ ಸ್ವಯಂ ಆಡಳಿತ ಸಂಸ್ಥೆಗಳ ಕ್ರಮಬದ್ಧ ಬೆಳವಣಿಗೆ.

ಈ ರೀತಿ ಪ್ರಕಟಣೆ ಕೊಟ್ಟು ಒಂದನೆಯ ಮಾಂಟಿಗ್ಯೂ ಭಾರತಕ್ಕೆ ಭೇಟಿ ನೀಡಿದನು. ವೈಸರಾಯ್ ಲಾರ್ಡ್ ಚೆಲ್ಮ್ಸ್‌ಫರ್ಡ್‌ರೊಂದಿಗೆ ಭಾರತದ ರಾಜಕೀಯ ಸಮಸ್ಯೆಯನ್ನು ಅಧ್ಯಯನ ಮಾಡುತ್ತಾ ರಾಷ್ಟ್ರಾದ್ಯಂತ ಪ್ರವಾಸ ಮಾಡಿದನು. 1918 ರಲ್ಲಿ ಅವರಿಬ್ಬರೂ ಸೇರಿ ತಮ್ಮ ಸೂಚನೆಗಳನ್ನು ಒಳಗೊಂಡ ಜಂಟಿ ವರದಿಯನ್ನು ಪ್ರಕಟಿಸಿದರು. ಅದೇ "ಮಾಂಟ್ ಫರ್ಡ್" ವರದಿ ಎಂದು ಪ್ರಚಲಿತವಾಗಿರುವ ವರದಿ. ಈ ವರದಿಯ ಆಧಾರದ ಮೇಲೆ ಬ್ರಿಟಿಷ್ ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಅಂಗೀಕೃತವಾದ ಒಂದು ಮಸೂದೆ 1919 ರ ಡಿಸೆಂಬರ್‌ನಲ್ಲಿ ಚಕ್ರವರ್ತಿಯ ಸಮ್ಮತಿ ಪಡೆದು 1919 ರ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ಆಯಿತು.

## 84.1 1919 ರ ಕಾಯ್ದೆಯ ಮುಖ್ಯ ಯೋಜನೆಗಳು

ಆಕ್ಟ್‌ನ ಮೂಲ ಯೋಜನೆಯು ನಾಲ್ಕು ಸ್ಥೂಲ ತತ್ವಗಳನ್ನು ಒಳಗೊಂಡಿತ್ತು.

(ಅ) ಸ್ಥಳೀಯ ಸರಕಾರದ ಕ್ಷೇತ್ರದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸಂಪೂರ್ಣವಾಗಿ ಜನಪ್ರಿಯ ನಿಯಂತ್ರಣ

(ಆ) ಪ್ರಾಂತೀಯ ಸರಕಾರಗಳು ಬಹುಮಟ್ಟಿಗೆ ಕೇಂದ್ರ ಸರಕಾರದಿಂದ ಸ್ವತಂತ್ರವಾಗಿರಬೇಕು, ಜನತೆಯ ಪ್ರತಿನಿಧಿಗಳಿಗೆ ಸ್ವಲ್ಪಮಟ್ಟಿಗೆ ಹೊಣೆಗಾರರಾಗಿರಬೇಕು.

(ಇ) ಗವರ್ನಮೆಂಟ್ ಆಫ್ ಇಂಡಿಯಾ ಪಾರ್ಲಿಮೆಂಟಿಗೆ ಹೊಣೆಗಾರ ಆಗಿ ಉಳಿಯತಕ್ಕದ್ದು. ಆದರೆ ಇಂಡಿಯನ್ ಲೆಜಿಸ್ಲೇಟಿವ್ ಕೌನ್ಸಿಲ್‌ನ್ನು ವಿಸ್ತರಿಸಿ ಅದರಲ್ಲಿನ ಜನತಾ ಪ್ರಾತಿನಿಧ್ಯವನ್ನು ಪ್ರಭಾವವನ್ನೂ ಹೆಚ್ಚಿಸಬೇಕು.

(ಈ) ಭಾರತ ಸರ್ಕಾರದ ಮೇಲೆ ಮತ್ತು ಪ್ರಾಂತಗಳ ಮೇಲೆ ಪಾರ್ಲಿಮೆಂಟಿನ ಹಾಗೂ ಸೆಕ್ರೆಟರಿ ಆಫ್ ಸ್ಟೇಟ್ ಅಧಿಕಾರಯ ನಿಯಂತ್ರಣ ಮೇಲ್ಕಂಡ ಬದಲಾವಣೆಗಳಿಗೆ ತಕ್ಕ ಹಾಗೆ ಸಡಿಲಗೊಳ್ಳಬೇಕು.

ಆಕ್ಟ್‌ನ ಪ್ರಕಾರ ಪ್ರಾಂತಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡುವುದಕ್ಕೆ ಪೂರ್ವ ಪೀಠಿಕೆಯಾಗಿ ಪ್ರಾಂತಗಳನ್ನೇ ಒಂದು ಮಟ್ಟಕ್ಕೆ ಏರಿಸುವುದು ಸೂಕ್ತ ಎಂದು ಭಾವಿಸಲಾಯಿತು. ಇಲ್ಲಿಯವರೆಗೆ ಗವರ್ನರ್, ಲೆಫ್ಟಿನೆಂಟ್ ಗವರ್ನರ್, ಚೀಫ್ ಕಮೀಷನರ್ - ಇವರ ಕೈಕೆಳಗೆ, ಒಟ್ಟಿನಲ್ಲಿ ಮೂರು ಬಗೆಯ ಪ್ರಾಂತಗಳಿದ್ದುವು. ಇವರಲ್ಲಿ ಚೀಫ್ ಕಮೀಷನರ್ ಉಳಿದುವಕ್ಕೆ ಹೋಲಿಸಿದರೆ ಚಿಕ್ಕ ಹಾಗೂ ಕಡಿಮೆ ಪ್ರಾಮುಖ್ಯವುಳ್ಳ ಪ್ರಾಂತಗಳ ಮುಖ್ಯಸ್ಥರಾಗಿದ್ದರು. ಹೊಸ ಯೋಜನೆಯ ಪ್ರಕಾರ ಇವುಗಳನ್ನು ಮೇಲಕ್ಕೇರಿಸಿ ಗವರ್ನರರ ಪ್ರಾಂತಗಳ ಸಮಕ್ಕೆ ಬರುವಂತೆ ಮಾಡಲಾಯಿತು. ಲೆಫ್ಟಿನೆಂಟ್ ಗವರ್ನರ್ ಎಂಬ ಹೆಸರನ್ನೇ ತೆಗೆದು ಹಾಕಲಾಯಿತು. ಕಲ್ಕತ್ತಿನಿಂದ ರಾಜಧಾನಿಯು ದೆಹಲಿಗೆ ವರ್ಗಾವಣೆಗೊಂಡದು ಈ ರೀತಿಯ ಏಕರೂಪತೆ ಉಂಟುಮಾಡಲು ಹಾದಿಯನ್ನು ಸುಗಮಗೊಳಿಸಿತು. ಕೇಂದ್ರದ ರಾಜಧಾನಿಯನ್ನು ಪ್ರಾಂತದ ರಾಜಧಾನಿಯನ್ನು ಬೇರೆ ಬೇರೆ ಸ್ಥಳಗಳಲ್ಲಿ ಸ್ಥಾಪಿಸಲಾಯಿತು. ಆದರೂ ಇನ್ನೂ ಮದರಾಸು, ಬೊಂಬಾಯಿ ಮತ್ತು ಬಂಗಾಳ ಪ್ರೆಸಿಡೆನ್ಸಿಗಳ ಗವರ್ನರರು ಹೊಸದಾಗಿ ರೂಪುಗೊಂಡ ಅಥವಾ ಮೇಲಕ್ಕೇರಿಸದ ಪ್ರಾಂತಗಳ ಗವರ್ನರಿಗೆ ಇಲ್ಲದ ಕೆಲವೊಂದು ಸೌಲಭ್ಯಗಳನ್ನು ಅನುಭವಿಸುತ್ತಿದ್ದರು. ಹಾಗಿದ್ದರೂ ಸಾಧಿಸಿದ ಒಂದು ಏಕ ಮಟ್ಟವು ವಾಸ್ತವವಾದುದಾಗಿತ್ತು.

ಈಗ ನಾವು ಆಕ್ಟ್ ಉಂಟು ಮಾಡಿದ ವಿಕೇಂದ್ರೀಕರಣದ ಪ್ರಮಾಣವನ್ನು ಪರಿಶೀಲಸಬಹುದು. ಆ ದಿನಗಳಲ್ಲಿ ಬಹುವಾಗಿ ಪ್ರಚಲಿತವಾಗಿದ್ದ ಸಡಿಲವಾಗಿದ್ದ ಅರ್ಥದಲ್ಲಾದರೂ - ಶಬ್ದ ಅಂದರೆ, ನಿಜವಾದ ಅರ್ಥದಲ್ಲಿ "ಪ್ರಾಂತೀಯ ಸ್ವಯಂ ಆಡಳಿತ" ಎಂಬುದು. ಅದರ ಅರ್ಥ ಏನು ? ಕೇಂದ್ರ ವಿಧಾನ ಸಭೆಯ ಮೊದಲನೆಯ ಅಧ್ಯಕ್ಷರಾಗಿದ್ದ ಸರ್ ಫ್ರೆಡರಿಕ್ ವ್ಹೈಟ್ ಅವರ ಮಾತುಗಳಲ್ಲಿ:

ಪ್ರಚಲಿತ ರಾಜಕೀಯ ಚರ್ಚೆಯಲ್ಲಿ ಅದು ಗವರ್ನಮೆಂಟ್ ಆಫ್ ಇಂಡಿಯಾದ ಬಾಹ್ಯ ನಿಯಂತ್ರಣದಿಂದ ಪ್ರಾಂತ ಸರಕಾರವು ಬಿಡುಗಡೆ ಹೊಂದುವುದನ್ನು ಮತ್ತು ಆಂತರಿಕವಾಗಿ ಪ್ರಾತಿನಿಧಿಕ ಮತ್ತು ಜವಾಬ್ದಾರಿಯುತ ಸರಕಾರದ ರಾಜಕೀಯ ಪರಿಸ್ಥಿತಿಗಳನ್ನೂ ಒಳಗೊಳ್ಳುತ್ತ ಅದು ಸರಿಯಲ್ಲ. ಶಬ್ದದ ನಿಜವಾದ ಅರ್ಥ ಇರುವುದು ಮೊದಲಿನ ವ್ಯಾಖ್ಯಾನದಲ್ಲಿ. ಒಂದು ಪ್ರಾಂತವು ಸಾಮಾನ್ಯವಾಗಿ ಅನಿರ್ಬಂಧಿತ ಸಂಸ್ಥೆಗಳು ಎಂದು ತಡೆಯುವ ಸಂಸ್ಥೆಗಳಲ್ಲದೆ ಪ್ರಾಂತೀಯ ಸ್ವಯಮಾಧಿಪತ್ಯ ಅಂದರೆ, ನಿಜವಾದ ಅರ್ಥದಲ್ಲಿ ಪ್ರಾಂತೀಯ ಸ್ವಯಮಾಧಿಪತ್ಯ ಎನ್ನುವುದು ಯಾವುದೇ ಒಂದು ಪ್ರಾಂತವನ್ನು ಅನುಭವಿಸುವುದು ಅಥವಾ ರಾಜ್ಯದಲ್ಲಿ ಪ್ರಚಲಿತವಾಗಿರುವ ಗೃಹ ಸರಕಾರದ ಪರಿಸ್ಥಿತಿಗಳ ಬಗೆಗೆ ಏನನ್ನೂ ಹೇಳುವುದಿಲ್ಲ.

1919 ರ ಆಕ್ಟ್‌ನ ಇಡೀ ಧೋರಣೆಯೇ ಈ ದೃಷ್ಟಿಕೋನವನ್ನು ಘೋಷಿಸುತ್ತದೆ. ಪ್ರಾಂತಗಳಿಗೆ ಕೊಟ್ಟ ಸ್ವತಂತ್ರ ಅಧಿಕಾರಿಗಳ ವ್ಯಾಪ್ತಿಯನ್ನು ಈ ಸ್ಥೂಲವಾದ ಕ್ಷೇತ್ರಗಳೆಂದು ವಿಭಾಗ ಮಾಡಬಹುದು; ಆರ್ಥಿಕ ಶಾಸನ ಮತ್ತು ಆಡಳಿತ ಇವುಗಳನ್ನು "ವರ್ಗಾಯಿಸಿದ ನಿಯಮಗಳು" ಎಂಬುದರಲ್ಲಿ ಎಚ್ಚರಿಕೆಯಿಂದ ವಿವರಿಸಲಾಗಿದೆ. ಇವು ಸಾಧಾರಣ ಯೋಜನೆಯ ಒಳ ಅಂಗಗಳಾಗಿದ್ದವು. ಈ ನಿಯಮಗಳ ಅಂತರ್ಯದಲ್ಲಿದ್ದ ತತ್ವ ಕೇಂದ್ರ ಹಾಗೂ ಪ್ರಾಂತೀಯ ಸರಕಾರಗಳ ನಡುವೆ ಬೇರತನವನ್ನುಂಟುಮಾಡುವುದು. ಕಾರ್ಯತಃ ಇದರ ಅರ್ಥ ಸರಕಾರದ ಕೆಲಸವನ್ನು'ಕೇಂದ್ರೀಯ'ಮತ್ತು 'ಪ್ರಾಂತೀಯ' ಎಂದು ವಿಂಗಡಿಸುವುದು ಎಂದಾಯಿತು.

ವಿಂಗಡಣೆಯನ್ನು ಈ ಕೆಳಗಿನ ಆಧಾರದಿಂದ ಮಾಡಲಾಯಿತು; ಅಖಿಲ ಭಾರತ ಮಹತ್ವವುಳ್ಳ ಎಲ್ಲ ವಿಷಯಗಳನ್ನು 'ಕೇಂದ್ರೀಯ' ಎನ್ನಲಾಯಿತು. ಆದರೂ ಈ ವಿಂಗಡಣೆ ಫೆಡರಲ್ ಸಂವಿಧಾನದ ಹಾಗೆ ಕಟ್ಟುನಿಟ್ಟಿನದಾಗಿರಲಿಲ್ಲ. ಅಲ್ಲದೆ ಪ್ರಾಂತೀಯ ವಿಷಯಗಳ ಮೇಲೆ ಕೇಂದ್ರ ವಿಧಾನ ಮಂಡಲವು ವ್ಯವಹರಿಸುವುದನ್ನು ತಪ್ಪಿಸಿರಲಿಲ್ಲ.

*ಆರ್ಥಿಕ ವರ್ಗಾವಣೆ*

ಆರ್ಥಿಕ ವರ್ಗಾವಣೆಯ ವಿಷಯವನ್ನು ಎರಡು ಶೀರ್ಷಿಕೆಗಳಲ್ಲಿ ಪರಿಶೀಲಿಸಬಹುದು.

1. ಭಾರತದ ಸರಕಾರಕ್ಕೆ ಪ್ರಾಂತೀಯ ಕೊಡುಗೆ

2. ಪ್ರಾಂತಗಳ ಮೇಲೆ ನಿಯಂತ್ರಣದ ಸಡಿಲಗೊಳಿಸುವಿಕೆ

ಪ್ರಾಂತೀಯ ಕೊಡುಗೆಗಳ ಮೇಲೆ ಕೇಂದ್ರದ ನಿಯಂತ್ರಣವನ್ನು ಕನಿಷ್ಟಗೊಳಿಸುವ ಕಡೆಗೆ ಮೊದಲ ಹೆಜ್ಜೆ ವರಮಾನದ ಕೇಂದ್ರ ಹಾಗೂ ಪ್ರಾಂತೀಯ ಮೂಲಗಳನ್ನು ಬೇರ್ಪಡಿಸಬಹುದು. ಇದರ ಪ್ರಕಾರ ಭೂಕಂದಾಯ, ಸೇಂದಿ, ಕೃಷಿ ಮತ್ತು ಅಂಚೆ ಚೀಟಿಗಳು ಸಂಪೂರ್ಣವಾಗಿ ಪ್ರಾಂತೀಯ ಅಂಶಗಳಾಗಿದ್ದವು. ಇದರ ಫಲವಾಗಿ ಕೇಂದ್ರ ಸರಕಾರಕ್ಕೆ ಉಂಟಾದ ನಷ್ಟವನ್ನು ಕೇಂದ್ರ ಸರಕಾರಕ್ಕೆ ಪ್ರಾಂತೀಯವಾದ ವಂತಿಗೆಗಳಿಂದ ಭರ್ತಿ ಮಾಡಲಾಯಿತು.

ಸುಧಾರಣೆಗಳಿಗಿಂತ ಮುಂಚೆ ಪ್ರಾಂತೀಯ ಆಯವ್ಯಯಗಳನ್ನು ಭಾರತ ಸರ್ಕಾರದ ಮುಂಗಡ ಪತ್ರದಲ್ಲಿ ಸೇರಿಸಲಾಗುತ್ತಿತ್ತು. ಆಕ್ಟ್ ಈ ವಿಷಯವಾಗಿ ಪ್ರಾಂತಗಳಿಗೇ ಸಂಪೂರ್ಣ ಸ್ವಾತಂತ್ರ್ಯಕೊಟ್ಟು ಬಿಟ್ಟಿತು. ಅಲ್ಲಿಂದ ಮುಂದೆ ಕೇಂದ್ರ ಸರಕಾರವು ಪ್ರಾಂತಗಳ ಆರ್ಥಿಕ ಪರಿಸ್ಥಿತಿಗಳನ್ನು ಕುರಿತು ಕೆಲವು ತಿಳುವಳಿಕೆಗಳನ್ನು ಕೇಳುತ್ತಿತ್ತು. ಅಲ್ಲದೆ ಪ್ರಾಂತೀಯ ಕೌನ್ಸಿಲ್ಲೈಗಿದ್ದ ತೆರಿಗೆ ಹಾಕುವ ಅಧಿಕಾರಗಳನ್ನು ಹೆಚ್ಚಿಸಲಾಯಿತು, ಅದಕ್ಕೆ ಗವರ್ನರ್ ಜನರಲ್ಲನ ಪೂರ್ವ ಸಮ್ಮತಿ ಅಗತ್ಯ ಎಂದಿದ್ದುದನ್ನು ತೆಗೆದು ಹಾಕಲಾಯಿತು.

*ಶಾಸಕಾಂಗ ವರ್ಗಾವಣೆ*

ಆಗಲೇ ಸೂಚಿಸಿರುವಂತೆ ಕೇಂದ್ರಕ್ಕೂ ಪ್ರಾಂತಗಳಿಗೂ ಶಾಸನಕ್ಕೆ ಸಂಬಂಧಿಸಿದಂತೆ ಬೇರೇ ಬೇರೆ ಅಂಶಗಳನ್ನು ವಿಂಗಡಿಸಿದುದರ ಮೂಲಕ ಈ ವರ್ಗಾವಣೆ ಸಾಧಿಸಲಾಯಿತು. ಶಾಸನದಲ್ಲಿ ತೊಡಗುವುದಕ್ಕೆ ಗವರ್ನರ್ ಜನರಲ್‌ನ ಪೂರ್ವ ಸಮ್ಮತಿ ಅಗತ್ಯವೆಂಬ ಹಿಂದಿನ ನಿಯಮವನ್ನು ಪ್ರಾಂತೀಯವೆಂದು ವಿಂಗಡಿಸಿದ ಅಂಶಗಳ ವಿಚಾರದಲ್ಲಿ ಕೈಬಿಡಲಾಯಿತು. ಇವು ಪ್ರತಿಯೊಂದು ಪ್ರಾಂತವೂ ವ್ಯವಹರಿಸಬೇಕಾಗಿದ್ದ ಸಾಮಾಜಿಕ ಮತ್ತು ಸ್ಥಳೀಯ ಸಮಸ್ಯೆಗಳನ್ನುಳ್ಳ ವಿಷಯಗಳ ವಿಶಾಲ ಶ್ರೇಣಿಯನ್ನು ಒಳಗೊಂಡಿದ್ದವು. ಪ್ರಾಂತಗಳ "ಶಾಂತಿಯುತ ಮತ್ತು ಉತ್ತಮ ಸರಕಾರಕ್ಕಾಗಿ" ಕಾನೂನುಗಳನ್ನು ರಚಿಸಲು ಅಧಿಕಾರವನ್ನು ಪ್ರಾಂತೀಯ ಶಾಸನ ಸಭೆಗಳಿಗೆ ಕೊಡಲಾಯಿತು.

ಇನ್ನೂ ಪ್ರಾಂತೀಯ ಶಾಸಕಾಂಗದ ಮೇಲೆ ಉಳಿದಿದ್ದ ಕೇಂದ್ರದ ನಿಯಂತ್ರಣ ಎರಡು ಬಗೆಯದಾಗಿತ್ತು. ಮೊದಲನೆಯದಾಗಿ, ಗವರ್ನರ್ ಒಪ್ಪಿಗೆ ಕೊಟ್ಟಿದ್ದ ಪ್ರತಿಯೊಂದು ಆಕ್ಟ್‌ನ ಅಧಿಕೃತ ಪ್ರತಿಯನ್ನು ಗವರ್ನರ್ ಜನರಲ್ಲನಿಗೆ ಕಳುಹಿಸಕೊಡಬೇಕಿತ್ತು. ಅವನು ಅದಕ್ಕೆ ತನ್ನ ಸಮ್ಮತಿ ಕೊಡಬಹುದು, ಕೊಡದೆಯೂ ಇರಬಹುದು ಎಂದಿತ್ತು. ಅವನು ಅದನ್ನು ಒಪ್ಪಬಹುದಾಗಿತ್ತು. ಒಪ್ಪದೆಯೂ ಇರಬಹುದಾಗಿತ್ತು. ಒಪ್ಪಿಗೆ ಕೊಟ್ಟರೆ ಆ ಆಕ್ಟ್‌ನ ಒಂದು ಪ್ರತಿಯನ್ನು ಸೆಕ್ರೆಟರಿ ಆಫ್ ಸ್ಟೇಟ್‌ಗೆ ಕಳುಹಿಸಬೇಕಾಗಿತ್ತು.

*ಆಡಳಿತಾಂಗದಲ್ಲಿ ವರ್ಗಾವಣೆ*

ಆಡಳಿತಾಂಗದಲ್ಲಿನ ವರ್ಗಾವಣೆಯೆ ಆರ್ಥಿಕ ಮತ್ತು ಶಾಸಕಾಂಗ ವರ್ಗಾವಣೆಗಳ ಸಹಜವಾದ ಉಪಫಲವಾಗಿತ್ತು. ಬಹುಮಟ್ಟಿಗೆ ತಾಂತ್ರಿಕವಾದ ಲಕ್ಷಣ ಹೊಂದಿದ್ದ ಅಸಂಖ್ಯಾತ ಆಜ್ಞೆಗಳನ್ನು ಹೊರಡಿಸಲಾಗುತ್ತಿತ್ತು. ಇದು ಪ್ರಾಂತೀಯ ಸರಕಾರಕ್ಕೆ ಆಡಳಿತ ಕ್ಷೇತ್ರದಲ್ಲಿ ಸಾಕಷ್ಟು ಅಧಿಕಾರವನ್ನು ಕೊಡುತ್ತಿತ್ತು.

ಈ ರೀತಿಯ ಅಧಿಕಾರಿಗಳ ವರ್ಗಾವಣೆಯನ್ನು ಹಿನ್ನಲೆಯಾಗಿಟ್ಟುಕೊಂಡು ಈಗ ನಾವು ಸುಧಾರಣೆಗಳು ಪ್ರಾಂತಗಳಲ್ಲಿ ಉಂಟು ಮಾಡಿದ ರಚನಾತ್ಮಕ ವ್ಯತ್ಯಾಸಗಳನ್ನು ಪರಿಕ್ಷೀಸಬಹುದು.

## 84.2 ಪ್ರಾಂತೀಯ ಕಾರ್ಯನಿರ್ವಾಹಕ ಶಾಖಾ : ದ್ವಿಪ್ರಭುತ್ವ

ಪ್ರಾಂತೀಯ ಕಾರ್ಯನಿರ್ವಾಹಕ ವಿಭಾಗದ ಹೊಸ ರಚನೆಯು ಎರಡು ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತೆ ರೂಪಿತವಾಯಿತು. ಜನತಾ ಪ್ರತಿನಿಧಿಗಳಿಗೆ ಹೊಣೆಗಾರಿಕೆ ಮತ್ತು ಜನರ ರಾಜಕೀಯವಾದ ಹಿಂದುಳಿಕೆ ಮತ್ತು ಅವರ ಮುಖಂಡರ ಆಡಳಿತ ಅನನುಭವ, ಇವು ಮೂಲತಃ ಪರಸ್ಪರ ಘರ್ಷಿಸುವಂಥ ವಿಚಾರಗಳು, ಆದರೂ ಅವುಗಳಿಗೆ ದ್ವಿಪ್ರಭುತ್ವ ಸಾಧನದಲ್ಲಿ ಅವಕಾಶ ನೀಡಲಾಯಿತು. ಪ್ರಾಂತೀಯ ಸರಕಾರದ ಕರ್ತವ್ಯಗಳನ್ನು ಜನತೆಯ ಹತೋಟಿಗೆ ದ್ವಿಪ್ರಭುತ್ವ ಸಾಧನದಲ್ಲಿ ಅವಕಾಶ ನೀಡಲಾಯಿತು. ಪ್ರಾಂತೀಯ ಸರಕಾರದ ಕರ್ತವ್ಯಗಳನ್ನು ಜನತೆಯ ಹತೋಟಿಗೆ ಕೊಡಬಹುದಾದಂಥವು ಮತ್ತು ಅಧಿಕಾರಿಗಳ ಕೈಯಲ್ಲೇ ಇರಬೇಕಾದಂಥವು ಎಂದು ಎರಡು ಭಾಗ ಮಾಡಿತು. ಈ ದ್ವಿಪ್ರಭುತ್ವ ವ್ಯವಸ್ಥೆ, ಮೊದಲಿನವಕ್ಕೆ "ವರ್ಗಾಯಿಸಿದ ವಿಷಯಗಳು" ಎಂದೂ ಎರಡನೆಯವಕ್ಕೆ "ಮೀಸಲಾದ ವಿಷಯಗಳು" ಎಂದೂ ಹೆಸರು. ಗವರ್ನರ್ ಇನ್ ಕೌನ್ಸಿಲ್ ಮೀಸಲಾದ ವಿಷಯಗಳ ಹೊಣೆ ಹೊತ್ತಿದ್ದನು. ಈ ವಿಭಜನೆಗೆ ನಿರ್ದೇಶಕ ತತ್ವ ಇದು. ವರ್ಗಾಯಿಸಿದ ವಿಷಯಗಳ ಪಟ್ಟಿಗೆ ಸ್ಥಳೀಯ ಪರಿಜ್ಞಾನ ಮತ್ತು ಸಾರ್ವಜನಿಕ ಸೇವೆಗಳ ಅವಕಾಶಗಳನ್ನು ಒದಗಿಸುತ್ತಿದ್ದಂತಹ, ಭಾರತೀಯರು ತಮಗೆ ತುಂಬ ಆಸಕ್ತಿ ಇದೆ ಎಂದು ತೋರಿಸಿಕೊಂಡು ತಪ್ಪುಗಳು ಸಂಭವಿಸಿದರೂ ಅಪರಿಹಾರ್ಯವಾದ ತಪ್ಪುಗಳಾಗದಿರುವ, ಬೆಳವಣಿಗೆ ಅತ್ಯಂತ ಅಗತ್ಯವಾಗಿರುವ ವಿಭಾಗಗಳನ್ನು ಸೇರಿಸುವುದು. ಆದರೆ ಪ್ರಧಾನವಾಗಿ ನ್ಯಾಯ, ಕಾನೂನು ಭೂಕಂದಾಯ ಅಥವಾ ಹಿಡುವಳಿ ಹಕ್ಕು ಮುಂತಾದ ವಿಷಯಗಳನ್ನು ವರ್ಗಾಹಿಸುವಂತಿರಲಿಲ್ಲ. ಮೀಸಲಾದ ವಿಷಯಗಳ ಆಡಳಿತವನ್ನು ಗವರ್ನರ್‌ನ ಕಾರ್ಯಕಾರೀ ಮಂಡಳಿಗೆ ವಹಿಸಿ ಕೊಡಲಾಯಿತು. ಈ ಸದಸ್ಯರನ್ನು ಚಕ್ರವರ್ತಿಯು ಐದು ವರ್ಷಗಳ ಅವಧಿಗೆ ನೇಮಕ ಮಾಡಿರುತ್ತಿದ್ದನು. ಸ್ಥಿರವಾದ ಒಂದು ವೇತನವನ್ನು ಅವರು ಪಡೆಯುತ್ತಿದ್ದರು. ಅವರು ಪ್ರಾಂತೀಯ ಶಾಸಕಾಂಗದ ಜವಾಬ್ದಾರಿ ಹೊಂದಿರಲಿಲ್ಲ.

ವರ್ಗಾಯಿಸಿದ ವಿಷಯಗಳನ್ನು ಮಂತ್ರಿಗಳಿಗೆ ವಹಿಸಲಾಯಿತು. ಮಂತ್ರಿಗಳನ್ನು ಪ್ರಾಂತೀಯ ಕೌನ್ಸಿಲ್‌ನ ಚುನಾಯಿತ ಸದಸ್ಯರಿಂದ ಗವರ್ನರ್‌ನು ಆರಿಸಿ ನಾಮಕರಣ ಮಾಡುತ್ತಿದ್ದನು. ಆತನ ಇಚ್ಛೆಯಿರುವವರೆಗೆ ಅವರು ಅಧಿಕಾರದಲ್ಲಿರುತ್ತಿದ್ದರು. ಅವರ ವೇತನ ಶಾಸಕಾಂಗದ ಮತವನ್ನು ಅವಲಂಬಿಸಿರುತ್ತಿತ್ತು. ಆಚರಣೆಯಲ್ಲಿ, ಬಂಗಾಳ, ಬೊಂಬಾಯಿ ಮತ್ತು ಮದರಾಸು ಪ್ರಾಂತಗಳಲ್ಲಿ ನಾಲ್ವರು ಎಕ್ಸಿಕ್ಯೂಟಿವ್ ಕೌನ್ಸಿಲರೂ, ಮೂವರು ಮಂತ್ರಿಗಳು ಇದ್ದರು. ಬಿಹಾರ ಮತ್ತು ಒರಿಸ್ಸಾಗಳಲ್ಲಿ ಮೂವರು ಎಕ್ಸಿಕ್ಯೂಟಿವ್ ಕೌನ್ಸಿಲರು ಮತ್ತು ಇಬ್ಬರು ಮಂತ್ರಿಗಳು ನೇಮಕ ಗೊಂಡಿದ್ದರು.

ಕಾರ್ಯಾಕಾರಣಿಯ ಎರಡು ವಿಭಾಗಗಳ ನಡುವೆ ಕೊಂಡಿಯಂತೆ ಕೆಲಸ ಮಾಡಬೇಕಾಗಿದ್ದ ಗವರ್ನರ್‌ನ ಪಾತ್ರ ಶಿಖರಪ್ರಾಯವಾಗಿದ್ದುದು ಮಾತ್ರವಲ್ಲ, ಬಹಳ ತೊಡಕಿನದೂ ಆಗಿತ್ತು. ಸ್ಪಷ್ಟವಾಗಿ ವಿಭಿನ್ನವಾದ ಎರಡು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಸರಕಾರದ ಎರಡು ಶಾಖೆಗಳನ್ನು ಅವನು ಮುನ್ನಡೆಸಬೇಕಾಗಿತ್ತು. ಇಬ್ಬರು ಯಜಮಾನರಿಗೂ ಅವನು ಜವಾಬ್ದಾರನಾಗಿರಬೇಕಾಗಿತ್ತು. ಪ್ರಾಂತೀಯ ಆಡಳಿತ ರಥದ ನೊಗಕ್ಕೆ ಕೌನ್ಸಿಲರನ್ನೂ, ಮಂತ್ರಿಗಳನ್ನೂ ಹೂಡುವುದು ಮಾತ್ರವಲ್ಲ, ಆ ರಥವನ್ನು ನಡೆಸುವುದು ಅವನ ಕೆಲಸವಾಗಿತ್ತು. ಈ ಕಷ್ಟದ ಕೆಲಸ ಎಷ್ಟು ಮಟ್ಟಿಗೆ ಯಶಸ್ವಿಯಾಗಿತ್ತು ಎನ್ನುವುದನ್ನು ಸದ್ಯದಲ್ಲೇ ಪರೀಕ್ಷಿಸಲಾಗುತ್ತದೆ.

*ಶಾಸನಸಭೆ: ಪ್ರಾಂತೀಯ ಕೌನ್ಸಿಲುಗಳು*

ಮಿಂಟೋ-ಮಾರ್ಲೆ ಸುಧಾರಣೆಗಳು ಪ್ರಾಂತೀಯ ಸರ್ಕಾರಕ್ಕೆ ಜನತೆಯನ್ನು 'ಕೂಡಿಸಿಕೊಳ್ಳುವ' ತತ್ವವನ್ನು ಸೂಚಿಸಿರುವಾದರೂ, ಮೌಂಟ್ ಫರ್ಡ್ ಸುಧಾರಣೆಗಳಿಗೆ ಮೊದಲಿನ ಹತ್ತು ವರ್ಷಗಳಲ್ಲಿ ಅದು ಸೂಚಿಸಿದ ಹೊಸ ತತ್ವ, ಜವಾಬ್ದಾರಿ ಸರಕಾರ, ಒಂದು ರೀತಿಯ ಪರೀಕ್ಷಾ ಸ್ಥಿತಿಯಲ್ಲಿಯೇ ಇತ್ತು. ಆದ್ದರಿಂದ ಲೆಜಿಸ್ಲೇಟಿವ್ ಕೌನ್ಸಿಲ್‌ಗಳನ್ನು ಅವುಗಳ ರಚನೆ ಕರ್ತವ್ಯಗಳಿಗೆ ಸಂಬಂಧಪಟ್ಟಂತೆ ಆ ತತ್ವಕ್ಕೆ ಅನುಗುಣವಾಗಿ ಸುಧಾರಿಸಬೇಕಾಯಿತು. ಈ ಬದಲಾವಣೆಗಳನ್ನು ಸಂಕ್ಷೇಪವಾಗಿ ಕೆಳಗಿನ ಶೀರ್ಷಿಕೆಗಳಲ್ಲಿ ಪರೀಕ್ಷಿಸಬಹುದು.

1. ಸಂಖ್ಯೆಗಳು

1909 ರ ಆಕ್ಟ್ ಸದಸ್ಯರ ಗರಿಷ್ಠ ಸಂಖ್ಯೆಯನ್ನು ನಿಗಧಿಗೊಳಿಸಿದರೆ, 1919 ರ ಆಕ್ಟ್ ಕನಿಷ್ಠ ಸಂಖ್ಯೆಯನ್ನು ನಿರ್ಧರಿಸಿತು, ಅಲ್ಲದೆ, ಈ ಕನಿಷ್ಠ ಸಂಖ್ಯೆಯೇ ಹಿಂದಿನ ಆಕ್ಟ್‌ನ ಗರಿಷ್ಠ ಸಂಖ್ಯೆಗಿಂತಲೂ ಸಾಕಷ್ಟು ದೊಡ್ಡದಾಗಿತ್ತು. ಉದಾಹರಣೆಗೆ ಪ್ರಧಾನವಾದ

ಪ್ರಾಂತಗಳಲ್ಲಿದ್ದ ಗರಿಷ್ಠ 50 ಕ್ಕೆ ಎದುರಾಗಿ ಹೊಸ ಕೌನ್ಸಿಲ್‌ಗಳು 100 ಕ್ಕಿಂತಲೂ ಹೆಚ್ಚಿನ ಕನಿಷ್ಠ ಸಂಖ್ಯೆಯನ್ನು ಒಳಗೊಂಡವು. (ಮದರಾಸು 118, ಬೊಂಬಾಯಿ 111, ಬಂಗಾಳ 125) ಹೆಚ್ಚಿನ ಸದಸ್ಯರನ್ನೇ ಹೊಂದಿದ್ದವು.

*2. ಅಧಿಕಾರಿಗಳು ಮತ್ತು ಅಲ್ಲದವರ ಪ್ರಮಾಣ*

ಹೊಸ ಕೌನ್ಸಿಲ್‌ಗಳಲ್ಲಿ ಕೊನೆಯ ಪಕ್ಷ ಶೇ. ಎಪ್ಪತ್ತರಷ್ಟು ಸದಸ್ಯರು ಚುನಾಯಿತರಾಗಬೇಕಾಗಿತ್ತು. ಆದರೆ ಶೇ. ಇಪ್ಪತ್ತಕ್ಕಿಂತ ಹೆಚ್ಚು ಜನ ಅಧಿಕಾರಿಗಳಾಗಿರಬಾರದಾಗಿತ್ತು. ಹಾಗಾಗಿ ಅಧಿಕಾರಿಗಳಿಲ್ಲದವರನ್ನು ನಾಮಕರಣ ಮಾಡುವುದರಲ್ಲಿ ಗವರ್ನರ್ ಅಧಿಕಾರ ಶೇ. ಹತ್ತಕ್ಕೆ ಮಿತಿಗೊಂಡಿತು.

*3. ಆಯ್ಕೆಯ ವಿಧಾನ*

ರಾಜ್ಯ ವಿಸ್ತಾರವನ್ನು ಆಧಾರವಾಗಿಟ್ಟುಕೊಂಡು ಏಕರೂಪದ ಮತಕ್ಷೇತ್ರಗಳನ್ನು ರೂಪಿಸುವುದು ಭಾರತೀಯ ಪರಿಸ್ಥಿತಿಗಳಿಗೆ ಹೊಂದುವುದಿಲ್ಲ ಎಂದು ಭಾವಿಸಲಾಯಿತು. ಆದ್ದರಿಂದ ವಿಶೇಷ ಆಸಕ್ತಿಗಳು ಅಥವಾ ವಿಶಿಷ್ಟ ಸಮಾಜಗಳು, ವಿಶ್ವವಿದ್ಯಾನಿಲಯಗಳು, ಜಮೀನುದಾರರು, ಚೇಂಬರ್ಸ್ ಆಫ್ ಕಾಮರ್ಸ್ ಇತ್ಯಾದಿಗಳನ್ನು ಪ್ರತಿನಿಧಿಸುವಂತೆ ಕ್ಷೇತ್ರಗಳನ್ನು ರೂಪಿಸಬೇಕು ಎಂದಾಯಿತು. ಹಾಗಾಗಿ ಮತೀಯ (ಧಾರ್ಮಿಕ) ಪ್ರಾತಿನಿಧ್ಯ ಭಾರತದ ರಾಜಕೀಯ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಬಿಟ್ಟಿತು.

*4. ಮತದಾರರಿಗೆ ಅರ್ಹತೆಗಳು*

ಸಾಮಾನ್ಯವಾದ ಕ್ಷೇತ್ರದಲ್ಲಿಯೂ ಮತ ಚಲಾಯಿಸಲು ಈ ಅರ್ಹತೆಗಳು ಇರಬೇಕಾಗಿದ್ದವು;

1. ಆ ಕ್ಷೇತ್ರದಲ್ಲಿ ಕನಿಷ್ಠ ಕಾಲಾವಧಿಯಲ್ಲಿ ವಾಸವಾಗಿರುವುದು
2. ಕನಿಷ್ಠ ಬಾಡಿಗೆ ಮೌಲ್ಯವಿರುವ ಒಂದು ಮನೆಯನ್ನು ಹೊಂದಿರುವುದು ಅಥವಾ ಮನೆಯಲ್ಲಿ ವಾಸವಾಗಿರುವುದು
3. ಕನಿಷ್ಠ ಪ್ರಮಾಣದಲ್ಲಾದರೂ ಮುನಿಸಿಪಲ್ ತೆರಿಗೆ ಅಥವಾ ವರಮಾನ ತೆರಿಗೆ ಅಥವಾ ಬೇರಾವುದಾದರೂ ತೆರಿಗೆ ಕೊಡುತ್ತಿರುವುದು ಅಥವಾ ಮಿಲಿಟರಿ ವಿಶ್ರಾಂತಿ ವೇತನ ಪಡೆಯುತ್ತಿರುವುದು. ಈ ಅರ್ಹತೆಗಳಿಂದಾಗಿ ಅರ್ಹ ಮತದಾರರ ಸಂಖ್ಯೆ ತೀರಾ ಅಲ್ಪವಾಗಿತ್ತು.
4. ಕೌನ್ಸಿಲ್‌ನ ಕಾಲಾವಧಿ

   ಒಂದು ಕೌನ್ಸಿಲ್‌ನ ಸಾಮಾನ್ಯವಾಗದ ಕಾಲಾವಧಿ ಮೂರು ವರ್ಷ ಎಂದು ಆಕ್ಟ್ ನಿರ್ಧರಿಸಿತು. ಆದರೆ ಗವರ್ನರ್ ಅದನ್ನು ಇನ್ನೂ ಮೊದಲೇ ವಿಸರ್ಜಿಸಬಹುದಾಗಿತ್ತು. ಹಾಗೆ ವಿಸರ್ಜಿತವಾದರೆ ನಂತರದ ಆರು ತಿಂಗಳ ಒಳಗಾಗಿ ಹೊಸ ಕೌನ್ಸಿಲನ್ನು ಚುನಾಯಿಸಬೇಕಾಗಿತ್ತು.
5. ಕೌನ್ಸಿಲುಗಳ ಕರ್ತವ್ಯ

**(a)ಪ್ರಶ್ನೆ:** ಸದಸ್ಯರಿಗೆ ವಿವಿಧ ವಿಷಯಗಳ ಮೇಲೆ ಪ್ರಶ್ನೆಗಳನ್ನು ಉಪಪ್ರಶ್ನೆಗಳನ್ನು ಹಾಕುವ ಹಕ್ಕು ಇದ್ದಿತು.

**(b)ಸಲಹೆ:** ಸದಸ್ಯರು ಜನತೆಯ ಕಷ್ಟ ಸುಖಗಳನ್ನು ಪ್ರಕಟಪಡಿಸುವುದಕ್ಕಾಗಿ ನಿರ್ಣಯಗಳನ್ನು ಮಂಡಿಸಬಹುದಾಗಿತ್ತು.

**(c)ಶಾಸನ:** ಬೇಕಾದಷ್ಟು ತಡೆಗಳಿದ್ದರೂ ಕೌನ್ಸಿಲ್‌ಗಳಿಗೆ ಅನೇಕ ವಿಷಯಗಳನ್ನು ಕುರಿತ ಮಸೂದೆಗಳನ್ನು ಪರಿಶೀಲನೆಗೆತ್ತಿಕೊಳ್ಳುವ ನಿರ್ದಿಷ್ಟ ಪ್ರಮಾಣದ ಅಧಿಕಾರ ಇತ್ತು.

**(d)ಹಣಕಾಸು:** ಕೌನ್ಸಿಲುಗಳ ಆರ್ಥಿಕ ಅಧಿಕಾರಗಳು ಬಹಳ ಮಿತವಾದವು. ಆದರೂ ಅವು 1909 ರ ಆಕ್ಟ್‌ನ ಪ್ರಕಾರ ಇದ್ದವುಗಳಿಗಿಂತ ಗಮನಾರ್ಹವಾಗಿ ಹೆಚ್ಚಾದವು. ಗ್ರಾಂಟ್‌ಗಳಿಗೆ ಬೇಡಿಕೆಗಳ ಮೇಲೆ ಸಾಮಾನ್ಯ ಚರ್ಚೆ ನಡೆಸುವ ಕೆಲವೇ ವಿಷಯಗಳಲ್ಲಾದರೂ ಮತ ಚಲಾಯಿಸುವ ಅಧಿಕಾರ ಕೌನ್ಸಿಲ್ಲುಗಳಿಗೆ ಇದ್ದಿತು.

ಈ ಎಲ್ಲ ವಿಸ್ತೃತ ಅಧಿಕಾರಗಳಿದ್ದರೂ ಕೌನ್ಸಿಲುಗಳ ಮೂಲಭೂತ ದೌರ್ಬಲ್ಯವೊಂದು ಉಳಿದೇ ಇತ್ತು. ಅದು ಶಾಸನ ಮತ್ತು ಆಯವ್ಯಯ (ಬಜೆಟ್) ಗಳನ್ನು ಕುರಿತು ಗವರ್ನರ್‌ನಿಗೆ ವಿಶೇಷ ಅಧಿಕಾರಗಳು ಇದ್ದುದರಲ್ಲಿ, ಶಾಸನ ಕ್ಷೇತ್ರದಲ್ಲಾದರೆ ಆತನ ಅಧಿಕಾರಗಳು ಇತ್ಯಾತ್ಮಕ ನೇತ್ಯಾತ್ಮಕ ಎರಡು ಬಗೆಯವಾಗಿದ್ದವು ಮತ್ತು ಶಾಸನಕ್ಕೆ ಸಂಬಂಧಿಸಿದ್ದುವು. ಬಜೆಟ್ ವಿಚಾರದಲ್ಲಿ ಆತನಿಗೆ ಪ್ರಾಂತದ ಶಾಂತಿ ಮತ್ತು ಕ್ಷೇಮ ಪಾಲನೆಗೆ ಅವಶ್ಯಕ ಎಂದು ತೋರುಬರುವಂತಹ ವೆಚ್ಚವನ್ನು ಸಮ್ಮತಿಸಿ ಅದನ್ನು ಅಧಿಕೃತಗೊಳಿಸುವ ಅಧಿಕಾರವಿತ್ತು. ಯಾವುದೇ ಒಂದು ಗ್ರ್ಯಾಂಟನ್ನು ಕೌನ್ಸಿಲು ನಿರಾಕರಿಸಿದಾಗ ಅಥವಾ ತನ್ನಿಂದಾದ ಗವರ್ನರನು ಆ ವಿಷಯದಲ್ಲಿ ತನ್ನ ಹೊಣೆಗಾರಿಕೆಯ ಚಲಾವಣೆಗೆ ಆ ಬೇಡಿಕೆ ಅತ್ಯಗತ್ಯ ಎಂದು ಪ್ರಮಾಣೀಕರಿಸಿ ವೆಚ್ಚವನ್ನು ಮತ್ತೆ ಪೂರ್ವಸ್ಥಿತಿಗೆ ತರಬಹುದಾಗಿತ್ತು. ಹೀಗೆ ಜವಾಬ್ದಿರಿ ಸರಕಾರದ ತತ್ತ್ವವನ್ನು ಒಪ್ಪಿಕೊಂಡರೂ ಕೂಡ 1919 ರ ಆಕ್ಟ್ ಕಾರ್ಯತಃ ಆ ತತ್ವವನ್ನು ಆಚರಣೆಗೆ ತರಲಿಲ್ಲ.

## 84.3 ಕೇಂದ್ರ ಸರ್ಕಾರದ ವಿನ್ಯಾಸ

ಕೇಂದ್ರ ಸರ್ಕಾರವು ತನ್ನ ಮೂಲ ತತ್ವಗಳಲ್ಲಿ ಯಾವ ಬದಲಾವಣೆಯನ್ನು ತಳೆದಿರಲಿಲ್ಲ. ಇನ್ನೂ ಸೆಕ್ರೆಟರಿ ಆಫ್ ಸ್ಟೇಟ್ ಮೂಲಕ ಬ್ರಿಟಿಷ್ ಪಾರ್ಲಿಮೆಂಟಿಗೆ ಗವರ್ನಮೆಂಟ್ ಆಫ್ ಇಂಡಿಯಾ ಉತ್ತರವಾದಿಯಾಗಿತ್ತು. ಜನತಾ ದೃಷ್ಟಿಕೋನದಿಂದ ಹೇಳುವುದಾದರೆ ಈ ಸರಕಾರ ಇನ್ನೂ ಪ್ರಾತಿನಿಧಿಕವಾಗಿರಲಿಲ್ಲ. ಆದರೆ, ಆಕ್ಟ್ ಅದರಲ್ಲಿ ಉಂಟುಮಾಡಿದ ಕೆಲವು ಬದಲಾವಣೆಗಳನ್ನು ಇಲ್ಲಿ ಗಮನಿಸಬೇಕು.

ಇಲ್ಲಿಯವರೆಗೆ ಗವರ್ನರ್ ಜನರಲ್ಲನ ಕಾರ್ಯ ಕಾರಿಣಿಯ ಸದಸ್ಯರ ಸಂಖ್ಯೆ ಏಳು ಎಂದು ನಿಶ್ಚಿತವಾಗಿತ್ತು. ಅವರಲ್ಲಿ ಆರು ಮಂದಿ ಸಾಮಾನ್ಯ ಸದಸ್ಯರು ಮತ್ತು ಒಬ್ಬ ವಿಶೇಷ ಸದಸ್ಯ. ಸುಧಾರಣೆಗಳು ಈ ಕಟ್ಟು ಪಾಡನ್ನು ಕಿತ್ತು ಹಾಕಿ ಕೌನ್ಸಿಲಿನಲ್ಲಿರಬೇಕಾದ ಭಾರತೀಯರ ಸಂಖ್ಯೆಯನ್ನು ಎರಡರಿಂದ ಮೂರಕ್ಕೆ ವಿಸ್ತರಿಸುವುದರಲ್ಲೂ ಹೆಚ್ಚಿನ ಧಾರಾಳತೆ ಕೊಟ್ಟವು. ಭಾರತ ಸರಕಾರದ ವಿವಿಧ ವಿಭಾಗಗಳನ್ನು ಪುನರ್ ಹಂಚಿಕೆ ಮಾಡಲು ಒಂದು ವಿಸ್ತಾರವಾದ ಯೋಜನೆಯನ್ನು ಲಾರ್ಡ್ ಚೆಲ್ಮ್‌ಫರ್ಡ್ ತಾನೇ ಕೈಗೊಂಡರು. ಅವರ ನಂತರ ಬಂದ ಲಾರ್ಡ್ ರೀಡಿಂಗ್ 1923 ರ ಏಪ್ರಿಲ್‌ನಲ್ಲಿ ಇದನ್ನು ಜಾರಿಗೆ ತಂದರು. ಇದರ ಪ್ರಕಾರ ಒಂಬತ್ತು ವಿಭಾಗಗಳಿದ್ದುವು. ಅದು ವಿದೇಶಾಂಗ ಮತ್ತು ರಾಜಕೀಯ ಖಾತೆ, ರೈಲ್ವೆ ಮತ್ತು ವಾಣಿಜ್ಯ ಖಾತೆ, ಕೈಗಾರಿಕೆಗಳು ಮತ್ತು ಕಾರ್ಮಿಕ ಖಾತೆ, ಶಿಕ್ಷಣ, ಆರೋಗ್ಯ ಮತ್ತು ಭೂಖಾತೆ, ಸೈನ್ಯ, ಗೃಹಖಾತೆ, ಶಾಸನ ಖಾತೆ, ಹಣಕಾಸು ಮತ್ತು ಕ್ರೈಸ್ತ ಮತೀಯ ಖಾತೆ. ವೈಸರಾಯಿ ತಾನೇ ವಿದೇಶೀಂಗ ಖಾತೆಯಿರಿಸಿಕೊಂಡ ರೈಲ್ವೆ ಮತ್ತು ವಾಣಿಜ್ಯ ಖಾತೆಗಳು ಒಬ್ಬ ಸದಸ್ಯರ ವಶದಲ್ಲಿದ್ದುವು. ಉಳಿದ ಆರು ಖಾತೆಗಳನ್ನು ಒಬ್ಬೊಬ್ಬ ಸದಸ್ಯರಿಗೆ ಹಂಚಲಾಗಿತ್ತು. ಹೀಗೆ ಒಟ್ಟು ವೈಸರಾಯಿಯ ಜೊತೆಗೆ ಎಕ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲಿ ಏಳು ಜನ ಸದಸ್ಯರಿದ್ದರು.

*ಶಾಸಕಾಂಗ*

ಸುಧಾರಣೆಗಳ ಪ್ರಕಾರ ದ್ವಿಸಭಾ ಶಾಸಕಾಂಗವು ಸ್ಥಾಪಿತವಾಯಿತು. ಇಂಡಿಯನ್ ಲೆಜಿಸ್ಲೇಟಿವ್ ಅಸೆಂಬ್ಲಿ ಮತ್ತು ಕೌನ್ಸಿಲ್ ಆಫ್ ಸ್ಟೇಟ್ ಇವೇ ಆ ಎರಡು ಶಾಸಕ ಸಭೆಗಳು, ಕೌನ್ಸಿಲ್‌ನಲ್ಲಿ ಒಟ್ಟು 60 ಜನ ಸದಸ್ಯರ ಗರಿಷ್ಠ ಸಂಖ್ಯೆ ಇತ್ತು. ಅವರಲ್ಲಿ ಇಪ್ಪತ್ತು ಜನಕ್ಕಿಂತ ಹೆಚ್ಚಿನವರು ಅಧಿಕಾರಿಗಳಾಗಿರಬಾರದು, ಮೂವತ್ತು ಜನಕ್ಕಿಂತ ಕಡಿಮೆಯಿಲ್ಲದವರು ಚುನಾಯಿತರಾಗಬೇಕು ಎಂದಾಯಿತು. ಅಸೆಂಬ್ಲಿಯು 140 ಸದಸ್ಯರ ಕನಿಷ್ಠ ಬಲವನ್ನು ಹೊಂದಿರುವುದಾಗಿತ್ತು. ಕೊನೆಯ ಪಕ್ಷ ಇವರಲ್ಲಿ ಏಳನೆ ಐದರಷ್ಟು ಜನ ಚುನಾಯಿತರಾಗಿರಬೇಕಾಗಿತ್ತು ಮತ್ತು ಉಳಿದವರಲ್ಲಿ ಕೊನೆಯ ಪಕ್ಷ ಮೂರನೆಯ ಒಂದಷ್ಟು ನಾಮಕರಣಗೊಂಡ ಜನ ಅಧಿಕಾರಿಗಳಲ್ಲದವರಾಗಬೇಕಾಗಿತ್ತು.

ಇಂಡಿಯನ್ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಪರೋಕ್ಷ ಚುನಾವಣೆಯ ವಿಧಾನ 1909 ರ ಆಕ್ಟ್‌ನಿಂದ ಪ್ರಚಲಿತವಾಗಿದ್ದುದನ್ನು ಈಗ ತೆಗೆದು ಹಾಕಲಾಯಿತು. ಮೊದಲ ಬಾರಿಗೆ ಅಸೆಂಬ್ಲಿಯ ಬಹುಭಾಗ ಸ್ಥಾನಗಳನ್ನು ತುಂಬಲು ನೇರ ಚುನಾವಣೆಯನ್ನು ನಡೆಸಬೇಕೆಂದು ನಿರ್ಧರಿಸಲಾಯಿತು. ಆದರೂ ಚುನಾವಣೆಯು ಮತೀಯ ಪ್ರಾತನಿಧ್ಯ ತತ್ವವನ್ನು ಮಾನ್ಯ ಮಾಡಿತು. ಅದೇ ರೀತಿ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು ಮತ್ತು ಜಮೀನುದಾರರು ವಿಶಿಷ್ಟ್ಯ ಪ್ರಾತಿನಿಧ್ಯ ಪಡೆದರು.

ಕೌನ್ಸಿಲ್ ಆಫ್ ಸ್ಟೇಟ್ ರಚನೆ ಇನ್ನು ತೊಡಕಿನದಾಗಿತ್ತು. ವಿಶಿಷ್ಟ ಆಸಕ್ತಿಗಳ ವೈವಿಧ್ಯಕ್ಕೆ ಪ್ರಾತಿನಿಧ್ಯ ಅಲ್ಲಿ ದೊರೆತಿತ್ತು. ರಚನೆಯ ವೈವಿಧ್ಯವನ್ನು ಅನುವಂಶಿಕ ಶ್ರೀಮಂತಿಕೆ ಮತ್ತು ವಣಿಕ ಶ್ರೀಮಂತಿಕೆಗಳ ಪ್ರಾತಿನಿಧ್ಯ ಬರುವಂತೆ ಮಾಡಲು ಮತದಾನದ ಹಕ್ಕನ್ನು ಬಹಳ ಎತ್ತರದ ಮಟ್ಟದಲ್ಲಿ ಇಟ್ಟು ಸಾಗಿಸಲಾಯಿತು. ಸ್ಥಳೀಯ ಅಧಿಕಾರವೊಂದರ ಶಾಸಕಾಂಗದ ಸದಸ್ಯತ್ವ ಯಾವಾಗಲಾದರೂ ಇದ್ದಿತೆ ಅಥವಾ ಈಗ ಇದೆಯೆ, ಒಂದು ವಿಶ್ವವಿದ್ಯಾನಿಲಯದ ಫೆಲೋ ಆಗಿದ್ದಾನೆಯೆ ಇಲ್ಲವೆ ಎಂಬಂಹ ವಿಶಿಷ್ಟ ವೈಯುಕ್ತಿಕ ಅರ್ಹತೆಗಳನ್ನು ಅವಲಂಬಿಸಿ ಮತದಾನದ ಹಕ್ಕನ್ನು ನೀಡಲಾಯಿತು.

ಪ್ರಾಂತೀಯ ಶಾಸಕಾಂಗಗಳಂತೆಯೇ ಭಾರತದ ಶಾಸಕಾಂಗವೂ ನಾಲ್ಕು ಬೇರೆ ಬೇರೆ ಬಗೆಯ ಕರ್ತವ್ಯಗಳನ್ನು ಹೊಂದಿದ್ದಿತು. 1.ಪ್ರಶ್ನೆ, 2. ಶಾಸನ 3. ಹಣಕಾಸು ಮತ್ತು 4. ಸಲಹೆ. ಮೊದಲನೆಯದು ಮತ್ತು ಕೊನೆಯದನ್ನು ಕುರಿತು ಕೇಂದ್ರ ಶಾಸಕಾಂಗದ ಅಧಿಕಾರಗಳು ಪ್ರಾಂತೀಯ ಲೆಜೆಸ್ಲೇಟರಿನವನ್ನೇ ಹೋಲುತ್ತಿದ್ದವು. ಆದರೆ ಶಾಸನ ಮತ್ತು ಆಯವ್ಯಯಗಳಿಗೆ ಸಂಬಂಧಿಸಿದ ಹಾಗೆ ಅವೆರಡಕ್ಕೂ ಬಹು ಮುಖ್ಯವಾದ ವ್ಯತ್ಯಾಸಗಳೂ ಇದ್ದವು. ಶಾಸನ ಕ್ಷೇತ್ರದಲ್ಲಿ ಕೌನ್ಸಿಲ್ ಆಫ್ ಸ್ಟೇಟ್‌ನ ಅಧಿಕಾರಗಳು ಅಸೆಂಬ್ಲಿಯವುಗಳೊಂದಿಗೆ ಹೊಂದಿಕೊಂಡಿದ್ದವು. ಸರಕಾರವು ತನ್ನ ಕಾರ್ಯ ಕಲಾಪಗಳಿಗೆ ಯಾವಾಗಲೂ ಕೌನ್ಸಿಲ್‌ನ ಬಹುಮತವನ್ನೇ ಅವಲಂಬಿಸಿದ್ದುದರಿಂದ ಅಸೆಂಬ್ಲಿಯ ಜನತಾ ಬಹುಮತವು ತನ್ನ ಇಚ್ಛೆಯನ್ನು ಶಾಸನಕ್ಕೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ ಸರಕಾರಕ್ಕೆ ಎದುರಾಗಿ ಬಲಾತ್ಕಾರಿಸುವಂತಿರಲಿಲ್ಲ. ಆಯವ್ಯಯಕ್ಕೆ ಸಂಬಂಧಿಸಿದಂತೆ ಅನೇಕ ಅಂಶಗಳನ್ನು "ಮತದಾನವಿಲ್ಲದಂತವು" ಎಂದು ಹೆಸರಿಟ್ಟು ಗೌರವ ಮಾಡಲಾಗಿತ್ತು. ಅವುಗಳನ್ನು ಕುರಿತು ಲೆಜಿಸ್ಲೇಟರ್ ಚರ್ಚೆ ನಡೆಸುವುದಕ್ಕೂ ಅವಕಾಶವಿರಲಿಲ್ಲ. ಮಿಕ್ಕ ಅಂಶಗಳ ಮೇಲೆ ಚರ್ಚೆಗೆ ಅವಕಾಶವಿತ್ತು ಆದರೆ ಇಲ್ಲಿಯೂ ಅಧಿಕಾರಿಗಳೇ ಪ್ರಧಾನ ಪಕ್ಷವಾಗಿದ್ದ ಕೌನ್ಸಿಲು ಅಸೆಂಬ್ಲಿಯ ಇಚ್ಛೆಯನ್ನು ಮೀರಿಸಿಬಿಡಬಹುದಾಗಿತ್ತು.

ಈ ಎಲ್ಲಾ ಅಂಶಗಳಿಗಿಂತ ಶಾಸನ ಮತ್ತು ಆಹಾರ ಸರಬರಾಜುಗಳಿಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಗವರ್ನರ್ ಜನರಲ್‌ನಿಗಿದ್ದ ಅಧಿಕಾರಗಳು ಹೆಚ್ಚಾಗಿದ್ದುವು. ಇಂಡಿಯನ್ ಲೆಜೆಸ್ಲೇಚರ್‌ಗೆ ತನ್ನ ನಿಲುವು ಎದುರಾದದ್ದು ಎಂದು ಕಂಡುಕೊಂಡಾಗ ಗವರ್ನರ್ ಜನರಲ್ಲನಿಗೆ ಲೆಜೆಸ್ಲೇಟಿವ್ ತೀರ್ಮಾನವನ್ನು ಕಡೆಗಣಿಸಲು ಬೇಕಾದಷ್ಟು ವಿಧಾನಗಳಿದ್ದವು. ಕೆಲವು ಮಸೂದೆಗಳನ್ನು ಮಂಡಿಸಲು ಪೂರ್ವಭಾವಿಯಾಗಿ ಬಿಡುವು ಅವಶ್ಯಕವಾಗಿದ್ದಾಗಲೂ ಅವನು ಅಂತಹ ಬಿಡುವನ್ನು ತಿರಸ್ಕರಿಸುತ್ತಿದ್ದನು. ಆತನು ಶಿಫಾರಸ್ಸು ಮಾಡಿದ ಒಂದು ಮಸೂದೆಯನ್ನು ಲೆಜೆಸ್ಲೇಚರ್ ತಿರಸ್ಕರಿಸಿದಾಗಲೂ ಕೂಡಾ ಅವನು ಅದು ಬ್ರಿಟಿಷ್ ಇಂಡಿಯಾದ ಕ್ಷೇಮ, ಶಾಂತಿ ಮತ್ತು ಹಿತಾಸಕ್ತಿಗಳಿಗೆ ಅತ್ಯಾವಶ್ಯಕ ಎಂದು ಪ್ರಮಾಣಿಕರಿಸುತ್ತಿದ್ದನು. ಆಗ ಅದು, ಅವನು ಹಸ್ತಾಂಕ್ಷರವಾದೊಡನೆ ಅದರ ಬಲದಿಂದ ಆಕ್ಟ್ ಆಗಿ ಪರಿಣಮಿಸುತ್ತಿತ್ತು. ಗವರ್ನರ್ ಜನರಲ್ಲನ ಈ ಅನಭಿಷಿಕ್ತ ಅಧಿಕಾರದ ಮೇಲೆ ಇದ್ದ ಒಂದೇ ಒಂದು ತಡೆ ಬ್ರಿಟಿಷ್ ಪಾರ್ಲಿಮೆಂಟಿನ ಕೈಯಲ್ಲಿತ್ತು. ಅಂತಹ ಪ್ರತಿಯೊಂದು ಆಕ್ಟ್ ಚಕ್ರವರ್ತಿ ಸಮ್ಮತಿ ದೊರಕುವ ಮುಂಚೆ, ಕೊನೆಯ ಪಕ್ಷ ಎಂಟು ದಿನ ಮುಂಚೆ, ಅದರ ಮುಂದೆ ಬರಲೇಬೇಕಾಗಿತ್ತು. ಲೆಜೆಸ್ಲೇಚರ್ ಅಂಗೀಕರಿಸಿದ ಮಸೂದೆಗಳಿಗೆ ತನಗೆ ಅವಶ್ಯಕವೆಂದು ತೋರಿದಾಗ, ಗವರ್ನರ್ ಜನರಲ್ ತನ್ನ ಸಮ್ಮತಿ ಕೊಡಲು ನಿರಾಕರಿಸಬಹುದಾಗಿತ್ತು. ಆರ್ಥಿಕ ಕ್ಷೇತ್ರದಲ್ಲಿಯೂ ಕೂಡ ಅಸೆಂಬ್ಲಿಯು ತಗ್ಗಿಸಿದ ಅಥವಾ ನಿರಾಕರಿಸಿದ ಯಾವುದೇ ಧನ ಸಹಾಯವನ್ನು (ಗ್ರಾಂಟ್) ಮತ್ತೆ ಊರ್ಜಿತ ಪಡಿಸಲು ಸಂಪೂರ್ಣ ಅಧಿಕಾರ ಅವನಿಗಿತ್ತು. ಕಾರ್ಯತಃ ಗವರ್ನರ್ ಜನರಲ್ಲನು ಈ ಮೇಲಾಟದ ಅಧಿಕಾರವನ್ನು ತನಗೆ ವಿರುದ್ಧವಾದ ಅಸೆಂಬ್ಲಿಯ ಮುಖದೆದುರೇ ಧಾರಾಳವಾಗಿ ಉಪಯೋಗಿಸಿಕೊಳ್ಳುತ್ತಿದ್ದನು. ಒಟ್ಟಿನಲ್ಲಿ ಸುಧಾರಣೆಗಳು ಕೇಂದ್ರದಲ್ಲಿ ಜವಾಬ್ದಾರಿಯುತ ಸರಕಾರವನ್ನು ಕಾಣಬೇಕೆಂಬ ಜನತೆಯ ಬೇಡಿಕೆಯನ್ನು ಪೂರೈಸಲು ಸಂಪೂರ್ಣವಾಗಿ ಅಸಮರ್ಥವಾದುವು. ಇದು ಹಾಗಾದ್ದರಿಂದ ಅಸೆಂಬ್ಲಿಯಲ್ಲಿ ಜನತೆ ಆರಿಸಿ ಕಳುಹಿಸಿದ ಭಾರತೀಯ ಪ್ರತಿನಿಧಿಗಳೂ ಹೆಚ್ಚು ಕಡಿಮೆ ಅನಿವಾರ್ಯವಾಗಿ ಎಲ್ಲ ಚರ್ಚೆಗಳಲ್ಲೂ ಸರಕಾರಕ್ಕೆ ವಿರುದ್ಧವಾಗಿಯೇ ನಿಲ್ಲುತ್ತಿದ್ದರು. ಸಿ.ಆರ್. ದಾಸ್ ಅವರ ಮಾತುಗಳಲ್ಲಿ ಹೇಳುವುದಾದರೆ ಅಸೆಂಬ್ಲಿಗೆ ಹೋದ ಸ್ವರಾಜ್ಯವಾದಿಗಳು ಅಲ್ಲಿದ್ದುದು ಅದನ್ನು ಕಾರ್ಯಗತಗೊಳಿಸಲಿಕ್ಕಲ್ಲ, ಅದನ್ನು ಒಳಗಿನಿಂದಲೇ ಮುರಿದು ನಾಶ ಮಾಡಲಿಕ್ಕಾಗಿ.

## ದ್ವಿಪ್ರಭುತ್ವದ ಸೋಲು

ಆಚರಣೆಯಲ್ಲಿ ದ್ವಿಪ್ರಭುತ್ವವು ವಿಫಲಗೊಂಡಿತು. ಸರ್. ಅಲೆಗ್ಸಾಂಡರ್ ಮುದ್ದಿಮ್ ಅವರ ನೇತೃತ್ವದಲ್ಲಿದ ಒಂದು ಅಧಿಕೃತ ಸಮಿತಿಯ ಪ್ರಾಂತಗಳಲ್ಲಿ ದ್ವಿಪ್ರಭುತ್ವ ಕೆಲಸ ಮಾಡುವ ವಿಧಾನವನ್ನು ಕುರಿತು ವಿಸ್ತಾರವಾದ ಪರೀಕ್ಷೆ ನಡೆಸಿತು. ಅದು ಸಂಪೂರ್ಣ

ವಿಫುಲಗೊಂಡಿದೆ ಎಂಬ ತೀರ್ಮಾನಕ್ಕೆ ಬಂದಿತು. ಸಮಿತಿಯು ಬಹುಮತ ಮತ್ತು ಅಲ್ಪಮತ ವರದಿಗಳೆರಡನ್ನು ತಯಾರಿಸಿತ್ತಾದರೂ ಈ ಒಂದು ಅಂಶದ ಮೇಲೆ ಎರಡೂ ಒಮ್ಮತ ತಾಳಿದವು. ಬಹುಮತವು ಈ ಕೆಳಗಿನ ದೋಷಗಳನ್ನು ವರದಿ ಮಾಡಿತು.

(a) ಸರಕಾರದ "ಮೀಸಲಾದ ಅರ್ಧವು" ವರ್ಗಾಯಿಸಿದ ಅರ್ಧದ ಮೇಲೆ ಮಧ್ಯೆ ಪ್ರವೇಶ ಮಾಡುವುದು ಮತ್ತು ಇದರ ಎದುರು ಪರಿಸ್ಥಿತಿ.

(b) ಸರಕಾರದ ಎರಡೂ ಭಾಗಗಳು ಕೂಡುವ ವ್ಯವಹಾರಗಳನ್ನು ಪ್ರೋತ್ಸಾಹಿಸದಿದ್ದುದು

(c) ಮಂತ್ರಿಗಳಲ್ಲಿ ಕೂಡು ಹೊಣೆಗಾರಿಕೆ ಇಲ್ಲದುದು.

(d) ಗವರ್ನರ್, ಗವರ್ನಮೆಂಟ್ ಆಫ್ ಇಂಡಿಯಾ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಇವರೆಲ್ಲರ ಮಧ್ಯ ಪ್ರವೇಶದಿಂದಾಗಿ ಮಂತ್ರಿಗಳಲ್ಲಿ ನಿಜವಾದ ಅಧಿಕಾರ ಇಲ್ಲವಾದುದು.

(e) ವರ್ಗಾವಣೆಗೊಂಡ ಖಾತೆಗಳ ಮೇಲೆ ಆರ್ಥಿಕ ವಿಭಾಗವು ಅದು ಮೀಸಲು ವಿಷಯವಾಗಿತ್ತು ಚಲಾಯಿಸುತ್ತಿದ್ದ ಅತಿರೇಕದ ನಿಯಂತ್ರಣ.

(f) ಇಂಡಿಯನ್ ಸಿವಿಲ್ ಸರ್ವೀಸ್, ಮಂತ್ರಿಗಳೊಂದಿಗೆ ಸಹಕರಿಸಲು ಒಪ್ಪದೆ ಹೋದದ್ದು. ಈ ಕೆಲವು ದೋಷಗಳನ್ನು ಹೆಚ್ಚು ವಿಸ್ತಾರವಾಗಿ ಪರಿಶೀಲಿಸುವುದು ಅಗತ್ಯವೆಂದು ಕಾಣುತ್ತದೆ. ಸರಕಾರದ ಎರಡೂ ಅರ್ಧಗಳಿಗೆ ಹೋಗುವ ವಿಷಯಗಳನ್ನು ಖಚಿತವಾಗಿ ಗುರುತು ಮಾಡಿಕೊಳ್ಳದೆ ಹೋದುದರಿಂದಾಗಿ ಎರಡೂ ಕಡೆಯ ಪರಸ್ಪರ ಮಧ್ಯ ಪ್ರವೇಶದ ಸಾಧ್ಯತೆ ಉಂಟಾಯಿತು. ಅಂತಹ ಘರ್ಷಣೆಗಳು ಮೂಡಿದಾಗಲೆಲ್ಲ ಗವರ್ನರ್‌ನು ಮಧ್ಯಸ್ಥಿಕೆ ವಹಿಸಬೇಕಾಗಿತ್ತು. ಸಾಮಾನ್ಯವಾಗಿ ಆತನು ಮೀಸಲು ಅರ್ಧದ ಪರವಾಗಿ ನಿಲ್ಲುತ್ತಿದ್ದನು. ಕಮಿಷನ್ನಿನ ಅಲ್ಪ ಮತವು ಇದನ್ನು ದ್ವಿಪ್ರಭುತ್ವದಲ್ಲಿ ಅಂತರ್ಗತವಾಗಿರುವ ಪ್ರಧಾನ ದೋಷ ಎಂದು ಪರಿಗಣಿಸಿತು. ಬಹುಮತವಾದರೋ ಎರಡು ಅರ್ಧಗಳ ನಡುವೆ ವಿಷಯಗಳ ವಿಭಜನೆ ಇನ್ನೂ ಹೆಚ್ಚು ವೈಜ್ಞಾನಿಕ ತತ್ವಗಳ ಮೇಲೆ ಆಧಾರಗೊಂಡದ್ದೇ ಆದ ಪಕ್ಷದಲ್ಲಿ ಎರಡು ಅರ್ಧಗಳೂ ಇನ್ನು ಹೆಚ್ಚು ಧಾರಾಳವಾಗಿ ಕೆಲಸ ಮಾಡಬಹುದು ಎಂದು ಭಾವಿಸಿತು.

ನೀತಿ ಮತ್ತು ಆಡಳಿತ ವಿಚಾರಗಳಲ್ಲಿ ಕೂಡ ವ್ಯವಾಹರವೆನ್ನುವ ನಿರ್ಬಂಧ ಈ ವ್ಯವಸ್ಥೆಯಲ್ಲಿ ಇರಲೇ ಇಲ್ಲ. ಈ ಸಂಬಂಧವಾದ ಮೊದಲ ಹೆಜ್ಜೆ ಗವರ್ನರ್‌ನದು. ಆದರೆ ಎಲ್ಲೋ ಕೆಲವರು ಗವರ್ನರ್‌ರ ಮಟ್ಟಿಗೆ ಈ ಅಭ್ಯಾಸವನ್ನು ಪ್ರೋತ್ಸಾಹಿಸಿದರು. ಮುದ್ದಿಮನೆ ಸಮಿತಿಯು ಇದನ್ನು ಒಂದು ತತ್ವವಾಗಿ ಒಪ್ಪಿಕೊಳ್ಳಬೇಕು. ಅದು ಕ್ಯಾಬಿನೆಟ್ ವ್ಯವಸ್ಥೆಯ ಪ್ರಾರಂಭವಾಗುತ್ತದೆ ಎಂದು ಅಪೇಕ್ಷಿಪಟ್ಟಿತು. ಆದರೆ ಅಲ್ಪ ಮತವು ಈ ಅಭ್ಯಾಸವನ್ನು ತತ್ವವಾಗಿ ಒಪ್ಪಿಕೊಂಡರೂ ಕೂಡ ಅದು ದ್ವಿಪ್ರಭುತ್ವದ ಅಂತರ್ಗತ ದೋಷವನ್ನು ನಿವಾರಿಸುವುದಿಲ್ಲ ಎಂದು ಭಾವಿಸಿತು. ಅವರು "ಸರಕಾರವು ಎರಡು ಹೋಳಾಗಿ ವಿಭಜಿತವಾಗಿರಬೇಕಾಗಿರುವುದು ಪ್ರಸಕ್ತ ಸಂವಿಧಾನದಲ್ಲಿ ಅಂತರ್ಗತವಾಗಿರುವ ಒಂದು ದೋಷ ಎಂದು ನಾವು ಹೇಳುತ್ತೇವೆ" ಎಂದು ಹೇಳಿದರು.

ಕೂಡು ಹೊಣೆಗಾರಿಕೆಯ ತತ್ವವನ್ನು ಸಾಧಿಸಲಾಗಿರಲಿಲ್ಲ. ಈ ವ್ಯವಸ್ಥೆಯಲ್ಲಿ ಅದನ್ನು ಸಾಧಿಸಲು ಸಾಧ್ಯವೂ ಇರಲಿಲ್ಲ. ಮಂತ್ರಿಗಳನ್ನು ಲೆಜಿಸ್ಲೇಚರಿನ ವ್ಯವಸ್ಥಿತ ರಾಜಕೀಯ ಪಕ್ಷಗಳ ಆಧಾರದಿಂದ ಆರಿಸದೆ, ವೈಯುಕ್ತಿಕ ಆಧಾರದಿಂದ ಆರಿಸಲಾಗಿತ್ತಿತ್ತು. ಮುಖ್ಯ ಮಂತ್ರಿಯ ಪದವಿ ಇರಲಿಲ್ಲ. ಕೂಡು ಹೊಣೆಗಾರಿಕೆ ಇಲ್ಲದ ಸನ್ನಿವೇಶದಲ್ಲಿ ಪ್ರತಿಯೊಬ್ಬ ಮಂತ್ರಿಯ ಗುರಿಯು ಹೇಗಾದರೂ ಮಾಡಿ ತನ್ನ ಸ್ಥಾನಕ್ಕೆ ತಬ್ಬಿಕೊಂಡಿರಬೇಕೆಂಬುದಾಗಿತ್ತು. ಎಲ್ಲಿಯವರೆಗೆ ಅವನು ಗವರ್ನರ್‌ನಲ್ಲಿ ಒಳ್ಳೆಯ ಅಭಿಪ್ರಾಯಗಳನ್ನು ಮೂಡಿಸಿದ್ದಾನೋ ಅಲ್ಲಿಯವರೆಗೆ ಅವನು ಅಧಿಕಾರದಲ್ಲಿರುವ ಸಾಧ್ಯತೆ ಇತ್ತು. ಇಂತಹ ಒಂದು ಮನೋಭಾವ ಭಾರತೀಯರಿಗೆ ಜವಾಬ್ದಾರಿ ಸರಕಾರದ ವಿಭಾಗದಲ್ಲಿ ಶಿಕ್ಷಣ ಕೊಡುವುದಕ್ಕೆ ಪ್ರತಿಯಾಗಿ ಅವರಿಗೆ ಹೊಗಳಿಕೆ, ಮುಖಸ್ತುತಿಯ ಕಲೆಗಳಲ್ಲಿ ಶಿಕ್ಷಣ ಕೊಟ್ಟಿತು.

ವಿಷಯಗಳ ಹಂಚಿಕೆಯಲ್ಲಿ ಗವರ್ನರ್‌ನ ಅಧಿಕಾರಗಳು ಪರಮಾಧಿಕಾರವಾಗಿದ್ದವು. ಅಲ್ಲದೆ ಅವನು ಆತನಿಗಿಚ್ಛೆ ಬಂದ ಹಾಗೆ ಮಂತ್ರಿಗಳನ್ನು ನೇಮಕ ಮಾಡುತ್ತಿದ್ದನು. ಅವರನ್ನು ವೈಯುಕ್ತಿಕವಾಗಿ ಸಲಹೆ ಕೇಳುತ್ತಿದ್ದನು. ಅವರು ಕೇವಲ ಸಲಹೆಗಾರರೆಂಬಂತೆ ವ್ಯವಹರಿಸಿ ತನಗೆ ಇಚ್ಛೆ ಬಂದಾಗ, ಅವರನ್ನು ವಜಾ ಮಾಡುತ್ತಿದ್ದನು. ಇದು ಮಂತ್ರಿಗಳ ಜವಾಬ್ದಾರಿಯ ಬೇರಿಗೇ ಆಘಾತವಾಗಿತ್ತು. ವರ್ಗಾಹಿಸಿದ ವಿಷಯಗಳ ಬಗೆಗೆ ಗವರ್ನರ್‌ನು ಸಾಂವಿಧಾನಿಕ ನಾಯಕನಾಗಿರಲಿಲ್ಲ.

ವಿಭಾಗ ಕಾರ್ಯದರ್ಶಿಗಳು ಮಂತ್ರಿಗಳನ್ನು ಬಿಟ್ಟು ನೇರವಾಗಿ ಗವರ್ನರ್‌ನಲ್ಲಿಗೆ ಹೋಗಬಹುದಾಗಿದ್ದುದು ಸರಕಾರದಲ್ಲಿ ಮಂತ್ರಿಯ ಸ್ಥಾನವನ್ನು ಇನ್ನೂ ಕೆಳಗಿಳಿಸಿತು. ಅವನ ಜವಾಬ್ದಾರಿ ಇನ್ನೂ ಕೆಳಮಟ್ಟದಾಯಿತು. ಖಾಯಂ ಸಿವಿಲ್ ಸರ್ವೀಸ್ ಅಧಿಕಾರಿಗಳು ತಮ್ಮ ಬೆನ್ನ ಹಿಂದೆ ತಮಗೆ ಅರಿವಿಲ್ಲದಂತೆ ಗವರ್ನರ್‌ನ ಮೇಲೆ ಪ್ರಭಾವ ಬೀರುತ್ತಿದ್ದಾರೆ ಎಂಬ ಅನುಮಾನ ಮಂತ್ರಿಗಳಲ್ಲಿ ಉಂಟಾಗುವುದಕ್ಕೆ ಈ ಅಭ್ಯಾಸ ಸಾಕಷ್ಟು ಕಾರಣವಾಯಿತು. ಅಲ್ಲದೆ ಈ ಸೌಲಭ್ಯವು ಆ ಅಧಿಕಾರಿಗಳು ತಾವು ಇಷ್ಟ ಪಟ್ಟರೆ ಈ ಮಂತ್ರಿಗಳನ್ನು ಸಂಪೂರ್ಣವಾಗಿ ಅಲಕ್ಷಿಸಿಯೇ ಬಿಡಬಹುದು ಎಂದು ಭಾವಿಸುವಂತೆ ಮಾಡಿತು.

ವರ್ಗಾಯಿಸಿದ ವಿಷಯಗಳ ಮೇಲೆ ಹಣಕಾಸು ಶಾಖೆ ಚಲಾಯಿಸುತ್ತಿದ್ದ ನಿಯಂತ್ರಣ ಅತಿರೇಖದ್ದಾಗಿತ್ತು. ಅಲ್ಲದೆ ಹಣಕಾಸು ಖಾತೆಯು ಯಾವಾಗಲೂ ಎಕ್ಸಿಕ್ಯೂಟಿವ್ ಕೌನ್ಸಿಲ್‌ನ ಒಬ್ಬ ಸದಸ್ಯನ ಕೈಯಲ್ಲಿರುತ್ತಿತ್ತೆ ಹೊರತು ಒಬ್ಬ ನಮಂತ್ರಿಯ ವಶದಲ್ಲಿರಲಿಲ್ಲ. ಈ ವಿಭಾಗವು ಹಣಕಾಸಿಗೆ ಸಂಬಂಧಪಟ್ಟ ಸಲಹೆಗಳನ್ನು ಕೊಡುವಂತೆ ತೃಪ್ತಿಗೊಳ್ಳದೇ ಒಂದೇ ಸಮನೆ, ಮಂತ್ರಿಗಳ ನೀತಿಯನ್ನು ನಿಯಂತ್ರಿಸುವ ಕೆಲಸಕ್ಕೆ ಕೈ ಹಾಕುತ್ತಿತ್ತು. ಅನೇಕ ವೇಳೆ ಇದು ಇರಿಸುಮುರಿಸಿನ ವಿಚಾರವಾಗುತ್ತಿತ್ತು. ಕೆಲವು ವೇಳೆ ದುಷ್ಟತನದ್ದಾಗುತ್ತಿತ್ತು. ಮಂತ್ರಿಗಳು ಇದಕ್ಕೆ ಹೋಲಿಸಿದರೆ ಅಷ್ಟು ಮುಖ್ಯವಲ್ಲದ ವಿಷಯಗಳ ಹೊಣೆ ಹೊತ್ತಿದ್ದುದರಿಂದ (ಪೋಲೀಸ್ ಸ್ಟೇಟ್‌ನ ನೀತಿಗನುಗುಣವಾಗಿ) ಹೊಸ ಯೋಜನೆಗಳಿಗೆ ಸಾಕಷ್ಟು ಹಣ ಬೇಕೆಂಬ ಅವರ ಬೇಡಿಕೆಗಳನ್ನು ಹಣಕಾಸು ಶಾಖೆ ಎಂದೂ ಮಂಜೂರು ಮಾಡುತ್ತಿರಲಿಲ್ಲ.

ಬಹುಶಃ ದ್ವಿಪ್ರಭುತ್ವದ ಅತ್ಯಂತ ಅನಪೇಕ್ಷಿತ ಅಂಶವೆಂದರೆ ಖಾಯಂ ಅಧಿಕಾರಿಗಳು ಮಂತ್ರಿಗಳಿಗೆ ವಿರೋಧವಾಗಿ ನಿಂತ ನಿಲುವು. ಮಂತ್ರಿಗಳು ತಮ್ಮ ನೀತಿಗಳನ್ನು ಅಧಿಕಾರಿಗಳ ಮೂಲಕವೇ ಜಾರಿಗೆ ತರಬೇಕಾಗಿತ್ತು ತಾನೆ. ಇದನ್ನು ಪರಿಣಾಮಕಾರಿಯಾಗಿ ಮಾಡಬೇಕಾದಲ್ಲಿ ಅವರು ಅಧಿಕಾರಿಗಳ ಕರ್ತವ್ಯಯುತ ಬೆಂಬಲ ಮತ್ತು ಸಹಕಾರಗಳನ್ನು ಅವಲಂಬಿಸಿದ್ದರು. ಆದರೆ ಅಧಿಕಾರಿಗಳ ಮೇಲಿನ ಪದರವನ್ನು ಅದರಲ್ಲೂ ಇಂಡಿಯನ್ ಸಿವಿಲ್ ಸರ್ವೀಸ್‌ನವರನ್ನು ಸೆಕ್ರೆಟರಿ ಆಫ್ ಸ್ಟೇಟ್ ನೇಮಕ ಮಾಡಿದ್ದುದಾಗಿ, ಅವರು ಅವನಿಗೆ ಮಾತ್ರವೇ ಜವಾಬ್ದಾರರಾಗಿರಬೇಕಾಗಿದ್ದುದರಿಂದಾಗಿ ಯಾವುದೇ ಪ್ರಮಾಣದ ಗೌರವ ವಿಧೇಯತೆಗಳನ್ನು ಅವರು ಮಂತ್ರಿಗಳಿಗೆ ತೋರಿಸುತ್ತಿರಲಿಲ್ಲ. ಅದಕ್ಕೆ ಪ್ರತಿಯಾಗಿ ಇಂಡಿಯನ್ ಸಿವಿಲ್ ಸರ್ವೀಸ್ ಅಧಿಕಾರಿಗಳು ಮಂತ್ರಿಗಳನ್ನು ಹೀನಾಯವಾಗಿ ಕಾಣುತ್ತಿದ್ದರು. ತಾವು ಅಧೀನರಾದವರೆಂಬುದನ್ನು ತೋರಿಸದೆ, ದುರಹಂಕಾರದ ಮನೋಭಾವವನ್ನು ಪ್ರದರ್ಶಿಸಿ.

ಲೆಜಿಸ್ಲೇಚರಿನಲ್ಲಿ ಅಷ್ಟೇ ಮಂತ್ರಿಗಳ ಸ್ಥಾನ ಅಷ್ಟಾಗಿ ಸಂತೋಷಕರವಾಗಿರಲಿಲ್ಲ. ರಾಜಕೀಯ ಪಕ್ಷಗಳಲ್ಲೆಲ್ಲ ಅತ್ಯಂತ ದೊಡ್ಡದೂ, ವ್ಯವಸ್ಥಿತವೂ ಆದದ್ದೂ ಭಾರತ ರಾಷ್ಟ್ರೀಯ ಕಾಂಗ್ರೆಸ್. ಅನೇಕ ಅನೇಕ ಪ್ರಾಂತೀಯ ಲೆಜಿಸ್ಲೇಚರುಗಳಲ್ಲಿ ಕಾಂಗ್ರೆಸ್ ನಿಚ್ಚಳ ಬಹುಮತ ಪಡೆದಿರುತ್ತಿತ್ತು. ಇಲ್ಲವೆ ಮುಂದಾಳು ಸ್ಥಾನ ಅದಕ್ಕಿರುತ್ತಿತ್ತು. ಆದರೆ ಕಾಂಗ್ರೆಸ್ ದ್ವಿಪ್ರಭುತ್ವ ವ್ಯವಸ್ಥೆಗೆ ವಿರೋಧಿಯಾಗಿದ್ದುದರಿಂದ ಅದರ ಪ್ರತಿನಿಧಿಗಳು ಮಂತ್ರಿತ್ವ ಒಪ್ಪಿಕೊಳ್ಳಲು ನಿರಾಕರಿಸುತ್ತಿದ್ದರು. ಆದ್ದರಿಂದ ಅನಿವಾರ್ಯವಾಗಿ ಆಯ್ಕೆಯು ಚಿಕ್ಕಪುಟ್ಟ ಪಕ್ಷಗಳ ಪ್ರತಿನಿಧಿಗಳ ಮೇಲೆ ಅಥವಾ ಸ್ವತಂತ್ರದ ಮೇಲೆ ಬೀಳುತ್ತಿತ್ತು. ಅಂತಹ ಮಂತ್ರಿಗಳಿಗೆ ಲೆಜಿಸ್ಲೇಚರುಗಳಲ್ಲಿ ಬೆಂಬಲವೇ ಇರುತ್ತಿರಲಿಲ್ಲ. ಅನೇಕ ವೇಳೆ ಅವಿಶ್ವಾಸ ನಿರ್ಣಯವು ತಮಗೆದುರಾಗಿ ಯಶಸ್ವಿಯಾಗಬಹುದಾದ ಸಾಮ್ಯತೆ ಆ ಮಂತ್ರಿಗಳಿಗೆ ನೆತ್ತಿಯ ಮೇಲೆ ತೂಗಾಡುತ್ತಲೇ ಇರುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಮಂತ್ರಿಯ ಸ್ಥಾನವನ್ನು ಪಡೆದ ಯಾವನೇ ಆಗಲಿ, ಜನತೆಗೆ ಉಪಯೋಗವಾಗಬಹುದಾದ ಏನನ್ನೂ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ದ್ವಿಪ್ರಭುತ್ವದಲ್ಲಿ ಮಂತ್ರಿ ಪದವಿ ಎನ್ನುವುದು ಅನುಕೂಲ ಸಿಂಧೂತ್ವಕ್ಕೆ ಅಥವಾ ಬ್ರಿಟಿಷ್ ಸರಕಾರದ ಪೋಷಣೆಗೆ ಇನ್ನೊಂದು ಹೆಸರಾಯಿತು.

## 84.4 ಉಪಸಂಹಾರ

ದ್ವಿಪ್ರಭುತ್ವ ವಿಫಲಗೊಂಡಿತು. ಅದನ್ನು ತೀವ್ರವಾಗಿ ಬೆಂಬಲಿಸುತ್ತಿದ್ದವರೂ ಕೂಡ ಅದನ್ನು ಕಾರ್ಯತಃ ಗಮನಿಸುವಾಗ ಅದರ ಬಗೆಗೆ ಆಸಕ್ತಿ ಕಳೆದುಕೊಂಡರು. ಭಾರತದ ಜನತೆ ನಿರಂಕುಶ ಪ್ರಭುತ್ವ ಮತ್ತು ಜವಾಬ್ದಾರಿ ಸರಕಾರಗಳ ಮಧ್ಯದ ಈ ಇಬ್ಬಂದಿ ಸ್ಥಿತಿಯನ್ನು ಒಪ್ಪಿ ತೃಪ್ತಿಪಡುವುದು ಸಾಧ್ಯವಿಲ್ಲವೆನ್ನುವುದು ಬೇಗನೆ ಸೃಷ್ಟಿಯಾಯಿತು. ಸರ್ ಕೋರ್ಟ್ಸ್ ಇಲ್ಬರ್ಟ್‌ರ ಮಾತುಗಳಲ್ಲಿ ಹೇಳುವುದಾದರೆ, ಅದು ಭಾರತೀಯ ರಾಜನಿಗೊಬ್ಬನಿಗಾಗಿ ತಾತ್ಕಾಲಿಕ ಅಗತ್ಯಕ್ಕಾಗಿ ಬಹುವೇಗದಿಂದ ನಡೆಸುವ ಒಂದು ಕಾರ್‌ವಾನ್ ಶಾಲೆ (ಛತ್ರ) ಇದ್ದ ಹಾಗೆ ಇತ್ತು. ಆದರೆ ಕಾರ್‌ವಾನ್ ಶಾಲೆಯಂತೆಯೂ ಅದು ಯಾರನ್ನು ಉದ್ದೇಶಿಸಿತ್ತೋ ಅವರನ್ನು ತೃಪ್ತಿಪಡಿಸಲಾಗಲಿಲ್ಲ. ಮೊದಲ ಲೇಬರ್ ಸರಕಾರದಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಆಗಿದ್ದ ಲಾರ್ಡ್ ಆಲಿವಿಯರ್ ಆಕ್ಟ್‌ನ್ನು ಸಮುದ್ರಕ್ಕೆ ಅರ್ಹವಾದ ಒಂದು ಹಡಗಿಗೆ ಹೋಲಿಸಿ, ಭಾರತೀಯರನ್ನು, ಅವರು ಅದರೊಳಗೆ ಪ್ರವೇಶಿಸಿ ಹುಟ್ಟು ಹಾಕುವುದರಲ್ಲಿ, ಆಚೆ ದಂಡೆಗೆ ಕರೆದೊಯ್ಯಬಲ್ಲ ಹಡಗು ಅದು ಎಂದು ಹೇಳಿದಾಗ, ಪಂಡಿತ ಮೋತಿ ಲಾಲ ನೆಹರೂ ಉತ್ತರ ಕೊಟ್ಟಿದ್ದು ಹೀಗೆ : "ಅದು ಸಮುದ್ರಕ್ಕೆ ಅರ್ಹವಾದ ಹಡಗಾಗಿರಬಹುದು. ಆದರೆ ನಮಗೆ ಬೇಕಾಗಿರುವುದು ನಮ್ಮ ಸಾಮಾನು ಸರಂಜಾಮುಗಳಿಗೆಲ್ಲ ಸಾಕಾಗುವ ಭಾರತದ ಲಕ್ಷಾಂತರ ಪ್ರಯಾಣಿಕರನ್ನು ದಾಸ್ಯವನ್ನು ದಾಟಿ ಸ್ವಾತಂತ್ರ್ಯದ ಕಡೆಗೆ ಕೊಂಡೊಯ್ಯುವ ಹಡಗು". ಆಚರಣೆಯ ಪರೀಕ್ಷೆಗೊಡ್ಡಿದಾಗ, ಜನತೆಯ ಪ್ರತಿನಿಧಿಗಳಿಗೆ ಅಧಿಕಾರವನ್ನು ವರ್ಗಾಯಿಸುವುದೆಂಬುದರಲ್ಲಿ ಯಾವ ಸ್ಪಷ್ಟ ಪ್ರಯತ್ನವೂ ಇದರಲ್ಲಿ ಆಗಲಿಲ್ಲವೆಂಬುದು ಗೊತ್ತಾಯಿತು. ಇಂಡಿಯನ್ ಲಿಬರಲ್‌ಗಳಂತಹ ಆಶಾವಾದಿಗಳೂ, ಅದಕ್ಕೆ ಪರೀಕ್ಷಾವಕಾಶ ಕೊಟ್ಟಿದ್ದವರು ಅನೇಕ ದೃಷ್ಟಿಗಳಿಂದ ಅದರಲ್ಲಿ ಅಂಕಿಗಳಿವೆ ಎಂಬುದನ್ನು ಕಂಡುಕೊಂಡರು. ಆದ್ದರಿಂದ ಪ್ರಬಲವಾದ ನಿರಾಶೆ ಅವರಿಗುಂಟಾಯಿತು. ಇದರ ಫಲ ಹೊಸತೊಂದು ಶಕ್ತಿಯ ಉದಯ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಧ್ವಜದಡಿಯಲ್ಲಿ ಸುಶಿಕ್ಷಿತ ವರ್ಗಗಳ ಹೊಸ ಐಕ್ಯವೊಂದರ, ಹೊಸ ಚಳುವಳಿಯೊಂದರ ಉದಯ. ಮಹಾತ್ಮಾಗಾಂಧಿ ಚಳುವಳಿಯ ನಾಯಕರಾದರು. ಅವರು ಅದನ್ನು "ಅಹಿಂಸಾತ್ಮಕ ಅಸಹಕಾರ ಚಳುವಳಿ" ಎಂದು ಕರೆದರು. ಬೇಗನೆ ಅದು ಶಕ್ತಿಗೂಡಿಸಿಕೊಂಡು ಭಾರತೀಯರ ಕೈಗೆ ಅಧಿಕಾರದ ಸಂಪೂರ್ಣ ವರ್ಗಾವಣೆಯನ್ನು ಒತ್ತಾಯ ಮಾಡಿ ಪೂರ್ಣ ಪ್ರಮಾಣದ ಚಳುವಳಿ ಆರಂಭಿಸಿತು. ಭಾರತದಲ್ಲಿ ಇದ್ದ ಪರಿಸ್ಥಿತಿಗಳಿಗೆ ಹೊಂದುವಂತಹ ಒಂದು ಸಂವಿಧಾನದ ಅಗತ್ಯವನ್ನು ಪ್ರತಿಯೊಬ್ಬರೂ ಮನಗೊಂಡರು. ಭಿನ್ನಾಭಿಪ್ರಾಯ ಇದ್ದದ್ದು ಆ ಸಂಬಂಧದ ಸ್ವರೂಪವನ್ನು ಕುರಿತು ಮಾತ್ರ, ಅದು ಫೆಡರಲ್ ಲಕ್ಷಣದ್ದಾಗಿರಬೇಕು. ಯೂನಿಟರಿ ಲಕ್ಷಣದ್ದಾಗಿರಬೇಕೆ ಎಂದು ಮಾತ್ರ. ಹೀಗೆ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಒಂದು ಅಖಿಲ ಭಾರತ ಫೆಡರೇಷನ್ನಿನ ಸಂಭವನೀಯತೆ ಮತ್ತು ಸಾಧ್ಯತೆ ಭಾರತ ಮತ್ತು ಬ್ರಿಟಿಷ್ ರಾಜಕೀಯ ಪರಿಷ್ಕರ ನಡುವೆ ಚರ್ಚೆಯ ಮುಖ್ಯ ವಿಷಯವಾಯಿತು.

## 84.5 ಮಾದರಿಯ ಪ್ರಶ್ನೆಗಳು

1. 1919 ರ ಕಾಯಿದೆಯ ಸ್ವರೂಪ ಮತ್ತು ಪ್ರಾಮುಖ್ಯತೆಯನ್ನು ಚರ್ಚಿಸಿ?
2. ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಉಂಟಾದ ಭಾರತದ ರಾಷ್ಟ್ರೀಯ ಚಳುವಳಿಗೂ ಮತ್ತು ಮಾಂಟೆಗ್ಯೂ ಛೆಲ್ಮ್ಸ್‌ಫರ್ಡ್ ಕಾಯ್ದೆಗೂ ಸಂಬಂಧವಿದೆಯೆ? ಈ ಕಾಯಿದೆಯ ನಿಬಂಧನೆಗಳನ್ನು ಉಲ್ಲೇಖಿಸಿ ನಿಮ್ಮ ಉತ್ತರಗಳನ್ನು ಬರೆಯಿರಿ.

## 84.6 ಪರಾಮರ್ಶನ ಕೃತಿಗಳು


1. M.V. Pylee : "The Constitutional History of India"
2. Barkat Ali .M. : "Indian Constitution together with the Government of India Act; 1919".



ಡಾ. ಎನ್. ಸರಸ್ವತಿ
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,
ಮೈಸೂರು

## ಟಿಪ್ಪಣಿಗಳು

## ಘಟಕ - 85

# ಕಾರ್ಯ ರೂಪದಲ್ಲಿ 1919 ರ ಸುಧಾರಣೆಗಳು

85.0 ಪ್ರಸ್ತಾವನೆ

85.1 ಕಾರ್ಯರೂಪದಲ್ಲಿ ಸುಧಾರಣೆಗಳು

85.2 ಉಪಸಂಹಾರ

85.3 ಮಾದರಿಯ ಪ್ರಶ್ನೆಗಳು

85.4 ಪರಾಮರ್ಶನ ಕೃತಿಗಳು

## 85.0 ಪ್ರಸ್ತಾವನೆ

ಹೊಸ ಸಂವಿಧಾನವು 1921 ರ ಜನವರಿ 3 ರಂದು ಕಾರ್ಯರೂಪಕ್ಕೆ ಬಂದಿತು. ಆಗ ಹೊಸ ಗವರ್ನರ್‌ಗಳು, ಎಕ್ಸಿಕ್ಯುಟಿವ್ ಕೌನ್ಸಿಲರ್‌ಗಳು ಮತ್ತು ಮಂತ್ರಿಗಳು ಪ್ರಮಾಣ ವಚನವನ್ನು ಅಧಿಕಾರವನ್ನೂ ಸ್ವೀಕರಿಸಿದರು. ದೆಹಲಿಯಲ್ಲಿ ಕೌನ್ಸಿಲ್ ಆಫ್ ಸ್ಟೇಟ್ ಮತ್ತು ಲೆಜಿಸ್ಲೇಟಿವ್ ಅಸೆಂಬ್ಲಿಗಳು ಒಂದು ತಿಂಗಳ ನಂತರ, ಎಂದರೆ ಫೆಬ್ರವರಿ 3ನೆಯ ತಾರೀಖು ಔಪಚಾರಿಕವಾಗಿ ಅಸ್ತಿತ್ವಕ್ಕೆ ಬಂದವು. ಡಿಸೆಂಬರ್ 23 ನೆಯ ತಾರೀಖು ಪ್ರಕಟಿಸಿದ ಘೋಷಣೆಯಲ್ಲಿ ಚಕ್ರವರ್ತಿಯು ಹೊಸ ಛೇಂಬರ್ ಆಫ್ ಪ್ರಿನ್ಸಸ್ ಅನ್ನು ಬ್ರಿಟಿಷ್ ಇಂಡಿಯಾದ ಹೊಸ ಸಂವಿಧಾನವನ್ನು ತನ್ನ ಪರವಾಗಿ ಉದ್ಘಾಟಿಸಲು ಪ್ರಿನ್ಸ್ ಆಫ್ ವೇಲ್ಸ್ ಅನ್ನು ಭಾರತಕ್ಕೆ ಕಳುಹಿಸುವುದಾಗಿ ತಿಳಿಸಿದ್ದನು. ಆದರೆ ಅನಾರೋಗ್ಯದ ನಿಮಿತ್ತ ಆತನಿಗೆ ಬರಲು ಸಾಧ್ಯವಾಗಲಿಲ್ಲ. ಆದ್ದರಿಂದ ಅವನ ಬದಲಿಗೆ ಚಕ್ರವರ್ತಿಯು ವಯೋವೃದ್ಧನಾದ ದೊಡ್ಡಪ್ಪ, ವಿಕ್ಟೋರಿಯಾ ರಾಣಿಯ ಮಗ ಡ್ಯೂಕ್ ಆಫ್ ಕನಾಟ ಭಾರತಕ್ಕೆ ಬಂದ.

ಡ್ಯೂಕ್ ಮದರಾಸಿನಲ್ಲಿ ಹಡಗಿನಿಂದ ಇಳಿದದ್ದು 1921 ರ ಜನವರಿ 10 ರಂದು. ನಾಗಪುರದಲ್ಲಿ ಸಮಾವೇಶಗೊಂಡಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಠರಾವಿಗೆ ಅನುಗುಣವಾಗಿ ಜನವರಿ 5 ರಂದು ಮದರಾಸಿನಲ್ಲಿ ಸಮಾವೇಶಗೊಂಡಿದ್ದ ನಾಗರಿಕರ ಭಾರೀ ಸಭೆಯು ಈ ಮುಂದಿನ ಗೊತ್ತುವಳಿಯನ್ನು ಅನುಮೋದಿಸಿತು ; "ಹಿಸ್ ರಾಯಲ್ ಹೈನೆಸ್ ಡ್ಯೂಕ್ ಆಫ್ ಕನೌಜ್‌ನ ಗೌರವಾರ್ಥವಾಗಿ ಏರ್ಪಡಿಸುವ ಯಾವುದೇ ಸಮಾರಂಭಗಳಲ್ಲಾಗಲಿ, ಉತ್ಸವಗಳಲ್ಲಾಗಲಿ, ಈ ನಗರದ ಯಾವ ಪೌರರೂ ಭಾಗವಹಿಸಕೂಡದೆಂದು ಮದರಾಸಿನ ಪೌರರ ಈ ಸಭೆಯು ಕರೆ ನೀಡುತ್ತದೆ". ಈ ಬಹಿಷ್ಕಾರಕ್ಕೆ ಸಂಬಂಧಿಸಿದಂತೆ ಪ್ರಚಾರ ಕಾರ್ಯವು ಒಂದು ವಾರಾದ್ಯಂತ ನಡೆಯಿತು. ಸಭೆಗಳು ಬೀದಿ ಭಾಷಣಗಳು, ಬಹಿಷ್ಕಾರದ ಘೋಷಣೆಗಳನ್ನು, ಕೂಗುವ ಮೆರವಣಿಗೆಗಳು. ದಿನನಿತ್ಯದ ಸಂಗೀತಗಳಾದವು. "ಕನಾಟನನ್ನು ಬಹಿಷ್ಕರಿಸಿ", "ನಮಗಾಗಿರುವ ಅನ್ಯಾಯಗಳನ್ನು ಕನಾಟ್ "ಜಲಿಯನ್ ವಾಲ್‌ಬಾಗ್" ನನ್ನು ನೆನೆಯಲಿ ಇತ್ಯಾದಿ ಬರಹಗಳನ್ನುಳ್ಳ ದೊಡ್ಡ ದೊಡ್ಡ ಪತ್ರಗಳನ್ನು ರಸ್ತೆಗಳಲ್ಲಿ ಅಂಟಿಸಲಾಗಿತ್ತು. ಡ್ಯೂಕ್ ಮದರಾಸು ನಗರಕ್ಕೆ ಬಂದ ದಿನ ಊರಿನಲ್ಲಿ ಸಂಪೂರ್ಣ ಹರತಾಳವನ್ನು ಆಚರಿಸಲಾಯಿತು. ಟ್ರಿಪ್ಲಿಕೇನ್ ಬೀಚಿನಲ್ಲಿ ನಡೆದ ಭಾರೀ ಸಭೆಯಲ್ಲಿ ಹತ್ತಿರ ಹತ್ತಿರ ಐವತ್ತು ಸಾವಿರ ಜನರು ಸೇರಿದ್ದರು.

ಅದೇ ಬೀಚಿನ ಇನ್ನೊಂದು ಕಡೆ ಅಧಿಕಾರಿಗಳು ಡ್ಯೂಕನನ್ನು ಸ್ವಾಗತಿಸಿ ಮದರಾಸ್ ಮುನಿಸಿಪಲ್ ಕಾರ್ಪೋರೇಷನ್ ಪರವಾಗಿ ಅವನಿಗೆ ಮೌನ ಪತ್ರವನ್ನು ಅರ್ಪಿಸಿದರು. ಜನವರಿ 12 ರಂದು ಡ್ಯೂಕನು ಹೊಸ ಸುಧಾರಿತ ಲೆಜಿಸ್ಲೇಟಿವ್ ಕೌನ್ಸಿಲನ್ನು ಉದ್ಘಾಟಿಸಿದರು. ಪ್ರಕೃತಿಯೂ ಕೂಡ ಅಧಿಕಾರಿಗಳಿಗೆ ಸಹಾಯಕ ವಾದದಂತಿತ್ತು. ಬಿರುಗಾಳಿಯಿಂದ ಕೂಡಿದ ಭಾರೀ ಮಳೆಯು ರಸ್ತೆಗಳಲ್ಲಿ ಮಾಡಿದ್ದ ವಿಪರೀತ ವೆಚ್ಚದ ಅಲಂಕಾರಗಳನ್ನು ನಾಶಗೊಳಿಸಿತು. ಮೆರವಣಿಗೆಯು ರದ್ದಾಯಿತು. ಡ್ಯೂಕ್ ಮಾಡಿದ ಭಾಷಣ ಗಂಭೀರವಾಗಿದ್ದು ಭಾರತದ ಜನರನ್ನು ಒಲಿಸಿಕೊಳ್ಳುವ ಭಾವನೆಯಿಂದ ಕೂಡಿತ್ತು. ಮುಂದೆ ಅವನು ಇತರ ಕಡೆಗಳಲ್ಲಿ ಮಾಡಿದ ಭಾಷಣಗಳೂ ಹಾಗೆಯೇ ಇದ್ದವು. ಸಾಮಾನ್ಯವಾಗಿ ಬ್ರಿಟನ್ನಿನಿಂದ ಬರುವವರು ಹಡಗಿನಿಂದ ಇಳಿಯುತ್ತಿದ್ದುದ್ದು ಬೊಂಬಾಯಿಯಲ್ಲಿ. ಆದರೆ ಡ್ಯೂಕ್ ಇಳಿದದ್ದು ಮದರಾಸಿನಲ್ಲಿ. ಹಾಗಾಗಿ ಈ ವಿಷಯದಲ್ಲಿ ಕೆಲವು ಊಹಾಪೋಹಗಳು ಎದ್ದಿದ್ದವು. ಅಸಹಕಾರ ಚಳುವಳಿಯ ಬಿಸಿ ಮದರಾಸನ್ನು ಅಷ್ಟಾಗಿ ತಟ್ಟಿರಲಿಲ್ಲವಾಗಿ ರಾಜವಂಶದ ಈ ಅತಿಥಿಯನ್ನು ಸ್ವಾಗತಿಸಿ ಗೌರವಿಸಲು ಮದರಾಸು ಸುರಕ್ಷಿತವಾದ ಸ್ಥಳ ಎಂದು ಸರ್ಕಾರ ಭಾವಿಸಿತು ಎಂದು ಜನರು ಊಹಿಸಿದರು. ಅಲ್ಲದೆ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ನಡುವೆ ಇದ್ದ ವಿರಸವನ್ನು ಬಳಸಿಕೊಂಡು ಪರಿಸ್ಥಿತಿಯನ್ನು ತಹಬದಿಗೆ ತರಬಹುದು ಎಂದೂ ಸರ್ಕಾರ ಯೋಚಿಸಿದಂತೆ ತೋರುತ್ತಿತ್ತು. ತನ್ನ ಭಾಷಣದಲ್ಲಿ ಡ್ಯೂಕನು ಮದರಾಸು ಅತ್ಯಂತ ಉಚಿತವಾದ ಸ್ಥಳ, ಏಕೆಂದರೆ "ಭಾರತ ಮತ್ತು ಬ್ರಿಟಿಷ್ ಸಾಮ್ರಾಜ್ಯಗಳ ನಡುವೆ ಸಂಬಂಧ ಖಚಿತವಾಗಿ ಏರ್ಪಟ್ಟಿದ್ದು ಇಲ್ಲಿಯೇ" ಎಂದು ಹೇಳಿದನು.

ಮಧ್ಯ ಭಾರತದಲ್ಲಿ ಸುಮಾರು ಹದಿನೈದು ದಿನಗಳನ್ನು ಕಳೆದು ಡ್ಯೂಕನು ಜನವರಿ 28 ರಂದು ಕಲ್ಕತ್ತ ತಲುಪಿದನು. ಮದರಾಸಿನ ದೃಶ್ಯಗಳೇ ಹರತಾಳ, ಪ್ರತಿಭಟನಾ ಸಭೆಗಳು, ಬಹಿಷ್ಕಾರ, ಮೆರವಣಿಗೆಗಳು, ಪುರಸಭೆಯ ಮಾನ ಪತ್ರ ಸಮರ್ಪಣೆ. ಅಲ್ಲೂ ಪುನರಾವರ್ತನೆಗೊಂಡವು. ಆಗ ಕಲ್ಕತ್ತಾದಲ್ಲಿದ್ದ ಗಾಂಧೀಜಿ ತಾವೇ ಸ್ವತಃ ನಗರದಲ್ಲಿ ಸುತ್ತಾಡಿ ಮುಷ್ಕರ ನಡೆಸುತ್ತಿದ್ದವರನ್ನು ಉದ್ದೇಶಿಸಿ ಮಾತನಾಡಿ ಯಾರು ಡ್ಯೂಕರಿಗೆ ಸ್ವಾಗತ ಕೋರಲು ಇಚ್ಛಿಸುತ್ತಾರೋ ಅವರಿಗೆ ಹೋಗುವ ಸ್ವಾತಂತ್ರ್ಯ ನೀಡುವಂತೆ ಕೋರಿದರು. ಆದರೂ ಹರತಾಳ ಪೂರ್ಣವಾಗಿ ಯಶಸ್ವಿಯಾಯಿತು. ಫೆಬ್ರವರಿ 1 ರಂದು ಬಂಗಾಳದ ಲೆಜಿಸ್ಲೇಟಿವ್ ಕೌನ್ಸಿಲ್‌ನ ಉದ್ಘಾಟನೆಯಾಯಿತು.

ನಗರದ ಎಂಟು ಭಾಗಗಳಲ್ಲಿ ಅಂದು ನಡೆದ ಎಂಟು ಸಭೆಗಳಲ್ಲೂ ಒಂದೇ ಠರಾವು ಅನುಮೋದಿತವಾಯಿತು : ಬಂಗಾಳದ ಲೆಜೆಸ್ಲೇಟಿವ್ ಕೌನ್ಸಿಲ್ - "ಈ ದೇಶದ ಜನರನ್ನು ಪ್ರತಿನಿಧಿಸುವುದಿಲ್ಲ, ಅಲ್ಲಿನ ಸ್ಥಾನಗಳಿಗೆ ಚುನಾಯಿತರಾಗಲು ಅವಕಾಶ ಕೊಟ್ಟಿರುವವರು ತಮ್ಮ ಸ್ಥಾನಗಳಿಗೆ ಕೂಡಲೇ ರಾಜೀನಾಮೆ ನೀಡತಕ್ಕದ್ದು". ಡ್ಯೂಕನು ಗಾಂಭೀರ್ಯದಿಂದ ಕೂಡಿದ ಭಾಷಣ ಮಾಡಿ ಬಂಗಾಳವನ್ನು ಪ್ರಶಂಸಿಸಿದನು.

ಫೆಬ್ರವರಿ 8 ರಂದು ಡ್ಯೂಕನು ದೆಹಲಿಯಲ್ಲಿ ಛೇಂಬರ್ ಆಫ್ ಪ್ರಿನ್ಸಸ್ ಅನ್ನು ಉದ್ಘಾಟಿಸಿದನು. ಸಮಾರಂಭವು ಕೆಂಪು ಕೋಟೆಯ ದಿವಾನ್ - ಇ- ಅಮ್ ಮುಂದಣ ಕ್ರೀಡಾ ಮಂಟಪದಲ್ಲಿ ನಡೆಯಿತು. ಸುಮಾರು ನೂರಿಪ್ಪತ್ತು ರಾಜರು ಅದರಲ್ಲಿ ಭಾಗವಹಿಸಿದ್ದರು. ಮರುದಿನ ಎಂದರೆ ಫೆಬ್ರವರಿ 9 ರಂದು ಎರಡು ಇಂಪೀರಿಯಲ್ ಲೆಜೆಸ್ಲೇಚರ್‌ಗಳನ್ನು ಕೌನ್ಸಿಲ್ ಆಫ್ ಸ್ಟೇಟ್ ಮತ್ತು ಲೆಜೆಸ್ಲೇಟಿವ್ ಅಸೆಂಬ್ಲಿ ಸಂಯುಕ್ತ ಸಮಾವೇಶವನ್ನು ಉದ್ಘಾಟಿಸಿದನು. ವೈಸರಾಯಿಯ ಪ್ರಾಸ್ತಾವಿಕ ಭಾಷಣ ತೀರಾ ಸಪ್ಪೆಯಾಗಿತ್ತು. ಅವನು ಸುಧಾರಣೆಗಳ ವಿವಿಧ ಪಟ್ಟಿಗಳನ್ನು ವಿವರಿಸಿದನು. ಅದೇ ಅವಕಾಶವನ್ನು ಉಪಯೋಗಿಸಿಕೊಂಡು ಸುಧಾರಣೆಗಳನ್ನು ಮೊಟಕುಗೊಳಿಸಲಾಗಿದೆ ಎಂಬುದನ್ನು ಬಹಿರಂಗವಾಗಿ ನಿರಾಕರಿಸಿದನು.

ಆನಂತರ ಡ್ಯೂಕನು ಮೊದಲು ಚಕ್ರವರ್ತಿಯ ಸಂದೇಶವನ್ನು ಓದಿ ಆನಂತರ ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡಿದನು. ಬ್ರಿಟಿಷ್ ಆಡಳಿತ ಮತ್ತು ಸುಧಾರಣೆಗಳ ಪ್ರಾಮುಖ್ಯ ಇವನ್ನು ಕುರಿತು ಅದೇ ಸಾಮಾನ್ಯವಾದ ಹಳಸಲು ಮಾತುಗಳನ್ನಾಡಿ ಅನಂತರ "ಖಾಸಗೀ ಸ್ವರೂಪದ ಕೆಲವು ಮಾತುಗಳನ್ನು ಹೇಳಿ' ತನ್ನ ಭಾಷಣವನ್ನು ಮುಗಿಸಿದನು. "ಯಾರು ಸ್ನೇಹಿತರಾಗಿದ್ದರೋ, ಸ್ನೇಹಿತರಾಗಿಯೇ ಇರಬೇಕು; ಅಂತಹವರ ನಡುವೆ ಕಹಿ ಮತ್ತು ಅವಿಶ್ವಾಸಗಳು ಇರುವುದನ್ನು ನಾನು ಈ ದೇಶಕ್ಕೆ ಬಂದಾಗಿನಿಂದ ಗಮನಿಸುತ್ತಾ ಬಂದಿದ್ದೇನೆ. ಭಾರತದ ಸುಂದರವಾದ ಮುಖದ ಮೇಲೆ ಅಮೃತಸರದ ದೀರ್ಘ ಛಾಪೆ ಕವಿದಿದೆ. ನನಗಿಂತ ಹೆಚ್ಚು ತೀವ್ರವಾಗಿ ಆ ಘಟನೆಗಳನ್ನು ಯಾರೂ ಖಂಡಿಸಿದರು. ಸತ್ತ ಭೂತಕಾಲದೊಂದಿಗೆ ಈ ಪ್ರಮಾದಗಳನ್ನು ತಪ್ಪು ಗ್ರಹಿಕೆಗಳನ್ನು ಹೂತು, ಕ್ಷಮಿಸಬೇಕಾದ ಕಡೆ ಕ್ಷಮಿಸಿ, ಇಂದಿನಿಂದ ಮಾಡಿರುವ ಆಶೋತ್ತರಗಳನ್ನು ನೆರವೇರಿಸಲು ಬ್ರಿಟಿಷರು ಭಾರತೀಯರೂ ಇಬ್ಬರು ಜೊತೆಗೂಡಿ ಒಟ್ಟಾಗಿ ಶ್ರಮಿಸಬೇಕೆಂದು ನಿಮ್ಮೆಲ್ಲರಿಗೂ ಪ್ರಾರ್ಥಿಸಿಕೊಳ್ಳುತ್ತೇನೆ". ಹಿಂದೆ ನಡೆದದ್ದನ್ನು ಮರೆಯಬೇಕಾದ ವಿಷಯದಲ್ಲಿ ಬ್ರಿಟಿಷರನ್ನು ಭಾರತೀಯರನ್ನು ಒಂದೇ ಗುಂಪಿಗೆ ಸೇರಿಸಿದ್ದು ಬ್ರಿಟಿಷರು ಭಾರತೀಯರ ಮನಸ್ಸನ್ನು ಅರಿಯುವುದರಲ್ಲಿ ಎಷ್ಟರ ಮಟ್ಟಿಗೆ ಅಸಮರ್ಥರಾಗಿದ್ದರು ಎಂಬುದನ್ನು ತೋರಿಸುತ್ತದೆ. ಡ್ಯೂಕ್ ಯಾವುದನ್ನು ಕುರಿತು ಹೇಳುತ್ತಿದ್ದನೆಂದರೆ, ಚಕ್ರವರ್ತಿಗೂ ನೋವನ್ನುಂಟುಮಾಡಿದ್ದ "ಪಂಜಾಬಿನ ದಾರುಣ ಘಟನೆಗಳು".

ಬೊಂಬಾಯಿಯ ಕೌನ್ಸಿಲನ್ನು ಫೆಬ್ರವರಿ 23 ರಂದು ಉದ್ಘಾಟಿಸಿದ ಡ್ಯೂಕ್ 28 ರಂದು ಭಾರತವನ್ನು ಬಿಟ್ಟು ಹೊರಟನು. ದೆಹಲಿ ಮತ್ತು ಬೊಂಬಾಯಿಯಲ್ಲಿ ಎಂದಿನಂತೆ ಬಹಿಷ್ಕಾರ, ಪ್ರತಿಭಟನಾ ಸಭೆಗಳು ಮತ್ತು ಹರತಾಳಗಳು ನಡೆದವು. ದೆಹಲಿಯಲ್ಲಿ ಅರ್ಪಿಸಿದ ಪುರಸಭೆಯ ಮಾನಪತ್ರಕ್ಕೆ ಭಾರತೀಯ ಕಮೀಷನರ್‌ಗಳ ಒಪ್ಪಿಗೆ ಮುದ್ರೆ ದೊರಕಲಿಲ್ಲ. ಪುರಸಭೆಯ ಚುನಾಯಿತ ಸದಸ್ಯರಲ್ಲಿ ಹನ್ನೊಂದು ಜನ ಇದ್ದರು. ಅವರಲ್ಲಿ ಒಂಬತ್ತು ಜನ ಮತ್ತು ಸರ್ಕಾರದಿಂದ ನಾಮಕರಣಗೊಂಡಿದ್ದ ಕೆಲವು ಸದಸ್ಯರೂ ಸಭೆಯಲ್ಲಿ ಹಾಜರಿರಲಿಲ್ಲ. ಪೌರ ಮಾನ ಪತ್ರವನ್ನು ದೆಹಲಿಯ ನಾಗರಿಕರ ಪರವಾಗಿ ಅರ್ಪಿಸಿದವನು. ಅಲ್ಲಿಯ ಜಿಲ್ಲಾ ಮ್ಯಾಜಿಸ್ಟ್ರೇಟ್. ಆದರೆ ಕಾಂಗ್ರೆಸ್ ಆ ಸಂದರ್ಭದಲ್ಲಿ ನಡೆದಿದ್ದ ಮೋಸವನ್ನು ಒಂದು ಪ್ರಕಟಣೆಯ ಮೂಲಕ ಬಯಲಿಗೆ ತಂದು ತೋರಿಸಿತು.

ಗಾಂಧೀಜಿ ಡ್ಯೂಕನಿಗೆ ಒಂದು ಪತ್ರ ಬರೆದು ಹೀಗೆ ಹೇಳಿದರು. ಸಭ್ಯರಾದ ನಿಮ್ಮ ವಿರುದ್ಧ ನಮ್ಮಲ್ಲಿ ಯಾರೊಬ್ಬರೂ ಚಕಾರು ಎತ್ತುತ್ತಿಲ್ಲ. ವ್ಯಕ್ತಿಗತವಾಗಿ ಯಾವ ಇಂಗ್ಲೀಷ್ ಸಭ್ಯರ ವಿರುದ್ಧವಾಗಿಯೂ ನಾವು ಸಮರನಾರಿಲ್ಲ. ಇಂಗ್ಲೀಷ್ ಜೀವನ ಕ್ರಮವನ್ನು ನಾಶ ಮಾಡುವುದು ನಮ್ಮ ಉದ್ದೇಶವಲ್ಲ. ನಮ್ಮ ದೇಶದ ದೇಹ, ಮನಸ್ಸು, ಆತ್ಮಗಳನ್ನು ದುರ್ಬಲಗೊಳಿಸಿರುವ ವ್ಯವಸ್ಥೆಯೊಂದನ್ನು ನಾಶಮಾಡುವುದು ನಮ್ಮ ಉದ್ದೇಶ. ಪಂಜಾಬಿನಲ್ಲಿ ಓಡ್ವೈಯರ್ ಮತ್ತು ಡೈಯರ್‌ತನ ಸಾಧ್ಯವಾಗುವಂತೆ ಮಾಡಿದ ಮತ್ತು ನಮ್ಮ ದೇಶದ ಏಳು ಕೋಟಿ ಜನರ ಧರ್ಮದಿಂದ ಇಸ್ಲಾಂ ಅನ್ನು ಉದ್ದೇಶಪೂರ್ವಕವಾಗಿ ಅಪಮಾನಗೊಳಿಸಿದ ಇಂಗ್ಲೀಷ್ ಸ್ವಭಾವದ ವಿರುದ್ಧ ನಮ್ಮ ಸಮಸ್ತ ಶಕ್ತಿಯನ್ನು ಬಳಸಿ ಹೋರಾಡುತ್ತೇವೆ. ಕಾಗದದ ಕೊನೆಯಲ್ಲಿ ಗಾಂಧೀಜಿ ಇಂಗ್ಲೀಷನವನಾಗಿ ಅಸಹಾಯಕ ಚಳುವಳಿಯನ್ನು ಅಧ್ಯೆಯ್ಯ ಮಾಡಿ ಅದರ ದೃಷ್ಟಿಕೋನವನ್ನು ಮೆಚ್ಚುವಂತೆ ಡ್ಯೂಕನಿಗೆ ಕರೆ ಕೊಟ್ಟರು.

## 85.1 ಕಾರ್ಯ ರೂಪದಲ್ಲಿ ಸುಧಾರಣೆಗಳು

1919 ರ ಕಾಯಿದೆಯ ಪ್ರಕಾರ 1921 ರ ಜನವರಿ 3 ರಂದು ಜಾರಿಗೆ ಬಂದ ಸಂವಿಧಾನವು ಕೌನ್ಸಿಲ್ ಛೇಂಬರಿನ ಹೊರಗಿನಿಂದಲೂ ಒಳಗಿನಿಂದಲೂ ತನ್ನನ್ನು ನಾಶಗೊಳಿಸಲು ಅಸಹಕಾರ ಚಳುವಳಿಯು ನಡೆಸಿದ ಪ್ರಯತ್ನಗಳನ್ನು ಎದುರಿಸಿ ಉಳಿದ ಕೊಂಡಿತು. ಆದರೆ ತನ್ನಲ್ಲಿದ್ದ ಸತ್ವದಿಂದ ಭಾರತದಲ್ಲಿ ಜವಾಬ್ದಾರಿ ಸರ್ಕಾರವನ್ನು ಅಸ್ತಿತ್ವಕ್ಕೆ ತರಲು ನಿಜವಾದ ಒಂದು ಘಟ್ಟವಾಗಿದ್ದ ಆ ಸಂವಿಧಾನವು ತಾನು ಜಾರಿಗೆ ತರಬೇಕಾಗಿದ್ದ ಪರಿಸರದ ಕಾರ್ಯದಿಂದಾಗಿ ತನಗಿದ್ದ ಅಲ್ಪಸ್ವಲ್ಪ ಅವಕಾಶವನ್ನು ಕಳೆದುಕೊಂಡಿತು. ವಿಧಿಯ ಒಂದು ವಿಚಿತ್ರ ಅಂಕಣದಿಂದಾಗಿ ತನಗಿದ್ದ ಅಲ್ಪಸ್ವಲ್ಪ ಅವಕಾಶವನ್ನೂ ಕಳೆದುಕೊಂಡಿತು. ವಿಧಿಯ ಒಂದು ವಿಚಿತ್ರ ಅಧಿಕಾರದಿಂದಾಗಿ ಅದು ಹೆಚ್ಚು - ಕಡಿಮೆ ಸತ್ತ ಶಿಶುವಿಗೆ ಜನ್ಮ ಕೊಟ್ಟ ಸ್ಥಿತಿಯನ್ನು ಅನುಭವಿಸಿತು. ಸಿಪಾಯಿ ದಂಗೆಯ ಆನಂತರ ಅಷ್ಟು ಹೆಚ್ಚು ಜನರು ಯಾವಾಗಲೂ ಸರ್ಕಾರಕ್ಕೆ ಅಪ್ಪರ ಮಟ್ಟದ ವಿಶೇಷವನ್ನು ತೋರಿಸಿರಲಿಲ್ಲ ಎನ್ನುವ ಒಂದು ಕಾಲಮಾನದಲ್ಲಿ ಒಗ್ಗಟ್ಟಾಗಿ ತಮ್ಮ ವಿರೋಧವನ್ನು ಕಟುವಾಗಿ ವ್ಯಕ್ತ ಪಡಿಸಿದ್ದರೂ ಈ ದೌಲತ್ ಕಾಯಿದೆಯನ್ನು ಅನುಮೋದಿಸುವಲ್ಲಿ ಸರ್ಕಾರವು ಆಡಳಿತಕ್ಕಾಗಿ ಮನೋಭಾವವನ್ನು ಪಟ್ಟು ಹಿಡಿದು ಪ್ರಕಟಿಸಿತ್ತು. ಪಂಜಾಬಿನಲ್ಲಿ ತಾವು ಆಚರಿಸಿದ್ದ ಘೋರ ಅಪರಾಧಗಳ ಪ್ರಮಾಣವನ್ನು ತಾವೇ ಒಪ್ಪಿಕೊಂಡು, ತಪ್ಪಿತಸ್ಥರಿಗೆ ಬೇಕಾದಷ್ಟು ಶಿಕ್ಷೆಯನ್ನು ವಿಧಿಸಿದ್ದರೂ ಈಗಲಾ ಅಲ್ಲಿನ ಮಿಲಿಟರಿ ಆಡಳಿತವು ಇನ್ನೂ ಭೀಕರ ಕೃತ್ಯಗಳನ್ನು ನಡೆಸುತ್ತಲೇ ಇತ್ತು. ಮುಸ್ಲಿಮರಿಗೆ ತುರ್ಕಿಯ ವಿಷಯದಲ್ಲಿ ಕೊಟ್ಟಿದ್ದ ಭರವಸೆಯನ್ನು ಸರ್ಕಾರವು ಈಡೇರಿಸದೇ ಹೋಗಿತ್ತು. ಈ ಎಲ್ಲವೂ ಸೇರಿ ಮೇಲೆ ಹೇಳಿದಂತೆ ಮುಸ್ಲೀಮರೂ ಸೇರಿದಂತೆ ಬಹುಸಂಖ್ಯೆಯ ಭಾರತೀಯರಿಗೆ ಭ್ರಮನಿರಸನವಾಗಿತ್ತು. ಸ್ವರಾಜ್ಯ ದೊರೆಯುವುದರ ಹೊರತು ಯಾವ ಸುಧಾರಣೆಯಿಂದಲೂ ಯಾವುದೇ ಪ್ರಯೋಜನವೂ ಆಗುವುದಿಲ್ಲವೆಂದು ಮನವರಿಕೆಯಾಗಿದ್ದುದರಿಂದ ಜನರ ಸಂವಿಧಾನವನ್ನು ಆಚರಣೆಗೆ ತರಲು ಬಯಸಲೂ ಇಲ್ಲ. ಇತರರು ಅದನ್ನು ಆಚರಣೆಗೆ ತರಲು ಅವಕಾಶವನ್ನು ಕೊಡಲಿಲ್ಲ. ಸುಧಾರಣೆಗಳನ್ನು ಸ್ವಾಗತಿಸಿದವರೂ ಕೂಡ ಮೇಲೆ ಹೇಳಿದ ಅಪರಾಧಗಳ ಕಾರಣವಾಗಿ ಸರ್ಕಾರದ ವಿರೋಧಿಗಳಾದರು. ಭಾವನೆಗಳ ದೃಷ್ಟಿಯಿಂದ ನೋಡಿದರೆ ಹಿಂದೂ ಮುಸ್ಲಿಮರ ನಡುವೆ ಇದ್ದ ಭೇದ ಪ್ರಮಾಣದ್ದೇ ಹೊರತು ಗುಣದ್ದಲ್ಲ. ಈಗ ಲಿಬರಲ್ ಪಕ್ಷ ಎಂದು ನಾಮಕರಣ ಪಡೆದಿದ್ದ ಮಧ್ಯಗಾಮಿ ಪಕ್ಷದವರ ಬೆಂಬಲ ಪಡೆದು ಸುಧಾರಣೆಗಳನ್ನು ಜಾರಿಗೊಳಿಸಿದ ಒಂದು ವರ್ಷದ ಒಳಗಾಗಿಯೇ ನಡೆದ ಆ ಪಕ್ಷದ ವಾರ್ಷಿಕ ಸಭೆಯಲ್ಲಿ ಪಕ್ಷದವರ ಅತೃಪ್ತಿ ಸ್ಪಷ್ಟವಾಗಿ ಎದ್ದು ಕಂಡಿತು. ಅದನ್ನು ವ್ಯಕ್ತಪಡಿಸುವಾಗ ಎಚ್ಚರಿಕೆ ವಹಿಸಿ, ಮೃದುವಾದ ಭಾಷೆಯನ್ನು ಬಳಸಿದ್ದರೂ ಅಸಹಕಾರ ಚಳುವಳಿಗೆ ಕಾರಣವಾದ ಮನೋಭಾವವೇ ಅಲ್ಲೂ ಇದ್ದುದ್ದು ಸ್ಪಷ್ಟವಾಗಿತ್ತು. ಮಧ್ಯಗಾಮಿ ಪಕ್ಷವು ಸುಧಾರಣೆಗಳು ತೃಪ್ತಕರವಾಗಿಲ್ಲ ಎಂದು ಘೋಷಿಸಿದುದು ಮಾತ್ರವಲ್ಲದೆ ಪ್ರಾಂತಗಳಲ್ಲಿ ಸಂಪೂರ್ಣ ಸ್ವಾಯತ್ತತೆ ಬೇಕೆಂದು ಕೇಳಿತು. ದೇಶ ರಕ್ಷಣೆ ವಿದೇಶಾಂಗ ವ್ಯವಹಾರಗಳು, ಭಾರತದ ಪ್ರಾಂತಗಳ ಸಂಬಂಧ, ಧಾರ್ಮಿಕ ವಿಷಯಗಳು - ಇದನ್ನು ಹೊರತು ಪಡಿಸಿ ಉಳಿದೆಲ್ಲಾ ವಿಷಯಗಳ ಮೇಲೂ ಕೇಂದ್ರ ಸರ್ಕಾರದ ಮೇಲೆ ಜನತೆಯ ಹಿಡಿತ ಇದ್ದೇ ತೀರಬೇಕೆಂದು ಆ ಪಕ್ಷವು ಒತ್ತಾಯಿಸಿತು. ಪಂಜಾಬಿನಲ್ಲಿ ಮಿಲಿಟರಿ ಆಡಳಿತವಿದ್ದ ಅವಧಿಯಲ್ಲಿ ಕ್ರೌರ್ಯ ದಮನಗಳನ್ನು ತೋರಿಸಿ ಜನರನ್ನು ಅವಮಾನ ಪಡಿಸಿದ ಅಧಿಕಾರಿಗಳ ವಿರುದ್ಧ ಸರಿಯಾದ ಕ್ರಮವನ್ನು ಕೈಗೊಳ್ಳಬೇಕು. ಇಲ್ಲದೆ ಹೋದರೆ ಭಾರತೀಯರಿಗೆ ತೃಪ್ತಿಯಾಗುವುದಿಲ್ಲ ಎಂಬ ಜನಾಭಿಪ್ರಾಯವನ್ನು ಆ ಪಕ್ಷವು ಪುನರುಚ್ಚರಿಸಿತು. 1918 ರಲ್ಲಿ ಪ್ರಧಾನಿಯು ಮುಸಲ್ಮಾನರಿಗೆ ಕೊಟ್ಟ ಭಾಷೆಯನ್ನು ನಡೆಸದೇ ಹೋದುದಕ್ಕಾಗಿ ಪಕ್ಷವು ವಿಷಾದವನ್ನು ವ್ಯಕ್ತಪಡಿಸಿತು. ಚಕ್ರವರ್ತಿಯ ಸರ್ಕಾರವು ತುರ್ಕಿಯ ಜೊತೆ ಮಾಡಿಕೊಂಡಿದ್ದ ಒಪ್ಪಂದವನ್ನು ಸರಿಯಾದ ರೀತಿಯಲ್ಲಿ ಪುನರ್ವಿಮರ್ಶಿಸಬೇಕೆಂದು ಒತ್ತಾಯಿಸಿತು. ಸರ್ಕಾರವು ಅನುಸರಿಸುತ್ತಿದ್ದ ಧರ್ಮ ನೀತಿಯನ್ನು ಅದು ಉಗ್ರವಾಗಿ ಖಂಡಿಸಿತು. ವೈಸರಾಯ್ ಸಂಬಂಧಪಟ್ಟ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿ, ಹಾಗೆಂದು ವಿವರಣೆ ನೀಡಿದ್ದರೂ ಧರ್ಮ ನೀತಿಯು ಮುಂದುವರಿಯುತ್ತಿದ್ದುದರಿಂದ ಈ ನೀತಿಯನ್ನು ಪುನರ್ ಪರಿಶೀಲಿಸಬೇಕೆಂದು ಒತ್ತಾಯಿಪಡಿಸಲಾಯಿತು. ಇಂಥ ಭಾವನೆಗಳಿದ್ದ ಅಥವಾ ಇಂತ ಅನ್ಯಾಯಗಳನ್ನು ಮನಸ್ಸಿನಲ್ಲಿ ಬೆಳೆಸಿಕೊಂಡಿದ್ದ ಜನರ ಮತ್ತು ಅವುಗಳಲ್ಲಿ ಒಂದನ್ನಾದರೂ ಸರಿಪಡಿಸಲು ಇಚ್ಛೆಯಿಲ್ಲದಿದ್ದ ಅಥವಾ ಸರಿಪಡಿಸುವ ಶಕ್ತಿ ಇಲ್ಲದಿದ್ದ ಸರಕಾರದ ನಡುವೆ ಅತ್ಯುತ್ತಮ ಸನ್ನಿವೇಶಗಳಲ್ಲೂ ಸಾಮರಸ್ಯ ಮತ್ತು ಸಹಾನೂಭೂತಿ ಇರುವುದು ಹೇಗೆ ಸಾಧ್ಯ ? ಅದಿಲ್ಲದೆ ಜವಾಬ್ದಾರಿ ಸರ್ಕಾರದ ಪ್ರಯೋಗವು ಯಶಸ್ವಿಯಾಗುವ ಸಾಧ್ಯತೆಯಾದರೂ ಎಲ್ಲಿ ಉಳಿಯಿತು?

ಭಾರತದ ವಿಷಯದಲ್ಲಿ ಸಹಾನೂಭೂತಿ ತಾಳಿದ್ದ ಸೆಕ್ರೆಟರಿ ಆಫ್ ಸ್ಟೇಟ್ ಮಾಂಟೆಗ್ಯೂ 1922 ರ ಮಾರ್ಚ್ 9 ರಂದು ರಾಜೀನಾಮೆ ನೀಡಿದ್ದು, ಸುಧಾರಣೆಗಳನ್ನು ಜಾರಿಗೊಳಿಸುವ ಕಾರ್ಯಕ್ಕೆ ದೊಡ್ಡ ಹೊಡೆತ ಬಿದ್ದಂತಾಯಿತು. ಅದು ಒಂದು ವಿಚಿತ್ರವಾದ ರೀತಿಯಲ್ಲಿ ನಡೆಯಿತು. ಪ್ಯಾರಿಸ್‌ನಲ್ಲಿ ಗ್ರೀಕೋ-ಟರ್ಕಿಷ್ ಸಮ್ಮೇಳನ ನಡೆಯುವುದಕ್ಕೆ ಸ್ವಲ್ಪ ಮುಂಚೆ ಫೆಬ್ರವರಿ 28 ರಂದು ಪ್ರಾಂತ

ಸರ್ಕಾರಗಳ ಸಂಪೂರ್ಣ ಒಪ್ಪಿಗೆ ಪಡೆದು ಭಾರತ ಸರ್ಕಾರವು ಸೆಕ್ರೆಟರಿ ಆಫ್ ಸ್ಟೇಟ್‌ಗೆ ಒಂದು ಟೆಲಿಗ್ರಾಂ ಕಳುಹಿಸಿತು. ಅದರಲ್ಲಿ ಸೆವ್ರಸ್ ಒಪ್ಪಂದಕ್ಕೆ ಕೆಲವು ಬದಲಾವಣೆಗಳನ್ನು ಸೂಚಿಸಲಾಗಿತ್ತು. ಅವು ಕಾನ್‌ಸ್ಟಾಂಟಿನೋಪಲ್‌ನ್ನು ತೆರವು ಮಾಡಿಸುವುದು, ಮಂತ್ರಿ ಸ್ಥಳಗಳ ಮೇಲೆ ಸುಲ್ತಾನನ ಅಧಿಪತ್ಯವನ್ನು ಮುಂದುವರಿಸಿಕೊಂಡು ಹೋಗುವುದು, ಥ್ರೇಸ್ ಮತ್ತು ಸೈನ್ಯಗಳನ್ನು ಹಿಂದಕ್ಕೆ ಕೊಡಿಸುವುದು. ಭಾರತದಲ್ಲಿದ್ದ ಮುಸ್ಲಿಮರ ವಿಶ್ವಾಸವನ್ನು ಗಳಿಸಿಕೊಳ್ಳುವ ಉದ್ದೇಶದಿಂದ ಈ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ಪ್ರಕಟಪಡಿಸುವುದಕ್ಕೂ ಭಾರತ ಸರ್ಕಾರವು ಸೆಕ್ರೆಟರಿ ಆಫ್ ಸ್ಟೇಟ್‌ನ ಅಪ್ಪಣೆಯನ್ನು ಕೇಳಿತು. ಆ ಟೆಲಿಗ್ರಾಂ ಅನ್ನು ಮಾಂಟೆಗ್ಯೂ ಸಚಿವ ಸಂಪುಟದ ಇತರ ಸದಸ್ಯರ ಗಮನಕ್ಕೂ ತಂದನು. ಆದರೆ ಮಾರ್ಚ್ 4 ರಂದು ಭಾರತ ಸರ್ಕಾರವು ತನ್ನ ಅಭಿಪ್ರಾಯಗಳನ್ನು ಕೂಡಲೇ ಪ್ರಕಟಿಸಲು ಮತ್ತು ಅಪ್ಪಣೆ ಬೇಡಿದಾಗ ಮಾಂಡಿಗ್ಯೂ ಸಚಿವ ಸಂಪುಟದ ಅಭಿಪ್ರಾಯಕ್ಕೆ ಕಾಯಿದೆ ಅಪ್ಪಣೆ ಕೊಟ್ಟು ಬಿಟ್ಟ. ಅಭಿಪ್ರಾಯಗಳ ಪ್ರಕಟಣೆ ಸಚಿವ ಸಂಪುಟದಲ್ಲಿ ಚರ್ಚಿಸಬೇಕಾದ ವಿಷಯ ಅಲ್ಲ ಎಂದು ಆತ ಭಾವಿಸಿದ. ಪ್ರಧಾನಿ ಲಾರ್ಡ್ ಜಾರ್ಜ್‌ನಾದರೊ ಮಾಂಟೆಗ್ಯೂನ ಈ ವರ್ತನೆ ಕರ್ತವ್ಯ ಲೋಪ ಎಂದು ಭಾವಿಸಿದ. ಹೀಗಾಗಿ ಮಾಂಟೆಗ್ಯೂ ರಾಜೀನಾಮೆ ನೀಡದೆ ಬೇರೆ ದಾರಿ ಇರಲಿಲ್ಲ. ಟೆಲಿಗ್ರಾಂ ವಿಷಯ ತನ್ನನ್ನು ಮಂತ್ರಿ ಮಂಡಲದಿಂದ ಹೊರ ಹಾಕಲು ಕೇವಲ ಒಂದು ನೆಪ ಎಂದು ಆತ ಬಹಿರಂಗವಾಗಿ ಹೇಳಿಕೆ ನೀಡಿ ಅದಕ್ಕೆ ತಕ್ಕ ಪುರಾವೆಯನ್ನು ಒದಗಿಸಿದ. ಗಮನಿಸಬೇಕಾದ ಅಂಶವೆಂದರೆ ಹೌಸ್ ಆಫ್ ಕಾಮನ್ಸ್‌ನ ನಾಯಕನು ಮಾಂಡಿಗ್ಯೂನ ರಾಜೀನಾಮೆಯನ್ನು ಪ್ರಕಟಿಸಿದರೂ ಅದಕ್ಕಾಗಿ ವಿಷಾದ ವ್ಯಕ್ತಪಡಿಸಲಿಲ್ಲ ಎಂಬುದು. ಅಷ್ಟೇ ಅಲ್ಲ ಅವನ ರಾಜೀನಾಮೆಯ ಪ್ರಕಟಣೆಯನ್ನು "ಏಕತಾ ವಾದಿಗಳು ದೀರ್ಘಕಾಲ ಗಟ್ಟಿಯಾಗಿ ಚಪ್ಪಾಳೆ ತಟ್ಟಿ ಸ್ವಾಗತಿಸಿದರೆ, ಕಟ್ಟಾ ಸಂಪ್ರದಾಯವಾದಿಗಳು ಅಸಭ್ಯವಾದ ಹರ್ಷೋದ್ಗಾರಗಳಿಂದಲೂ ಕಿರುಚಾಟ ಶಿಳ್ಳೆ ಹೊಡೆಯುವುದು ಮುಂತಾದವುಗಳಿಂದಲೂ ಸ್ವಾಗತಿಸಿದರು". ಸಂಪ್ರದಾಯವಾದಿಗಳು ಮಾಂಡಿಗ್ಯೂವಿನ ಭಾರತ ನೀತಿಯನ್ನು ಒಪ್ಪದಿದ್ದುದರಿಂದ ಅವರನ್ನು ಸಂತುಷ್ಟಪಡಿಸಲು ಮಾಂಡಿಗ್ಯೂವನ್ನು ಬಲಿಗೊಡಲಾಯಿತು ಎಂಬುದು ಸಾಮಾನ್ಯ ಅಭಿಪ್ರಾಯವಾಗಿತ್ತು.

ವೈಯುಕ್ತಿಕ ಪ್ರಶ್ನೆಯನ್ನು ಬದಿಗಿರಿಸಿ ನೋಡಿದರೆ ಮುಖ್ಯವಾದ ಸಂವಿಧಾನಾತ್ಮಕವಾದ ಅಂಶವೂ ಒಂದಿತ್ತು. ಭಾರತ ಸರ್ಕಾರವು ಕಳುಹಿಸಿದ್ದ ಟೆಲಿಗ್ರಾಂನ್ನು ಕುರಿತದ್ದು ಅದು. "6000 ಮೈಲಿಗಳ ದುರದಲ್ಲಿದ್ದ ಬ್ರಿಟಿಷ್ ಸರ್ಕಾರದ ಅಧೀನ ಶಾಖೆಯೊಂದು ಸಮ್ಮೇಳನವೊಂದರಲ್ಲಿ ಬ್ರಿಟಿಷ್ ಸರ್ಕಾರವು ಅನುಸರಿಸಬೇಕಾದ ವಿದೇಶಾಂಗ ನೀತಿಯನ್ನು ಆದೇಶಿಸಬಹುದೆ ಎಂಬುದು". ಇದಕ್ಕೆ ಮಾಂಟೆಗ್ಯೂ ಕೊಟ್ಟ ಉತ್ತರ!"ಭಾರತವು ಲೀಗ್ ಆಫ್ ನೇಷನ್ಸ್‌ನ ಸದಸ್ಯ ರಾಷ್ಟ್ರ ಸೆವ್ರಸ್ ಒಪ್ಪಂದಕ್ಕೆ ಬ್ರಿಟನ್ ಸಹಿ ಹಾಕಿದ್ದು ಸ್ವತಂತ್ರವಾಗಿ, ಭಾರತದ ಪರವಾಗಿ ಮತ್ತು ತನ್ನ ಹಾಗೂ ಅಧಿರಾಜ್ಯಗಳ ಪರವಾಗಿ ಹೀಗಿರುವಾಗ ಇದೇ ಉದ್ದೇಶಕ್ಕಾಗಿ ಭಾರತಕ್ಕೆ ಅಧಿರಾಜ್ಯ ಸ್ಥಾನಮಾನವನ್ನು ನೀಡಿದ್ದು, ಅದು ಮೂಲ ಒಪ್ಪಂದಕ್ಕೆ ಸಹಿ ಹಾಕುವುದರಲ್ಲಿ ಭಾಗಿಯಾದ ರಾಷ್ಟ್ರವಾಗಿರುವುದರಿಂದ, ಆ ಒಪ್ಪಂದವನ್ನು ಮಾರ್ಪಾಡು ಮಾಡುವುದರಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅದಕ್ಕೆ ಅವಕಾಶ ನೀಡದಿರುವುದು ಅತ್ಯಂತ ದೊಡ್ಡ ದೋಷವಾಗುತ್ತದೆ. ಅದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶ ಮಾಡಿಕೊಟ್ಟ ಮೇಲೆ ಅದನ್ನು ಮುಚ್ಚಿಡುವುದರಿಂದ ಆಗುವ ಪ್ರಯೋಜನವೇನು?

ದ್ವೇಷ ಮನೋಭಾವದ ಸಾರ್ವಜನಿಕರು ಮತ್ತು ಸಹಾನುಭೂತಿ ಹಾಗೂ ಸಹೃದತೆಯಿಲ್ಲದ ಸರ್ಕಾರ ಇವುಗಳ ನಡುವೆ ಸಿಕ್ಕಿ ಹಾಕಿಕೊಂಡಿದ್ದ ಲಿಬರಲ್ ಪಕ್ಷದ ನಾಯಕರಿಗೆ ತಮ್ಮ ಪಾಲಿಗೆ ಬಂದ ಎಂದರೆ ಭಾರತದ ನೆಲದಲ್ಲಿ ಜವಾಬ್ದಾರಿ ಸರ್ಕಾರದ ಬೀಜವನ್ನು ಬಿತ್ತುವುದಾಗಲಿ, ಅದು ಮರವಾಗಿ ಬೆಳೆಯುವಂತೆ ಮಾಡುವುದಾಗಲಿ ಕಷ್ಟಸಾಧ್ಯವಾದ ಕೆಲಸ ಎಂದು ತೋರಿತು. ಅವರ ಕಷ್ಟವು ಇನ್ನು ಕಠಿಣತರವಾದದ್ದಕ್ಕೆ ಕಾರಣಗಳೆಂದರೆ ಭಾರತ ಸರ್ಕಾರದ ಆಡಳಿತ ವರ್ಗವು ವ್ಯಕ್ತವಾಗಿಯೇ ತೋರುತ್ತಿದ್ದ ದ್ವೇಷ ಮನೋಭಾವ ಮತ್ತು ಇಂಗ್ಲೆಂಡಿನಲ್ಲಿದ್ದ ಗೊಡ್ಡು ಸಂಪ್ರದಾಯವಾದಿಗಳು. ಮಾಂಟೆಗ್ಯೂ - ಚೇಮ್ಸ್‌ಫರ್ಡ್ ವರದಿಯು ಪ್ರಕಟವಾದ ಕೂಡಲೇ ಐ.ಸಿ.ಎಸ್. ಅಧಿಕಾರಿಗಳು ಬಹಿರಂಗವಾಗಿಯೇ ದಂಗೆ ಎದ್ದುದ್ದನ್ನು ಲಂಡನ್ನಿನ ಇಂಡೋ- ಬ್ರಿಟಿಷ್ ಅಸೋಸಿಯೇಷನ್ ನಡೆಸಿದ ಅಪ ಪ್ರಚಾರವನ್ನು, ಪರಿಣಾಮವಾಗಿ ಸುಧಾರಣೆಗಳನ್ನು ಮೊಟಕು ಗೊಳಿಸಿದುದನ್ನು ಈ ಹಿಂದೆಯೇ ಪ್ರಸ್ತಾಪಿಸಲಾಗಿದೆ. ಸ್ವಂತ ಹಿರಿಯ ಐ.ಸಿ.ಎಸ್. ಅಧಿಕಾರಿಗಳಾಗಿದ್ದ ಲೆಫ್ಟಿನೆಂಟ್ ಗವರ್ನರ್‌ಗಳು ಒಪ್ಪಿಸಿದ ಕಾರ್ಯ ಯೋಜನೆಗಳು ಅವರಿಗೆ ಈ ದೇಶದ ಜನರ ವಿಷಯದಲ್ಲಿ ಎಂತಹ ದ್ವೇಷದ ಮನೋಭಾವ ಇತ್ತು ಎಂಬುದನ್ನು ಎತ್ತಿ ತೋರಿಸುವಂತವಾಗಿದ್ದವು. ಏಕೆಂದರೆ ಅವು ಎಂತಹ ರಿಯಾಯಿತಿಗಳನ್ನು ತೋರಿಸ ಬಯಸುತ್ತಿದ್ದವು ಎಂದರೆ ಐ.ಸಿ.ಎಸ್. ಅಧಿಕಾರಿಗಳಿಗೆ ಹೊಣೆಯೇ ಇಲ್ಲದ ಅಧಿಕಾರಿಗಳನ್ನು ಉಳಿಸುವಂತವಾಗಿದ್ದವು. 1919 ರ ಮಾರ್ಚ್ 5 ರಂದು ಸುಧಾರಣೆ ಇನ್ನು ಕುರಿತಂತೆ ಭಾರತ ಸರ್ಕಾರವು ಹೊರಡಿಸಿದ ಮೊದಲ

ಸರ್ಕಾರಿ ಪತ್ರದಲ್ಲಿ ಮೇಲೆ ಹೇಳಿದ ರಿಯಾಯಿತಿಗಳ ಪ್ರಭಾವ ಸ್ಪಷ್ಟವಾಗಿದೆ. ಭಾರತ ಸರ್ಕಾರದ ಕಾಯಿದೆಗೆ ಅನುಗುಣವಾಗಿ ರೂಪಿಸಿದ ನಿಯಮಗಳಲ್ಲಿ ಐ.ಸಿ.ಎಸ್. ವರ್ಗದ ಪ್ರತಿಭಟನೆಯ ಪರಿಣಾಮವನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಅದನ್ನು ಕುರಿತು ಮುಂದೆ ಪ್ರಸ್ತಾಪಿಸಲಾಗುವುದು. ಸುಧಾರಣೆಗಳನ್ನು ಜಾರಿಗೆ ತಂದದ್ದರಿಂದಲೇ ಚಳುವಳಿ ನಿಲ್ಲಲಿಲ್ಲ. ಭಾರತದಲ್ಲಿ ಗವರ್ನರ್ ಆಗಿ ನಿವೃತ್ತನಾಗಿದ್ದವನೊಬ್ಬ ಇಂಗ್ಲೆಂಡಿನಲ್ಲಿ "ಐ.ಸಿ.ಎಸ್. ಅಪಾಯದಲ್ಲಿದೆ" ಎಂದು ಕೂಗೆಬ್ಬಿಸಿದ. ಈ ಎಚ್ಚರಿಕೆಯ ಗಂಟೆಯನ್ನು ಬಾರಿಸಿದ್ದರ ಪರಿಹಾರವಾಗಿ 1921 ರಲ್ಲಿ ಐ.ಸಿ.ಎಸ್. ಪರೀಕ್ಷೆ ತೆಗೆದುಕೊಂಡ 86 ಜನರಲ್ಲಿ ಕೇವಲ 26 ಜನ ಯೂರೋಪಿಯನ್ ಅಭ್ಯರ್ಥಿಗಳಿದ್ದರು. ಅವರಲ್ಲಿ ತೇರ್ಗಡೆ ಹೊಂದಿದವರು 16 ಜನ. ಅವರಲ್ಲಿ 3 ಜನ ಮಾತ್ರ ಬ್ರಿಟಿಷರು. ಅದರಲ್ಲೂ ಒಬ್ಬ ಕೆಲಸಕ್ಕೆ ಸೇರಿದ ಕೂಡಲೆ ನಿವೃತ್ತಿ ಪಡೆದುಕೊಂಡ. " ಭಾರತವು ಕೈತಪ್ಪಿದ ಅಧಿರಾಜ್ಯ" ಎಂಬುದಾಗಿ ಭಾರತದ ಶತ್ರುಗಳು ಶ್ರಮವಹಿಸಿ ಪ್ರಚಾರ ಮಾಡುತ್ತಿದ್ದರು. ಸಾಮಾನ್ಯ ಇಂಗ್ಲೀಷರು ಆ ಪ್ರಚಾರಕ್ಕೆ ಕೂಡಲೇ ಕಿವಿಗೊಡುತ್ತಿದ್ದರು. ಏಕೆಂದರೆ ಅಸಹಕಾರ ಚಳುವಳಿಯಿಂದ ಭಾರತದ ವಿಷಯದಲ್ಲಿ ಅದರ ನಿಲುವು ಕಠಿಣವಾಗಿ ಹೋಗಿತ್ತು. ಬ್ರಿಟಿಷ್ ಸರ್ಕಾರವು ಭಾರತದಲ್ಲಿ ಆಡಳಿತ ನಡೆಸುತ್ತಿದ್ದ ಅಧಿಕಾರ ವರ್ಗದವರಿಗೆ ಭರವಸೆಯನ್ನು ತುಂಬುವುದು ಅವಶ್ಯಕ ಎಂದು ಭಾವಿಸಿತು. ಆ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಸಂಭವಿಸಿದ್ದ ತೊಂದರೆಯೊಂದನ್ನು ನಿವಾರಿಸುವ ಉದ್ದೇಶದಿಂದ ಪ್ರಧಾನಿ ಲಾರ್ಡ್ ಜಾರ್ಜ್ ಪಾರ್ಲಿಮೆಂಟಿನಲ್ಲಿ 1922 ರ ಆಗಸ್ಟ್ 22 ರಂದು ಒಂದು ದುರದೃಷ್ಟಕರವಾದ ಭಾಷಣವನ್ನು ಮಾಡಿದ. ಅದು ಗಂಭೀರವಾದ ರಾಜಕೀಯ ಪರಿಣಾಮಕ್ಕೆ ಕಾರಣವಾಗುತ್ತದೆ ಎಂಬುದು ಅವನ ಭಾಷಣವನ್ನು ತಯಾರಿಸಿದವರಿಗೆ ಆಗ ತಿಳಿಯದೆ ಹೋಯಿತು. ಭಾರತೀಯರು ಸುಧಾರಣೆಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿರುವುದಕ್ಕೆ ಅವರಿಗೆ ಅಭಿನಂದನೆ ಸಲ್ಲಿಸಿ ಲಾಯ್ಡ್ ಹೇಳಿದ: ಪಾರ್ಲಿಮೆಂಟ್ ಸದಸ್ಯರಾಗಿಯಾಗಲಿ, ಆಡಳಿತಾಧಿಕಾರಿಗಳಾಗಿ ಆಗಲಿ ಅವರು (ಭಾರತೀಯರೂ) ಏನೇ ಯಶಸ್ಸನ್ನು ಗಳಿಸಿದ್ದರೂ ಅವರು ಬ್ರಿಟಿಷ್ ಸಿವಿಲ್ ಸರ್ವೀಸ್ ಗುಂಪಿನ ಮಾರ್ಗದರ್ಶನ ಮತ್ತು ನೆರವುಗಳಲ್ಲದೆ ಕೆಲಸ ಮಾಡಬಲ್ಲ ಯಾವುದೇ ಕಾಲವೂ ಇರುವುದಿಲ್ಲವೆಂದೇ ನನ್ನ ಭಾವನೆ. ಇಡೀ ಕಟ್ಟಡದ ಉಕ್ಕಿನ ಆಧಾರ ವೆಂದರೆ ಬ್ರಿಟಿಷ್ ಸಿವಿಲ್ ಸರ್ವೀಸ್. ಅದರ ಅಸ್ತಿಭಾರದ ಮೇಲೆ ನೀವು ಏನನ್ನು ಕಟ್ಟುತ್ತೀರೋ ಅದು ನನಗೆ ಮುಖ್ಯವಲ್ಲ. ಆ ಉಕ್ಕಿನ ಅಸ್ತಿಭಾರವನ್ನು ತೆಗೆದು ಹಾಕಿದರೆ ಇಡೀ ಕಟ್ಟಡ ಕುಸಿದು ಬಿಳುತ್ತದೆ". ಈ ತನ್ನ ಹೇಳಿಕೆಯು ತಾರ್ಕಿಕವಾಗಿ ಮುಂದೆ ಎಲ್ಲಿಗೆ ಒಯ್ಯುತ್ತದೆ ಎಂಬ ವಿಷಯದಲ್ಲಿ ಲಾಯ್ಡ್ ಜಾರ್ಜನು ಜನರನ್ನು ಸಂದೇಹದಲ್ಲಿ ಬಿಡಲಿಲ್ಲ ಆತ ಹೇಳಿದ : ಒಂದು ವ್ಯವಸ್ಥೆಯುಂಟು, ಅದರ ವ್ಯವಹಾರದಲ್ಲಿ ನಾವು ತಲೆಹಾಕುವುದಿಲ್ಲ ; ಅದರ ಕರ್ತವ್ಯಗಳನ್ನಾಗಲಿ, ಹಕ್ಕುಗಳನ್ನಾಗಲಿ ನಾವು ಮೊಟಕುಗೊಳಿಸುವುದಿಲ್ಲ; ಆ ವ್ಯವಸ್ಥೆ ಭಾರತದ ಬ್ರಿಟಿಷ್ ಸಿವಿಲ್ ಸರ್ವೀಸ್. "ಮುಂದಿನ ವಾಕ್ಯದಲ್ಲಿ ಅವನು ತನ್ನ ಅಭಿಪ್ರಾಯವನ್ನು ಇನ್ನೂ ನಿಚ್ಚಳವಾಗಿ ಸ್ಪಷ್ಟಗೊಳಿಸಿದ. ಬ್ರಿಟನ್ ಯಾವುದೇ ಸಂದರ್ಭದಲ್ಲೂ ಭಾರತದ ವಿಷಯದಲ್ಲಿ ತನಗಿರುವ ಜವಾಬ್ದಾರಿಯನ್ನು ಬಿಟ್ಟುಕೊಡುವುದಿಲ್ಲ". ಇದು ತನ್ನ ಸರ್ಕಾರದ ಮೂಲ ತತ್ತ್ವ ಮಾತ್ರವಲ್ಲ, ಮುಂಬರುವ ಸರ್ಕಾರಗಳ ಮೂಲ ತತ್ತ್ವವೂ ಹೌದು ಎಂಬುದಾಗಿ ತಾನು ನಂಬಿರುವುದಾಗಿ ಘೋಷಿಸಿದೆ.

ಜವಾಬ್ದಾರಿ ಸರ್ಕಾರ ಎಂದರೆ ಜನರು ಚುನಾಯಿಸಿದ ಶಾಸಕಾಂಗಕ್ಕೆ ಕಾರ್ಯಾಂಗವೂ ಜವಾಬ್ದಾರವಾಗಿರುವುದು ಎಂದು ಇದು ಸಾಮಾನ್ಯವಾಗಿ ಎಲ್ಲರೂ ಒಪ್ಪಿರುವ ಅರ್ಥ. ಆದರೆ ಬ್ರಿಟಿಷ್ ಸರ್ಕಾರವು ಭಾರತದ ರಾಜಕೀಯ ವಿಕಾಸದ ಗುರಿ ಎಂದು ಸಾರಿದ ನಾಮಕಾವಾಸ್ತೆಯ ಆದರ್ಶವು, ಎಲ್ಲರೂ ಒಪ್ಪಿದ್ದ ಅದರ ಅರ್ಥಕ್ಕಿಂತ ಬೇರೆಯದೇ ಆದದ್ದು ಎಂಬುದು ಲಾಯ್ಡ್‌ನ ಭಾಷಣದಿಂದ ಸ್ಪಷ್ಟವಾಯಿತು. ಏಕೆಂದರೆ ಐ.ಸಿ.ಎಸ್. ವರ್ಗಕ್ಕಿದ್ದ ಕರ್ತವ್ಯಗಳಿಗೂ ಹಕ್ಕುಗಳಿಗೂ ನಿಜವಾದ ಜವಾಬ್ದಾರಿ ಸರ್ಕಾರಕ್ಕೂ ಯಾವ ಹೊಂದಾಣಿಕೆಯೂ ಇರುವುದು ಸಾಧ್ಯವೇ ಇರಲಿಲ್ಲ. ಒಂದು ಜವಾಬ್ದಾರಿ ಸರ್ಕಾರದಲ್ಲಿ, "ಸ್ವರ್ಗ- ಜನ್ಯ" ಅಥವಾ ಆಕಾಶದಿಂದ ಉದುರಿದ ಅಧಿಕಾರ ವರ್ಗವು ಜನರ "ಸೇವಕ" ರಾಗಿರಬೇಕೇ ಹೊರತು ಅವರು ಅದುವರೆಗೆ ಇದ್ದಂತೆ 'ಒರಟು ಒಡೆಯ' ರಾಗಿರುವಂತೆ ಅಲ್ಲ. 1919 ರ ಭಾರತ ಸರ್ಕಾರದ ಕಾಯಿದೆಯಲ್ಲಿ ಘೋಷಿತವಾದ ನೀತಿಯಲ್ಲಿ ವೃಥಾ ನಂಬಿಕೆಯಿಟ್ಟು ಭಾರತೀಯರು ಆಶಾಭಾವನೆಯನ್ನು ತಾಳದಿರಲು ಎಂದು ಲಾಯ್ಡ್ ಜಾರ್ಜನು ಅದರ ನಿಜವಾದ ಸ್ವರೂಪದ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದನು. ಆ ಕಾಯಿದೆಯ ಪ್ರಕಾರ ಆಗಲಿರುವ ಬದಲಾವಣೆಗಳನ್ನು ಕುರಿತು ಅವನು ಹೀಗೆ ಹೇಳಿದನು; ಆ ಬದಲಾವಣೆಗಳು ಪ್ರಯೋಗದ ಸ್ವರೂಪದವು. ಅವನ್ನು ಪ್ರಯೋಗವೆಂದೇ ಪರಿಗಣಿಸತಕ್ಕದ್ದು. ಅದೊಂದು ದೊಡ್ಡ ಮುಖ್ಯವಾದ ಪ್ರಯೋಗ. ಆದರೂ ಅದು ಪ್ರಯೋಗ ಮಾತ್ರವೇ". ಅವನು ಇನ್ನೂ ಒಂದು ಅಂಶವನ್ನು ನಿಚ್ಚಳಗೊಳಿಸಿದ. ಅಸಹಕಾರಿಗಳು ಮುಂದಿನ ಕೌನ್ಸಿಲಿಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿತರಾದರೆ "ಅದು ಅತ್ಯಂತ ಗಂಭೀರವಾದ ಪರಿಸ್ಥಿತಿಯನ್ನು ಉಂಟು ಮಾಡುತ್ತದೆ, ಆಗ ಅದನ್ನು

ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ". ಪ್ರಧಾನಿಯ ಈ ಭಾಷಣವು 1917 ರ ನೀತಿಯನ್ನು ರದ್ದುಗೊಳಿಸುವ ಬಹಿರಂಗವೋ ಮುಚ್ಚುಮರೆ ಇಲ್ಲದ್ದೂ ಆದ ಪ್ರಯತ್ನವೆಂದೂ, 1919 ರ ಸುಧಾರಣೆಗಳು ಕೇವಲ ಠಕ್ಕೆ ಹೊರತು ಸತ್ಯವಲ್ಲವೆಂದೂ ಭಾರತೀಯರು ಅರ್ಥ ಮಾಡಿಕೊಂಡಿದ್ದರೆ ಅದಕ್ಕಾಗಿ ಅವರನ್ನು ದೂಷಿಸಲು ಸಾಧ್ಯವಿಲ್ಲ. ಪ್ರಧಾನಿಯ ಭಾಷಣವು ಅಸಹಕಾರಿಗಳ ಕೈಯನ್ನು ಬಲಪಡಿಸಿತು. ಅತ್ತ ಮದ್ಯಗಾಮಿಗಳ ಪಾಳೆಯದಲ್ಲಿ ಅದು ಭಾರೀ ಗೊಂದಲವನ್ನುಂಟುಮಾಡಿತು.

ನ್ಯಾಯಪರರೂ, ವಿಶಾಲ ಮನೋಭಾವದ ಇಂಗ್ಲೀಷರೂ ಲಾಯ್ಡ್ ಜಾರ್ಜ್‌ನ ಭಾಷಣವನ್ನು ಖಂಡಿಸಿದರು. ಹೌಸ್ ಆಫ್ ಕಾಮನ್ಸ್‌ನಲ್ಲಿ ಜಾರ್ಜ್‌ನ ಆನಂತರ ಮಾತನಾಡಿದ ಕರ್ನಲ್ ವೆಡ್ಜ್‌ವುಡ್ ಹೀಗೆಂದ: "ಯಾವ ದುಷ್ಟಶಕ್ತಿ ಇಂಥದೊಂದು ಭಾಷಣವನ್ನು ನಮ್ಮ ಪ್ರಧಾನಿ ಮಾಡುವಂತೆ ಪ್ರೇರೇಪಿಸಿತು, ಎಂಬುದು ನನಗೆ ಅರ್ಥವಾಗುತ್ತಿಲ್ಲ" ಮುಂದುವರಿದು ವೆಡ್ಜ್‌ವುಡ್ ಹೇಳಿದ. "ಭಾರತಕ್ಕೆ ಸಂಬಂಧಿಸಿದಂತೆ ಇದೊಂದು ಹೊಸ ಘೋಷಣೆ. ಇದನ್ನು 1917 ರ ಆಗಸ್ಟ್ ಘೋಷಣೆಯೊಂದಿಗೆ ಹೊಂದಾಣಿಕೆಗೊಳಿಸುವುದು ಪ್ರಧಾನಿಗೆ ಕಷ್ಟವಾಗಿದೆ. 1917 ರ ಪ್ರಖ್ಯಾತ ಆಗಸ್ಟ್ ಘೋಷಣೆಯನ್ನು ಪೂರ್ಣವಾಗಿ ಗ್ರಹಣಗೊಳಿಸದಿದ್ದರೂ ಪ್ರಧಾನಿಯು ಅದನ್ನು ಮಸುಕುಗೊಳಿಸಿ ಭಾರತದಲ್ಲಿ ಭಾರತದಲ್ಲಿ ದ್ವಿಪ್ರಭುತ್ವ ಸುಧಾರಣೆಯನ್ನು ಹಿಂತೆಗುದುಕೊಳ್ಳುವ ಹೆದರಿಕೆಯನ್ನು ಹುಟ್ಟು ಹಾಕಿದ್ದಾರೆ".

ಭಾರತದಲ್ಲಿ 1922 ರ ಸೆಪ್ಟೆಂಬರ್ 7 ರಂದು ಸೇತ್ನಾ ಅವರು "ಭಯ ಮತ್ತು ನಿರಾಶೆಗಳ ತೀವ್ರಭಾವನೆಯನ್ನು ವ್ಯಕ್ತಪಡಿಸುವ ಠರಾವೊಂದನ್ನು ಮಂಡಿಸಿದರು. ಆದರೆ ಅದು ಬಿದ್ದು ಹೋಯಿತು. ಮರುದಿನ ಅಗ್ನಿಹೋತ್ರಿಯವರು ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಅಂತದೇ ಠರಾವನ್ನು ಮಂಡಿಸಿ ಬ್ರಿಟಿಷ್ ಸರ್ಕಾರವು 'ಲಾಯ್ಡ್ ಜಾರ್ಜ್ ಮಾಡಿದ ಭಾಷಣವನ್ನು ತಿರಸ್ಕರಿಬೇಕೆಂದು" ಕೋರಿದರು. ಠರಾವು, ತಿದ್ದುಪಡಿ ಪಡೆದ ರೂಪದಲ್ಲಿ 48 ಮತಗಳನ್ನು ಪರವಾಗಿಯೂ 34 ಮತಗಳನ್ನು ವಿರೋಧವಾಗಿಯೂ ಪಡೆದು, ಸರ್ಕಾರದ ತೀವ್ರ ವಿರೋಧದ ನಡುವೆ ಅಂಗೀಕಾರವಾಯಿತು.

ಲಾಯ್ಡ್ ಜಾರ್ಜ್‌ನ ಭಾಷಣ ಕೇವಲ ವ್ಯಕ್ತಿಗತವಾದ ಆಸ್ಫೋಟವಲ್ಲ. ಅದು ಐ.ಸಿ.ಎಸ್. ವರ್ಗದವರ ಪರವಾಗಿ ನಡೆದ ಪಿತೂರಿ. ಅದರ ಪರಿಣಾಮವು ಬಹುಶಃ ನಿರೀಕ್ಷಿಸಿದುದಕ್ಕಿಂತಲೂ ಘೋರತರವಾಗಿತ್ತು. ಅದನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ಹಿಂದಕ್ಕೆ ಹೋಗ ಬೇಕಾದ ಅವಶ್ಯಕತೆಯುಂಟು. 1922 ರ 30 ರಂದು ಭಾರತ ಸರ್ಕಾರದ ಸೆಕ್ರೆಟರಿ ಎಸ್.ಡಿ. ಓಡೊನೆಲ್ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಸೇತ್ನಾ ಅವರು ಮಂಡಿಸಿದ ಸರ್ಕಾರವು ಒಪ್ಪಿಕೊಂಡಿರುವ ಈ ಕೆಳಗಿನ ಠರಾವಿನ ವಿಷಯದಲ್ಲಿ ಅಭಿಪ್ರಾಯ ಕೋರಿ ಎಲ್ಲ ಪ್ರಾಂತ ಸರ್ಕಾರಗಳಿಗೂ ಪತ್ರ ಬರೆದರು.

"ಅಖಿಲ ಭಾರತ ಸೇವಾ ಹುದ್ದೆಗಳಿಗೆ ಹೆಚ್ಚು ಜನ ಭಾರತೀಯರನ್ನು ನಿಯಮಿಸಿಕೊಳ್ಳುವ ದಿಕ್ಕಿನಲ್ಲಿಯೂ ಈಗ ಇರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರಿಗೆ ತಾಂತ್ರಿಕ ಹುದ್ದೆಗಳಲ್ಲಿ ಅವಕಾಶ ಕಲ್ಪಿಸಿಕೊಡುವಂತೆ ಶಿಕ್ಷಣ ನೀಡುವ ದಿಕ್ಕಿನಲ್ಲಿಯೂ 1917 ರ ಆಗಸ್ಟ್ 20 ರ ಘೋಷಣೆಯನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಚಾಲ್ತಿಗೆ ತರಲು, ಇನ್ನೂ ಹೆಚ್ಚು ಕಾಲ ವಿಳಂಬ ಮಾಡದೆ ಸಾಧ್ಯವಾದ ಕ್ರಮಗಳನ್ನು ಕೈಗೊಳ್ಳುವಂತೆ ಪ್ರಯತ್ನಿಸುವ ಸಾಧ್ಯತೆಗಳನ್ನು ಪರಿಶೀಲಿಸುವಂತೆ ಅಸೆಂಬ್ಲಿಯ ಗವರ್ನರ್ ಜನರಲ್ ಇನ್ ಕೌನ್ಸಿಲ್‌ಗೆ ಶಿಫಾರಸ್ಸು ಮಾಡುತ್ತದೆ".

ಸೇವಾ ಹುದ್ದೆಗಳನ್ನು ಭಾರತೀಕರಣ ಮಾಡುವುದರ ಪರ ಮತ್ತು ವಿರುದ್ಧದ ವಾದಗಳನ್ನು ಸಂಕ್ಷೇಪವಾಗಿ ನಿರೂಪಿಸಲಾಗಿತ್ತು. ಆ ಸಮಸ್ಯೆಗಿದ್ದ ಕೆಲವು ಪರಿಹಾರಗಳನ್ನು ಆ ಪತ್ರದಲ್ಲಿ ಸೂಚಿಸಲಾಗಿತ್ತು ಎಂಬುದು ಪತ್ರದ ಮುಂದಿನ ಈ ಭಾಗದಿಂದ ಗೊತ್ತಾಗುತ್ತದೆ; ಯೂರೋಪಿಯನ್ನರನ್ನು ನೇಮಕ ಮಾಡಿಕೊಳ್ಳುವುದನ್ನು ಪೂರ್ಣವಾಗಿ ನಿಲ್ಲಿಸಿಬಿಟ್ಟರೆ; ಅಥವಾ ಹಾಗೆ ನೇಮಕ ಮಾಡಿಕೊಳ್ಳುವವರ ಸಂಖ್ಯೆಯಲ್ಲಿ ಗಣನೀಯವಾಗಿ ಕಡಿಮೆ ಮಾಡಿದರೆ, ಆ ಹುದ್ದೆಗಳನ್ನು ಪ್ರಾಂತೀಕರಣ ಮಾಡಿಕೊಳ್ಳುವುದು ಅನಿವಾರ್ಯವಾಗಿ, ಭಾರತೀಯರನ್ನೇ ಅವುಗಳಿಗೆ ನೇಮಿಸಿಕೊಳ್ಳಬೇಕಾಗುತ್ತದೆ ಎಂದು ಭಾರತ ಸರ್ಕಾರವು ಭಾವಿಸುತ್ತದೆ. ಒಂದು ವೇಳೆ ಪ್ರಾಂತೀಕರಣ ಮಾಡುವುದೆಂದೇ ತೀರ್ಮಾನಿಸುವುದಾದರೆ ಈ ಹುದ್ದೆಗಳನ್ನು ಭರ್ತಿ ಮಾಡುವಾಗ ಅನುಸರಿಸಬೇಕಾದ ವಿಧಿ ವಿಧಾನಗಳನ್ನು ನಿರ್ಧರಿಸಬೇಕಾಗಿದೆ. ಎರಡು ಸಾಧ್ಯತೆಗಳಿರುವಂತೆ ತೋರುತ್ತದೆ:

(1) ಈಗ ಇರುವ ಸೇವಾ ವರ್ಗಗಳಲ್ಲೆ ನೇಮಕಗಳನ್ನು ವಿಲೀನಗೊಳಿಸುವುದು, ಅಥವಾ

(2) ಸಾಕಷ್ಟು ಸಂಖ್ಯೆಯಲ್ಲಿ ಹುದ್ದೆಗಳು ಖಾಲಿಯಾದಾಗ ಈ ಸೇವಾ ವರ್ಗಗಳ ಪ್ರತ್ಯೇಕ (ಉನ್ನತ) ವಿಭಾಗಗಳನ್ನು ಸೃಷ್ಟಿಸುವುದು.

ಒಟ್ಟಿನಲ್ಲಿ ಭಾರತ ಸರ್ಕಾರದ ಅಭಿಪ್ರಾಯವು ಎರಡು ವರ್ಗಗಳನ್ನು ಸೃಷ್ಟಿಸುವ ಯೋಜನೆಯ ಪರವಾಗಿದೆ. ಆದರೆ ಸ್ಥಳೀಯ ಸರ್ಕಾರಗಳ ಅಭಿಪ್ರಾಯಗಳಿಗೆ ವಿಶೇಷ ಬೆಲೆಯಿರುವ ಈ ವಿಷಯದಲ್ಲಿ ಯಾವ ಪೂರ್ವ ಕಲ್ಪನೆಗಳನ್ನೂ ಸೂಚಿಸುವ ಇಚ್ಛೆ ಸರ್ಕಾರಕ್ಕೆ ಇಲ್ಲ".

ಈ ಪತ್ರಕ್ಕೆ ಬಂದ ಪ್ರತಿಕ್ರಿಯೆ ಕ್ಷಿಪ್ರವೂ, ಅದ್ಭುತವೂ ಆದದ್ದಾಗಿತ್ತು. "ಮಾರ್ನಿಂಗ್ ಪೋಸ್ಟ್" ಪತ್ರಿಕೆಯು ಲಾರ್ಡ್ ರೀಡಿಂಗ್‌ನನ್ನೇ ತಕ್ಷಣವೇ ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಒತ್ತಾಯ ಮಾಡಿತು. ಇದು ಐ.ಸಿ.ಎಸ್. ವರ್ಗದ ಪರವಾಗಿ ಸಂಪ್ರದಾಯವಾದಿಗಳು ಚಳುವಳಿಯನ್ನು ನಡೆಸಲು ಉಗ್ರವಾಗಿ ಪ್ರೇರೇಪಿಸಿತು. ಮಾಂಟಿಗ್ಯೂವಿನ ಸ್ಥಾನಕ್ಕೆ ಬಂದಿದ್ದ ಭಾರತ ಸೆಕ್ರೆಟರಿ ಆಫ್ ಸ್ಟೇಟ್ ವೈಕಾಂಟ್ ಪೀಲ್‌ನಿಗೆ ಭಾರತದ ಐ.ಸಿ. ಎಸ್. ಸಂಘಗಳು ಉದ್ದೇಶದಿಂದ ಕೂಡಿದ ಮನವಿಗಳನ್ನು ಸಲ್ಲಿಸಿದುವು; ಪಾರ್ಲಿಮೆಂಟಿನಲ್ಲಿ ಸಮಾಧಾನವನ್ನು ಕೋರಿ ಅನೇಕ ಅಡ್ಡ ಪ್ರಶ್ನೆಗಳನ್ನು ಹಾಕಲಾಯಿತು. ಲಾರ್ಡ್ ಸೆಂಟ್ ಹ್ಯಾಮ್ ಐ.ಸಿ.ಎಸ್. ವ್ಯವಸ್ಥೆಯ ಕುರಿತು ಭಾರತದಲ್ಲಿ ಅಸಹಕಾರ ಚಳುವಳಿಗಿಂತ ಕಡಿಮೆ ಗಂಭೀರವಾದದ್ದಲ್ಲ" ಎಂದು ಘೋಷಿಸಿದ. ಲಾರ್ಡ್ ಪೀಲ್ ಸಹಾನುಭೂತಿಯಿಂದ ಕೂಡಿದ ಉತ್ತರಗಳನ್ನು ನೀಡಿದ. ಈ ಎಲ್ಲಕ್ಕೂ ಲಾಯ್ಡ್ ಜಾರ್ಜ್‌ನ ಭಾಷಣಕ್ಕೂ ಸಂಬಂಧವಿರಲಿಲ್ಲ ಎಂದು ಹೇಳುವುದು ಸಾಧ್ಯ. ಇಷ್ಟೆಲ್ಲ ಆದ ಮೇಲೆ ಓಡೊನೆಲ್‌ನ ಮನವಿ ಪತ್ರಗಳಿಂದ ಏನು ಪ್ರಯೋಜನವನ್ನೂ ನಿರೀಕ್ಷಿಸುವಂತಿರಲಿಲ್ಲ.

ಲಾಯ್ಡ್ ಜಾರ್ಜ್‌ನ ಭಾಷಣ ಹಾಗಿರಲಿ, ಸುಧಾರಣೆಗಳು ಸ್ವರೂಪದ ವಿಷಯದಲ್ಲಿ ಮಧ್ಯಗಾಮಿ ನಾಯಕರಿಗೂ ಭ್ರಮನಿರಸನವಾಗಿತ್ತು. ಅದಕ್ಕೆ ಕಾರಣ ಎ.ಸಿ.ಎಸ್. ವರ್ಗದವರು ತೋರಿಸುತ್ತಿದ್ದ ಪರಮಾಧಿಕಾರ ನೀತಿ ಹಾಗೂ ಮಂತ್ರಿಗಳಿಗೆ ಕೂಡ ಅವರ ಮೇಲೆ ಹೆಚ್ಚು ಕಡಿಮೆ ಯಾವ ಹತೋಟಿಯೂ ಇಲ್ಲದೆ ಇದ್ದದ್ದು. 1919 ರ ಕಾಯಿದೆಯಲ್ಲಿದ್ದ ದೊಡ್ಡ ಪರಿಹಾರದ ಅಂಶವೆಂದರೆ ಶಾಸನ ಸಭೆಗೆ ಜವಾಬುದಾರರಾಗಿದ್ದ ಮಂತ್ರಿಗಳ ನೇಮಕಾತಿ. ಭಾರತೀಯರಿಗೆ ಅಗತ್ಯವಾದ ತರಬೇತಿ ಭೂಮಿ ಇದು ಎಂಬ ದೃಷ್ಟಿಯಿಂದ ಹುದ್ದೆಯನ್ನು ಸೃಷ್ಟಿಸಲಾಗಿತ್ತು. ಈ ಉದ್ದೇಶದಿಂದ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಭಾರತ ಸರ್ಕಾರ ವರ್ಗಾಹಿಯ ಇಲಾಖೆಗಳ ಮೇಲಿನ ಹತೋಟಿಯನ್ನು ಸಡಿಲಗೊಳಿಸಿ ಅವುಗಳ ಆಡಳಿತವನ್ನು ಮಂತ್ರಿಗಳಿಗೆ ವಹಿಸಿಕೊಟ್ಟವು. ಕಾಯಿದೆಯ ಉದ್ದೇಶ ಸ್ಪಷ್ಟವಾಗಿತ್ತು. ಕಾಯ್ದಿರಿಸಿದ ವಿಷಯಗಳ ಬಗ್ಗೆ ಕಾರ್ಯನಿರ್ವಾಹಕ ಮಂಡಳಿ ಸಮೇತ ಗವರ್ನರ್, ಹಿಂದಿನಂತೆ ಭಾರತ ಸರ್ಕಾರಕ್ಕೆ ಜವಾಬ್ದಾರನಾಗಿರಬೇಕಾಗಿತ್ತು. ಆದರೆ ವರ್ಗಾಹಿತ ವಿಷಯಗಳ ಬಗ್ಗೆ ಆತ ಸಂವಿಧಾನಾತ್ಮಕ ಗವರ್ನರ್ ಆಗಿರಬೇಕಾಗಿತ್ತು. ಅವನ ಮಂತ್ರಿಗಳು ಕೌನ್ಸಿಲ್‌ಗೆ ಜವಾಬ್ದಾರರಾಗಿರಬೇಕಾಗಿತ್ತು. ಆದರೆ, ಕಾಯಿದೆಯಲ್ಲಿ ನಿಯಮಗಳನ್ನು ರೂಪಿಸುವಾಗ ಚಳಕ ತೋರಿಸಿ ಈ ಇಲಾಖೆಗಳ ಎಲ್ಲ ಅಧಿಕಾರಿಗಳು ಗವರ್ನರ್‌ನಲ್ಲೇ ಕೇಂದ್ರೀಕೃತವಾಗುವಂತೆ ಮಾಡಲಾಗಿತ್ತು. ಅವನಾದರೋ ಗವರ್ನರ್ ಜನರಲ್‌ಗಾಗಲಿ ಕೌನ್ಸಿಲ್‌ಗಾಗಲಿ ಜವಾಬ್ದಾರನಾಗಿರಬೇಕಾಗಿರಲಿಲ್ಲ. ಅವನು ಮನಸ್ಸು ಮಾಡಿದ್ದರೆ ಕಾಯ್ದಿರಿಸಿದ ವಿಷಯಗಳಿಗಿಂತ ಹೆಚ್ಚಾಗಿ ವರ್ಗಾಯಿತ ವಿಷಯಗಳ ಬಗ್ಗೆ ಹೆಚ್ಚು ಸರ್ವಾಧಿಕಾರಿ ಮನೋಭಾವವನ್ನು ತೋರಿಸಬಹುದಾಗಿತ್ತು. ಕಾರ್ಯ ನಿರ್ವಾಹಕ ಮಂಡಳಿಯ ಸದಸ್ಯನೊಬ್ಬನಿಗೂ ಗವರ್ನರನಿಗೂ ಭಿನ್ನಾಭಿಪ್ರಾಯವಿದ್ದರೆ ವಿಷಯವನ್ನು ಕೌನ್ಸಿಲ್‌ನ ಮುಂದೆ ಇಟ್ಟು ಸಾಮಾನ್ಯವಾಗಿ ಬಹುಮತದ ಅಭಿಪ್ರಾಯದಂತೆ ತೀರ್ಮಾನಿಸಲಾಗುತ್ತಿತ್ತು. ಆದರೆ ಗವರ್ನರ್ ಮಂತ್ರಿಗಳನ್ನು ವೈಯುಕ್ತಿಕವಾಗಿ ವಿಚಾರಿಸಿ, ಅವರನ್ನು ಕೇವಲ ಸಲಹೆಗಾರರನ್ನಾಗಿ ಮಾಡಿಬಿಟ್ಟಿದ್ದ. ಅವರ ಅಭಿಪ್ರಾಯಗಳನ್ನು ಬೇಕಿದ್ದರೆ ಒಪ್ಪಿಕೊಳ್ಳುತ್ತಿದ್ದ, ಇಲ್ಲದಿದ್ದರೆ ಬಿಡುತ್ತಿದ್ದ. ಭಾರತ ಸರ್ಕಾರದ ಕಾಯಿದೆಯ ಪರಿಚ್ಛೇದ 52 (3) ಹೀಗೆ ಹೇಳುತ್ತದೆ ; "ವರ್ಗಾಯಿತ ವಿಷಯಗಳ ಬಗ್ಗೆ ಗವರ್ನರ್, ಮಂತ್ರಿಗಳ ಅಭಿಪ್ರಾಯವನ್ನು ಒಪ್ಪದೇ ಇರಲು ಸಾಕಷ್ಟು ಕಾರಣಗಳು ಇದ್ದ ಹೊರತು, ಅವರ ಸಲಹೆಯಂತೆಯೇ ವರ್ತಿಸತಕ್ಕದ್ದು". ಇದರ ಪ್ರಕಾರ ಗವರ್ನರ್ ಇಡೀ ಮಂತ್ರಿ ಮಂಡಲದ ಅಭಿಪ್ರಾಯವನ್ನು ಪಡೆಯುವುದು ಅಗತ್ಯವಾಗಿತ್ತು. ಜಂಟಿ ಪಾರ್ಲಿಮೆಂಟರಿ ಸಮಿತಿಯು ಮಂತ್ರಿಗಳ ಸಂಯುಕ್ತ ಜವಾಬ್ದಾರಿಯನ್ನು ಒತ್ತಿ ಹೇಳಿತ್ತು. ಆದರೆ ನಿಯಮಗಳನ್ನು ರೂಪಿಸಿದವರು ಐ.ಸಿ.ಎಸ್ ಅಧಿಕಾರಿಗಳೇ ಹೊರತು ಬ್ರಿಟಿಷ್ ಪಾರ್ಲಿಮೆಂಟ್ ಅಲ್ಲವಷ್ಟೆ. ಅವರ ಪ್ರಕಾರ ಗವರ್ನರ್ ಪರಿಚ್ಛೇದ 52 (3) ಅದರ ಶಬ್ದಾರ್ಥದಲ್ಲೂ ಇಂಗಿತದಲ್ಲೂ ಉಲ್ಲಂಘಿಸಬಹುದಾಯಿತು. ಅವನು ಮಂತ್ರಿಗಳ ಸಲಹೆಯನ್ನು ವೈಯುಕ್ತಿಕವಾಗಿ ಪಡೆಯಬಹುದಾಯಿತು. ಸಾಮಾನ್ಯವಾಗಿ ಅವನು

ಮಾಡುತ್ತಿದ್ದುದ್ದೂ ಹಾಗೆಯೇ. ಆ ಪರಿಚ್ಛೇದದ ಇಂಗಿತವನ್ನು ಪಾಲಿಸುವುದರ ವಿಷಯವಾಗಿ ಹೇಳಬೇಕೆಂದರೆ ಮಡ್ಡಿಮನ್ ಸಮಿತಿಯ ಮುಂದೆ ಮಾಜಿ ಮಂತ್ರಿಗಳು ಕೊಟ್ಟ ಸಾಕ್ಷ್ಯವನ್ನು ಗಮನಿಸಿದರೆ ಸಾಕು. ಸಂಯುಕ್ತ ಪ್ರಾಂತದ ಮೊದಲ ವಿದ್ಯಾಮಂತ್ರಿಗಳಾಗಿದ್ದ ಮಧ್ಯಗಾಮಿ ಪಕ್ಷದ ದಕ್ಷ ನಾಯಕ ಸಿ.ವೈ. ಚಿಂತಾಮಣಿಯವರು, ಒಂದು ಗ್ರಂಥಾಲಯ ಸಮಿತಿಯ ನೇಮಕದ ವಿಷಯದಿಂದ ಹಿಡಿದು ಮುಖ್ಯ, ಆ ಮುಖ್ಯ ವಿಷಯಗಳೆಲ್ಲದರಲ್ಲೂ ಗವರ್ನರ್ ತಮ್ಮ ಅಭಿಪ್ರಾಯವನ್ನು ತಿರಸ್ಕರಿಸುತ್ತಿದ್ದ ಎಂದು ಹೇಳಿದರು. ಪಂಜಾಬಿನ ಮಂತ್ರಿಗಳಾಗಿದ್ದ ಲಾಲ್ ಹರ್ ಕಿಷನ್ ಲಾಲ್ ಕೂಡ ತಮ್ಮ ಅನುಭವವೂ ಅದೇ ಎಂದರು. ಮದರಾಸಿನಲ್ಲಿ ಮಂತ್ರಿಗಳಾಗಿದ್ದ ಎ.ಪಿ. ಪಿತ್ರೋ ಅವರು ಮಂತ್ರಿಗಳೆಲ್ಲ ಗವರ್ನರ್‌ನ ಅಧೀನದಲ್ಲಿದ್ದರು ಎಂದು ಮುಚ್ಚು ಮರೆ ಇಲ್ಲದೆ ಹೇಳಿದರು. ಬೊಂಬಾಯಿಯ ಕಾರ್ಯ ನಿರ್ವಾಹಕ ಮಂಡಲಿಯ ಸದಸ್ಯರಾಗಿದ್ದ ಸರ್ ಜೆಮ್ಸ್ ಲಾಲ್ ಸೆಟಲ್‌ವಾಡ್ ಅವರು ಗವರ್ನರ್ ಮೂಲಭೂತ ಭಿನ್ನಾಭಿಪ್ರಾಯಗಳಾಗಿದ್ದ ವಿಶೇಷ ಸಂದರ್ಭಗಳಲ್ಲಿ ಮಾತ್ರ ತಾನು ಮಧ್ಯ ಪ್ರವೇಶಿಸಬೇಕು ಎಂಬುದಕ್ಕೆ ತನ್ನ ಅಧಿಕಾರವನ್ನು ಸೀಮಿತಗೊಳಿಸುವುದನ್ನು ಬಿಟ್ಟು ಅವನು "ಮಂತ್ರಿಗಳ ಕೆಲಸ ಕಾನೂನಿನ ಪ್ರಕಾರ ಕೇವಲ ಸಲಹೆ ನೀಡುವುದು" ಎಂದು ಹೇಳುತ್ತಿದ್ದ ಎಂದು ಘೋಷಿಸಿದರು. ವಾಸ್ತವವಾಗಿ ಗವರ್ನರ್ ಅನೇಕ ಸಂದರ್ಭಗಳಲ್ಲಿ ಮಂತ್ರಿಗಳ ಬಗ್ಗೆ ಅವನು, ನಿರೀಕ್ಷೆಗೆ ತಕ್ಕಂತೆ ಸಂವಿಧಾನಾತ್ಮಕ ಮುಖ್ಯಸ್ಥನಾಗುವುದನ್ನು ಬಿಟ್ಟು ಬೇಜಾವಾಬ್ದಾರಿಯ ಮುಖ್ಯಸ್ಥನಾಗಿ ವರ್ತಿಸುತ್ತಿದ್ದ. ಸುಧಾರಣೆಯ ವ್ಯವಸ್ಥೆಯಲ್ಲಿ ಅವನ ಅಧಿಕಾರ ವ್ಯಾಪ್ತಿ ಹೆಚ್ಚಿತು.

ಆದರೆ ಮಂತ್ರಿಗಳು ಕಂಡಂತೆ ಪರಿಸ್ಥಿತಿ ಇನ್ನು ಹದಗೆಟ್ಟಿತು. ಏಕೆಂದರೆ ಅವರ ಕಾರ್ಯದರ್ಶಿಗಳೇ ಗವರ್ನರ್‌ನ ಸಹಾಯ ಪಡೆದು ಅವರ ಆಜ್ಞೆಯನ್ನು ಉಲ್ಲಂಘಿಸತೊಡಗಿದರು. ಮದರಾಸಿನ ಮಂತ್ರಿ ಸರ್. ಎ.ಪಿ. ಪತ್ರೋ ಹೇಳಿದರು ; "ಮಂತ್ರಿಗಳಿಗೆ ಜವಾಬ್ದಾರಿಯ ಸ್ಥಾನವುಂಟು, ಆದರೆ ಕೆಲಸ ಮಾಡುವ ಸ್ವಾತಂತ್ರ್ಯವಿಲ್ಲ. ಕಾಯಿದೆಯೂ ನಿಯಮಗಳೂ ಕಾರ್ಯದರ್ಶಿಗಳಿಗೂ ಇಲಾಖಾ ಮುಖ್ಯಸ್ಥರಿಗೂ ವಿಷಯಗಳನ್ನು ನೇರವಾಗಿ ಗವರ್ನರ್‌ನಿಗೆ ಕೊಂಡೊಯ್ಯುವ ಅಧಿಕಾರವನ್ನು ನೀಡಿದೆ. ಅವನು ಅವರ ಶಿಫಾರಸ್ಸಿನ ಮೇಲೆ ಮಂತ್ರಿಗಳ ನಿರ್ಣಯಗಳನ್ನು ತಳ್ಳಿ ಹಾಕಬಹುದು".

ಗವರ್ನರ್‌ನಿಗೆ ಇದ್ದ ಅಧಿಕಾರಗಳು ಮತ್ತು ವಿಶೇಷ ಹಕ್ಕುಗಳಿಂದಾಗಿ ಮಂತ್ರಿಗಳಿಗೆ ತಮ್ಮದೇ ಇಲಾಖೆಗಳು ವಿಷಯದಲ್ಲೂ ಯಾವುದೇ ನಿಜವಾದ ಅಧಿಕಾರವೂ ಇರಲಿಲ್ಲ. ಮಾಜಿ ಮಂತ್ರಿ ನವಾಜ್ ಅಲಿ ಚೌಧುರಿ ಹೇಳಿದ್ದಾರೆ. "ಇದು ಎಲ್ಲಿಗೆ ಬಂತು ಎಂದರೆ ಮಂತ್ರಿಯು ಆಡಳಿತದ ವಿಷಯದಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಜವಾಬ್ದಾರನಾಗಿದ್ದರೆ ಎಲ್ಲಾ ವಿಷಯಗಳಲ್ಲೂ ಅಂತಿಮ ನಿರ್ಧಾರವನ್ನು ಕೈಗೊಳ್ಳುವ ಅಧಿಕಾರ ಹೊಂದಿದ್ದವನು ಕೌನ್ಸಿಲ್‌ನ ಸಂಪರ್ಕವೇ ಇಲ್ಲದ ಗವರ್ನರ್".

ತಮಗೆ ನೇರವಾಗಿ ಸಂಬಂಧಪಟ್ಟ ಮತ್ತೊಂದು ಗುಂಪಿನ ನಿಯಮಗಳನ್ನು ರೂಪಿಸುವುದರಲ್ಲಿಯೂ ಐ.ಸಿ.ಎಸ್. ಅಧಿಕಾರಗಳ ಕೈವಾಡ ಇರುವುದನ್ನು ಕಾಣಬಹುದಾಗಿತ್ತು. ಗವರ್ನರ್‌ಳಿಗೆ ಒದಗಿಸಿದ್ದ ಸೂಚನಾ ಪತ್ರದಲ್ಲಿ ಎಲ್ಲ ಉದ್ಯೋಗಿಗಳು "ತಮ್ಮ ಕರ್ತವ್ಯಗಳನ್ನು ನ್ಯಾಯ ಬದ್ಧವಾಗಿ ನಿರ್ವಹಿಸುವುದರಲ್ಲಿಯೂ ಅವರಿಗೆ ನೀಡಿದ್ದ ಹಕ್ಕುಗಳನ್ನು ಅವರು ಅನುಭವಿಸುವುದರಲ್ಲಿಯೂ ಗವರ್ನರ್‌ಗಳು ನೆರವು ನೀಡಲೇಬೇಕೆಂದು ಹೇಳಲಾಗಿತ್ತು. ಸೇವಾ ನಿಯಮಗಳಿಗೆ ಸಂಬಂಧಿಸಿದಂತೆ ಎಲ್ಲ ವಿಷಯಗಳೂ ಗವರ್ನರ್‌ನ ಹತೋಟಿಯಲ್ಲಿರತಕ್ಕದ್ದು ಎಂಬಂತೆ ಇದನ್ನು ವ್ಯಾಖ್ಯಾನ ಮಾಡಲಾಯಿತು. ನಿಯಮಗಳ ಪ್ರಕಾರ ನೇಮಕಾತಿ, ವರ್ಗಾವರ್ಗಿ, ಬಡ್ತಿ ಇವುಗಳನ್ನೆಲ್ಲ ಮಂತ್ರಿಗಳ ಇಲಾಖೆಗಳಲ್ಲಿ ಕೂಡ ಗವರ್ನರ್‌ನ ವಶಕ್ಕೆ ಒಪ್ಪಿಸಲಾಯಿತು. ಮಂತ್ರಿಗಳಿಗಾದರೂ ಯಾವುದೇ ಅಧಿಕಾರವೂ ಇಲ್ಲವಾಯಿತು. ಒಂದು ಸ್ವಾರಸ್ಯದ ಸಂಗತಿಯೆಂದರೆ, ಕೋರ್ಟ್ ಆಫ್ ಡೈರೆಕ್ಟರ್ಸ್ ನಿಂದ 1844 ರಲ್ಲಿ ಎಂದರೆ ಎಂಭತ್ತು ವರ್ಷಗಳ ಹಿಂದೆ ಹೊರಟ ಒಂದು ಪತ್ರವನ್ನು ಈ ಅಸಂಬದ್ಧವಾದ ನೀತಿಗೆ ಆಧಾರವಾಗಿ ಉಲ್ಲೇಖಿಸಲಾಯಿತು. ಮದರಾಸು ಸರ್ಕಾರದ ಕಾನೂನು ಅಧಿಕಾರಿಗಳು ವರ್ಗಾಯಿತ ವಿಷಯಗಳಿಗೆ ಸಂಬಂಧಿಸಿದಂತೆ ಮಾಡಿದ ನೇಮಕಾತಿಗಳನ್ನು ಲೆಜಿಸ್ಲೇಟಿವ್ ಕೌನ್ಸಿಲ್ ಚರ್ಚಿಸುವುದು ಕೂಡ ಸಾಧ್ಯವಿಲ್ಲ ಎಂದೇ ಹೇಳಿದರು. ಅದಕ್ಕೆ ಕಾರಣ ನೇಮಕಾತಿಗಳನ್ನು ಮಾಡುವ ಜವಾಬ್ದಾರಿ ಗವರ್ನರ್‌ಗೆ ಸೇರಿದ್ದು. ಹೀಗಾಗಿ ಗವರ್ನರನು ಮಾಡಿದ ಏನನ್ನೂ ಕೌನ್ಸಿಲ್‌ನಲ್ಲಿ ಟೀಕಿಸುವಂತಿಲ್ಲ ಎಂಬುದು. ಪರಿಚ್ಛೇದ 72 D ಯ 5ನೇ ಅಂಶದ ಪ್ರಕಾರ ವರ್ಗಾಯಿತ ಇಲಾಖೆಗಳಲ್ಲಿ ಕೂಡ ಗವರ್ನರ್‌ನ ಯಾವುದೇ ಕ್ರಮವನ್ನು ಕುರಿತಂತೆ ಯಾವುದೇ ಠರಾವನ್ನು ಮಂಡಿಸುವಂತಿಲ್ಲ ಎಂದು ಹೇಳಲಾಯಿತು. ಗವರ್ನರ್ ಸಂವಿಧಾನಬದ್ಧ ಮುಖ್ಯಸ್ಥನಾಗಿದ್ದರೆ ಮಾತ್ರ ಇದು ನ್ಯಾಯ ಬದ್ಧವಾಗಿರುತ್ತಿತ್ತು. ಆಗ ಮಂತ್ರಿಗಳನ್ನು ಮಾತ್ರವೆ (ನೇಮಕಾತಿ ಮಾಡಲಾದುದಕ್ಕೆ) ಜವಾಬ್ದಾರರನ್ನಾಗಿ ಮಾಡಬಹುದಾಗಿತ್ತು. ಆದರೆ ಗವರ್ನರ್, ಮಂತ್ರಿಗಳ ಸಲಹೆಯನ್ನು ಗೌರವಿಸದೆ, ತನಗಿರುವ

ಅಧಿಕಾರದಿಂದಲೇ ನೇಮಕಾತಿ ಮುಂತಾದುವನ್ನು ಮಾಡಬಹುದು ಎಂದು ಹೇಳಿ ಅದರಂತೆಯೇ ನಡೆಯುತ್ತಿದ್ದುದರಿಂದ ಅವನ ಸರ್ವಾಧಿಕಾರಕ್ಕೆ ಕೌನ್ಸಿಲ್ ಯಾವ ರೀತಿಯಿಂದಲೂ ಅಡ್ಡಬರುವಂತಿರಲಿಲ್ಲ. ಕಾರ್ಯನಿರ್ವಾಹಕ ಮಂಡಳಿ ಮತ್ತು ಮಂತ್ರಿಗಳ ನಡುವೆ ವಿವಾದ ಎದ್ದಾಗ ಅಂತಿಮ ತೀರ್ಮಾನ ಗವರ್ನರನದೇ ಎಂದು ನಿಯಮಗಳು ಅವನಿಗೆ ಅಧಿಕಾರ ನೀಡಿದ್ದವು. ಹಿಂದೆ ಎರಡು ಇಲಾಖೆಗಳ ನಡುವಣ ಭಿನ್ನಾಭಿಪ್ರಯವನ್ನು ಗವರ್ನರ್‌ನ ಕಾರ್‍ಯನಿರ್ವಾಹಕ. ಮಂಡಳಿಯಲ್ಲಿ ಬಹುಮತದ ಮೂಲಕ ಬಗೆ ಹರಿಸಲಾಗುತ್ತಿತ್ತು. ಆದರೆ ಈಗಾದರೋ ಅಂತಿಮ ತೀರ್ಮಾನ ಗವರ್ನರ್‌ದೇ ಎಂದಾಯಿತು.

ಸುಧಾರಣೆಗಳ ಉದ್ದೇಶ ಏನು? ಅವುಗಳಿಂದ ನಿರೀಕ್ಷಿಸಿದ್ದೇನು? ಎಂಬುದಕ್ಕೆ ವಿರುದ್ಧವಾಗಿ ಅವು ಗವರ್ನರ್‌ನಿಗೆ ಹಿಂದಿಗಿಂತ ಹೆಚ್ಚು ಸರ್ವಾಧಿಕಾರವನ್ನು ನೀಡಿದವು ಎಂಬುದನ್ನೂ, ಮಂತ್ರಿಗಳು ಅತಿಕಡಿಮೆ ಅಥವಾ ಗವರ್ನರನು ತನ್ನ ವಿವೇಚನೆಯಿಂದ ನೀಡಿದಷ್ಟು ಅಧಿಕಾರವನ್ನು ಮಾತ್ರ ಉಳಿಸಿಕೊಂಡರೆಂಬುದನ್ನು ತೋರಿಸಿದ್ದಾಯಿತು. 1919 ರ ಕಾಯಿದೆಯ ಇಂಗಿತವನ್ನು ಉಲ್ಲಂಘಿಸಿ ನಿಯಮಗಳನ್ನು ಜಾಣತನದಿಂದ ರೂಪಿಸಿದ್ದರಿಂದ ಅವನಿಗೆ ಹೆಚ್ಚಿನ ಅಧಿಕಾರಗಳು ದೊರೆತದ್ದರ ಜೊತೆಗೆ ಈ ಕಾಯಿದೆಯೇ ಅವನಿಗೆ ಇನ್ನು ಹೆಚ್ಚಿನ ಅಧಿಕಾರವನ್ನು ನೀಡಿದಂತಾಯಿತು. ಕೌನ್ಸಿಲ್ ತಿರಸ್ಕರಿಸಿದ್ದ ಕ್ರಮಗಳನ್ನು ಅವನು ದೃಢೀಕರಿಸಬಹುದಾಗಿತ್ತು; ಕೌನ್ಸಿಲ್ ಅನುಮೋದಿಸಿದ ಶಾಸನವನ್ನು ಅವನು ನಿರಾಕರಿಸಬಹುದಾಗ್ಗಿತ್ತು; ಇಲ್ಲವೇ ಭಾರತ ಸರ್ಕಾರಕ್ಕೆ ಅದರ ಅಭಿಪ್ರಾಯಕ್ಕಾಗಿ ಕಳುಹಿಸಬಹುದಾಗಿತ್ತು; ಕೌನ್ಸಿಲ್‌ನ ಅಧ್ಯಕ್ಷವು ಯಾವುದಾದರೂ ಮಂಡನೆಗಳನ್ನು ಅನುಮೋದಿಸಿದ ಮೇಲೂ ಗವರ್ನರನು ಅವನ್ನು ತಿರಸ್ಕರಿಸಬಹುದಾಗಿತ್ತು. ತಮಗಿದ್ದ ಈ ಅಧಿಕಾರಗಳನ್ನು ಬಳಸುವುದಕ್ಕೆ ಗವರ್ನರುಗಳು ಸ್ವಲ್ಪವು ಹಿಂಜರಿಯುತ್ತಿರಲಿಲ್ಲ. ಗವರ್ನರ್ ಅಕ್ರಮವಾಗಿ ತಲೆ ಹಾಕುತ್ತಿದ್ದುದ್ದನ್ನು ಬಿಟ್ಟರೂ ಆ ಕಾಯಿದೆಯ ವರ್ಗಾಯಿತ ವಿಷಯಗಳ ಆಡಳಿತದಲ್ಲಿ ಮಂತ್ರಿಗಳಿಗೆ ಜವಾಬ್ದಾರಿಯನ್ನು ವಹಿಸಿಕೊಟ್ಟಿತ್ತು ಎಂದು ಹೇಳುವುದು ಕಷ್ಟವಾಗಿದೆ. ಆದರೂ, ಚುನಾಯಿತ ಸದಸ್ಯರ ಬಹುಮತವನ್ನು ಪಡೆಯುವುದು ಕಷ್ಟವಾಗಿದ್ದಾಗಲೂ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಮಂತ್ರಿಗಳು ಒಟ್ಟಿನಲ್ಲಿ ಬಹುಮತವನ್ನು ಪಡೆಯಬಹುದಾಗಿತ್ತು. ಅದು ಹೇಗೆಂದರೆ ಕೌನ್ಸಿಲಿನ ಬಹುಪಾಲು ಸದಸ್ಯರು ಅಧಿಕಾರಿಗಳಾಗಿದ್ದರು. ಇಲ್ಲವೇ ನಾಮಕರಣಗೊಂಡವರಾಗಿದ್ದರು. ಇಲ್ಲವೇ ಸರ್ಕಾರದ ಪ್ರಭಾವದಿಂದ, ವಿಶೇಶ ಕ್ಷೇತ್ರಗಳಿಂದ ಆರಿಸಿ ಬಂದವರಾಗಿರುತ್ತಿದ್ದರು. ಉದಾಹರಣೆಗೆ ಮದರಾಸಿನಲ್ಲಿ ಸಾಮಾನ್ಯ ಕ್ಷೇತ್ರಗಳಿಂದ (ಹಿಂದು, ಮುಸ್ಲಿಂ ಮತ್ತು ಕ್ರಿಶ್ಚಿಯನ್) ಆರಿಸಿ ಬಂದ 86 ಜನ ಸದಸ್ಯರಲ್ಲಿ ಕೇವಲ 23 ಜನರ ಮತಗಳನ್ನು ಪಡೆದರೂ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಮಂತ್ರಿಗಳು ಬಹುಮತ ಪಡೆದಂತಾಗುತ್ತಿತ್ತು. ಅದು ಸರ್ಕಾರ ಅವರನ್ನು ಅಧಿಕಾರದಲ್ಲಿ ಉಳಿಸಬೇಕು ಎಂದು ಅಪೇಕ್ಷಿಸಿದ್ದರೆ ಮಾತ್ರ. ಹೀಗಾಗಿ ಮಂತ್ರಿಗಳು ಜನರಿಗೆ ಬದಲು ಕೌನ್ಸಿಲ್ ಮೂಲಕ ಸರ್ಕಾರಕ್ಕೆ ಜವಾಬ್ದಾರರಾಗಿರುತ್ತಿದ್ದರು. ಏಕೆಂದರೆ ಜನಾಭಿಪ್ರಾಯಕ್ಕೆ ವಿರುದ್ಧವಾಗಿ ಅವರನ್ನು ಅಧಿಕಾರದಲ್ಲಿ ಉಳಿಸುತ್ತಿದ್ದುದು ಕೌನ್ಸಿಲ್. ಎದ್ದು ಕಾಣುವ ಒಂದು ನಿದರ್ಶನವೆಂದರೆ ಮದರಾಸು ಕೌನ್ಸಿಲ್‌ನಲ್ಲಿ 1927 ರಲ್ಲಿ ಮಂತ್ರಿಗಳ ವಿರುದ್ಧ ಮಂಡಿಸಲಾದ ಒಂದು ಖಂಡನಾ ನಿರ್ಣಯ. ನಿರ್ಣಯಕ್ಕೆ ಸೋಲಾಯಿತು, ಮಂತ್ರಿಗಳು ಮುಂದುವರಿದರು, ಆದರೆ ಮತದಾನಕ್ಕಾಗಿ ನಡೆದ ಸಭೆಯ ವಿಭಜನೆಯನ್ನು ನೋಡಿದರೆ ಚುನಾಯಿತ ಸದಸ್ಯರಲ್ಲಿ ಹೆಚ್ಚಿನ ಮಂದಿ ಮಂತ್ರಿಗಳ ವಿರುದ್ಧ ಮತ ನೀಡಿದ್ದುದು ಸ್ಪಷ್ಟವಾಗಿತ್ತು. ಅಧಿಕಾರಿಗಳೂ ಸರ್ಕಾರದ ಬೆಂಬಲಿಗರೂ ಸರ್ಕಾರದ ಪರವಾಗಿ ಮತ ಚಲಾಯಿಸಿ ಮಂತ್ರಿಗಳನ್ನು ಉಳಿಸಬೇಕೆಂದು ಅವರಿಗೆಲ್ಲ ವ್ಹಿಪ್ (ಶಿಸ್ತಿನ ನಿರೂಪ) ನೀಡಲಾಗಿತ್ತೆಂದು ಸರ್ಕಾರವು 1923 ರಷ್ಟು ಹಿಂದೆಯೇ ಒಪ್ಪಿಕೊಂಡಿತ್ತು. ಆದ್ದರಿಂದ ಮಂತ್ರಿಗಳೇ ತಾವು ಕೌನ್ಸಿಲ್‌ಗೆ ಎಷ್ಟರ ಮಟ್ಟಿಗೆ ಜವಾಬ್ದಾರರು ಎಂಬುದನ್ನು ತಿಳಿದಿಲ್ಲವೇ ಇದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ. 1923 ರ ನವೆಂಬರ್‌ನಲ್ಲಿ ಪನಗಲ್‌ನ ರಾಜನು ಖಂಡನಾ ನಿರ್ಣಯವನ್ನು ವಿರೋಧಿಸುತ್ತಾ, ತಾನು "ಗವರ್ನರ್‌ನಿಗೆ ಮಾತ್ರ ಜವಾಬ್ದಾರ" ಎಂದು ಹೇಳಿ ನಗ್ನ ಸತ್ಯವನ್ನು ಬಹಿರಂಗ ಪಡಿಸಿದನು. ಅಂತಹ ಹೇಳಿಕೆಯು - ಅದೂ ಒಂದು ಪ್ರಾಂತದ ಮಂತ್ರಿಯಿಂದ ಬಂದಾಗ ಎಷ್ಟೋ ಆಶ್ಚರ್ಯಕರವೂ ನಂಬಲು ಅಸಾಧ್ಯವೂ ಆದಂತೆ ಕಂಡರೂ ಮಂತ್ರಿಗಳು ಶಾಸಕಾಂಗಕ್ಕೆ ಜವಾಬ್ದಾರರಾಗಿರುತ್ತಿದ್ದರು ಎಂಬುದು ಅದು ವ್ಯವಹಾರದಲ್ಲಿ - ಎಂತಹ ಕಪಟ ಎಂಬುದು ಗೊತ್ತಾಗುತ್ತದೆ. ಏಕೆಂದರೆ ನಿಜವಾದ ಅಧಿಕಾರ ಇದ್ದದ್ದು ಯಾರ ಕ್ರಿಯೆಗಳನ್ನು ಕೌನ್ಸಿಲ್ ಟೀಕಿಸಲು ಸಾಧ್ಯವಿರಲಿಲ್ಲವೋ ಅಂತಹ ಗವರ್ನರ್‌ನಲ್ಲಿಯೇ ಹೊರತು ಮಂತ್ರಿಗಳಲ್ಲಲ್ಲ.

ನಿಜವಾದ ಅಧಿಕಾರವಾಗಲಿ ಅದನ್ನು ಬಳಸುವ ಶಕ್ತಿಯಾಗಲಿ ಇಲ್ಲದಿರುವುದರ ಜೊತೆಗೆ ಮಂತ್ರಿಗಳಿಗೆ ಇನ್ನೂ ಕೆಲವು ಅನಾನುಕೂಲಗಳಿದ್ದವು. ವಿಷಯಗಳನ್ನು ಮೀಸಲು ಮತ್ತು ವರ್ಗಾಯಿತ ಎಂದು ಯಾವ ರೀತಿ ವಿಭಜಿಸಲಾಗಿತ್ತೆಂದರೆ ಯಾವುದೇ ಒಂದು ಇಲಾಖೆಯ ಎಲ್ಲ ಮುಖ್ಯ ಶಾಖೆಗಳ ಮೇಲೂ ಮಂತ್ರಿಗಳಿಗೆ ಪೂರ್ಣವಾಗಿ ಹತೋಟಿ ಇರುವುದು ಸಾಧ್ಯವಿರಲಿಲ್ಲ. ಆದ್ದರಿಂದ ಮದರಾಸಿನಲ್ಲಿ ಮಂತ್ರಿಯಾಗಿದ್ದ ಸರ್.ಕೆ.ವಿ. ರೆಡ್ಡಿ ಹೀಗೆ ಹೇಳಿದರು ; "ನಾನು ಕಾಡುಗಳ ರಹಿತ ಅಭಿವೃದ್ಧಿ ಮಂತ್ರಿಯಾಗಿದ್ದೆ,

ನೀರಾವರಿ ರಹಿತ ಕೃಷಿ ಮಂತ್ರಿಯಾಗಿದ್ದ. ಕೃಷಿ ಮಂತ್ರಿಯಾಗಿ ಮದರಾಸಿನ ಕೃಷಿಸಾಲ ಕಾಯಿದೆಗೂ ಅಥವಾ ಮದರಾಸು ಜಮೀನು ಅಭಿವೃದ್ಧಿ ಸಾಲ ಕಾಯಿದೆಗೂ ನನಗೂ ಯಾವ ಸಂಬಂಧವೂ ಇರಲಿಲ್ಲ. ನೀರಾವರಿ ಕೃಷಿಸಾಲಗಳು, ಬರ ಪರಿಹಾರ ಇವುಗಳಿಗೆ ಏನೂ ಸಂಬಂಧವಿಲ್ಲದೆ ಕೃಷಿ ಮಂತ್ರಿಯ ಪ್ರಯೋಜನ ಅಥವಾ ದಕ್ಷತೆ ಎಷ್ಟಿರಬಹುದು ಎಂಬುದನ್ನು - ವಿವರಿಸುವುದಕ್ಕಿಂತ ಊಹೆಗೆ ಬಿಡುವುದೇ ಮೇಲು. ಮತ್ತೆ ನಾನು ಕಾರ್ಖಾನೆಗಳು, ಬಾಯ್ಲರ್‌ಗಳು, ವಿದ್ಯುತ್, ಶಕ್ತಿ, ಗಣಿಗಳು ಅಥವಾ ಕಾರ್ಮಿಕರು ಇವು ಯಾವುದರ ಸಂಪರ್ಕವೂ ಇಲ್ಲದ ಕೈಗಾರಿಕಾ ಮಂತ್ರಿಯಾಗಿದ್ದ. "ಆರೋಗ್ಯ ಇಲಾಖೆ ಒಬ್ಬ ಮಂತ್ರಿಯ ವಶದಲ್ಲಿತ್ತು. ಆದರೆ ಈ ಕೆಳಗಿನ ನಿಯಮವನ್ನು ಅವನ ಮೇಲೆ ಕಡ್ಡಾಯವಾಗಿ ಹೇರಲಾಗಿತ್ತು ; "ಸೆಕ್ರೆಟರಿ ಆಫ್ ಸ್ಟೇಟ್ ಇನ್ ಕೌನ್ಸಿಲ್ ನಿರ್ಧರಿಸುವ ನಿಯಮಗಳು ಮತ್ತು ಷರತ್ತಿನ ಮೇಲೆ ಅವನು ನಿರ್ಧರಿಸುವ ಸಂಖ್ಯೆಯ ಭಾರತೀಯ ಆರೋಗ್ಯಾಧಿಕಾರಿಗಳನ್ನು ಸ್ಥಳೀಯ ಸರ್ಕಾರವು ನೇಮಕ ಮಾಡಿಕೊಳ್ಳತಕ್ಕದ್ದು". ಹೀಗಾಗಿ ವಿಷಯಗಳನ್ನು ಹೇಗೆ ವರ್ಗೀಕರಿಸುತ್ತಿದ್ದರು ಎಂದರೆ ಯಾವ ಇಲಾಖೆಗಳನ್ನು ತಮಗೆ ವಹಿಸುತ್ತಿದ್ದರೋ ಅಲ್ಲಿ ಕೂಡ ಮಂತ್ರಿಗಳು ಯಶಸ್ವಿಯಾಗಿ ಕಾರ್ಯ ನಿರ್ವಹಕ ಮಾಡುವುದು ಅಸಾಧ್ಯವಾಗುತ್ತಿತ್ತು. ಅವರ ಕಷ್ಟಗಳು ಇನ್ನೂ ಹೆಚ್ಚಾದುದಕ್ಕೆ ಕಾರಣ ತಮ್ಮ ಅಧೀನದಲ್ಲಿದ್ದ ಇಲಾಖೆಯನ್ನು ಅಭಿವೃದ್ಧಿ ಪಡಿಸಲು ಅವಶ್ಯಕವಾದ ಹಣದ ವ್ಯವಹಾರದ ಮೇಲೆ ಅವರಿಗೆ ಯಾವ ಅಧಿಕಾರವೂ ಇಲ್ಲದೇ ಇದ್ದದ್ದು.

ಮಡ್ಡಿಮನ್ ಸಮಿತಿಯ ಮುಂದೆ (ಈ ಸಮಿತಿಯ ವಿಷಯ ಮುಂದೆ ಪ್ರಸ್ತಾಪಿಸಲಾಗುವುದು) ಮಂತ್ರಿಗಳಾಗಿ ಈ ಸುಧಾರಣೆಗಳನ್ನು ರೂಪಿಸಿದವರೇ ಸುಧಾರಣೆಗಳನ್ನು ಜಾರಿಗೆ ತರುವುದರಲ್ಲಿ ಯಶಸ್ಸು ದೊರೆಯಿತೆ ಇಲ್ಲವೇ ಎಂಬುದನ್ನು ಕುರಿತು ನೀಡಿದ ಸಾಕ್ಷ್ಯಗಳನ್ನು ನೋಡಿದರೆ ಅವುಗಳನ್ನು ಕುರಿತು ತೀರ್ಮಾನ ಕೈಗೊಳ್ಳುವುದು ಸುಲಭವಾಗುತ್ತದೆ. ಅವರಲ್ಲಿ ಕೆಲವರ ಹೋಳಿಕೆಗಳನ್ನು ಮೇಲೆ ಉದ್ಧರಿಸಿದ್ದೇವೆ. ದ್ವಿಪ್ರಭುತ್ವ ಎಂದು ಹೆಸರು ಪಡೆದ ಸುಧಾರಣೆಗಳು ಸಾಮಾನ್ಯವಾಗಿ ಹೇಗೆ ಕೆಲಸ ಮಾಡಿದವು ಎಂಬುದನ್ನು ನೋಡಲು ಇನ್ನೂ ಕೆಲವು ಹೇಳಿಕೆಗಳನ್ನು ಉದ್ಧರಿಸಬಹುದು. ಪ್ರಾಂತಗಳ ಎಲ್ಲ ಮಂತ್ರಿಗಳೂ ಒಬ್ಬನೂ ಬಿಡದೆ ದ್ವಿಪ್ರಭುತ್ವ ಅಥವಾ ಜೋಡಿ ಆಡಳಿತ ನಿಷ್ಫಲವಾಯಿತು ಎಂದೇ ಹೇಳಿದ್ದಾರೆ. ಅಲ್ಲದೆ ಅದು ಆದಷ್ಟು ಬೇಗ ಹೋಗಬೇಕು ಎಂದು ಹೇಳಿದರು. (ಸುರೇಂದ್ರನಾಥ ಬ್ಯಾನರ್ಜಿ). ಸರ್ ಪಿ.ಸಿ. ಮಿಟ್ಟರ್ (ಬಂಗಾಳ) ಹೀಗೆಂದರು; " ಸರ್ಕಾರವನ್ನು ಸೇರಿದ ಕೂಡಲೆ ನನಗೆ ತಿಳಿಯಿತು. ಈ ವ್ಯವಸ್ಥೆ ಅಸಮರ್ಪಕ ಮತ್ತು ಕಾರ್ಯಯೋಗ್ಯವಲ್ಲ ಎಂದು". ಬಿಹಾರ ಮತ್ತು ಒರಿಸ್ಸಾಗಳ ಮಂತ್ರಿಗಳ ಅಭಿಪ್ರಾಯದಲ್ಲಿ "ದ್ವಿಪ್ರಭುತ್ವ ನಾಶವಾಗಿ ಹೋಗಿದೆ, ಅದನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವುದು ಅಸಾಧ್ಯ". ಎಂ. ವಿ. ಜೋಷಿ (ಮಧ್ಯಪ್ರಾಂತ) ಹೀಗೆಂದರು: "ಕಾರ್ಯಗತಗೊಳಿಸಬಲ್ಲ ಪ್ರಯೋಗವಾಗಿ ದ್ವಿಪ್ರಭುತ್ವಕ್ಕೆ ನಿಷ್ಪಕ್ಷಪಾತವಾದ ಅವಕಾಶ ದೊರೆತೂ ಇಲ್ಲ, ದೊರೆಯುವ ಸಾಧ್ಯತೆಯೂ ಇಲ್ಲ; (ಮದರಾಸಿನ ಮಂತ್ರಿಗಳಾದ) ಸರ್. ಕೆ.ವಿ. ರೆಡ್ಡಿಯವರು ಹೀಗೆಂದರು; "ದ್ವಿಪ್ರಭುತ್ವ ಸೋತಿದೆ ಎಂದು ಎಲ್ಲರೂ ಒಪ್ಪಿದ್ದಾರೆ. ಯಾವ ಇಂಗಿತವನಿಟ್ಟುಕೊಂಡು ಸುಧಾರಣೆಗಳನ್ನು ರೂಪಿಸಿದರೋ ಅದನ್ನು ಆಧರಿಸಿ ಅವನ್ನು ಜಾರಿಗೆ ತರಲು ಪ್ರಾಮಾಣಿಕ ಪ್ರಯತ್ನ ನಡೆಸಿದ ಮದರಾಸಿನಲ್ಲಿ ಕೂಡ ದ್ವಿಪ್ರಭುತ್ವ ಸಂಪೂರ್ಣವಾಗಿ ಸೋತಿದೆ". ಬೊಂಬಾಯಿಯ ಕಾರ್ಯ ನಿರ್ವಾಹಕ ಮಂಡಳಿಯ ಸದಸ್ಯರು ಮತ್ತು ಮಂತ್ರಿಗಳು ಒಂದು ಜಂಟಿ ಹೇಳಿಕೆಯಲ್ಲಿ ಹೀಗೆ ಹೇಳಿದರು; "ಸುಧಾರಣೆಗಳ ಮುಖ್ಯ ಉದ್ದೇಶ ಭಾರತೀಯ ದೃಷ್ಟಿಗೆ ಹೆಚ್ಚು ಪ್ರಾಧಾನ್ಯ ನೀಡಿ ಈ ದೇಶವನ್ನು ಆಳಬೇಕೆಂಬುದು, ಆದರೆ ಆ ಉದ್ದೇಶವು ನೆರವೇರಿಲ್ಲ".

ಮೇಲೆ ವರ್ಣಿಸಿದಂತೆ ಸುಧಾರಣೆಗಳು ಹೇಗೆ ಜಾರಿಗೆ ಬಂದವು ಎಂಬುದನ್ನು ನೋಡಿದಾಗ ಅಸಹಕಾರ ಚಳುವಳಿಗಾರರು ನಿಜವಾದ ಜವಾಬ್ದಾರಿಯನ್ನು ನೀಡದೆ ಇದ್ದರೆ ತಾವು ಅಧಿಕಾರವನ್ನು ವಹಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದು ಎಂತಹ ದೂರದೃಷ್ಟಿಯ ತೀರ್ಮಾನ ಎಂಬುದನ್ನು ಅರಿತು ನಾವು ಅದನ್ನು ಮೆಚ್ಚಲೇಬೇಕಾಗುತ್ತದೆ. ಈ ವ್ಯವಸ್ಥೆಯಲ್ಲಿ ತಾವು ಅಧಿಕಾರವನ್ನು ಸ್ವೀಕರಿಸುವುದೆಂದರೆ "ಕಾರ್ಯ ನಿರ್ವಾಹಕ ಸರ್ಕಾರದ ಕೈಗೊಂಬೆಗಳಾಗುವುದಲ್ಲದೆ ಸಾರ್ವಜನಿಕರು ಆರಿಸಿದ ಪ್ರತಿನಿಧಿಗಳಾಗಿ ಅವರಿಗೆ ಸೇವೆಯನ್ನು ಸಲ್ಲಿಸಿದಂತಾಗುವುದಿಲ್ಲ ಎಂದು ಅಸಹಕಾರಿಗಳು ಘೋಷಿಸಿದಾಗಿ ಅವರು ದ್ವಿಪ್ರಭುತ್ವದ ದೋಷಗಳನ್ನೇನೂ ಉತ್ಪ್ರೇಕ್ಷಿಸುತ್ತಿರಲಿಲ್ಲ". ನ್ಯಾಯಪರ ದೃಷ್ಟಿಯುಳ್ಳ ಕೆಲವು ಯುರೋಪಿಯನ್ನರೂ ಈ ಚುನ್ನಾರವನ್ನು ಅರ್ಥಮಾಡಿಕೊಂಡು ಇನ್ನೂ ಕಠಿಣತರವಾದ ಅಭಿಪ್ರಾಯಕ್ಕೆ ಬಂದಿದ್ದರು. ಬಂಗಾಳದ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಎರಡು ಅವಧಿಯಲ್ಲಿ ಯುರೋಪಿಯನ್ನರನ್ನು ಪ್ರತಿನಿಧಿಸಿದ್ದ ಇ. ವಿಲ್ಲಿಯರ್ಸ್ ಆರು ವರ್ಷಗಳ ಕಾಲ ಈ ಸುಧಾರಣೆಗಳು ಕೆಲಸ ಮಾಡುವುದನ್ನು ನೋಡಿದ ಮೇಲೆ ಮಂತ್ರಿಗಳ ಜವಾಬ್ದಾರಿಯನ್ನು ಕುರಿತಂತೆ ಒಂದು ಬಹಿರಂಗ ಹೇಳಿಕೆಯನ್ನು ನೀಡಿದ. ಅದರಲ್ಲಿ ಆತ ಹೀಗೆ ಹೇಳಿದ್ದಾನೆ: "ಭಾರತಕ್ಕೆ ಜವಾಬ್ದಾರಿಯನ್ನು ಹೇಳಿ ಕೊಡುವುದರ ಬದಲು ನಾವು ಜವಾಬ್ದಾರಿಯನ್ನು ಕಳಿಸುತ್ತಿದ್ದೇವೆ. ಸುಧಾರಣೆಗಳನ್ನು ಪುನರ್ ರೂಪಿಸಿದ ಹೊರತು, ಪ್ರಾಂತಗಳಿಗೂ ಪ್ರತ್ಯೇಕ ಸಂಸ್ಥಾನಗಳಿಗೂ

ಅದನ್ನು ಅನ್ವಯಿಸದ ಹೊರತು, ವರ್ಗಾಹಿತ ವಿಷಯಗಳನ್ನು - ಅವು ಏಷ್ಟೇ ಸಣ್ಣದಾಗಿರಲಿ, ಅಮುಖ್ಯವಾಗಿರಲಿ - ಗವರ್ನರ್ ಮೂಗು ತೂರಿಸದೆ , ಕೌನ್ಸಿಲ್‌ನಲ್ಲಿ ಸರ್ಕಾರಿ ಮತಗಳ ಮಧ್ಯ ಪ್ರವೇಶವಿಲ್ಲದೆ ಚಾಚೂ ಬಿಡದೆ, ಸಂಪೂರ್ಣವಾಗಿ ವರ್ಗಾಯಿಸಿದಲ್ಲದೆ ಸುಧಾರಣೆಗಳು ಯಶಸ್ವಿಯಾಗುವ ಸಂಭವ ನನಗೆ ಕಾಣುತ್ತಿಲ್ಲ". ಇದು ನಿಜವಾಗಿ ತರ್ಕಬದ್ಧವಾದ ಅಭಿಪ್ರಾಯ. ನಿಯಮಗಳನ್ನು ರೂಪಿಸುವ ಅಧಿಕಾರವನ್ನು ಹೊಂದಿದ್ದ ಬೇಜವಾಬ್ದಾರಿಯ ಅಧಿಕಾರ ವರ್ಗವು ತಮ್ಮ ಯೋಗ ಕ್ಷೇಮವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಭಾರತದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಹೊರಟ ಪಾರ್ಲಿಮೆಂಟಿನ ಉದ್ದೇಶವನ್ನು ಹೇಗೆ ಭಾಗಗೊಳಿಸಿತು ಎಂಬುದನ್ನು ಮೇಲಿನ ಹೇಳಿಕೆಯು ಸ್ಪಷ್ಟ ಪಡಿಸುತ್ತದೆ. ಇಷ್ಟೆಲ್ಲಾ ಆದರೂ, ಮುಂದೆ ಉದಾರವಾದಿ ಪಕ್ಷದವರು ಎಂದು ಹೆಸರು ಪಡೆದ ಮಧ್ಯಗಾಮಿ ಪಕ್ಷದ ನಾಯಕರು ಚೆನ್ನಾಗಿ ಕೆಲಸ ಮಾಡಿದರು ಎಂದು ಹೇಳಲೇಬೇಕು. ಅವರಿಗಿದ್ದ ಮೇಲೆ ಹೇಳಿದ ಅನೇಕ ಅಡ್ಡಿ ಆತಂಕಗಳ ನಡುವೆಯೂ ಕಾರ್ಯನಿರ್ವಹಣೆಯಲ್ಲಿ ಅವರು ತೋರಿದ ದಕ್ಷತೆ ಮತ್ತು ಸಾಮರ್ಥ್ಯಗಳನ್ನು ನೆನೆದರೆ, ಭಾರತೀಯರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ಎಷ್ಟು ದಕ್ಷರು ಎಂಬುದು ಗೊತ್ತಾಗುತ್ತದೆ. ರಾಜಕೀಯ ನಾಯಕರು ಮತ್ತು ಐ.ಸಿ.ಎಸ್. ಕಾರ್ಯದರ್ಶಿಗಳ ನಡುವಣ ಸಂಬಂಧ ಹೇಗಿರುತ್ತದೋ ಎಂಬ ಸಂದೇಹ ಸುಳ್ಳಾಯಿತು. ಒಟ್ಟಾರೆ ಎರಡೂ ಪಕ್ಷದವರು ತೋರಿಸಿದ ಚಾಕಚಕ್ಯತೆಯಿಂದಾಗಿ ಅಧಿಕಾರದ ಹಸ್ತಾಂತರವು ಸುಗಮವೂ ತೊಂದರೆಗಳಿಲ್ಲದ್ದೂ ಆಯಿತು. ಒಂದು ಸ್ವಾರಸ್ಯದ ಸಂಗತಿಯೆಂದರೆ ಒಬ್ಬ ಐ.ಸಿ.ಎಸ್. ಅಧಿಕಾರಿ ನ್ಯಾಯಾಧೀಶನಾಗಿದ್ದಾಗ, ಮೇಲೆ ಹೇಳಿದ ಬಾರಿಸಾಲ್ ಸಮಾವೇಶದ ಸಂದರ್ಭದಲ್ಲಿ ಸುರೇಂದ್ರನಾಥ ಬ್ಯಾನರ್ಜಿಯವರನ್ನು ಒರಟಾಗಿ ನಡೆಸಿಕೊಂಡಿದ್ದ. ಬ್ಯಾನರ್ಜಿಯವರು ಮಂತ್ರಿಯಾದಾಗ ಅವನೇ ಅವರ ಕಾರ್ಯದರ್ಶಿಯಾಗಿ ಕೆಲಸ ಮಾಡಿದ. ಈ ಎಲ್ಲವೂ ಸುಧಾರಣೆಗಳಲ್ಲಿ ಹೆಚ್ಚಿನ ಪ್ರಗತಿಯನ್ನು ತರಲು ಸಹಾಯ ಮಾಡಿದವು. ಕೊನೆಗೆ ಅವು ಭಾರತೀಯರು ವಾಸ್ತವಿಕ ಘಟನೆಗಳನ್ನು ಅವಲಂಬಿಸಿ ಹೆಚ್ಚಿನ ಸುಧಾರಣೆಗಳಿಗಾಗಿ ಒತ್ತಾಯಿಸಲು ಅವಕಾಶವನ್ನಂತೂ ಕಲ್ಪಿಸಿಕೊಟ್ಟವು. ಒಮ್ಮೊಮ್ಮೆಯಾದರೂ ಮಂತ್ರಿಗಳು ತಮ್ಮ ಅಧಿಕಾರ ಸ್ಥಾನದ ಗಾಂಭೀರ್ಯವನ್ನು ಸಮರ್ಪಕವಾಗಿ ಕಾಪಾಡಿದರು. ಸಂಯುಕ್ತ ಪ್ರಾಂತದ ಇಬ್ಬರು ಮಂತ್ರಿಗಳು ಸಿ.ವೈ. ಚಿಂತಾಮಣಿ ಮತ್ತು ಜಗತ್ ನಾರಾಯಣ್ ತಾವು ಅನ್ಯಾಯ ಎಂದು ಭಾವಿಸಿದ ಗವರ್ನರ್‌ನ ಕ್ರಮದ ವಿರುದ್ಧ ಪ್ರತಿಭಟಿಸಿ ರಾಜೀನಾಮೆ ಸಲ್ಲಿಸಿದರು.

ಅಧಿಕಾರದಲ್ಲಿದ್ದಾಗಲೂ ಲಿಬರಲ್ ಪಕ್ಷವು, ಸುಧಾರಣೆಗಳು ಹೆಚ್ಚು ವಾಸ್ತವಿಕವೂ ಪ್ರಯೋಜನಶಾಲಿಯಾಗಿಯೂ ಆಗಿ ಮಾಡುವಂತೆ ಸರ್ಕಾರವನ್ನು ಒತ್ತಾಯಿಸುತ್ತಲೇ ಹೋದವು. 1924 ರಲ್ಲಿ ಪ್ರಾಂತಗಳಲ್ಲಿ ಪೂರ್ಣ ಜವಾಬ್ದಾರಿ ಸರ್ಕಾರವನ್ನು ತರುವಂತೆಯೂ ರಕ್ಷಣೆ ಮತ್ತು ವಿದೇಶಾಂಗ ನೀತಿಯ ಹೊರತು ಕೇಂದ್ರದ ಉಳಿದೆಲ್ಲ ಇಲಾಖೆಗಳನ್ನು ಜನರ ಆಡಳಿತಕ್ಕೆ ಒಪ್ಪಿಸುವಂತೆಯೂ ಆ ಪಕ್ಷವು 1921 ರಲ್ಲೇ ಸರ್ಕಾರವನ್ನು ಒತ್ತಾಯಿಸುವ ಮಸೂದೆಯನ್ನು ಮಂಡಿಸಿದವು. ಇದರಿಂದ 1930 ರಲ್ಲಿ ಭಾರತಕ್ಕೆ ಪೂರ್ಣ ಅಧಿರಾಜ್ಯ ಸ್ಥಾನಮಾನ ದೊರೆಯುವಂತೆ ಮಾಡುವುದು ಅದರ ಉದ್ದೇಶ. ಸರ್ಕಾರವು ಠರಾವನ್ನು ವಿರೋಧಿಸಿದರೂ ಅಸೆಂಬ್ಲಿಯ ಅಭಿಪ್ರಾಯವನ್ನು ಭಾರತದ ಸೆಕ್ರೆಟರಿ ಆಫ್ ಸ್ಟೇಟ್‌ಗೆ ತಲುಪಿಸಲು ಒಪ್ಪಿತು.

ಮಧ್ಯಗಾಮಿ ಪಕ್ಷದವರು ಪ್ರಶಂಸೆಗೆ ಅರ್ಹರಾಗುವಂತಹ ಸಾಧನೆಯನ್ನು ಮಾಡಿದರು ಎಂಬುದನ್ನು ದಾಖಲುಗೊಳಿಸಬೇಕಾಗಿದೆ. ಅದೆಂದರೆ ವಸಾಹತು ಸ್ವಯಮಾಡಳಿತ ಸರ್ಕಾರವನ್ನು ಸ್ಥಾಪಿಸಬೇಕಾದದ್ದು ತಮ್ಮ ಗುರಿ ಎಂಬುದನ್ನು ಅವರು ಮರೆಯಲೇ ಇಲ್ಲ. ಕಾನೂನು ಮತ್ತು ರಾಜ್ಯಾಂಗದ ಮಿತಿಯಲ್ಲಿ, ಎಲ್ಲ ವಿಧಾನಗಳನ್ನು ಅನುಸರಿಸಿ, ಸರ್ಕಾರದ ಮೇಲೆ ಅವರು ಈ ವಿಷಯದಲ್ಲಿ ಒತ್ತಡವನ್ನು ಹೇರುತ್ತಲೇ ಹೋದರು. ಈ ಸಂದರ್ಭದಲ್ಲಿ ಉಲ್ಲೇಖಿಸಬೇಕಾದ ಅಂಶವೆಂದರೆ ಬ್ರಿಟಿಷ್ ಹೌಸ್ ಆಫ್ ಕಾಮನ್ಸ್‌ನಲ್ಲಿ ಕಾಮನ್ ವೆಲ್ತ್ ಆಫ್ ಇಂಡಿಯಾ ಮಸೂದೆಯು ವಾಸ್ತವವಾಗಿ ಮಂಡಿಸಲ್ಪಟ್ಟು ಲೇಬರ್ ಪಕ್ಷದ ಬೆಂಬಲವನ್ನು ಅದು ಪಡೆದದ್ದು. ಅದರ ಇತಿಹಾಸವು ಮುಂದೆ ಚರ್ಚಿಸಲ್ಪಡುತ್ತದೆ.

1921 ರ ಸೆಪ್ಟೆಂಬರ್ 22 ರಂದು ಜದುನಾಥ್ ಮಜುಂದಾರ್ ಒಂದು ಠರಾವನ್ನು ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಮಂಡಿಸಿದ. ಲೆಜಿಸ್ಲೇಟಿವ್ ಕೌನ್ಸಿಲ್‌ಗಳ ಮುಂದಿನ ಅಧಿವೇಶನದಿಂದ ಪ್ರಾಂತಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಮಂತ್ರಿಮಂಡಲದ ನೆರವನ್ನು ಪಡೆದ ಗವರ್ನರ್‌ನ ಆಡಳಿತಕ್ಕೆ ಸೈನ್ಯ, ನೌಕಾಬಲ, ವಿದೇಶಿ ವ್ಯವಹಾರ ಮತ್ತು ರಾಜಕೀಯ ವ್ಯವಹಾರಗಳನ್ನುಳಿದು ಉಳಿದು ಎಲ್ಲ ವಿಷಯಗಳನ್ನು ಮಂತ್ರಿಮಂಡಲದ ನೆರವನ್ನು ಪಡೆದ ಗವರ್ನರ್ ಜನರಲ್‌ನ ಆಡಳಿತಕ್ಕೂ ವರ್ಗಾಹಿಸಬೇಕು ಎಂಬುದು ಠರಾವಿನ ಆಶಯವಾಗಿತ್ತು.

ವಾಸ್ತವವಾಗಿ, ಜವಾಬ್ದಾರಿ ಸರ್ಕಾರದ ವ್ಯವಸ್ಥೆಯನ್ನು ಜಾರಿಗೊಳಿಸುವ ವಿಷಯದಲ್ಲಿ ಸುಧಾರಣೆಗಳು ಶೋಚನೀಯವಾಗಿ ಸೋತಿದ್ದರೂ ಪ್ರಾಂತಗಳಲ್ಲಿ ಮತ್ತು ಕೇಂದ್ರದಲ್ಲಿ ಶಾಸಕಾಂಗಗಳು ಕೆಲಸ ಮಾಡುವ ವಿಷಯದಲ್ಲಿ ಅವು ಹೆಚ್ಚು ಯಶಸ್ವಿಯಾದವು. ಅವು ಅಲ್ಪ ಪ್ರಮಾಣದಲ್ಲಾದರೂ ಕಾರ್ಯಾಂಗದ ಮೇಲೆ ಪ್ರಭಾವ ಬೀರಿದುವು.

ಮೊದಲನೆಯದಾಗಿ, ಶಾಸಕರು ಹಣವನ್ನು ಮಂಜೂರು ಮಾಡಲು ತಮಗೆ ಇದ್ದ ಹಕ್ಕನ್ನು ಕೌನ್ಸಿಲಿನ ಅಭಿಮತಕ್ಕೆ ಅನುಗುಣವಾಗಿ ಕಾರ್ಯಾಂಗವು ಕೆಲಸ ಮಾಡುವಂತೆ ಒತ್ತಾಯಿಸಲು ಬಳಸಿಕೊಂಡವು. ಇದಕ್ಕೆ ಒಂದು ಮುಖ್ಯವಾದ ನಿದರ್ಶನ ಎಂದರೆ 1922 - 23 ರ ಬಜೆಟ್‌ನಲ್ಲಿ 60 ಲಕ್ಷ ರೂ ಕಡಿತಗೊಳಿಸದಿದ್ದರೆ ಸ್ಟ್ಯಾಂಪ್ ಬಿಲ್ಸ್‌ನ್ನು ತಾವು ಅನುಮೋದಿಸುವುದಿಲ್ಲವೆಂದು ಬೊಂಬಾಯಿ ಕೌನ್ಸಿಲ್ ಸದಸ್ಯರು ಹೆದರಿಸಿದ್ದು, ಸರ್ಕಾರ ಒಪ್ಪಿ ತನ್ನ ನಿಲುವನ್ನು ಸಡಿಲಗೊಳಿಸಬೇಕಾಯಿತು. ಆದರೆ ಈ ಸಂಗತಿಯೂ ಸತ್ಯ ಹಾಗೆ ಕಡಿತಗೊಳಿಸಿದ ಬಾಬ್ತುಗಳನ್ನು ಸರ್ಕಾರವು ತನಗಿದ್ದ ಮಂಜೂರಾತಿಯ ಹಕ್ಕನ್ನು ಬಳಸಿ ಮತ್ತು ಮಂಜೂರು ಮಾಡಿಕೊಳ್ಳುವುದೂ ನಡೆಯುತ್ತಿತ್ತು. ಆದರೂ ಅಂತಹ ಅಧಿಕಾರಶಾಹಿ ಸರ್ಕಾರವೂ ಪ್ರತಿಯೊಂದು ಸಲವೂ ಹಾಗೆ ಮಾಡಲು ಬಯಸದೆ ಕಾನ್ಸಿಲಿನೊಂದಿಗೆ ರಾಜಿ ಮಾಡಿಕೊಳ್ಳುತ್ತಿತ್ತು. ಸರ್ಕಾರವೂ ಕೂಡ ಶಾಸಕಾಂಗದ ಭಾರತೀಯ ಸದಸ್ಯರು ತನ್ನ ಹಕ್ಕನ್ನು ಜವಾಬ್ದಾರಿಯುತವಾಗಿ ಚಲಾಯಿಸುತ್ತಿದ್ದರು ಎಂಬುದನ್ನು ಒಪ್ಪಿಕೊಂಡಿದೆ. ಮುಂದೊಮ್ಮೆ ಸ್ವರಾಜ್ಯ ಪಕ್ಷವು ಇಡೀ ಬಜೆಟ್ಟನ್ನು ತಿರಸ್ಕರಿಸಿತು. ಆದರೆ ಅದು ಹೋರಾಟದ ಒಂದು ಭಾಗವಾಗಿ ಹಾಗೆ ಮಾಡಿದ್ದು, ಆದ್ದರಿಂದ ಸಾಮಾನ್ಯ ನಡವಳಿಕೆಯೇ ಅದು ಎಂದು ಭಾವಿಸಲಾಗದು. ಸಾಂಕೇತಿಕವಾಗಿ (ಬಜೆಟ್) ಕಡಿತಕ್ಕೆ ಠರಾವನ್ನು ಮಂಡಿಸುವ ಹಕ್ಕು ಸದಸ್ಯರಿಗೆ ಕಾರ್ಯಾಂಗವನ್ನು ಟೀಕಿಸುವುದಕ್ಕೆ ನೆರವು ನೀಡುತ್ತಿತ್ತು, ಹಾಗೂ ಅದರ ಕಾರ್ಯ ವಿಧಾನವನ್ನು ಸ್ವಲ್ಪ ಮಟ್ಟಿಗೆ ತಿದ್ದುವ ಅಥವಾ ನಿಯಂತ್ರಿಸುವ ಅವಕಾಶವನ್ನು ಒದಗಿಸುತ್ತಿತ್ತು.

ಶಾಸಕರು ಕೂಡ ಪ್ರಶ್ನೆಗಳನ್ನು ಕೇಳುವ, ಠರಾವುಗಳನ್ನು ಮಂಡಿಸುವ ಕೌನ್ಸಿಲ್ ಅಥವಾ ಅಸೆಂಬ್ಲಿಗಳ ಅಧಿವೇಶನಗಳನ್ನು ಮುಂದೂಡಲು ಬಯಸುವ ತಮ್ಮ ಹಕ್ಕುಗಳನ್ನು ಧಾರಾಳವಾಗಿಯೇ ಬಳಸಿಕೊಂಡರು. ಪ್ರಶ್ನೆಗಳು ಸಾರ್ವಜನಿಕವಾಗಿ ಮುಖ್ಯವಾಗಿರುವ ಅನೇಕ ವಾಸ್ತವಾಂಶಗಳನ್ನು ಒಳಗೊಂಡಿರುತ್ತಿದ್ದವು. ಕಾರ್ಯಾಂಗ ಮತ್ತು ನ್ಯಾಯಾಂಗಗಳ ಕಾರ್ಯಗಳನ್ನು ಬೇರ್ಪಡಿಸುವುದು, ಪಾನ ನಿರೋಧವನ್ನು ಪ್ರೋತ್ಸಾಹಿಸುವುದು, ರೈಲ್ವೆ ಪ್ರಯಾಣಿಕರ ಕುಂದು ಕೊರತೆಗಳು ಮುಂತಾದ ಸಾರ್ವಜನಿಕ ನೀತಿಗೆ ಸಂಬಂಧಿಸಿದ ಅನೇಕಾನೇಕ ವಿಷಯಗಳು ಠರಾವುಗಳಲ್ಲಿ ಸೇರಿರುತ್ತಿದ್ದವು. ಮದರಾಸು ಅಸೆಂಬ್ಲಿಯು ಅಂಗೀಕರಿಸಿದ ಮಸೂದೆಗಳಲ್ಲಿ ಕೆಲವು ಮಹಿಳೆಯರಿಗೆ ಮತದಾನದ ಹಕ್ಕಿನ ನೀಡಿಕೆ (1921 ರ ಏಪ್ರಿಲ್ 1), ಪ್ರಾಂತಗಳ ದೇಣಿಗೆಗಳ ಪುನರ್ನಿರ್ಧಾರ (1921 ರ ಏಪ್ರಿಲ್ 2), ಭೂ ಕಂದಾಯದ ಶಾಶ್ವತ ತೀರ್ಮಾನ (1921 ರ ಡಿಸೆಂಬರ್14) ಮತ್ತು ಖರ್ಚು ವೆಚ್ಚಗಳನ್ನು ಕಡಿಮೆ ಮಾಡಲು ಸಮಿತಿಯ ನೇಮಕ (1922 ರ ಸೆಪ್ಟೆಂಬರ್ 16). ಬಂಗಾಳದಲ್ಲಿ ಮಂತ್ರಿ ಸುರೇಂದ್ರ ನಾಥ ಬ್ಯಾನರ್ಜಿಯವರು 1923 ರ ಕಲ್ಕತ್ತಾ ಮುನಿಸಿಪಲ್ ಕಾಯಿದೆಗೆ ತಿದ್ದುಪಡಿ ತಂದರು. 1899 ರಲ್ಲಿ ಲಾರ್ಡ್ ಕರ್ಜನ್ಸ್‌ನ ಪ್ರತೀಗಾಮಿ ಶಾಸನದ ವಿರುದ್ಧ ಬ್ಯಾನರ್ಜಿಯವರೂ ಸೇರಿದಂತೆ 27 ಸದಸ್ಯರು ಕಾರ್ಪೋರೇಷನ್ನಿಗೆ ರಾಜೀನಾಮೆ ಸಲ್ಲಿಸಿದರು. ಈಗ ಆ ಶಾಸನವನ್ನು ರದ್ದುಗೊಳಿಸುವುದು ಸಾಧ್ಯವಾಯಿತು. ಹೊಸ ಕಾಯಿದೆಯು ಕಾರ್ಪೋರೇಷನ್ನಿಗೆ ಪ್ರಜಾಸತ್ತೆಯ ಸ್ವರೂಪವನ್ನು ನೀಡಿತು. ಆದ್ದರಿಂದ 1924 ರಲ್ಲಿ ಸ್ವರಾಜ್ಯ ಪಕ್ಷವು ಅದನ್ನು ವಶಕ್ಕೆ ತೆಗೆದುಕೊಳ್ಳುವುದು ಸಾಧ್ಯವಾಯಿತು. ರಾಜಕೀಯ ಖೈದಿಗಳಿಗೆ ಅಧಿಕಾರಿಗಳು ಛಡಿ ಏಟು ಕೊಟ್ಟಾಗ ಲೆಜೆಸ್ಲೇಟಿವ್ ಕೌನ್ಸಿಲ್ ಅದನ್ನು ಪ್ರತಿಭಟಿಸಿತು. ಬಂದೀ ಖಾನೆಗಳ ಖಾತೆಯನ್ನು ವಹಿಸಿಕೊಂಡಿದ್ದ ಸರ್ ಅಬ್ದುಲ್ ರಹೀರ ಅಧಿಕಾರಿಗಳ ವರ್ತನೆಯನ್ನು ಒಪ್ಪಲಿಲ್ಲ. ಆದರೆ ಸರ್ಕಾರವೂ ಅದನ್ನು ಒಪ್ಪದಂತೆ ಮಾಡಲು ಸಾಧ್ಯವಾಗದ್ದರಿಂದ ಅವರು ಬಂದೀ ಖಾನೆಗಳ ಖಾತೆಗೆ ರಾಜೀನಾಮೆಯನ್ನು ಸಲ್ಲಿಸಿದರು.

ಸುಧಾರಣೆಗಳ ಯೋಜನೆಯನ್ವಯ ಅಸ್ತಿತ್ವಕ್ಕೆ ತಂದ ಲೆಜೆಸ್ಲೇಟಿವ್ ಅಸೆಂಬ್ಲಿಗೆ ಕಾರ್ಯಾಂಗದ ಮೇಲೆ ಯಾವ ಅಧಿಕಾರವೂ ಇರಲಿಲ್ಲ. ಪ್ರಾಂತ ಕೌನ್ಸಿಲ್‌ಗಳಾದರೂ ಅಲ್ಪ ಸ್ವಲ್ಪ ಅಧಿಕಾರಗಳು ಕಾರ್ಯಾಂಗದ ಮೇಲೆ ಇದ್ದವು. ಆದರೂ ಅಸೆಂಬ್ಲಿಯು ರಾಷ್ಟ್ರೀಯ ಪ್ರಾಮುಖ್ಯದ ಅನೇಕ ವಿಷಯಗಳನ್ನು ಕುರಿತಂತೆ ಅನೇಕ ಶಾಸನಗಳನ್ನು ಮಾಡಿದ ಕೀರ್ತಿಗಳನ್ನು ಗಳಿಸಿದೆ. ಅವುಗಳಲ್ಲಿ ಕೆಲವನ್ನು ಕೆಳಗೆ ನಮೂದಿಸಲಾಗಿದೆ.

1. ಕ್ರಿಮಿನಲ್ ಕಾನೂನಿನಲ್ಲಿ ಭಾರತದ ಯುರೋಪಿಯನ್ನರು ವಿಶೇಷ ಹಕ್ಕುಗಳನ್ನು ಅನುಭವಿಸುತ್ತಿದ್ದರು. 1849 ರ ಕರಾಳ ಕಾಯಿದೆ ಮತ್ತು 1883 ರ ಇಲ್‌ಬರ್ಟ್ ಮಸೂದೆಯು ಆ ಹಕ್ಕುಗಳನ್ನು ಹೋಗಲಾಡಿಸಲು ಪ್ರಯತ್ನಿಸಿದುದರ ಬಗ್ಗೆ ಹಿಂದೆ

ಉಲ್ಲೇಖಿಸಲಾಗಿದೆ. ಕಾನೂನಿನಲ್ಲಿ ಈ ಜನಾಂಗೀಯ ಭೇದವನ್ನು ಭಾರತದ ಸಾರ್ವಜನಿಕ ಅಭಿಪ್ರಾಯವು ಉಗ್ರವಾಗಿ ಪ್ರತಿಭಟಿಸುತ್ತಲೇ ಹೋಯಿತು. ಲೆಜಿಸ್ಲೇಟಿವ್ ಅಸೆಂಬ್ಲಿಯು ಸೇರಿದ ಒತ್ತಡದಿಂದಾಗಿ ಸರ್ಕಾರವು ಈ ಎದ್ದು ಕಾಣುವ ಪಕ್ಷಪಾತವನ್ನು ಅಸಯ್ಯಕರವಾದ ವಿಶೇಷ ಹಕ್ಕುಗಳನ್ನೂ ತೆಗೆದು ಹಾಕಿತು.

2. ಭಾರತೀಯನ ವೈಯುಕ್ತಿಕ ಸ್ವಾತಂತ್ರ್ಯವನ್ನು ತಕ್ಕಷ್ಟು ಮಟ್ಟಿಗೆ ಮೊಟಕುಗೊಳಿಸಿದ ವಿವಿಧ ಕಾನೂನುಗಳ ವಿಷಯವನ್ನು ಈ ಹಿಂದೆ ಹೇಳಿದ್ದೇವೆ. ಕಾರ್ಯಾಂಗವು ಅತಿ ವಿಶೇಷವಾದ ಅಧಿಕಾರಗಳಿಂದ ಸಜ್ಜಿತವಾಗಿ ಜನರ ಮೇಲೆ ಕ್ಷುದ್ರ ಮೊಕದ್ದಮ್ಮೆಗಳನ್ನು ಹೂಡಿ ಅವರಿಗೆ ತೊಂದರೆ ಕೊಡುವುದು ಇಲ್ಲವೆ ವಿಚಾರಣೆಯೂ ಇಲ್ಲದೆ ಬಂಧನದಲ್ಲಿಡುವುದು ಮುಂತಾದುವನ್ನು ಮಾಡುತ್ತಿತ್ತು. ಭಾರತದ ಎಲ್ಲ ವರ್ಗಗಳೂ ಸಾರ್ವಜನಿಕ ಅಭಿಪ್ರಾಯದ ಮೂಲಕ ಕಾನೂನುಗಳೇ ಅಲ್ಲದ ಈ ಕಾನೂನುಗಳನ್ನು ಉಗ್ರವಾಗಿ ವಿರೋಧಿಸಿದವು. 1921 ರ ಫೆಬ್ರವರಿ 14 ರಂದು ಶ್ರೀನಿವಾಸ ಶಾಸ್ತ್ರೀಯವರು ಈ ವಿಷಯವನ್ನು ಕುರಿತು ವರದಿಯನ್ನು ಸಲ್ಲಿಸಲು ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಒಂದು ಠರಾವನ್ನು ಮಂಡಿಸಿದರು. ಲೆಜಿಸ್ಲೇಟಿವ್ ಅಸೆಂಬ್ಲಿಯು ಅದನ್ನು ಅನುಮೋದಿಸಿತು. ಸಮಿತಿಯ ಶಿಫಾರಸ್ಸುಗಳು ಅಷ್ಟೇನೂ ಪ್ರಗತಿಪರವಾಗಿಲ್ಲದಿದ್ದು ಭಾರತೀಯರಿಗೇ ಒಪ್ಪಿಗೆಯಾಗುವಂತೆ ಇರಲಿಲ್ಲವಾದರೂ ಕಾನೂನುಗಳ ಕಾಠಿಣ್ಯವನ್ನು ಭಾಗಶಃ ಕಡಿಮೆ ಮಾಡುವಂತಿದ್ದುವು. ಅಲ್ಲದೆ ವ್ಯಕ್ತಿ ಸ್ವಾತಂತ್ರ್ಯವನ್ನು ಬಹುಮಟ್ಟಿಗೆ ಹಿಂತಿರುಗಿಸುವಂತಾಯಿತು.

3. ಈ ಹಿಂದೆ ಉಲ್ಲೇಖಿಸಿದ ಕಠಿಣವಾದ ಪತ್ರಿಕಾ ನಿಯಮಗಳು ತಿದ್ದಲ್ಪಟ್ಟವು. ಅಲ್ಲದೆ ಭಾರೀ ಮೊತ್ತದ ಠೇವಣಿ, ಮುದ್ರಣಾಲಯವನ್ನು ವಶಪಡಿಸಿಕೊಳ್ಳುವುದು ಮುಂತಾದ ಅನಿಷ್ಟವಾದ ಷರತ್ತುಗಳನ್ನು ಕಿತ್ತು ಹಾಕಲಾಯಿತು.

4. ಭಾರತೀಯ ತರುಣರಿಗೆ ಮಿಲಿಟರಿ ಶಿಕ್ಷಣ ನೀತಿ, ಅವಶ್ಯಕತೆ ಬಿದ್ದರೆ ಆಫೀಸರುಗಳನ್ನು, ಯೋಧರನ್ನೂ ಕಾಯ್ದಿಟ್ಟಿರುವ ದೃಷ್ಟಿಯಿಂದ ಪ್ರಾದೇಶಿಕ ವ್ಯವಸ್ಥೆಯನ್ನು ಏರ್ಪಡಿಸುವಂತೆ ಸೈನಿಕಾ ಸೇನಾ ವರಿಷ್ಠರ ಮನ ಒಲಿಸುವುದರಲ್ಲಿ ಅಸೆಂಬ್ಲಿ ಯಶಸ್ವಿಯಾಯಿತು. ಇನ್ನೂ ಒಂದು ಮುಖ್ಯವಾದ ವಿಷಯದ ಮಂಡನೆಯಾಗಿ ಅದು ಮುಂದೆ ಜಾರಿಗೆ ಬಂತು. ಅದು ಯಾವುದೆಂದರೆ ಕಿಂಗ್ಸ್ ಕಮೀಷನ್ ಹೊಂದಿರುವ ಭಾರತೀಯರನ್ನು ಯುರೋಪಿಯನ್ ಆಫೀಸರುಗಳ ಸ್ಥಾನದಲ್ಲಿ ಕ್ರಮವಾಗಿ ಭರ್ತಿ ಮಾಡಿ ಸೇನೆಯ ಎಂಟು ತುಕಡಿಗಳನ್ನು ಭಾರತೀಕರಣಗೊಳಿಸುವುದು, ಈ ಯೋಜನೆಗಳ ಫಲವಾಗಿ ಡೆಹರಾಡೂನಿನಲ್ಲಿ ಒಂದು ಮಿಲಿಟರಿ ಕಾಲೇಜು ಸ್ಥಾಪಿತವಾಯಿತು. ಸ್ವತಂತ್ರ್ಯ ಎನ್ನುವುದು ದೇಶ ರಕ್ಷಣೆಯ ಸಾಮರ್ಥ್ಯವನ್ನು ಒಳಗೊಂಡಿರುವುದರಿಂದ ಮಿಲಿಟರಿ ಶಿಕ್ಷಣದ ಆರಂಭವು - ಅದು ಸಣ್ಣ ಪ್ರಮಾಣವಾಗಿದ್ದರೂ - ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಒಂದು ಮುಖ್ಯವಾದ ಹೆಜ್ಜೆ ಎಂಬುದನ್ನು ಗಮನಿಸಬೇಕು.

ಲೆಜಿಸ್ಲೇಟಿವ್ ಅಸೆಂಬ್ಲಿಯು ಅನೇಕ ಕಾರ್ಮಿಕ ಮಸೂದೆಗಳನ್ನು ಪರಿಶೀಲಿಸಿತು. ಉದಾಹರಣೆಗೆ ಭಾರತೀಯ ಕಾರ್ಖಾನೆಗಳ ತಿದ್ದುಪಡಿ ಮಸೂದೆ ( ಇದೇ ವಿಷಯಕ್ಕೆ ಸಂಬಂಧಿಸಿದಂತೆ ಇದ್ದ ಇಂಗ್ಲೀಷ್ ಕಾನೂನನ್ನು ಅನುಸರಿಸಿ) , ಕಾರ್ಮಿಕರ ಪರಿಹಾರ ಮಸೂದೆ ಮತ್ತು ಕೆಲಸಗಾರರಿಗೆ ಅಗತ್ಯವಾದ ಕೆಲವು ರಕ್ಷಣೆಗಳನ್ನು ಒದಗಿಸುವ ಭಾರತೀಯ ಗುಣಗಳ ಮಸೂದೆ. ಕಾರ್ಮಿಕರಿಗೆ ವಾರವಾರವೂ ಸಂಬಳವನ್ನು ಬಡವಾಡೆ ಮಾಡಬೇಕು ಎಂಬ ಖಾಸಗೀ ಮಸೂದೆಯು ಸರ್ಕಾರವು ವಿರೋಧಿಸಿದ್ದುದ್ದರಿಂದ ಬಿದ್ದು ಹೋಯಿತು.

ಬ್ರಿಟಿಷ್ ಅಧಿರಾಜ್ಯದ ಇತರ ಭಾಗಗಳಲ್ಲಿ ಭಾರತಕ್ಕಿದ್ದ ಅವಮಾನಕರ ಸ್ಥಾನವು ಲೆಜಿಸ್ಲೇಟಿವ್ ಅಸೆಂಬ್ಲಿಯ ಅರಿವಿನಲ್ಲಿ ಸದಾ ಜಾಗೃತವಾಗಿತ್ತು. ಅಸೆಂಬ್ಲಿಯಲ್ಲಿ ಅದರ ಪರಿಹಾರಕ್ಕಾಗಿ ಅನೇಕ ಠರಾವುಗಳನ್ನೇನೊ ಮಂಡಿಸಲಾಯಿತು. ಅನೇಕ ಸಂದರ್ಭದಲ್ಲಿ ಅವುಗಳಿಗೆ ಅನುಮೋದನೆಯೂ ದೊರಕಿತು. ಲೆಜಿಸ್ಲೇಟಿವ್ ಅಸೆಂಬ್ಲಿಯ ಅವಧಿಯ ಕೊನೆಯಲ್ಲಿ - "ಪರಸ್ಪರ ಸಂಬಂಧದ ಮಸೂದೆ" (ರೆಸಿಪ್ರೊಸಿಟಿ ಬಿಡ್) ಅನುಮೋದಿತವಾಯಿತು. ಅದರ ಪ್ರಕಾರ ಬ್ರಿಟಿಷ್ ಸಾಮ್ರಾಜ್ಯದ ಯಾವ ಅಧಿರಾಜ್ಯಗಳು ಮತ್ತು ವಸಾಹತುಗಳಲ್ಲಿ ಭಾರತೀಯರಿಗೆ ಸಮಾನವಾದ ಹಕ್ಕುಗಳನ್ನು ನಿರಾಕರಿಸಲ್ಪಟ್ಟವೋ ಅಂತಹವುಗಳ ಪ್ರಜೆಗಳು, ಭಾರತೀಯರು ಅಲ್ಲಿ ಅನುಭವಿಸಿದ ಕಷ್ಟನಷ್ಟಗಳು, ಇಲ್ಲಿ ಅನುಭವಿಸುವಂತೆ ಮಾಡಬಹುದಾಯಿತು.

ವಿವಾಹ ಶಾಸನ (ಸಿವಿಲ್ ಮ್ಯಾರೇಜ್ ಆಕ್ಟ್) ಕುರಿತು ವಿಶೇಷವಾಗಿ ಪ್ರಸ್ತಾವಿಸಬೇಕಾಗಿದೆ. ಅದರ ಪ್ರಕಾರ ಹಿಂದೂ ಸಮಾಜದ ಬೇರೆ ಬೇರೆ ಜಾತಿಗಳವರು ಮಾಡಿಕೊಂಡ ಮದುವೆಯು ಕಾನೂನು ಬದ್ಧವಾಯಿತು. ಇದೇ ವಿಷಯದ ಮೇಲೆ ಬಿ.ಎನ್. ಬಸು ಮತ್ತು

ವಿ.ಜೆ. ಪಟೇಲರು ಸುಧಾರಣಾ ಪೂರ್ವದ ದಿನಗಳಲ್ಲಿ ಮಂಡಿಸಿದ್ದ ಎರಡು ಖಾಸಗೀ ಮಸೂದೆಗಳು ಅಸೆಂಬ್ಲಿಯಲ್ಲಿ ಅನುಮೋದಿತವಾಗಿದ್ದುವು. ಆದರೆ ಕೌನ್ಸಿಲ್‌ನಲ್ಲಿ ಅಧಿಕಾರಿಗಳ ಬಹುಮತದಿಂದ ಅವು ಬಿದ್ದು ಹೋಗಿದ್ದವು. ಮೊದಲ ಸುಧಾರಿತ ಶಾಸನ ಸಭೆಯಲ್ಲಿ ಡಾ. ಗೌರ್ ಅವರು ಮಂಡಿಸಿದ ಮಸೂದೆಯು ಚುನಾಯಿತ ಸದಸ್ಯರಲ್ಲಿ ಹೆಚ್ಚು ಜನ ಅದರ ಪರವಾಗಿ ಮತ ಚಲಾಯಿಸಿದರೂ ಅದು ಒಂದು ಮತದಿಂದ ಬಿದ್ದು ಹೋಯಿತು. ಸ್ವರಾಜ್ಯ ಪಕ್ಷವು ಅಸೆಂಬ್ಲಿಯನ್ನು ಪ್ರವೇಶಿಸಿದ ಮೇಲೆ ಅಧಿಕಾರಿಗಳ ಗುಂಪು ಅದನ್ನು ವಿರೋಧಿಸಿದರೂ ರಾಷ್ಟ್ರೀಯವಾದಿಗಳ ಬಹುಮತದಿಂದ ಅದು ಅನುಮೋದಿತವಾಯಿತು. ರಾಷ್ಟ್ರೀಯವಾದಿ ವಿರೋಧಿ ಪಕ್ಷವು ಮಂಡಿಸಿದ ಇತರ ಸಾಮಾಜಿಕ ಮಸೂದೆಗಳಲ್ಲಿ ಎರಡನ್ನು ನಮೂದಿಸಬೇಕು. ಒಂದು ಹಿಂದೂ ಧಾರ್ಮಿಕ ದತ್ತಿಗಳನ್ನು ವ್ಯವಸ್ಥೆಗೊಳಿಸುವ ಮಸೂದೆ, ಮತ್ತೊಂದು ಮದುವೆಗೆ ಒಪ್ಪಿಗೆ ನೀಡುವುದನ್ನು ಹದಿನಾಲ್ಕು ವರ್ಷಗಳಿಗೆ ಏರಿಸಿದ ಮಸೂದೆ. ಮತ್ತೊಂದು ಮುಖ್ಯವಾದ ಶಾಸನವೆಂದರೆ ಕ್ರಿಮಿನಲ್ ಮೊಕದ್ದಮ್ಮೆ ರೀತಿಯ ತಿದ್ದುಪಡಿ ಕಾಯಿದೆ.

ಕೈಗಾರಿಕಾ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿ ಈ ಎರಡರ ಅವಶ್ಯಕತೆಯೂ ಅಸೆಂಬ್ಲಿಗೆ ಚೆನ್ನಾಗಿ ಗೊತ್ತಿತ್ತು. ಒಂದು ಖಾಸಗಿ ನಿರ್ಣಯದ ಪರಿಣಾಮವಾಗಿ ಹೆಚ್ಚು ಮಂದಿ ಭಾರತೀಯ ಸದಸ್ಯರುಗಳನ್ನೇ ಒಳಗೊಂಡ ಒಂದು ಕೈಗಾರಿಕಾ ಮಂಡಳಿಯನ್ನು ಸರ್ಕಾರವು ನೇಮಿಸಿತು. ಈ ಸಮಿತಿಯ ಶಿಫಾರಸ್ಸಿನಂತೆ ವಿವೇಚಿತ ರಕ್ಷಣೆಯನ್ನು ನೀಡುವ ನೀತಿಯನ್ನು ರೂಪಿಸಿತು. ವಿಶೇಷ ಕೈಗಾರಿಕೆಗಳ ಸ್ಥಿತಿಗತಿಗಳನ್ನು ಪರಿಶೀಲಿಸಿ ಅವುಗಳ ಅಭಿವೃದ್ಧಿಗೆ ವಿಧಿ ವಿಧಾನಗಳನ್ನು ಸೂಚಿಸಲು ತೆರಿಗೆ ಮಂಡಳಿಯನ್ನು ನೇಮಿಸಲಾಯಿತು. ಅದರ ಅತ್ಯಂತ ಗಮನೀಯವಾದ ಸಾಧನೆ ಎಂದರೆ ಉಕ್ಕು ರಕ್ಷಣಾ ಕಾಯಿದೆ. ಭಾರತೀಯ ಹಡಗು ನಿರ್ಮಾಣ ಕಾರ್ಯವನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಅಸೆಂಬ್ಲಿಯಲ್ಲಿ ತಂದ ಒಂದು ನಿರ್ಣಯದ ಫಲವಾಗಿ ಒಂದು ನೌಕಾ ವಿಷಯಕ ಸಮಿತಿಯು ನೇಮಕಗೊಂಡಿತು. ಅಸೆಂಬ್ಲಿಯ ಒತ್ತಾಯದ ಮೇರೆಗೆ ಸರ್ಕಾರದ ಮತ್ತು ರೈಲ್ವೆಯು ಎಲ್ಲ ಅಗತ್ಯ ವಸ್ತುಗಳನ್ನು ಭಾರತದಲ್ಲೇ ಕೊಳ್ಳಲು ಭಾರತ ಸರ್ಕಾರವು ಒಪ್ಪಿಗೆ ನೀಡಿತು.

ರಾಜಕೀಯ ಕ್ಷೇತ್ರದಲ್ಲಿ ಅಸೆಂಬ್ಲಿಯ ಸಾಧನೆಯೆಂದರೆ ಮುಂದಿನ ಬಜೆಟ್‌ನಲ್ಲಿ ಮತ ನೀಡಬಹುದಾದ ಮತ್ತು ಮತ ನೀಡಲಾರದ ವಿಷಯಗಳು ಎಂಬುದರ ನಡುವೆ ಇದ್ದ ವ್ಯತ್ಯಾಸವನ್ನು ತಕ್ಷಣ ತೆಗೆದು ಹಾಕಬೇಕು ಎಂಬುದು. ಭಾರತದ ಸಂವಿಧಾನದ ವಿಷಯವನ್ನು ತೀರ್ಮಾನ ಮಾಡಲು ಒಂದು ದುಂಡು ಮೇಜಿನ ಪರಿಷತ್ತನ್ನು ನೇಮಿಸಬೇಕೆಂದೂ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು, ಭಾರತದ ಎಲ್ಲ ಸೇವೆಗಳನ್ನೂ ಸಂಪೂರ್ಣವಾಗಿ ಭಾರತೀಕರಣಗೊಳಿಸಬೇಕೆಂದು ಒಂದು ನಿರ್ಣಯವನ್ನು ಅಸೆಂಬ್ಲಿಯು ತಂದಿತು. ಆದರೆ ಸರ್ಕಾರವು ಅದನ್ನು ಅಭಿಪ್ರಾಯಕ್ಕಾಗಿ ಸ್ಥಳೀಯ ಸರ್ಕಾರಗಳಿಗೆ ಕಳುಹಿಸಿ ಕೈ ತೊಳೆದುಕೊಂಡಿತು.

## 85.2 ಉಪಸಂಹಾರ

ಹೀಗೆ ಒಂದು ವಿಷಯವಂತೂ ಸ್ಪಷ್ಟವಾಯಿತು. 1919 ರ ಭಾರತ ಸರ್ಕಾರ ಕಾಯಿದೆಯನ್ನು ರೂಪಿಸಿದವರ ನಿರೀಕ್ಷೆ ಮತ್ತು ಉದ್ದೇಶಗಳಿಗೆ ವಿರುದ್ಧವಾಗಿ ಲೆಜಿಸ್ಲೇಟಿವ್ ಅಸೆಂಬ್ಲಿಯು ಭಾರತ ಸರ್ಕಾರದ ಮೇಲೆ ಪ್ರಯೋಜನಕಾರಿಯಾದ ಪ್ರಭಾವವನ್ನು ಬೀರಿತು ಮತ್ತು 1919 ರ ಸುಧಾರಣೆಗಳ ಅತ್ಯಂತ ಯಶಸ್ವೀ ಸಾಧನೆಗೆ ತಾನು ಕಾರಣ ಎಂಬುದನ್ನು ತೋರಿಸಿಕೊಟ್ಟಿತು. ಅದಕ್ಕೆ ಪೂರ್ಣವಾಗಿ ಅಲ್ಲದಿದ್ದರೂ ಭಾಗಶಃ ಕಾರಣ ಅಸಹಕಾರ ಚಳುವಳಿ, ಏಕೆಂದರೆ ಸರ್ಕಾರದ ಮೇಲೂ ತನ್ನೊಡನೆ ಸಹಕರಿಸಿದ ಲಿಬರಲ್ ಪಕ್ಷದ ಮೇಲೂ ಪರೋಕ್ಷವಾಗಿ ಬಹು ಹೆಚ್ಚಿನ ಪ್ರಭಾವವನ್ನು ಅದು ಬೀರಿತು. ಸುಧಾರಣೆಗಳು ಬರೀ ಮೋಸ ಎಂಬ ಟೀಕೆಯ ತೀಕ್ಷ್ಣತೆಯನ್ನು ಕಡಿಮೆ ಮಾಡಲು ಸರ್ಕಾರವು ಉದ್ದೇಶಪೂರ್ವಕವಾಗಿ ದಮನಕಾರಿ ಕಾನೂನುಗಳ ಪುನರ್ವಿಮರ್ಶೆಯಂತಹ ಬೇಡಿಕೆಗಳ ವಿಷಯದಲ್ಲಿ ಸೋತಿದ್ದುಂಟು. ಅಸಹಕಾರ ಚಳುವಳಿಗೆ ಪ್ರತಿಯಾದ ಪ್ರಚಾರದ ದೃಷ್ಟಿಯಿಂದ ತಾನು ಈ ನೀತಿಯನ್ನು ಅನುಸರಿಸಿದ್ದ ಹೌದು ಎಂದು ಸರ್ಕಾರವು ಒಪ್ಪಿಕೊಂಡಿತು. ಲಿಬರಲ್ ಪಕ್ಷದವರು ಕೂಡ ಹಠಮಾರಿಗಳಾಗಿ ತಮ್ಮ ಬೇಡಿಕೆಗಳನ್ನು ಹೆಚ್ಚು ಮಾಡಿದರು. ಅದಕ್ಕೆ ಅರ್ಧ ಕಾರಣ ಸಾರ್ವಜನಿಕರ ಅಭಿಪ್ರಾಯದಲ್ಲಿ ಮನ್ನಣೆಯನ್ನು ಗಳಿಸಿಕೊಳ್ಳುವುದಾಗಿದ್ದರೆ ಮತ್ತರ್ಧ ಕಾರಣ ಅಸಹಕಾರಿಗಳ ಬಲವನ್ನು ಕುಗ್ಗಿಸುವುದಾಗಿತ್ತು. ಅಸಹಕಾರಿಗಳ ಬೃಹತ್ ಛಾಯೆಯು ಇಡೀ ಭಾರತವನ್ನು ಆಕ್ರಮಿಸಿ ಒಂದು ಭಾರೀ ವಿರೋಧದ ಗುಂಪನ್ನು ಸೃಷ್ಟಿಸದೇ ಹೋಗಿದ್ದರೆ ಸರ್ಕಾರವು ತನ್ನ ನೀತಿಯಿಂದ ದೂರ ಸರಿದು ಮಧ್ಯಗಾಮಿ ಪಕ್ಷವನ್ನು ಬೆಂಬಲಿಸಿ ಸಾಧ್ಯವಾದಷ್ಟು ಹೆಚ್ಚಿನ ರಿಯಾಯಿತಿಗಳನ್ನು ತೋರಿಸಿ ಜನರನ್ನು ಒಲಿಸುವ ಪ್ರಯತ್ನಗಳನ್ನು ಮಾಡುತ್ತಿರಲಿಲ್ಲ.

ಇಷ್ಟಾದರೂ ಇಂಡಿಯಾ ಸರ್ಕಾರವು ತನ್ನ ಸರ್ವಾಧಿಕಾರಿ ಪ್ರಭಾವವನ್ನು ಅದರ ಸ್ವರೂಪ ಆಶಯಗಳಲ್ಲಿ ಬದಲಾಯಿಸಿಕೊಂಡಿತ್ತು ಎಂದು ಭಾವಿಸಿದರೆ ಅದು ಬಹುದೊಡ್ಡ ತಪ್ಪಾಗುತ್ತದೆ. 1923 ರಲ್ಲಿ ಉಪ್ಪಿನ ತೆರಿಗೆಯನ್ನು ದುಪ್ಪಟ್ಟು ಮಾಡಿತು. ಲೆಜಿಸ್ಲೇಟಿವ್ ಅಸೆಂಬ್ಲಿಯು ಅದನ್ನೇ ಒಪ್ಪದಿದ್ದರೂ ವೈಸರಾಯ್ ಅದನ್ನು ಒಪ್ಪಿ ಹಾಗೇ ಉಳಿದ. ಜನರ ಇಚ್ಛೆಗೆ ವಿರುದ್ಧವಾಗಿ ಕೈಗೊಂಡ ಮತ್ತೊಂದು ಕ್ರಮವೆಂದರೆ ಭಾರತ ಸಿವಿಲ್ ಸೇವಾವರ್ಗದವರ ಅಂತಸ್ತು, ಸ್ಥಾನಮಾನಗಳು ಮತ್ತು ಕುಂದು ಕೊರತೆಗಳನ್ನು ವಿಚಾರಿಸಲು ಈ ಆಯೋಗವನ್ನು ನೇಮಕ ಮಾಡಿದುದು. ಅದರ ಅರ್ಥ ಬ್ರಿಟಿಷರಿಗಾಗಿ ಹೆಚ್ಚಿ ವೆಚ್ಚವನ್ನು ಮಾಡಲು ಸರ್ಕಾರ ಸಿದ್ಧವಿದೆ ಎಂದು ಅದಕ್ಕೆ ವಿರುದ್ಧವಾಗಿ ಉಪ್ಪಿನ ತೆರಿಗೆಯನ್ನು ದ್ವಿಗುಣಗೊಳಿಸಿತ್ತು. ಅಲ್ಲದೆ ಇಂಚ್‌ಕೇಪ್ ಸಮಿತಿಯ ಶಿಫಾರಸ್ಸನ್ನು ಅನುಸರಿಸಿ ಅನಾವಶ್ಯಕವಾದ ವೆಚ್ಚಗಳನ್ನು ಕಡಿತಗೊಳಿಸಲು ನಿರಾಕರಿಸಿತ್ತು. ಜೊತೆಗೆ ನಾಭಾದ ಮಹಾರಾಜನನ್ನು ಸಿಂಹಾಸನದಿಂದ ಇಳಿಸಿದ್ದು ಮತ್ತೊಂದು ಜನಾಭಿಪ್ರಾಯ ವಿರೋಧಿ ಕ್ರಮವಾಗಿತ್ತು. ಅದು ಇಡೀ ದೇಶವನ್ನು ಕ್ಷೋಭೆಗೊಳಿಸಿತು. ಏಕೆಂದರೆ ರಾಜನಿಗೆ ಶಿಕ್ಷೆ ವಿಧಿಸಿದ್ದು ಕೇವಲ ಆತ ರಾಷ್ಟ್ರೀಯವಾದ ಭಾವನೆಗಳನ್ನು ಹೊಂದಿದ್ದ ಎಂಬ ಕಾರಣಕ್ಕೆ. ಅಸೆಂಬ್ಲಿಯಲ್ಲಿ ಅನೇಕ ಠರಾವುಗಳನ್ನು ಮಂಡಿಸಿದರೂ ಅಧಿಕಾರಿಗಳಿಲ್ಲದ ಭಾರತೀಯರು ಬಹು ಸಂಖ್ಯೆಯಲ್ಲಿ ಅದನ್ನೇ ಬೆಂಬಲಿಸಿದರೂ ಸರ್ಕಾರವು ತನ್ನ ದವನ ನೀತಿಯನ್ನು ಬದಲಾಯಿಸಲಿಲ್ಲ ಎಂಬುದು ಬಹುಮುಖ್ಯವಾದ ಒಂದು ಅಂಶ.

ಸರ್ಕಾರವು ಪತ್ರಿಕಾ ಠರಾವನ್ನು (ರಾಜರಕ್ಷಣೆ ಮಸೂದೆ) ಮಂಡಿಸಿತು. ಅದರ ಉದ್ದೇಶ ಭಾರತದಲ್ಲಿದ್ದ ರಾಜರ ವಿರುದ್ಧ ದ್ವೇಷವನ್ನಾಗಲಿ ಅಗೌರವನ್ನಾಗಲಿ, ಉದ್ರೇಕಿಸುವ ದೃಷ್ಟಿಯಿಂದ ಪುಸ್ತಕಗಳು ಅಥವಾ ವೃತ್ತ ಪತ್ರಿಕೆಗಳನ್ನು ಪ್ರಕಟಿಸುವುದನ್ನು ತಡೆಗಟ್ಟುವುದು. ಹೀಗೆ ಮಾಡಿದರೆ ರಾಜರ ವಿರುದ್ಧ ಆಕ್ರಮಣ ನಡೆಸುವುದು, ಸುಳ್ಳು ಅಪವಾದ ಹೊರಿಸುವುದು ಮುಂತಾದುವನ್ನು ತಪ್ಪಿಸಬಹುದು ಎಂಬುದು ಸರ್ಕಾರದ ದೃಷ್ಟಿಯಾಗಿತ್ತು. ಅಸೆಂಬ್ಲಿಯು ಅದನ್ನೆ ತಿರಸ್ಕರಿಸಿತು. ಆದರೆ ವೈಸರಾಯ್ ಅದಕ್ಕೆ ತನ್ನ ಅಂಗೀಕಾರದ ಮುದ್ರೆಯನ್ನು ಒತ್ತಿದನು.

## 85.3 ಮಾದರಿಯ ಪ್ರಶ್ನೆಗಳು

1. 1919 ರ ಸುಧಾರಣೆಗಳು ಕಾರ್ಯರೂಪಕ್ಕೆ ತಂದಿದ್ದನ್ನು ನೀವು ಒಪ್ಪುತ್ತೀರಾ?
2. ಭಾರತ ಸರ್ಕಾರದ 1919 ಕಾಯಿದೆ ಸಂವಿಧಾನಾತ್ಮಕವಾಗಿ ಪರಿಹಾರಗಳನ್ನು ಸೂಚಿಸುವುದರ ಜೊತೆಗೆ ಹಲವಾರು ಬಿಕ್ಕಟ್ಟುಗಳನ್ನು ತಂದಿಟ್ಟಿತು, ಚರ್ಚಿಸಿ?

## 85.4 ಪರಾಮರ್ಶನ ಕೃತಿಗಳು


1. M.V. Pylee : **"The Constitutional of India (1955)"**
2. Ramaswamy .M. : **"Constitution of the Indian Republic"**



ಡಾ. ಎನ್. ಸರಸ್ವತಿ
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,
ಮೈಸೂರು

# ಟಿಪ್ಪಣಿಗಳು

# ບຊູ໔ກຍ

# ಟಿಪ್ಪಣಿಗಳು

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

Mukthagangotri, Mysore - 570 006

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✛ **M.Ed Study Centres : 06**


STUDENT
INSTRUCTIONAL SYSTEM